ಬುಧವಾರ, ಜುಲೈ 9, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 189 | ಪುಟ 18
prajavani.net prajavani www.prajavani.net

ವಿಮಾನದ ಬಾಗಿಲಲ್ಲಿ ಜೇನುಹುಳು

ಸೂರತ್‌ನಿಂದ ಜೈಪುರಕ್ಕೆ ಹೊರಟಿದ್ದ ಇಂಡಿಗೊ ವಿಮಾನದಲ್ಲಿನ ಲಗೇಜ್ ವಿಭಾಗದ ಬಾಗಿಲ ಬಳಿ ಜೇನು ಹುಳುಗಳ ಸಮೂಹ ಕಂಡುಬಂದಿದ್ದರಿಂದ 45 ನಿಮಿಷ ವಿಳಂಬವಾಗಿ ಹಾರಾಟ ನಡೆಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆಮಿಗೆ ಫ್ರಿಟ್ಜ್

ಅಮೆರಿಕದ ತಾರೆ, ಐದನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಅವರು ಮಂಗಳವಾರ ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದರು

ಸೆನ್ಸೆಕ್ಸ್ 83,712 | ನಿಫ್ಟಿ 25,522 | $/₹ 85.73 | ಚಿನ್ನ (Std. 10g) ₹1.02 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.14 ಲಕ್ಷ (ಬೆಂಗಳೂರು)

cottonking®
UNCONDITIONAL SALE 20% DISCOUNT
On Entire Bill Value
Offer From 3rd July 2025

Newly Opened @Jayanagar - 30th Cross, 4th Block, Ph.:9886388501 I **Offer Available At:Gandhi Bazaar-** 37 BOSCO Court Complex, Ph.:9963890921 I **Malleshwaram -** Near 11th Cross Sampige Main Road, Ph.: 9730508441 I **Commercial Street -** Next To Police Station, Ph.:9730508441 I **Basaveshwar Nagar-** Opp. To Chord Road Hospital, Ph.:9916061878 I **Mysore-** Next To Bhima Jewellers, Devaraja Urs Road, Ph.:9730508441 I **Mangaluru-** Opp. Maruti Suzuki Arena, Mandovi Motors, Ph.:9480353000 I **Udupi** - Sriram Building, Karavali To City Bus Stand Road, Bananje, Ph.:08202525123 I **Enquiry : 9730508441.**

ಉಗ್ರರ ನಂಟು: ಮೂವರ ಸೆರೆ

ಪರಪ್ಪನ ಅಗ್ರಹಾರ ಜೈಲಿನ ಮನೋವೈದ್ಯ, ಎಎಸ್‌ಐಯನ್ನು ಬಂಧಿಸಿದ ಎನ್‌ಐಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯವೂ ಸೇರಿ ದೇಶದ ಹಲವೆಡೆ ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಮತ್ತು ಕೋಲಾರದಲ್ಲಿ ಶೋಧ ನಡೆಸಿದ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು, ಪರಪ್ಪನ ಅಗ್ರಹಾರ ಜೈಲಿನ ಮನೋವೈದ್ಯ, ಸಶಸ್ತ್ರ ಮೀಸಲು ಪಡೆಯ ಪೊಲೀಸ್ ಅಧಿಕಾರಿ ಸೇರಿ ಮೂವರನ್ನು ಬಂಧಿಸಿದ್ದಾರೆ.

ಮನೋವೈದ್ಯ ನಾಗರಾಜ್, ಎಎಸ್‌ಐ ಚಾಂದ್ ಪಾಷಾ ಹಾಗೂ ವಿದೇಶದಲ್ಲಿ ತಲೆಮರೆಸಿಕೊಂಡಿರುವ ಜುನೈದ್ ಅಹಮ್ಮದ್ ತಾಯಿ ಅನೀಸ್ ಫಾತೀಮಾ ಬಂಧಿತರು.

ರಾಜ್ಯದ ಬೆಂಗಳೂರು, ಕೋಲಾರ ಸೇರಿ ಐದು ಸ್ಥಳಗಳಲ್ಲಿನ ಆರೋಪಿಗಳ ನಿವಾಸಿಗಳಲ್ಲಿ ಎನ್‌ಐಎ ತನಿಖಾಧಿಕಾರಿಗಳು ಶೋಧ ನಡೆಸಿದಾಗ ಪತ್ತೆಯಾದ ಡಿಜಿಟಲ್ ಸಾಕ್ಷ್ಯಗಳು, ನಗದು, ಚಿನ್ನ ಮತ್ತು ಮಹತ್ವದ ದಾಖಲೆಗಳನ್ನು ಜಪ್ತಿ ಮಾಡಿದ್ದಾರೆ.

ವೈದ್ಯ ನಾಗರಾಜ್‌ರ ಮನೆ, ಸಿಎಆರ್ ಉತ್ತರ ವಿಭಾಗದಲ್ಲಿರುವ ಚಾಂದ್ ಪಾಷಾ ಅವರ ಸಿಎಆರ್ ವಸತಿ ಗೃಹ

ಪರಪ್ಪನ ಅಗ್ರಹಾರ ಕಾರಾಗೃಹ

ಹಾಗೂ ಕೋಲಾರ, ಆರ್‌.ಟಿ.ನಗರದಲ್ಲಿರುವ ಜುನೈದ್ ಅಹಮದ್‌ನ ಮನೆ, ವೈದ್ಯ ನಾಗರಾಜ್‌ಗೆ ಸಹಾಯಕಿಯಾಗಿದ್ದ ಪವಿತ್ರಾ ಮನೆಯಲ್ಲಿ ಎನ್‌ಐಎ ಅಧಿಕಾರಿಗಳು ಶೋಧ ನಡೆಸಿದ್ದಾರೆ.

ನಾಗರಾಜ್ ಅವರು ನಾಲ್ಕು ವರ್ಷದಿಂದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಲಷ್ಕರ್ ಎ ತಯಬಾ ಸಂಘಟನೆಯ ದಕ್ಷಿಣ ಭಾರತದ ಮುಖ್ಯಸ್ಥ ಟಿ.ನಾಸೀರ್, ವಿದೇಶದಲ್ಲಿ ತಲೆಮರೆಸಿಕೊಂಡಿರುವ ಜುನೈದ್ ಅಹಮದ್ ಹಾಗೂ ಇತರೆ ಕೈದಿಗಳಿಗೆ ಮೊಬೈಲ್‌ಗಳನ್ನು ಪೂರೈಸುತ್ತಿದ್ದರು. ಅವರಿಗೆ ಸಹಾಯಕಿ ಪವಿತ್ರಾ ಸಹಾಯ ಮಾಡುತ್ತಿದ್ದರು ಎಂಬುದು ತನಿಖೆಯಲ್ಲಿ ಗೊತ್ತಾಗಿತ್ತು.

ಶೋಧದಿಂದ ರಹಸ್ಯ ಬಯಲು

- ಡಾ.ನಾಗರಾಜ್, ನಾಗರಾಜ್‌ಗೆ ಸಹಾಯ ನೀಡಿದ್ದ ಪವಿತ್ರಾ, ಎಎಸ್‌ಐ ಚಾಂದ್ ಪಾಷಾ ಮತ್ತು ತಲೆಮರೆಸಿ-ಕೊಂಡಿರುವ ಶಂಕಿತ ಉಗ್ರ ಜುನೇದ್ ಅಹಮದ್‌ನ ತಾಯಿ ಅನೀಸ್ ಫಾತಿಮಾ ಮನೆಯಲ್ಲಿ ಶೋಧ
- ಡಿಜಿಟಲ್ ಉಪಕರಣಗಳು, ಪ್ರಚೋದನಕಾರಿ ಬರಹ ಇರುವ ಪುಸ್ತಕ ಮತ್ತು ಪತ್ರಗಳು, ಸಿ.ಡಿಗಳು ವಶ
- ಭಯೋತ್ಪಾದನೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಯಲ್ಲಿರುವ ಟಿ.ನಾಸೀರ್‌ಗೆ ಮೊಬೈಲ್ ಒದಗಿಸಿದ್ದ ಆರೋಪಿಗಳು
- ನಾಸೀರ್‌ನನ್ನು ಯಾವ–ಯಾವ ನ್ಯಾಯಾಲಯಕ್ಕೆ, ಯಾವ ಮಾರ್ಗದಲ್ಲಿ ಕರೆದೊಯ್ಯಲಾಗುತ್ತದೆ ಎಂಬ ಮಾಹಿತಿ ರವಾನಿಸುತ್ತಿದ್ದ ಎಎಸ್‌ಐ
- ಭಯೋತ್ಪಾದನಾ ಚಟುವಟಿಕೆಗಳಿಗೆ ಹಣವನ್ನು ಹೇಗೆ ಸಂಗ್ರಹಿಸಬೇಕು ಎಂದು ನಾಸೀರ್ ರೂಪಿಸಿದ ಸಂಚನ್ನು ಜುನೇದ್‌ಗೆ ತಲುಪಿಸುತ್ತಿದ್ದ ನಾಗರಾಜ್ ಮತ್ತು ಪವಿತ್ರಾ
- ತಲೆಮರೆಸಿಕೊಂಡಿರುವ ಜುನೈದ್ ಅಹಮದ್ ಸೇರಿ 9 ಮಂದಿ ಶಂಕಿತರ ವಿರುದ್ಧ ಎನ್‌ಐಎ ಅಧಿಕಾರಿಗಳು ಆರೋಪಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ

ಜೈಲಿನ ಒಳಗೇ ಉಗ್ರ ಚಟುವಟಿಕೆ ತರಬೇತಿ

ರಾಜಧಾನಿ ಬೆಂಗಳೂರಿನಲ್ಲಿ ಸರಣಿ ವಿಧ್ವಂಸಕ ಕೃತ್ಯ ನಡೆಸಿ, ಭಾರಿ ಅನಾಹುತ ಎಸಗಲು ಸಂಚು ರೂಪಿಸಿದ್ದ ಐವರು ಶಂಕಿತ ಉಗ್ರರನ್ನು 2023ರಲ್ಲಿ ಸಿಸಿಬಿ ಪೊಲೀಸರು ಬಂಧಿಸಿದ್ದರು.

ಆರ್‌.ಟಿ.ನಗರ, ಸುಲ್ತಾನ್‌ಪಾಳ್ಯ, ಡಿ.ಜೆ.ಹಳ್ಳಿ, ಕೊಡಿಗೇಹಳ್ಳಿಯಲ್ಲಿ ಕಾರ್ಯಾಚರಣೆ ನಡೆಸಿದ್ದ ಪೊಲೀಸರು, ಸೈಯದ್ ಸುಹೇಲ್ ಖಾನ್, ಜಾಹೀದ್ ತಬ್ರೇಸ್, ಸೈಯದ್ ಮುದಾಸೀರ್ ಪಾಷಾ, ಮಹಮದ್ ಫೈಸಲ್, ಮಹಮದ್ ಉಮರ್ ಎಂಬ ಶಂಕಿತರನ್ನು ಬಂಧಿಸಿದ್ದರು. ಜೈಲಿನಲ್ಲಿದ್ದ ಐವರಿಗೆ ಟಿ. ನಾಸೀರ್ ಉಗ್ರ ಚಟುವಟಿಕೆಗಳ ಬಗ್ಗೆ ತರಬೇತಿ ನೀಡುತ್ತಿದ್ದ ಎಂದು ಎನ್‌ಐಎ ಮೂಲಗಳು ತಿಳಿಸಿವೆ.

ಆಗ ಶಂಕಿತರಿಂದ 7 ನಾಡ ಬಂದೂಕು, 45 ಗುಂಡುಗಳು, ಸ್ಯಾಟ್‌ಲೈಟ್ ಫೋನ್ ಮಾದರಿಯ ವಾಕಿಟಾಕಿಗಳು, 12 ಮೊಬೈಲ್, ಡ್ರಾಗರ್ ಸೇರಿದಂತೆ ವಿವಿಧ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿತ್ತು. ಪ್ರಕರಣದ ಸೂತ್ರಧಾರ ಜುನೈದ್ ಅಹಮದ್ ದುಬೈಗೆ ಪರಾರಿಯಾಗಿದ್ದಾನೆ.

ಕೆಲವು ದಿನಗಳ ಬಳಿಕ ಸೈಯದ್ ಕೊಡಿಗೇಹಳ್ಳಿ ಜಾಹಿದ್ ತಬ್ರೇಜ್ ಮನೆಯಲ್ಲಿ ನಾಲ್ಕು ಗ್ರೆನೇಡ್ ಪತ್ತೆ ಆಗಿದ್ದವು. ಈ ಸಂಬಂಧ ಎನ್‌ಐಎ ತನಿಖೆ ಆರಂಭಿಸಿತ್ತು.

‘ಜುನೈದ್ ಅಹಮದ್ ತಾಯಿ ಅನೀಸ್ ಫಾತಿಮಾ, ಜೈಲಿನಲ್ಲಿರುವ ಟಿ.ನಾಸೀರ್ ಎಲ್‌ಇಟಿಗೆ ಸಂಘಟನೆ ಮಾಡಲು ನಿಧಿ ಸಂಗ್ರಹ ಹಾಗೂ ಇತರೆ ವಿಚಾರಗಳ ಬಗ್ಗೆ ನೀಡುತ್ತಿದ್ದ ಮಾಹಿತಿಯನ್ನು ವಿದೇಶದಲ್ಲಿರುವ ತನ್ನ ಮಗನಿಗೆ ನೀಡುತ್ತಿದ್ದರು. ಆತ ಅಲ್ಲಿಂದಲೇ ವಿಧ್ವಂಸಕ ಕೃತ್ಯಗಳಿಗೆ ಸಂಚು ಹಾಗೂ ಸಂಘಟನೆಗಾಗಿ ನಿಧಿ ಸಂಗ್ರಹಿಸುವ ಕೆಲಸದಲ್ಲಿ ಭಾಗಿಯಾಗು-ತ್ತಿದ್ದ’ ಎಂದು ಎನ್‌ಐಎ ಮೂಲಗಳು ತಿಳಿಸಿವೆ.

‘ಎಎಸ್‌ಐ ಚಾಂದ್ ಪಾಷಾ ಅವರು 2022ರಿಂದ ಟಿ.ನಾಸೀರ್ ಪರವಾಗಿ ಕೆಲಸ ಮಾಡುತ್ತಿದ್ದಾರೆ ಎಂಬ ಆರೋಪವಿದೆ. ಆರೋಪಿಯನ್ನು ಬೆಂಗಳೂರು, ಕೇರಳ ಹಾಗೂ ಇತರೆ ರಾಜ್ಯಗಳ ಕೋರ್ಟ್‌ಗೆ ಕರೆದೊಯ್ಯುವ ಮಾಹಿತಿಯನ್ನು ಸಂಘಟನೆಯ ಕೆಲವು ವ್ಯಕ್ತಿಗಳು ಹಾಗೂ ಮುಂಗಡವಾಗಿ ಟಿ.ನಾಸೀರ್‌ಗೂ ನೀಡುತ್ತಿದ್ದರು. ಅದಕ್ಕಾಗಿ ಸಂಘಟನೆಯಿಂದ ಹಣ ಪಡೆಯುತ್ತಿದ್ದರು’ ಎಂದು ಎನ್‌ಐಎ ಮೂಲಗಳು ತಿಳಿಸಿವೆ.

ಕಾಲ್ತುಳಿತಕ್ಕೆ ಆರ್‌ಸಿಬಿಯೇ ಕಾರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಜೂನ್ 4ರಂದು ಸಂಭವಿಸಿದ್ದ ಕಾಲ್ತುಳಿತ ಘಟನೆಯ ತನಿಖೆ ನಡೆಸುತ್ತಿರುವ ಸಿಐಡಿ, ತಂಡದ ಆಟಗಾರ ವಿರಾಟ್ ಕೊಹ್ಲಿಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಆಡಳಿತ ಮಂಡಳಿ ತೆಗೆದುಕೊಂಡ ತರಾತುರಿಯ ನಿರ್ಧಾರವೇ 11 ಮಂದಿಯ ಸಾವಿಗೆ ಕಾರಣವಾಗಿದೆ ಎಂಬುದಾಗಿ ವರದಿ ಸಿದ್ಧಪಡಿಸಿದೆ ಎಂದು ಮೂಲಗಳು ಹೇಳಿವೆ.

‘ಈ ತನಿಖಾ ವರದಿಗೆ ಇನ್ನಷ್ಟು ಸಾಕ್ಷ್ಯಾಧಾರಗಳನ್ನು ಕಲೆ ಹಾಕಲಾಗುತ್ತಿದೆ. ಅದು ಪೂರ್ಣಗೊಂಡ ಬಳಿಕ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗುವುದು’ ಎಂದು ಸಿಐಡಿ ಮೂಲಗಳು ತಿಳಿಸಿವೆ. ಘಟನೆಯ ಬಳಿಕ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಯುಡಿಆರ್ ಪ್ರಕರಣ ದಾಖಲಾಗಿತ್ತು. ಮೃತ ಕುಟುಂಬಸ್ಥರ ಆಕ್ರೋಶ ಹೆಚ್ಚಾದ ಬೆನ್ನಲ್ಲೇ ಕೆಎಸ್‌ಸಿಎ, ಡಿಎನ್‌ಎ (ಇವೆಂಟ್ ಮ್ಯಾನೇಜ್‌ಮೆಂಟ್) ಹಾಗೂ ಆರ್‌ಸಿಬಿ ಫ್ರಾಂಚೈಸಿಯ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ಪೊಲೀಸರು ತನಿಖೆ ಆರಂಭಿಸಿದ್ದರು. ನಾಲ್ವರನ್ನು ಬಂಧಿಸಿದ್ದರು.

▶ 7

ವರದಿಯಲ್ಲಿ ಏನೆಲ್ಲಾ ಉಲ್ಲೇಖ?

- ಟಿಕೆಟ್ ಗೊಂದಲವೂ ಘಟನೆಗೆ ಪ್ರಮುಖ ಕಾರಣವಾಗಿದೆ. ಆರ್‌ಸಿಬಿ ಸಾಮಾಜಿಕ ಮಾಧ್ಯಮಗಳಲ್ಲಿ ಉಚಿತ ಟಿಕೆಟ್ ಘೋಷಣೆ ಮಾಡಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರು. ಈ ಮಾಹಿತಿ ಹಂಚುವುದಕ್ಕೂ ನಿಖಿಲ್ ಸೋಸಲೆ ಕಾರಣ
- ಪೊಲೀಸರು ಬಂದೋಬಸ್ತ್ ವ್ಯವಸ್ಥೆಯನ್ನು ಸರಿಯಾಗಿ ಮಾಡಿಕೊಂಡಿರಲಿಲ್ಲ
- ಕಾಲ್ತುಳಿತ ಸಂಭವಿಸಿದ್ದ ಪ್ರವೇಶದ್ವಾರಗಳ ಬಳಿ ಪೊಲೀಸರೇ ಇರಲಿಲ್ಲ. ಕ್ರೀಡಾಂಗಣ ಬಳಿ ಹೆಚ್ಚಿನ ಬಂದೋಬಸ್ತ್ ಆಗಿರಲಿಲ್ಲ
- ವಿಧಾನಸೌಧದ ಬಳಿಯೇ ಪೊಲೀಸ್ ಇಲಾಖೆ ಹೆಚ್ಚು ಗಮನ ಹರಿಸಿತ್ತು
- ವಿಜಯೋತ್ಸವಕ್ಕೂ ಮುನ್ನ ಪೊಲೀಸ್ ಅಧಿಕಾರಿಗಳ ನಿಯೋಜನೆಗಾಗಿ ರೋಲ್‌ಕಾಲ್ ನಡೆದಿರಲಿಲ್ಲ. ಕೆಎಸ್‌ಆರ್‌ಪಿ ಸಿಬ್ಬಂದಿಗೂ ಸರಿಯಾದ ಸಂದೇಶ ನೀಡಿರಲಿಲ್ಲ
- ಐಪಿಎಲ್ ಪಂದ್ಯದಷ್ಟೇ ವಿಜಯೋತ್ಸವಕ್ಕೂ ಜನರು ಬರಬಹುದು ಎನ್ನುವ ಸಂದೇಶವನ್ನು ಮಾತ್ರ ರವಾನೆ ಮಾಡಲಾಗಿತ್ತು

ಅಂಗನವಾಡಿಗೆ ನಿವೇಶನ ದಾನ

ಕೂಡಿಟ್ಟ ಹಣದಲ್ಲಿ ಖರೀದಿಸಿದ್ದ ಜಾಗ ನೀಡಿದ ಶಾಂತಮ್ಮ

ಪ್ರಜಾವಾಣಿ ವಾರ್ತೆ

ಪಾವಗಡ (ತುಮಕೂರು): ಅಲ್ಪ ಸಂಬಳದಲ್ಲಿಯೇ ಉಳಿಸಿ, ಕೂಡಿಟ್ಟಿದ್ದ ಹಣದಿಂದ ಖರೀದಿಸಿದ್ದ ನಿವೇಶನವನ್ನು ಓಬೇನಹಳ್ಳಿಯ ಅಂಗನವಾಡಿ ಕಾರ್ಯಕರ್ತೆ ಶಾಂತಮ್ಮ ಎಂಬವರು ಅಂಗನವಾಡಿ ಕೇಂದ್ರದ ಕಟ್ಟಡ ಕಟ್ಟಲು ಉಚಿತವಾಗಿ ನೀಡಿದ್ದಾರೆ.

ಗ್ರಾಮದ ಅಂಗನವಾಡಿ ಕೇಂದ್ರ ಹಲವು ವರ್ಷಗಳಿಂದ ಬಾಡಿಗೆ ಕಟ್ಟಡದಲ್ಲಿತ್ತು. ಕೆಲ ದಿನ ಗ್ರಾಮದ ದೇಗುಲದಲ್ಲಿ

ಸ್ವಂತ ನಿವೇಶನವನ್ನು ಉಚಿತವಾಗಿ ನೀಡಿರುವುದು ಕೆಲಸ ಮತ್ತು ಮಕ್ಕಳೆಡೆಗೆ ಅವರ ಪ್ರೀತಿಯ ಸಂಕೇತವಾಗಿದೆ. ಶೀಘ್ರ ಕಟ್ಟಡ ನಿರ್ಮಿಸಿ ಸೌಕರ್ಯ ಕಲ್ಪಿಸಲಾಗುವುದು

ಡಿ.ಜಿ.ಸುನಿತಾ, ಸಿಡಿಪಿಒ, ತುಮಕೂರು

ಕಾರ್ಯನಿರ್ವಹಿಸಿತ್ತು. 2015ರಲ್ಲಿ ಅಂಗನವಾಡಿ ಕಾರ್ಯಕರ್ತೆಯಾಗಿ ನೇಮಕಗೊಂಡ ದಿನದಿಂದ ಶಾಂತಮ್ಮ ಅವರನ್ನು ಇದು ಕಾಡುತ್ತಿತ್ತು.

▶ 7

ಶಾಂತಮ್ಮ ಅವರು ನಿವೇಶನದ ಇಖಾತೆ ಪ್ರತಿಯನ್ನು ಸಿಡಿಪಿಒ ಡಿ.ಜಿ ಸುನಿತಾ ಅವರಿಗೆ ಹಸ್ತಾಂತರಿಸಿದರು

ಚಿನಕುರುಳಿ ಪ್ರಕಾಶ್ ಶೆಟ್ಟಿ

ರೈಲಿಗೆ ಶಾಲಾ ವಾಹನ ಡಿಕ್ಕಿ, ಮೂವರು ವಿದ್ಯಾರ್ಥಿಗಳ ಸಾವು

ಕಡಲೂರು(ತಮಿಳುನಾಡು) (ಪಿಟಿಐ): ಕಡಲೂರು ಮತ್ತು ಅಲಪ್ಪಕ್ಕಮ್ ನಡುವಿನ ರೈಲ್ವೆ ಲೆವೆಲ್ ಕ್ರಾಸಿಂಗ್‌ವೊಂದರಲ್ಲಿ ಮಂಗಳವಾರ ಶಾಲಾ ವಾಹನವೊಂದು ಪ್ಯಾಸೆಂಜರ್ ರೈಲಿಗೆ ಡಿಕ್ಕಿ ಹೊಡೆದ ಪರಿಣಾಮ, ಮೂವರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.

ಶಾಲಾ ವಾಹನ ಚಾಲಕ ಮತ್ತು ಒಬ್ಬ ವಿದ್ಯಾರ್ಥಿ ಗಾಯಗೊಂಡಿದ್ದಾರೆ.

ಇನ್ನಷ್ಟು ವಿವರ ▶ 6

₹244 ಕೋಟಿ ಬಿಡುಗಡೆ ರಸ್ತೆಗಿಳಿದ ಲಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ನಭಾಗ್ಯ ಯೋಜನೆಯಡಿ ಸಾಗಾಣಿಕೆ ವೆಚ್ಚ, ಸಗಟು ಮತ್ತು ಚಿಲ್ಲರೆ ಲಾಭಾಂಶದ ಅನುದಾನ ₹244.10 ಕೋಟಿಯನ್ನು ಸರ್ಕಾರ ಬಿಡುಗಡೆ ಮಾಡಿದೆ. ಈ ಬೆನ್ನಲ್ಲೇ ರಾಜ್ಯ ಪಡಿತರ ಆಹಾರ ಧಾನ್ಯಗಳ ಸಗಟು ಮತ್ತು ಚಿಲ್ಲರೆ ಸಾಗಾಣಿಕೆ ಗುತ್ತಿಗೆದಾರರ ಸಂಘ ಮಂಗಳವಾರ ಮುಷ್ಕರವನ್ನು ವಾಪಸ್ ಪಡೆದಿದ್ದು, ಪಡಿತರ ಸಾಗಣೆ ಲಾರಿಗಳು ರಸ್ತೆಗಿಳಿದಿವೆ.

ಅನ್ನಭಾಗ್ಯ ಹಾಗೂ ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ (ಎನ್‌ಎಫ್‌ಎಸ್‌ಎ) ಯೋಜನೆಗಳ ಆಹಾರ ಧಾನ್ಯ ಸಾಗಣೆ ವೆಚ್ಚದ ಬಿಲ್ ಐದು ತಿಂಗಳಿನಿಂದ ಪಾವತಿ ಮಾಡದಿರುವುದನ್ನು ಖಂಡಿಸಿ ಲಾರಿ ಮಾಲೀಕರು ಸೋಮವಾರದಿಂದ ಮುಷ್ಕರ ಆರಂಭಿಸಿದ್ದರು. ಇದರ ಪರಿಣಾಮ ಪಡಿತರ ವಿತರಣೆಯಲ್ಲಿ ವ್ಯತ್ಯಯ ಉಂಟಾಗಿತ್ತು.

ಫೆಬ್ರುವರಿಯಿಂದ ಜೂನ್‌ವರೆಗೆ ‘ಅನ್ನಭಾಗ್ಯ ಯೋಜನೆ’ ಹಾಗೂ ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ಎನ್‌ಎಫ್‌ಎಸ್‌ಎ ಯೋಜನೆಯಡಿಯಲ್ಲಿ ಆಹಾರ ಧಾನ್ಯ ಸಾಗಣೆಗೆ ಮಾಡಿರುವ ವೆಚ್ಚವನ್ನು ಸರ್ಕಾರ ಪಾವತಿ ಮಾಡಿರಲಿಲ್ಲ.

▶ 6

‘ನ್ಯಾಯಬೆಲೆ ಅಂಗಡಿ ಬಂದ್’

ಹಾಸನ: ‘ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಬಾಕಿ ಉಳಿದಿರುವ ಕಮಿಷನ್ 3-4 ದಿನದಲ್ಲಿ ಬಿಡುಗಡೆ ಆಗದಿದ್ದರೆ ಮುಷ್ಕರ ನಡೆಸಲಾಗುವುದು’ ಎಂದು ಪಡಿತರ ವಿತರಣೆ ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಟಿ.ಕೃಷ್ಣಪ್ಪ ಇಲ್ಲಿ ತಿಳಿಸಿದರು.

‘ಆರು ತಿಂಗಳಿಂದ ಕಮಿಷನ್ ಪಾವತಿ ಆಗಿಲ್ಲ. ಜುಲೈ 4ರಂದು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ್ದೆವು. ಶೀಘ್ರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ’ ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ನ್ಯಾಯಬೆಲೆ ಅಂಗಡಿ ಮಾಲೀಕರಿಗೂ ಪ್ರತಿ ತಿಂಗಳು ನೇರ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕವೇ ಕಮಿಷನ್ ಪಾವತಿಸಬೇಕು’ ಎಂದು ಒತ್ತಾಯಿಸಿದರು.

ಪ್ರತಿಸುಂಕ ಆಗಸ್ಟ್ 1ರ ವರೆಗೆ ಇಲ್ಲ

ನವದೆಹಲಿ (ಪಿಟಿಐ): ವಿವಿಧ ದೇಶಗಳ ಮೇಲೆ ಪ್ರತಿಸುಂಕ ವಿಧಿಸುವುದನ್ನು ಅಮಾನತಿನಲ್ಲಿ ಇರಿಸಿದ ಕ್ರಮವನ್ನು ಅಮೆರಿಕವು ಆಗಸ್ಟ್ 1ರವರೆಗೆ ವಿಸ್ತರಿಸಿದೆ. ಇದು ಭಾರತದಲ್ಲಿ ರಫ್ತು ವಹಿವಾಟಿನಲ್ಲಿ ತೊಡಗಿರುವವರಿಗೆ ಸಮಾಧಾನ ತಂದಿದೆ.

ಅಲ್ಲದೆ, ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಅಂತಿಮ ರೂಪ ನೀಡಲು ಭಾರತ ಮತ್ತು ಅಮೆರಿಕದ ಅಧಿಕಾರಿಗಳಿಗೆ ಇದು ತುಸು ಹೆಚ್ಚುವರಿ ಸಮಯಾವಕಾಶ ನೀಡಿದೆ.

ಡೊನಾಲ್ಡ್ ಟ್ರಂಪ್ ನೇತೃತ್ವದ ಅಮೆರಿಕ ಸರ್ಕಾರವು ಕೆಲವು ದೇಶಗಳಿಗೆ ಸುಂಕದ ಪತ್ರವನ್ನು ಸೋಮವಾರ ರವಾನಿಸಿದೆ. ಟ್ರಂಪ್ ಅವರ ಸಹಿ ಇರುವ ಪತ್ರವನ್ನು ಬಾಂಗ್ಲಾದೇಶ, ಇಂಡೊನೇಷ್ಯಾ, ಜಪಾನ್, ದಕ್ಷಿಣ ಕೊರಿಯಾ, ಮಲೇಷ್ಯಾ, ಥಾಯ್ಲೆಂಡ್, ದಕ್ಷಿಣ ಆಫ್ರಿಕಾ ಸೇರಿದಂತೆ ಹಲವು ರಾಷ್ಟ್ರಗಳಿಗೆ ರವಾನಿಸಲಾಗಿದೆ. ಆದರೆ, ಈ ಪಟ್ಟಿಯಲ್ಲಿ ಭಾರತ ಇಲ್ಲ.

ಟ್ರಂಪ್ ಅವರು ಭಾರತ ಸೇರಿದಂತೆ ಹಲವು ದೇಶಗಳ ಮೇಲೆ ಪ್ರತಿಸುಂಕ ವಿಧಿಸುವುದಾಗಿ ಏಪ್ರಿಲ್ 2ರಂದು ಪ್ರಕಟಿಸಿದರು. ಅವರು ಭಾರತದ ಮೇಲೆ ಶೇ 26ರಷ್ಟು ಸುಂಕ ವಿಧಿಸಿದ್ದರು. ಆದರೆ ಇದನ್ನು ಜಾರಿಗೆ ತರುವುದನ್ನು 90 ದಿನಗಳವರೆಗೆ ಮುಂದೂಡಿದರು.

▶ 10

ಕೈ–ಕಮಲ ಆಂತರಿಕ ತುಮುಲ

ಆಡಳಿತಾರೂಢ ಕಾಂಗ್ರೆಸ್ ಹಾಗೂ ವಿರೋಧ ಪಕ್ಷ ಬಿಜೆಪಿಯಲ್ಲಿ ಆಂತರಿಕ ಕಲಹದ ಹೊಗೆ ಮತ್ತೆ ಎದ್ದಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಸಚಿವರ ಬಗ್ಗೆ ಆ ಪಕ್ಷದ ಶಾಸಕರು ಅಸಮಾಧಾನ ಹೊರಹಾಕಿದ್ದಾರೆ. ಬಿಜೆಪಿಯಲ್ಲಿ ತಮ್ಮ ಹಿಡಿತ ಇಟ್ಟುಕೊಂಡಿರುವ ಬಿ.ಎಸ್. ಯಡಿಯೂರಪ್ಪ ವಿರುದ್ಧ ‘ಸಮಾನ ಮನಸ್ಕರ ಗುಂಪು’ ಕಿಡಿಕಾರಿದೆ

ದೂರು– ದುಮ್ಮಾನ ಲಿಖಿತವಾಗಿ ಕೊಡಿ

ಬೆಂಗಳೂರು: ಸರ್ಕಾರದ ಕಾರ್ಯವೈಖರಿ, ಸಚಿವರ ನಡೆಗೆ ಬೇಸತ್ತಿರುವ ಕೆಲವು ಶಾಸಕರು, ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಎದುರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪಕ್ಷ ಸಂಘಟನೆ, ಕ್ಷೇತ್ರದ ಅಭಿವೃದ್ಧಿ, ಅನುದಾನ ಲಭ್ಯತೆಯ ಕುರಿತು ಅಭಿಪ್ರಾಯ ಪಡೆಯುವ ವೇಳೆ ವ್ಯಕ್ತವಾದ ಶಾಸಕರ ಅಸಮಾಧಾನ ಸುರ್ಜೇವಾಲಾ ಅವರನ್ನು ಗಲಿಬಿಲಿಗೊಳಿಸಿದೆ.

ಸಚಿವರ ಕಾರ್ಯವೈಖರಿ ಬಗ್ಗೆ ಆಕ್ಷೇಪ ಎತ್ತಿದ ಶಾಸಕರಿಗೆ, ದೂರು– ದುಮ್ಮಾನಗಳನ್ನು ಲಿಖಿತ ರೂಪದಲ್ಲಿ ನೀಡುವಂತೆ ಸುರ್ಜೇವಾಲಾ ಸೂಚನೆ ನೀಡಿದ್ದಾರೆ.

ಸುರ್ಜೇವಾಲಾ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿದ ಬಹುತೇಕ ಶಾಸಕರು, ತಮ್ಮ ಅಹವಾಲು, ಬೇಡಿಕೆಗಳಿಗೆ ಸಕಾ-ರಾತ್ಮಕವಾಗಿ ಸ್ಪಂದಿಸದ ಸಚಿವರ ವರ್ತನೆಯ ಬಗ್ಗೆ ದೂರು ನೀಡಿದ್ದಾರೆ. ಕೆಲವರು ಸಚಿವರ ಹೆಸರು ಉಲ್ಲೇಖಿಸಿ ತಮಗಾದ ಅನುಭವವನ್ನು ಹಂಚಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ. ಈ ಬಗ್ಗೆ ಪ್ರತಿಕ್ರಿಯಿಸಿದ ಸುರ್ಜೇವಾಲಾ, ‘ಕೆಲವು ಶಾಸಕರು ಸಮಸ್ಯೆಗಳ ಬಗ್ಗೆ ಹೇಳಿಕೊಂಡಿದ್ದಾರೆ’ ಎಂದರು.

▶ 7

‘ಬಿಎಸ್‌ವೈ ಮತ್ತೇಕೆ ಮರಳಿದರೋ’

ದಾವಣಗೆರೆ: ‘ಬಿ.ಎಸ್.ಯಡಿಯೂರಪ್ಪ ಹಿಂದೆ ಬಿಜೆಪಿ ತೊರೆದು ಪಕ್ಷ ಕಟ್ಟಿದ್ದರು. ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರ ಮನೆ ಬಾಗಿಲು ಬಡಿದಿದ್ದರು. ಮತ್ತೇಕೆ ಬಿಜೆಪಿಗೆ ಮರಳಿದರೋ ಗೊತ್ತಿಲ್ಲ’ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ ಅವರ 74ನೇ ಜನ್ಮದಿನದ ನಿಮಿತ್ತ ನಡೆದ ‘ನಮ್ಮಭಿಮಾನ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರದಲ್ಲಿ ಯಡಿಯೂರಪ್ಪ ಡಿಸಿಎಂ, ಸಿ.ಎಂ ಹುದ್ದೆಗೆ ಏರಲು ಜಿ.ಎಂ. ಸಿದ್ದೇಶ್ವರ ಪರಿಶ್ರಮವಿದೆ.

‘ಪಕ್ಷದಲ್ಲಿ ಸಮಸ್ಯೆ ಸೃಷ್ಟಿಸುವವರ ಮಟ್ಟಹಾಕಬೇಕಿದೆ’ ಎಂದರು.

▶ 7

ಭಿನ್ನಮತೀಯರ ಸಭೆ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಬದಲಾವಣೆಗೆ ಪಟ್ಟು ಹಿಡಿದಿರುವ ಭಿನ್ನಮತೀಯ ನಾಯಕರು ಸಿದ್ದೇಶ್ವರ ಅವರ ಜನ್ಮದಿನದ ಆಚರಣೆ ನೆಪದಲ್ಲಿ ನಗರದಲ್ಲಿ ಗೋಪ್ಯ ಸಭೆ ನಡೆಸಿ ದರು.

ಸೋಮವಾರ ರಾತ್ರಿಯೇ ದಾವಣಗೆರೆಗೆ ಆಗಮಿಸಿದ್ದ ನಾಯಕರು, ಜಿ.ಎಂ. ವಿಶ್ವ ವಿದ್ಯಾಲಯದ ಅತಿಥಿಗೃಹದಲ್ಲಿ ಬಹುಹೊತ್ತು ಚರ್ಚೆ ನಡೆಸಿದರು. ಮುಖಂಡರಾದ ಕುಮಾರ್ ಬಂಗಾರಪ್ಪ, ಬಿ.ಪಿ.ಹರೀಶ್, ಅರವಿಂದ ಲಿಂಬಾವಳಿ, ಪ್ರತಾಪ ಸಿಂಹ ಮತ್ತಿತರರು ಇದ್ದರು ಎಂದು ತಿಳಿದುಬಂದಿದೆ.

ನನ್ನ ನಿಯಮಿತ ಪ್ರೀಮಿಯಂ ಯೋಜನೆ

ಪ್ರಸ್ತುತವಿದೆ ಎಲ್‌ಐಸಿಯ ನವ್ ಜೀವನ್ ಶ್ರೀ
ಯುಐಎನ್:512N387V01
ಪ್ಲಾನ್ ಸಂಖ್ಯೆ: 912
ನಿಯಮಿತ ಪ್ರೀಮಿಯಂ ಪಾವತಿ ಯೋಜನೆ

ನಮ್ಮ ಗುರಿಗಳನ್ನು ಸಾಧಿಸಲು ಒಂದೇ ಪರಿಹಾರ.

- ತೆರಿಗೆ ರಹಿತ ಕೋಷ್ಟಕ ವಾರ್ಷಿಕ ಪ್ರೀಮಿಯಂನ ಶೇಕಡಾವಾರು ಪ್ರಮಾಣದಲ್ಲಿ ಪಾವತಿಸಬೇಕಾದ ಖಾತರಿ ಸೇರ್ಪಡೆಗಳು
- ಸೀಮಿತ ಪ್ರೀಮಿಯಂ ಪಾವತಿ ಅವಧಿ
- 6/8/10/12 ವರ್ಷಗಳ ಆಕರ್ಷಕ ಪ್ರೀಮಿಯಂ ಪಾವತಿ ಅವಧಿಗಳು.
- ಪಾಲಿಸಿ ಅವಧಿಯ ಆಯ್ಕೆಗಳು: 10 ರಿಂದ 20 ವರ್ಷಗಳು.

ಪ್ಲಾನ್ ಆನ್‌ಲೈನ್‌ಲ್ಲಿಯೂ ಲಭ್ಯವಿದೆ

(ಒಂದು ನಾನ್–ಪಾರ್, ನಾನ್–ಲಿಂಕ್ಡ್, ಲೈಫ್, ಇಂಡಿವಿಜುವಲ್, ಉಳಿತಾಯ ಯೋಜನೆ)

LIC
ಲೈಫ್ ಇನ್ಶೂರೆನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ
LIC/R1/2025 - 26/09/KAN

ಡೌನ್‌ಲೋಡ್ ಮಾಡಿರಿ ಎಲ್‌ಐಸಿ ಮೊಬೈಲ್ ಆ್ಯಪ್ LIC digital | ಸಂದರ್ಶಿಸಿರಿ: licindia.in | ಕಾಲ್ ಸೆಂಟರ್ ಸರ್ವಿಸ್ (022) 6827 6827
ನಮ್ಮ ವಾಟ್ಸಾಪ್ ನಂ. 8976862090 ‘Hi’ ಹೇಳಿರಿ
ವಿವರಗಳಿಗಾಗಿ ನಿಮ್ಮ ಏಜಂಟರನ್ನು /ಸಮೀಪದ ಎಲ್‌ಐಸಿ ಶಾಖೆಯನ್ನು ಸಂಪರ್ಕಿಸಿರಿ/ ಭೇಟಿ ನೀಡಿ www.licindia.inಗೆ
ನಮ್ಮನ್ನು ಫಾಲೋ ಮಾಡಿರಿ: LIC India Forever I IRDAI Regn No.: 512
ಕೃತ್ರಿಮ ಫೋನ್ ಕಾಲ್‌ಗಳ ಬಗ್ಗೆ ಮತ್ತು ನಕಲು/ಮೋಸದ ಆಫರ್‌ಗಳ ಬಗ್ಗೆ ಎಚ್ಚರಿಕೆ. ಐಆರ್‌ಡಿಎಐ ಅಥವಾ ಅದರ ಅಧಿಕಾರಿಗಳು ವಿಮಾ ಪಾಲಿಸಿಗಳನ್ನು ಮಾರಾಟ ಮಾಡುವುದು, ಬೋನಸ್ ಘೋಷಿಸುವುದು ಅಥವಾ ಪ್ರೀಮಿಯಂಗಳ ಹೂಡಿಕೆ, ಮೊತ್ತಗಳ ಮರುಪಾವತಿಯಂತಹ ವಿಮಾ ವ್ಯವಹಾರದ ಯಾವುದೇ ಚಟುವಟಿಕೆಗಳಲ್ಲಿ ಭಾಗಿಯಾಗುವುದಿಲ್ಲ. ಪಾಲಿಸಿದಾರರು ಅಥವಾ ಅಂತಹ ಕರೆಗಳನ್ನು ಸ್ವೀಕರಿಸುವ ಪ್ರಾಸ್ಪೆಕ್ಟ್ಸ್ ಪೊಲೀಸ್ ದೂರು ದಾಖಲಿಸುವಂತೆ ವಿನಂತಿಸಲಾಗಿದೆ. ಅಪಾಯ ಸಾಧ್ಯತೆಗಳು, ನಿಯಮ ಹಾಗೂ ಷರತ್ತುಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಮಾರಾಟ ಪೂರ್ತಿಗೊಳ್ಳುವ ಮೊದಲು ಸೇಲ್ಸ್ ಬ್ರೋಶರ್ ಎಚ್ಚರಿಕೆಯಿಂದ ಓದಿರಿ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು ಅಲ್ಲಲ್ಲಿ ಮಳೆ ಸಾಧ್ಯತೆ

ಸೆಲ್ಕೋ ಡಿಜಿಎಂ ಗುರುಪ್ರಕಾಶ್ ಶೆಟ್ಟಿ, ಸಿಇಒ ಮೋಹನ ಭಾಸ್ಕರ ಹೆಗಡೆ ಅವರು ಸಚಿವ ಪ್ರಲ್ಹಾದ ಜೋಶಿ ಅವರನ್ನು ಭೇಟಿ ಮಾಡಿದರು

ಸೆಲ್ಕೋಗೆ ಸಚಿವ ಜೋಶಿ ಶ್ಲಾಘನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೀನ್ ಆಸ್ಕರ್ ಎಂದೇ ಖ್ಯಾತವಾಗಿರುವ 'ಆಶ್ಡೆನ್' ಪ್ರಶಸ್ತಿಗೆ ಮೂರನೆಯ ಬಾರಿಗೆ ಪಾತ್ರವಾಗಿರುವ 'ಸೆಲ್ಕೋ ಸೋಲಾರ್' ಸಂಸ್ಥೆಯ ಸಾಧನೆಯನ್ನು ಕೇಂದ್ರ ಪರ್ಯಾಯ ಇಂಧನ ಸಚಿವ ಪ್ರಲ್ಹಾದ ಜೋಶಿ ಶ್ಲಾಘಿಸಿದ್ದಾರೆ.

'ಸೆಲ್ಕೋ ಸಂಸ್ಥೆಯ ನಿಲುವು ಹಾಗೂ ಮೂರು ದಶಕಗಳಿಂದ ಸಂಸ್ಥೆ ಸಾಗುತ್ತಿರುವ ಬಗೆಯನ್ನು ಪ್ರಸ್ತಾಪಿಸಿದ ಅವರು ದೆಹಲಿಯ ತಮ್ಮ ಕಚೇರಿಯಲ್ಲಿ ಸೆಲ್ಕೋ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಮೋಹನ ಭಾಸ್ಕರ ಹೆಗಡೆ ಹಾಗೂ ಡಿಜಿಎಂ ಗುರುಪ್ರಕಾಶ್ ಶೆಟ್ಟಿ ಅವರನ್ನು ಅಭಿನಂದಿಸಿದರು' ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

'ಸೆಲ್ಕೋ ಸಂಸ್ಥಾಪಕ ಹರೀಶ್ ಹಂದೆ ಅವರ ವೈಜ್ಞಾನಿಕ ದೃಷ್ಟಿಕೋನ ಹಾಗೂ ದೂರದೃಷ್ಟಿಯ ಚಿಂತನೆಗಳನ್ನು ಸಚಿವರು ಶ್ಲಾಘಿಸಿದರು. ಸೆಲ್ಕೋಕ್ಕೆ ಸಂದ ಪ್ರಶಸ್ತಿ ರಾಜ್ಯಕ್ಕೆ ಮತ್ತು ದೇಶಕ್ಕೆ ಅಭಿಮಾನದ ಸಂಗತಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು' ಎಂದು ಕೂಡ ಪ್ರಕಟಣೆಯಲ್ಲಿ ಹೇಳಲಾಗಿದೆ.

ಜಿಎಸ್‌ಟಿ ವಂಚನೆ ಜಾಲ ಪತ್ತೆ

ರಾಜ್ಯಕ್ಕೆ ಕೋಟ್ಯಂತರ ರೂ. ವಂಚಿಸಿದ್ದವರ ಬಂಧಿಸಿದ ತೆರಿಗೆ ಇಲಾಖೆ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಂಚಿಸುತ್ತಿದ್ದ ಬೃಹತ್ ಅಂತರರಾಜ್ಯ ಜಾಲವೊಂದನ್ನು ಪತ್ತೆ ಮಾಡಿರುವ ರಾಜ್ಯ ವಾಣಿಜ್ಯ ಇಲಾಖೆ ಅಧಿಕಾರಿಗಳು, ₹39 ಕೋಟಿ ವಸೂಲಿಗೆ ಕ್ರಮ ತೆಗೆದುಕೊಂಡಿದ್ದಾರೆ.

ಜನ ಸಾಮಾನ್ಯರ ಆಧಾರ್ ಮತ್ತು ಪ್ಯಾನ್ ವಿವರ ಬಳಸಿಕೊಂಡು ಜಿಎಸ್‌ಟಿ ನೋಂದಣಿ ಮಾಡಿ, ತೆರಿಗೆ ವಂಚಿಸುತ್ತಿದ್ದ ಜಾಲ ರಾಜ್ಯದಲ್ಲಿ ಸಕ್ರಿಯವಾಗಿರುವ ಬಗ್ಗೆ 2023ರಲ್ಲಿ ದೂರು ಬಂದಿತ್ತು. ಅದರಂತೆ ತನಿಖೆ ಆರಂಭಿಸಿದ್ದ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು, ಈ ಜಾಲದ ಕಿಂಗ್‌ಪಿನ್ ಕೈಲಾಶ್ ಬೀಷ್ಣೋಯಿ ಎಂಬುವವರನ್ನು ಬಂಧಿಸಿದ್ದಾರೆ.

ನಗರದ ಮುರುಗೇಶಪಾಳ್ಯದಲ್ಲಿರುವ ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಕೆಲ ವ್ಯಕ್ತಿಗಳು ಇತರರ ಆಧಾರ್ ಕಾರ್ಡ್ ಮತ್ತು ಪ್ಯಾನ್ ಬಳಸಿಕೊಂಡು ಒಂದೇ ದಿನ ಹತ್ತು ಬ್ಯಾಂಕ್ ಖಾತೆ ತೆರೆಯಲು ಯತ್ನಿಸಿದ್ದರು. ಈ ಸಂಬಂಧ ಜೀವನ ಬಿಮಾ ನಗರ ಪೊಲೀಸ್ ಠಾಣೆಯಲ್ಲಿ ಬ್ಯಾಂಕ್‌ನ ಶಾಖಾ ವ್ಯವಸ್ಥಾಪಕ ದೂರು ನೀಡಿದ್ದರು. ಆ ದೂರಿನ ಆಧಾರದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ತನಿಖೆ ಆರಂಭಿಸಿದ್ದರು.

'ಈ ಜಾಲವು ಹಲವು ರಾಜ್ಯಗಳಲ್ಲಿ ಸಕ್ರಿಯವಾಗಿರುವುದು ಪತ್ತೆಯಾಗಿತ್ತು. ಕರ್ನಾಟಕವನ್ನೇ ಕೇಂದ್ರವಾಗಿ ಇರಿಸಿಕೊಂಡು ಕೈಲಾಶ್ ಕಾರ್ಯ ನಿರ್ವಹಿಸುತ್ತಿದ್ದ. ಕರ್ನಾಟಕದಲ್ಲೇ 17 ಕಂಪನಿಗಳನ್ನು ನೋಂದಣಿ ಮಾಡಿಸಿದ್ದ. ಆ ಕಂಪನಿಗಳ ಹೆಸರಿನಲ್ಲಿ, ಕಬ್ಬಿಣದ ಗುಜರಿ ವ್ಯವಹಾರದಲ್ಲಿ ತೊಡಗಿರುವ ಕಂಪನಿಗಳಿಗೆ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿಕೊಟ್ಟಿದ್ದ' ಎಂದು ವಾಣಿಜ್ಯ ತೆರಿಗೆ ಇಲಾಖೆಯ ಪ್ರಕಟಣೆ ತಿಳಿಸಿದೆ.

'2024ರ ಡಿಸೆಂಬರ್ ವೇಳೆಗೆ ಕೈಲಾಶ್‌ನ ಸಹಚರ, ರೋಹಿತ್ ಎಂಬಾತನನ್ನು ಬಂಧಿಸಲಾಗಿತ್ತು. ಕೈಲಾಶ್‌ನ ಕರ್ನಾಟಕದಲ್ಲಿನ ವ್ಯವಹಾರಗಳನ್ನು ರೋಹಿತ್ ನೋಡಿಕೊಳ್ಳುತ್ತಿದ್ದ. ಆತ ನೀಡಿದ ಮಾಹಿತಿಯ ಮೇರೆಗೆ ಕೈಲಾಶ್‌ನ ಬಂಧನಕ್ಕೆ ಕಾರ್ಯಾಚರಣೆ ರೂಪಿಸಲಾಗಿತ್ತು' ಎಂದು ಮಾಹಿತಿ ನೀಡಿದೆ.

'ರೋಹಿತ್ ಬಂಧನದ ಬೆನ್ನಲ್ಲೇ ಕೈಲಾಶ್ ತಲೆಮರೆಸಿಕೊಂಡಿದ್ದ. ಆನಂತರ ಆತ ತೆಲಂಗಾಣ, ಛತ್ತೀಸಗಡ, ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ರಾಜಸ್ಥಾನದಲ್ಲಿ ಪ್ರಯಾಣ ಮಾಡಿದ್ದ. ಈ ಅವಧಿಯಲ್ಲಿ ಆತ ತನ್ನ ಲೊಕೇಷನ್ ಮಾಹಿತಿ ಸಿಗಬಾರದು ಎಂದು 14 ಮೊಬೈಲ್‌ಗಳನ್ನು ಬದಲಿಸಿದ್ದ' ಎಂದು ವಿವರಿಸಿವೆ.

'ಆತ ರಾಜಸ್ಥಾನದ ಜಾಲೋರ್‌ನಲ್ಲಿ ಇರುವ ಬಗ್ಗೆ ಖಚಿತ ಮಾಹಿತಿ ದೊರೆಯಿತು. ಅಲ್ಲಿನ ಪೊಲೀಸ್ ಅಧಿಕಾರಿಗಳ ನೆರವಿನೊಂದಿಗೆ ಕಾರ್ಯಾಚರಣೆ ನಡಸಿ ಆತನನ್ನು ಬಂಧಿಸಲಾಯಿತು. ಬೆಂಗಳೂರಿನ ಆರ್ಥಿಕ ಅಪರಾಧಗಳ ನ್ಯಾಯಾಲಯಕ್ಕೆ ಆತನನ್ನು ಹಾಜರುಪಡಿಸಿ, ಕಸ್ಟಡಿಗೆ ಪಡೆಯಲಾಗಿದೆ' ಎಂದು ತಿಳಿಸಿವೆ.

₹208 ಕೋಟಿಯ ಇನ್‌ವಾಯ್ಸ್

- ಖೊಟ್ಟಿ ಕಂಪನಿಗಳ ಹೆಸರಿನಲ್ಲಿ ಒಟ್ಟು ₹208 ಕೋಟಿ ಮೌಲ್ಯದ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಲಾಗಿದೆ
- ಈ ನಕಲಿ ಇನ್‌ವಾಯ್ಸ್‌ಗಳನ್ನು ಬೇರೆ–ಬೇರೆ ಕಂಪನಿಗಳಿಗೆ ಮಾರಾಟ ಮಾಡಲಾಗಿದೆ
- ಆ ಇನ್‌ವಾಯ್ಸ್‌ಗಳನ್ನು ಸಲ್ಲಿಸಿರುವ ಕಂಪನಿಗಳು, ಒಟ್ಟು ₹39 ಕೋಟಿಯಷ್ಟು ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆದುಕೊಂಡಿವೆ
- ಕಬ್ಬಿಣ ಮತ್ತು ಇತರ ಗುಜರಿ ವಸ್ತುಗಳ ಮಾರಾಟ ಹಾಗೂ ಸಾಗಣೆ ವ್ಯವಹಾರದಲ್ಲಿ ತೊಡಗಿರುವ ಕಂಪನಿಗಳೇ ಇಂತಹ ಇನ್‌ವಾಯ್ಸ್‌ಗಳನ್ನು ಬಳಸಿಕೊಂಡಿವೆ
- ಛತ್ತೀಸಗಡ, ಮಧ್ಯಪ್ರದೇಶ, ರಾಜಸ್ಥಾನ, ತೆಲಂಗಾಣ, ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಕರ್ನಾಟಕದಲ್ಲಿ ಈ ಜಾಲ ಸಕ್ರಿಯವಾಗಿತ್ತು

ಟಿಕೆಟ್: 9 ಆ್ಯಪ್‌ಗಳಲ್ಲಿ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೊಬೈಲ್ ಆ್ಯಪ್, ವಾಟ್ಸ್‌ಆ್ಯಪ್ ಚಾಟ್‌ಬಾಟ್, ಪೇಟಿಎಂಗಳ ಜೊತೆಗೆ, ಇನ್ನೂ ಒಂಬತ್ತು ಆ್ಯಪ್‌ಗಳ ಮೂಲಕ 'ನಮ್ಮ ಮೆಟ್ರೊ' ಪ್ರಯಾಣದ ಟಿಕೆಟ್ ಖರೀದಿಸುವ ವ್ಯವಸ್ಥೆಗೆ ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಚಾಲನೆ ನೀಡಿದೆ.

ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್ (ಒಎನ್‌ಡಿಸಿ) ಜಾಲದಲ್ಲಿರುವ ಈ ಆ್ಯಪ್‌ಗಳ ಮೂಲಕ ಕ್ಯೂಆರ್ ಕೋಡ್ ಆಧಾರಿತ ಟಿಕೆಟ್ ಪಡೆಯಬಹುದಾಗಿದೆ.

ಇನ್ನು ಮುಂದೆ ಈಗಿರುವ ಸೌಲಭ್ಯಗಳ ಜೊತೆಗೆ ಈಸ್ ಮೈ ಟ್ರಿಪ್, ಹೈವೇ ಡಿಲೈಟ್, ಮೈಲ್ಸ್ ಆ್ಯಂಡ್ ಕಿಲೋಮೀಟರ್ಸ್ ವಯಾ ಟೆಲಿಗ್ರಾಂ, ನಮ್ಮ ಯಾತ್ರಿ, ಒನ್ ಟಿಕೆಟ್, ರ‍್ಯಾಪಿಡೊ, ರೆಡ್ ಬಸ್, ಟ್ಯುಮೊಕ್, ಯಾತ್ರಿ - ಸಿಟಿ ಟ್ರಾವೆಲ್ ಗೈಡ್ ಆ್ಯಪ್‌ಗಳ ಮೂಲಕವೂ ಪ್ರಯಾಣಿಕರು 'ನಮ್ಮ ಮೆಟ್ರೊ'ದ ಕ್ಯೂಆರ್ ಕೋಡ್ ಆಧಾರಿತ ಟಿಕೆಟ್‌ಗಳನ್ನು ಖರೀದಿಸಬಹುದು.

'2023ರಿಂದ ಒಎನ್‌ಡಿಸಿ ನೆಟ್‌ವರ್ಕ್‌ನಲ್ಲಿ ಆಟೊ ಮತ್ತು ಟ್ಯಾಕ್ಸಿ ಸೇವೆಗಳು ಲಭ್ಯವಿದ್ದವು. ಈಗ ಮೆಟ್ರೊ ರೈಲು ಟಿಕೆಟ್‌ಗಳನ್ನೂ ಸೇರಿಸಿರುವುದರಿಂದ, ಪ್ರಯಾಣಿಕರು ಮನೆಯಿಂದ ತಾವು ತಲುಪಬೇಕಿರುವ ಸ್ಥಳದವರೆಗಿನ ಪ್ರಯಾಣವನ್ನು ಒಂದೇ ಆ್ಯಪ್ ಮೂಲಕ ಯೋಜಿಸಬಹುದು. ಇದು ಸಮಯ ಮತ್ತು ಶ್ರಮವನ್ನು ಉಳಿಸುತ್ತದೆ' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಸಮೂಹ ಮಾಧ್ಯಮ ಕೌಶಲ ಕಲಿಕಾ ಕಾರ್ಯಕ್ರಮ: ಉದ್ಘಾಟನೆ: ಉದಯಕುಮಾರ್ ಎನ್., ಆಶಯ ನುಡಿ: ಜನಾರ್ದನ ಕೆಸರಗದ್ದೆ, ಅಧ್ಯಕ್ಷತೆ: ಡೊಮಿನಿಕ್ ಡಿ., ಆಯೋಜನೆ ಹಾಗೂ ಸ್ಥಳ: ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಮಧ್ಯಾಹ್ನ 2.30

ಅಜ್ಜಿ ಕೈರುಚಿ ಮತ್ತು ಅಜ್ಜಿ ಕಲಾ ಪ್ರದರ್ಶನ: ತಿಂಡಿಗಳ ಸ್ಪರ್ಧೆ, ಆಯೋಜನೆ: ಕೀರ್ತಿ ಮಹಿಳಾ ಸಮಾಜ, ಸ್ಥಳ: ವಿಶಾಲ್ ರಾಯಲ್ ಪಾರ್ಟಿಹಾಲ್, ಉತ್ತರಹಳ್ಳಿ, ಮಧ್ಯಾಹ್ನ 3



ಎಂ.ಎಸ್. ಸತ್ಯು

'ರಂಗ ರಂಗೋಲಿ' ರಾಜ್ಯ ಮಟ್ಟದ ಕನ್ನಡ ನಾಟಕೋತ್ಸವ: ಗಜಾನನ ಯುವಕ ಮಂಡಳಿ ತಂಡದಿಂದ 'ವಾಲಿ ವಧೆ' ನಾಟಕ ಪ್ರದರ್ಶನ: ಉದ್ಘಾಟನೆ ಹಾಗೂ ರಂಗ ಗೌರವ: ಎಂ.ಎಸ್.ಸತ್ಯು, ರಂಗ ನಿರ್ದೇಶನ: ಗಣೇಶ ಮಂದರ್ತಿ, ಪ್ರಸ್ತುತಿ: ಪ್ರಭು ಗುರಪ್ಪನವರ್, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ದೊಡ್ಡಬಳ್ಳಾಪುರ: ಇಂದಿನಿಂದ 15 ದಿನಗಳ ನಾಟಕೋತ್ಸವ

ದೊಡ್ಡಬಳ್ಳಾಪುರ: ತಾಲ್ಲೂಕಿನ ಬೀಡಿಕೆರೆ ಪದ್ಮಪ್ರಿಯ ಕಲಾ ಟ್ರಸ್ಟ್ ವತಿಯಿಂದ ನಗರದ ಡಾ.ರಾಜ್‌ಕುಮಾರ್ ಕಲಾಮಂದಿರದಲ್ಲಿ 15 ದಿನಗಳ ರಾಜ್ಯ ಮಟ್ಟದ ಪೌರಾಣಿಕ ನಾಟಕೋತ್ಸವ ಜುಲೈ 9ರಿಂದ 23ರವರೆಗೆ ನಡೆಯಲಿದೆ. ನಾಟಕೋತ್ಸವದಲ್ಲಿ ವಿವಿಧ ನಾಟಕ ಮಂಡಳಿಗಳಿಂದ ರಾಜಾ ಸತ್ಯವ್ರತ, ಸಂಪೂರ್ಣ ರಾಮಾಯಣ, ಕುರುಕ್ಷೇತ್ರ, ಶ್ರೀ ಕೃಷ್ಣ ಸಂಧಾನ, ನಲ್ಲತಂಗಾ ದೇವಿ ಮುಂತಾದ ನಾಟಕಗಳ ಪ್ರದರ್ಶನ ನಡೆಯಲಿದೆ.

'ಆರ್‌ಎಸ್‌ವಿ ತಡೆಗೆ ರೋಗನಿರೋಧಕ ಲಸಿಕೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಶುಗಳು ಮತ್ತು ಐದು ವರ್ಷದೊಳಗಿನ ಮಕ್ಕಳಲ್ಲಿ ಶ್ವಾಸಕೋಶದ ಸೋಂಕಿಗೆ ಕಾರಣವಾಗುತ್ತಿರುವ 'ರೆಸ್ಪಿರೇಟರಿ ಸಿನ್ಸಿಟಿಯಲ್ ವೈರಸ್' (ಆರ್‌ಎಸ್‌ವಿ) ತಡೆಗೆ ರೋಗನಿರೋಧಕ ಲಸಿಕೆ ಒದಗಿಸಬೇಕು' ಎಂದು ವೈದ್ಯಕೀಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಈ ಲಸಿಕೆಗೆ ಸಂಬಂಧಿಸಿದಂತೆ ಸನೋಫಿ ಮತ್ತು ಡಾ. ರೆಡ್ಡೀಸ್ ಸಂಸ್ಥೆಗಳು ಒಡಂಬಡಿಕೆ ಮಾಡಿಕೊಂಡಿದ್ದು, ಆರ್‌ಎಸ್‌ವಿ ತಡೆಗೆ ಒಂದು ಡೋಸ್‌ನ ಲಸಿಕೆಯನ್ನು ಪರಿಚಯಿಸಿವೆ.

ಈ ಲಸಿಕೆಯ ಬಗ್ಗೆ ನಗರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ವಿವರಿಸಿದ ಇಂಡಿಯನ್ ಅಕಾಡೆಮಿ ಆಫ್ ಪಿಡಿಯಾಟ್ರಿಕ್ಸ್‌ನ ರಾಷ್ಟ್ರೀಯ ಅಧ್ಯಕ್ಷ ಡಾ. ವಸಂತ್ ಎಂ. ಖಲತ್ಕರ್, 'ಮಕ್ಕಳಿಗೆ ಆಗಾಗ ಶೀತಜ್ವರದಂಥ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಮಳೆ ಮತ್ತು ಚಳಿಗಾಲದಲ್ಲಿ ಈ ಸಮಸ್ಯೆಗಳು ಹೆಚ್ಚಾಗಿ ಮಕ್ಕಳನ್ನು ಬಾಧಿಸುತ್ತವೆ. ನವಜಾತ ಶಿಶು ಆಸ್ಪತ್ರೆಯಿಂದ ಮನೆಗೆ ತೆರಳುವಾಗಲೇ ಈ ಲಸಿಕೆಯನ್ನು ಮುನ್ನೆಚ್ಚರಿಕೆ ಕ್ರಮವಾಗಿ ನೀಡುವುದು ಉತ್ತಮ. ಈಗ 'ನಿರ್ಸೆವಿಮಾಬ್' ಎಂಬ ಒಂದೇ ಡೋಸ್‌ನ ಲಸಿಕೆಯಿದೆ. ಇದು ದೀರ್ಘಕಾಲ ಕಾರ್ಯನಿರ್ವಹಿಸುವ ಪ್ರತಿಕಾಯ ವೃದ್ಧಿಸಲಿದೆ' ಎಂದರು.

ಡಾ.ರೆಡ್ಡೀಸ್ ಮೆಡಿಕಲ್ ಅಫೇರ್ಸ್ ಮುಖ್ಯಸ್ಥ ಭವೇಶ್ ಕೋಟಕ್, 'ಆರ್‌ಎಸ್‌ವಿ ತಡೆಗೆ ದೇಶದಲ್ಲಿ ಎಲ್ಲ ನವಜಾತ ಶಿಶುಗಳು ಹಾಗೂ ಐದು ವರ್ಷದೊಳಗಿನ ಮಕ್ಕಳು ಲಸಿಕೆ ಪಡೆದುಕೊಳ್ಳುವಂತಾಗಬೇಕು. ನ್ಯುಮೋನಿಯಾದಂತಹ ಗಂಭೀರ ಸಮಸ್ಯೆಗಳಿಂದ ರಕ್ಷಿಸಲು ಈ ಲಸಿಕೆ ಸಹಕಾರಿ' ಎಂದು ಹೇಳಿದರು.

ಸನೋಫಿಯ ಸಂಸ್ಥೆಯ ಸೀಸರ್ ಮಸ್ಕರೆನಾಸ್, 'ವಿಶ್ವ ಆರೋಗ್ಯ ಸಂಸ್ಥೆಯು ಆರ್‌ಎಸ್‌ವಿಗೆ ಲಸಿಕೆಯನ್ನು ಶಿಫಾರಸು ಮಾಡಿದೆ. ಮಕ್ಕಳ ಆರೋಗ್ಯ ಕಾಪಾಡಲು ಈ ಲಸಿಕೆ ಸಹಕಾರಿ' ಎಂದರು.

ಕರ್ನಾಟಕ ಸರ್ಕಾರ
ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ
ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ
ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027, ದೂ.: 080-22226627/6628, ಫ್ಯಾಕ್ಸ್ : 080-22226630,
ಇ-ಮೇಲ್ : dultbangalore@gmail.com, dult@karnataka.gov.in, Website: https://dult.karnataka.gov.in
ಸಂಖ್ಯೆ: DULT-ACCT/1/2020/387 ದಿನಾಂಕ: 08.07.2025
ತಿದ್ದುಪಡಿ
ದಿನಾಂಕ: 08.07.2025 ರಂದು ಇದೇ ದಿನಪತ್ರಿಕೆಯಲ್ಲಿ ಪ್ರಕಟವಾದ ಪ್ರಕಟಣೆ ಸಂಖ್ಯೆ (DULT/2025-26/SE0007/CALL-2) ದಿನಾಂಕ: 08.07.2025ರಲ್ಲಿ ಕೊನೆಯ ದಿನಾಂಕ: 21.06.2025 ಎಂದು ನಮೂದಿಸಲಾಗಿದ್ದು ಅದರ ಬದಲಾವಣೆಯಾಗಿ ಕೊನೆಯ ದಿನಾಂಕ: 18.07.2025 ಪರಿಗಣಿಸತಕ್ಕದ್ದು.
ಸಹಿ/– ಆಡಳಿತಾಧಿಕಾರಿ
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.

ನೈಋತ್ಯ ರೈಲ್ವೆ
ಇ-ಟೆಂಡರ್ ಪ್ರಕಟಣೆ ಸಂ. ವೈ/ಇ.29/2025–26/19
ದಿನಾಂಕ : 30–06–2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹರಿಹರ : ಬಿಟಿಪಿಎನ್ ವ್ಯಾಗನ್‌ಗಳ ನಿರ್ವಹಣೆಗಾಗಿ ಮೂಲಸೌಕರ್ಯಗಳನ್ನು ಒದಗಿಸುವುದು.	ರೂ. 55,89,628.91

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21–07–2025 ರಂದು 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಜನರಲ್ / ಮೈಸೂರು
ಪಿಯುಬಿ/269/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ
South Western Railway-SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ
ಇ-ಟೆಂಡರ್ ಪ್ರಕಟಣೆ ಸಂ. ಬಿ/ಟಿಆರ್‌ಡಿ.2025–26/05
ದಿನಾಂಕ : 01–07–2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಧರ್ಮವರಂ ಮತ್ತು ಪೆನುಕೊಂಡಗಳಿಗೆ ಫೀಡರ್ ಒದಗಿಸುವುದರಿಂದ ಎಸ್‌ಎಸ್‌ಪಿಎನ್/ಟಿಎಸ್‌ಎಸ್ ಗಳ ಲೈನ್ ಸಾಮರ್ಥ್ಯವನ್ನು ಹೆಚ್ಚಿಸುವುದು.	ರೂ. 10,03,05,508.67

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 23–07–2025 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್ / ಬೆಂಗಳೂರು
ಪಿಯುಬಿ/270/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ
South Western Railway-SWR | SWRRLY | @SWRAILWAYHQ | @sw_railways

ಸ್ಥಾಪನೆ: 1964
ಶ್ರೀ ಆಂಜನೇಯ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಕೇಂದ್ರ ಕಛೇರಿ: ನಂ.38, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, (ಲಿಂಕ್ ರಸ್ತೆ) ಮಲ್ಲೇಶ್ವರಂ, ಬೆಂಗಳೂರು–560 003.
ದೂರವಾಣಿ: 080-23563302 / 23564151. E-Mail: anjaneyabank@yahoo.com
ಅರವತ್ತೊಂದನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ
ಬ್ಯಾಂಕಿನ 2024–25ನೇ ಸಾಲಿನ 61ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 13/07/2025ನೇ ಭಾನುವಾರದಂದು ಬೆಳಗ್ಗೆ 09:30 ಘಂಟೆಗೆ "ವೈ. ಮುನಿಸ್ವಾಮಪ್ಪ ಕಲ್ಯಾಣ ಮಂಟಪ" ನಂ.17, ಗೋಪಾಲ್ ಥಿಯೇಟರ್ ಪಕ್ಕ, ಯಶವಂತಪುರ, ಬೆಂಗಳೂರು–560 022. ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವೆಂಕಟೇಶ್.ವಿ ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿಸಲಾಗಿದೆ. ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ, ಸಭೆಗೆ ಹಾಜರಾಗಬೇಕಾಗಿ ಮಾನ್ಯ ಸದಸ್ಯರಲ್ಲಿ ವಿನಂತಿ.
ವಿ.ಸೂ: ಬ್ಯಾಂಕಿನ ಸದಸ್ಯರುಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿರುತ್ತದೆ.
ಸ್ಥಳ: ಬೆಂಗಳೂರು
ದಿನಾಂಕ: 09/07/2025
ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
ಸಹಿ/– (ಆರ್.ಶಿವಶಂಕರ)
ಪ್ರಧಾನ ವ್ಯವಸ್ಥಾಪಕರು

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
ಹಿಂದಿನ ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್
(ಭಾರತ ಸರ್ಕಾರದ ಅಧೀನ ಸಂಸ್ಥೆ)
ಸಿಐಎನ್: U15100MH1950GOI1008187 ವೆಬ್‌ಸೈಟ್: www.irel.co.in
ಐಎಸ್‌ಒ 9001:2015, ಐಎಸ್‌ಒ 14001:2015 & ಐಎಸ್‌ಒ 45001:2018 ಕಂಪನಿ
ಉಲ್ಲೇಖ: ಜಾಹೀರಾತು ಸಂ.25–26/6 ದಿನಾಂಕ: 03.07.2025
ಟೆಂಡರ್ ಪ್ರಕಟಣೆ
ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್, ಚವಾರಾ ಇವರು ಕೆಳಕಂಡ ಐಟಂ/ಜಾಬ್ ವಿವರಗಳಿಗಾಗಿ ಬಿಡ್ ಆಹ್ವಾನಿಸಿದ್ದಾರೆ.

ಇವೆಂಟ್ ನಂ. (ಜಿಇಎಂ)	ಜಾಬ್/ಐಟಂ ವಿವರ
ಜಿಇಎಂ/2025/ಬಿ/6411162	ಎಕ್ಸ್‌ಕ್ಯಾವೇಟರ್‌ಗಳನ್ನು ಬಳಸಿಕೊಂಡು ಪೊಝಿ ಮೌಥ್ ಅಗಲೀಕರಣ/ಆಳಗೊಳಿಸುವ ಮತ್ತು ಕತ್ತರಿಸುವ ಸಂದರ್ಭದಲ್ಲಿ ಸ್ಪಿಲ್‌ವೇ ಚಾನಲ್‌ನಲ್ಲಿನ ಮರಳು ತೆರವುಗೊಳಿಸುವುದು, ತೊಟ್ಟಪಲ್ಲಿ ಸ್ಪಿಲ್‌ವೇ ಚಾನಲ್‌ನ ಉತ್ತರ ಭಾಗದಿಂದ ಮತ್ತು ಪೊಝಿ ಮೌಥ್ ಸೈಟ್‌ನಿಂದ ಟಿಪ್ಪರ್‌ಗಳಲ್ಲಿ (ರೇರ್ ಡಂಪ್ ಟ್ರಕ್ಸ್) ಖನಿಜ ಮರಳು ಸಂಗ್ರಹಣೆ, ಲೋಡಿಂಗ್, ಸಾಗಾಣಿಕೆ ಮತ್ತು ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್, ಚವಾರ ಹಾಗೂ ಕೆಎಂಎಂಎಲ್, ಶಂಕರಮಂಗಲಂ-ಫೇಸ್ 6 ಆಪರೇಷನ್ಸ್‌ಗೆ ಖನಿಜ ಮರಳು ಸಾಗಾಣಿಕೆ

ಬಿಡ್‌ದಾರರು http://irel.co.in ಅಥವಾ http://gem.gov.in ವೆಬ್‌ಸೈಟ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಈ ಮೇಲ್ಕಂಡ ಟೆಂಡರ್‌ಗಳಿಗೆ ಯಾವುದೇ ತಿದ್ದುಪಡಿ/ವಿಸ್ತರಣೆ ಉಂಟಾದಲ್ಲಿ, ಅಂತಹವುಗಳನ್ನು ಮೇಲ್ಕಂಡ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಸಹಿ/-
ಮುಖ್ಯಸ್ಥರು, ಚವಾರ
CBC 48139/12/0006/2526

ರಾಷ್ಟ್ರ ರಾಜಧಾನಿ ಪ್ರದೇಶ ಯೋಜನಾ ಮಂಡಳಿ
(ಭಾರತ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿನ ಶಾಸನಬದ್ಧ ಅಂಗ)
1ನೇ ಮಹಡಿ, ಕೋರ್–4ಬಿ, ಇಂಡಿಯಾ ಹ್ಯಾಬಿಟ್ಯಾಟ್ ಸೆಂಟರ್, ಲೋಧಿ ರಸ್ತೆ, ನವದೆಹಲಿ–110003
ಫೈಲ್ ನಂ. 9196108
ರಾಷ್ಟ್ರ ರಾಜಧಾನಿ ಪ್ರದೇಶ ಯೋಜನಾ ಮಂಡಳಿಯಲ್ಲಿನ ಕೆಳಕಂಡ ಹುದ್ದೆಗಳಿಗಾಗಿ ಆಸಕ್ತಿಯುಳ್ಳ ಮತ್ತು ಅರ್ಹ ಅಭ್ಯರ್ಥಿಗಳಿಂದ ಕೆಳಗಿನ ವಿವರಗಳನ್ವಯ ಅರ್ಜಿಗಳನ್ನು ಆಹ್ವಾನಿಸಲಾಗಿದೆ:–

ಹುದ್ದೆಯ ಹೆಸರು	ನೇಮಕಾತಿ ವಿಧಾನ	ವೇತನ ಶ್ರೇಣಿ
ಸ್ಟೆನೋಗ್ರಾಫರ್ ಗ್ರೇಡ್–ಸಿ	ನೇರ ನೇಮಕಾತಿ ಮೂಲಕ	ಲೆವೆಲ್–7 (ರೂ. 44,900–1,42,400) ವೇತನ ಶ್ರೇಣಿಯಲ್ಲಿ
ಸ್ಟೆನೋಗ್ರಾಫರ್ ಗ್ರೇಡ್–ಡಿ	ನೇರ ನೇಮಕಾತಿ ಮೂಲಕ	ಲೆವೆಲ್–4 (ರೂ. 25,500–81,100) ವೇತನ ಶ್ರೇಣಿಯಲ್ಲಿ

ಅಭ್ಯರ್ಥಿಗಳು ನಿರ್ದಿಷ್ಟ ನಮೂನೆಯಲ್ಲಿನ ಅರ್ಜಿಯನ್ನು ಸಂಪೂರ್ಣ ಭರ್ತಿ ಮಾಡಿ, ಅದಕ್ಕೆ ಸಹಿ ಹಾಕಿ, ಸ್ವಯಂದೃಢೀಕೃತ ಪ್ರಮಾಣಪತ್ರ ಇತ್ಯಾದಿಗಳನ್ನು ಲಗತ್ತಿಸಿ, ಜೊತೆಗೆ ಎನ್‌ಸಿಆರ್ ಪ್ಲಾನಿಂಗ್ ಬೋರ್ಡ್ ಹೆಸರಿಗೆ ನವದೆಹಲಿಯಲ್ಲಿ ಪಾವತಿಯಾಗುವಂತಹ ರೂ. 100/– ಮೌಲ್ಯದ (ಹಿಂದಿರುಗಿಸಲಾಗದ) ಐಪಿಒ/ಡಿಮಾಂಡ್ ಡ್ರಾಫ್ಟ್ ರೂಪದ ಅರ್ಜಿ ಶುಲ್ಕದ ಸಮೇತ ಸದಸ್ಯ ಕಾರ್ಯದರ್ಶಿ, ಎನ್‌ಸಿಆರ್ ಪ್ಲಾನಿಮಗ್ ಬೋರ್ಡ್, 1ನೇ ಮಹಡಿ, ಕೋರ್–4ಬಿ, ಇಂಡಿಯಾ ಹ್ಯಾಬಿಟ್ಯಾಟ್ ಸೆಂಟರ್, ಲೋಧಿ ರಸ್ತೆ, ನವದೆಹಲಿ–110003 ವಿಳಾಸಕ್ಕೆ ರವಾನಿಸುವುದು. ಅರ್ಜಿ ಶುಲ್ಕವನ್ನು ಆನ್‌ಲೈನ್ ವಿಧಾನದಲ್ಲಿ ಕೂಡ ಪಾವತಿಸಬಹುದು.
ಹುದ್ದೆಗಳ ಸಂಖ್ಯೆ, ಅರ್ಹತಾ ಮಾನದಂಡ, ಶೈಕ್ಷಣಿಕ ವಿದ್ಯಾರ್ಹತೆಗಳು, ಮೀಸಲಾತಿ, ಪ್ರಾಯ, ಅರ್ಜಿ ನಮೂನೆ, ಆನ್‌ಲೈನ್ ಶುಲ್ಕ ಪಾವತಿ ವಿವರ ಮುಂತಾದವುಗಳು ಹಾಗೂ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ ಇತ್ಯಾದಿ ವಿವರಗಳು ನಮ್ಮ https://ncrpb.nic.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.
ಯಾವುದೇ ಕಾರಣ ನೀಡದೆಯೇ, ಮೇಲ್ಕಂಡ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳದಿರುವ ಹಕ್ಕನ್ನು ಮಂಡಳಿಯು ಕಾಯ್ದಿರಿಸಿಕೊಂಡಿರುತ್ತದೆ.
ಸಹಿ/–
ಸದಸ್ಯ ಕಾರ್ಯದರ್ಶಿ
CBC 44103/11/0003/2526

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

M/s Front Line Ex-Servicemen Bureau
Required
ACCOUNTS ASSISTANT
for the Bengaluru Chapter of ICMAI,1 Post, on Contractual basis. Eligibility: Graduate with minimum 4 years Exp. and good communication skills. Gross Salary: Rs.38,000/- PM
To Apply via QR code:
On or before 14.07.2025

LEADING TIMBER Industry Kumbalgodu Near Mysore Road; Requires: Lady Accountant, Sales Man, above 5 years experience, Minimum Degree; Mob: 9886465289

WANTED MALE/ Female Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

General

IMMEDIATELY WANTED BUSINESS EXECUTIVES with vehicle, PACKING/ DELIVERY BOYS. Good Salary/ Allowances. Call: 'V&V' GROUP: 99000-54461

V&V GROUP, Bannergatta Road, Wanted MANAGERS, LADY RECEPTIONIST, TELECALLERS, MARKETING EXECUTIVES. Good Salary. Call 99000-54462

Engg/ Production Technical

PRECISION TOOLS AND COMPONENTS Gurunanjundaiah Industrial Layout, Abbigere, Bangalore-560094 WANTED for their TOOLROOM and SHEET METAL PRESS SHOP: OFFICE ASSISTANT: Computer knowledge of MS-Office, Experience in Preparing Invoices, Assisting in dispatches, PRESS SHOP SUPERVISOR: Ability to Set Tools on Power Presses, Supervising Production SUPERVISOR QUALITY CONTROL: Production Line Inspection, Preparation of Quality Documents Apply: precisionbg@gmail.com or Contact: 9886397836

Multiple Vacancy

MULTIPLE JOBS
Business Development Manager/Sales Executive for
1) Small Finance Bank
2) Ed Tech Firm/ Training Academy
3) Ceramics Showroom
4) Advertising Company
5) Employee Transport/ Cab service firm.
Accountant for sales & service firm
1) HSR Location
2) BTM Location
Graphic Designer - Freelancer
Min 1 Yr exp.
Send CV to parabolahr@gmail.com only whatsapp 9019043325

HIRING FOR Real Estate Company, MARKETING EXECUTIVE'S, FREELANCERS, RECEPTIONIST, HOUSEKEEPING Rajarajeshwari Nagar Bangalore. Contact: 9535541422

Marketing & Sales

WANTED SALES OFFICERS having industrial products Sales experience and general assistant Contact AMIT INDUSTRIES. 9739826852

Teachers / Professors

India Literacy Project (ILP)
We're Hiring Teachers
Educational Qualifications:
B.Sc/M.Sc + B.Ed
Job Locations: Bangalore, Bangalore Rural, Ramanagara, Mandya, Mysuru, Kodagu, Shivamogga, Chamarajanagara, Chikkaballapura, Mangaluru, Haveri, Bagalkot, Yadgir and Hassan
Apply Now: Send your resume to:
jobs@ilpnet.org
Whatsapp: 63610 09258

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
C.A Site No. 48, New Thippasandra, HAL 3rd Stage, Bangalore -75.
English Medium School to be affiliated to CBSE invites application for the following post:
SCHOOL COUNSELLOR
M.Sc/ M A Psychology + 1 yr experience
SPECIAL EDUCATOR
Diploma in special education by rehabilitation council of India/ B Ed in Special Education (RCI number is must)
ADMIN. ASSISTANT
B.Com with Tally ERP 9 + 1 yr experience
Apply immediately to Hon. Secretary. Email: contact.indiranagar@ppec.edu.in

HOLY ANGEL'S High School,Hampinagar, Vijayanagar, Bengaluru-560104. Phone: 23404465/23202042 holyangels.highschoolr pclayout@gmail.com Requires Experienced Office Administrator, Trained Teachers for the Academic year 2025-26. Nursery, Primary-Art & Craft and Computer Teacher. STATE & ICSE. Qualification: B.A. B.Ed/ M.A.,M.Ed, BCA,MCA. Only English Medium Candidates need to apply

VASAVI GROUP OF EDUCATIONAL INSTITUTIONS VIJAYANAGAR. BANGALORE-40. Applications are invited from Freshers and Experienced faculties (Pu & Degree departments) for KANNADA, ENGLISH and COMMERCE Interested Candidates may apply for the post with updated resume and relevant documents to the vasaviintpu@gmail.com on or before 19th July 2025, Contact: 7975287246, 8088626625, 080-23203342, 080-23300532.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact
ಪ್ರಜಾವಾಣಿ
PUBLIC NOTICE
BOOK YOUR PUBLIC NOTICE ADS IN DH ALL + PRAJAVANI BENGALURU CITY, ON ALL DAYS
@ 550/-* PER SQCM
www.dhclassifieds.com
BOOK NOW
For more details contact:
+91 9886213331 | +91 9731810277
9845114560 | 080- 45557163 / 164
*Conditions apply

ADITYA GROUP OF INSTITUTIONS
Yelahanka
APPLICATIONS ARE INVITED
ADITYA COLLEGE OF ENGINEERING & TECHNOLOGY
- Professors/Associate Professors/Assistant Professors: In CSE, CSE (AI), CSE (AI&ML), ISE, DS, AI & ML, AI & DS, ECE, E & CS, MBA & MCA, Physics, Mathematics, Kannada and English
- Lab Technicians / Instructions: For the above-mentioned departments. Qualifications and Experience as per VTU/AICTE Guidelines
Email: principal@acetedu.net
ADMISSION OPEN FOR 2025-26
Aditya Bangalore Institute of Pharmacy Education & Research
- Professors, Associate Professors and Assistant, Professors in the Department of Pharmaceutics, Pharmacology, Pharmaceutical Chemistry & Pharm. analysis.
Eligibility: M. Pharm with /without Ph D having requisite teaching experience as per PCI norms.
- Tutors in Pharmacy.
Eligibility: B. Pharm with minimum 3 yrs experience
- Cultural Director
- Placement Officer: Eligibility: MBA (HR)
- Hostel wardens (Gents & Ladies)
- Admn. & Accounts Executives, Receptionist, Telecallers
- IT & Networking Maintenance Supervisors
- Housekeeping, drivers, Lab Asst., Attenders, Cooks
Interested candidates may apply
hrdept.aditya@gmail.com Contact No.: 7090001940
APPLY WITHIN 7 DAYS OF THE ADVERTISEMENT

Wanted

WANTED: TYPISTS for E-stamp & Ayurveda Massage Therapist (Male & Female) Full/Part-time. HRBR, Kalyan nagar. Call: 8105960229.

REAL ESTATE SELLING

House

Mysore

SALE MUDA SITE 30x40 with 2BHK Houses GF and FF IN 3rd PHASE VIJYANAGAR. 1.60 CR. Negotiable: 9886019240/ 080-26603670

Sites

Banashankari

BDA RESIDENTIAL Plot for Sale in BSK 2nd Stage, west facing 36x85 ft- 3060sqft, Price 7.6Cr. Verna Developers MG Road 9353128035/ 9916310226 (Brokers Excuse)

Nagarabhavi

"50X80 SITE for Sale in NGEF Layout, Mallathahalli Good location, Genuine Buyers Contact: 7760388034/ 9242135834"

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

AUTOMOTIVE

Four Wheelers Selling

Others

SWARAJ MAZDA 2011 Model 32 Seater SCHOOL BUS SALE. Price: 5 Lakhs in Bangalore. 8867569333

BUSINESS

Business to Business

Finance

WE ARRANGE LOANS for Mortgage of Site, Buildings, Construction, Completion, Takeover of Loans in Co-op Banks and NBFC. Contact : 9353705002.

PUBLIC NOTICE

PUBLIC NOTICE
This is to inform the General Public that it has come to the notice of my client Sri. B.A Gangadhara Retd Military Officer S/o Late Anjanappa, residing at No 495,1st floor, 1st 'G' Cross, 8th main, 3rd stage 4th block, Basaveswaranagar Bengaluru-79. That Certain individuals are falsely claiming to be the owner of the schedule property attempting to negotiate the sale agreement, relinquishing deed etc. Publics are here by informed that my client Sri. B.A Gangadhara is the absolute owner and in possession of the schedule property having acquired by way of Will executed by his father Late Sri. Anjanappa. My client further states in respect of the schedule property partition suits are pending on the file of City Civil Court Bengaluru in O.S No 2338/2022 and O.S No 794/2023 on the file of Senior Civil Judge Nelmangala. Therefore General Publics are here by cautioned not to deal with such unscrupless persons who have no manner of right title interest nor in possession if so it is at their own risk.
Schedule
Land Bearing Sy No 12/1 and 13/1 measuring 1 Acre 25 Guntas and 3 Acres 20 Guntas respectively situated at Basavana halli village Kasba Hobli, Nelmangala Taluk which is bounded in respect of Sy No 12/1
East By : Doddabalapura Road, West By : Sy No 13/1, North By : Sy No 14 and South By : 13/2. In respect of 13/1 East By : Sy No 12/1 West By : Sy No 5 Gomala Land North by : Sy No 14 and South by 13/2.
B.P. Puttaisiddaiah Advocate
No 12/a, 2nd main, 1st Cross, Dr. Modi Hospital Road, Manjunathanagar Bengaluru- 560010.
Mobile No 9845878913

PERSONAL

Change of Name

CHANGE OF NAME
I, Vikram S/o Joginder Singh, residing at No. 18, Mehnakshab Building, First Floor, 4th Cross, RMV 2nd Stage, Ashwath Nagar, Bengaluru North, Bengaluru-560094. have changed my name to VIKRAM MALLI vide affidavit dated 08.07.2025 before notary L. Gopalakrishna, Bengaluru. Henceforth I shall be called VIKRAM MALLI only.

CHANGE OF NAME
I, SEEMA S. PADASHETTY D/o Late Sidramappa Padashetty & W/o Nishant Patil Residing at Aaradhana, Flat No. 003, Ground Floor, Tower-1, Anthurium, Sattva Exotic, Dwaraka Nagar, Chidananda Reddy Layout, Jala Hobli, Bagalur Road, Bangalore-560063. Declare that SEEMA SIDRAMAPPA PADASHETTY, SEEMA, SEEMA S. PADASHETTY, SEEMA PADASHETTY, SEEMA S.P., SEEMA NISHANT PATIL, SEEMA PATIL above all names refer to one and the same person i.e. myself only. Henceforth, i will be known as SEEMA S. PADASHETTY vide affidavit dated: 30.6.2025 Sworn before Notary Vijayalakshmi K., Bangalore.

CHANGE OF NAME
I, Manjunath B.K. & B.K. Manjunath & Bagepally Keshavappa Majunath residing at # 18, 1st Main, 1st Cross, B.C.C Layout, Vijayanagar 2nd Stage, Bengaluru-560040, declare that all the above names pertain to me only & henceforth I shall be known as MANJUNATH B.K. vide affidavit dated 08-07-2025, sworn before Notary L Gopalakrishna, Bengaluru.

I, PRASANNA NAIK S/o.Chandru Venka Naik R/a.Hemmadi, Yellapur Taluk,Uttara Kannada, Karnataka 581402 have changed my Name to PRASANNA CHANDRU NAIK vide affidavit dated:7.7.2025 before Notary K.B.Sadha Shivappa Bangalore.

CHANGE OF NAME
I, VAYYASI SHREYA Residing at No.C-003, Nagarjuna Green Wood Apartment, Kanyammana Agrahara Road, Outer Ring Road, Kadubeesanahalli, Bengaluru-103 have changed my name to SHREYA VAYYASI vide affidavit dated 07-07-2025 before notary S I Balaguru, Bengaluru.

I, SALONI VIMAL KR resident at E-210, Grihalakshmi Apartment, SM Road, Jalahalli, Cross, Jalahalli West, Bangalore-560015 have changed my name to SALONI vide affidavit dated 08/07/2025 sworn before notary Chandrashekar.M, Bangalore

Hero

ಹೀರೊದವರ ಸ್ಕೂಟರ್
ಸ್ಕೂಟರ್‌ಗಳ ಹೀರೊ

★★★★★
ಮೈಲೇಜ್‌ನ#
ಲೀಡರ್

★★★★★
ಪ್ರೀಮಿಯಂ
ಕ್ರೋಮ್ ಆಕ್ಸೆಂಟ್ಸ್

★★★★★
ಸ್ಥಿರವಾದ
ಅಲೋಯ್ ವ್ಹೀಲ್‌ಗಳು

★★★★★
ಆರಾಮದಾಯಕ
ಸೀಟ್

★★★★★
ವಿಶಾಲ
ಫ್ಲೋರ್‌ಬೋರ್ಡ್

★★★★★
ಅಡ್ವಾನ್ಸ್‌ಡ
ಆಟೋ-ಕ್ಯಾನ್ಸಲ್
ವಿಂಕರ್ಸ್

ಪರಿಚಯಿಸುತ್ತಿದ್ದೇವೆ ಹೊಸ

Destini 125

ಡೆಸ್ಟಿನಿ 125 | ಅತ್ಯುತ್ತಮ ಮೈಲೇಜ್ 60## km/l | ದೊಡ್ಡ ಮತ್ತು ಅಗಲದ ಅಲೋಯ್ ವ್ಹೀಲ್‌ಗಳು
ಉದ್ದದ ಪ್ಲಶ್ ಸೀಟ್ | ಡಿ ಆರ್ ಎಲ್‌ನೊಂದಿಗೆ ಎಲ್ ಇ ಡಿ ಪ್ರಾಜೆಕ್ಟರ್ ಹೆಡ್‌ಲೈಟ್

SCAN TO KNOW MORE

ಕಡಿಮೆ ಡೌನ್ ಪೇಮೆಂಟ್ ₹1999^

ಕಡಿಮೆ ಬಡ್ಡಿ ದರ 7.99%^

ADDITIONAL CASH DISCOUNT* AVAILABLE ON Flipkart amazon

GREEN BONUS OF ₹2000$ FOR VEHICLE SCRAPPING

pine labs PAY LATER CASHBACK UPTO ₹7500*

TOLL FREE NO. 1800-266-0018

INDIA'S FIRST 5 YEAR WARRANTY* *Conditions apply

Regd. Office: Hero MotoCorp Ltd., The Grand Plaza, Plot No.2, Nelson Mandela Road, Vasant Kunj - Phase -II, New Delhi - 110070, India. CIN: L35911DL1984PLC017354. It is our endeavour to improve our product. This could lead to changes in product specifications without notice. Accessories and features shown may not be a part of the standard fitment. Always wear a helmet while riding a two-wheeler. Available at select dealerships. ##Based on the testing report of govt. Certified agency. Actual mileage may vary as per riding conditions. ^Finance scheme is at the sole discretion of financiers and subject to its respective terms and conditions. $Green Bonus is applicable Pan India on select Hero products and bonus amount may vary as per model/variant. *T&C apply. Offer valid till 31st July. Offer is for limited period or till stock lasts. For further information, contact nearest Hero MotoCorp authorised outlet (s) or visit website www.heromotocorp.com

Authorised Dealers: **Bengaluru, Hosur Road:** RT Krishna Hero, Ph: 9289923177, **Lalbagh Road:** Prakash Hero, Ph: 9289922117, **Byatarayanapura:** Bimal Hero, Ph: 9289922863, **Peenya:** Sai Hero, Ph: 9289922830, **Hosur Road:** RT Krishna Hero, Ph: 9289923177, **Banashankari:** Sai Hero, Ph: 9289922476, **Banaswadi:** Bhagath Hero, Ph: 9289922738, **Magadi Road:** Poorna Hero, Ph: 9289923212, **Marathalli:** Vaayuratha Hero, Ph: 9289923811, **Rajaji Nagar:** Max Hero, Ph: 9289923023, **Kolar:** Sai Balaji Hero, Ph, 9821745024, **Chikkaballapur:** Manjunath Hero, Ph: 9821751332, **Tumkur:** Sai Hero, Ph: 9289922986, **B.H. Road,** Sai Hero, Ph, 7022752841, **Kamakshipalya:** Poorna Motors, Ph: 9606922534, **JP Nagar:** Sai Hero, Ph: 99002 36280, **Kanakpura Road:** Sai Hero, Ph: 8904677394, **Hoskote:** Bhagath Hero, Ph: 8884600051, **K R Puram:** Bhagath Hero, Ph: 7829488706, **Jigani:** RT Krishna Hero, Ph: 8762860999, **RT Nagar:** Bimal Hero, Ph: 9535327710, **Tiptur:** Sai Hero, Ph, 9164840456, **Kunigal:** Sai Hero, Ph: 7022752858, **Doddaballapura:** Bimal Hero, Ph: 9742202125, **Associate Dealer:** **Belathur:** Ph: 9902649569, **Madiwala:** Ph: 9731660639, **Banashankari: 3rd Stage,** Ph: 9513353864, **Bannerghatta Road:** Ph: 41209619, **Kengeri:** Ph: 9739275523, **Yelahanka:** Ph: 28462524 / 9341025589, **Mysore Road:** Ph: 9611997733, **Devanahalli:** Ph: 9964560599, **Kanakapura:** Ph: 9880212346, **Bagepalli:** Ph: 282828, **Srinivaspur:** Ph: 9738504002, **Sidlaghatta:** Ph: 254827, **Nelamangala:** Ph: 27723395, **Pavagada:** Ph: 9740324639, **Madhugiri:** Ph: 9972278989, **Vijayapura:** Ph: 9449619920, **Sira:** Ph: 9448417393, **Chandapura:** Ph: 9481329064, **Vidyaranyapura:** Ph: 9606934533, **Magadi:** Ph: 9482090890, **Also Available At:** **Dunnasandra:** Ph: 8310166369, **HSR Layout:** Ph: 7428893265, **Mathikere:** Ph: 9035027951, **Domlur:** Ph: 7353919910, **J.P. Nagar:** Ph: 9035024274, **RT Nagar:** Ph: 9535327710, **Attibele:** Ph: 8050609104, **B Narayanapura:** Ph: 9945472149, **Varthur:** Ph: 9900877227, **Papareddypalya:** Ph: 9916678309, **Anekal:** Ph: 9739519252, **Konankunte:** Ph: 9886122251, **Sarjapur Main Road:** Ph: 8762860999, **Bidadi:** Ph: 9844767719, **Ramanagara:** Ph: 9663399909, **Jigani:** Ph: 9986498884, **Chikkanayakanahalli:** Ph: 9880807399, **Turuvekere:** Ph: 9448403205, **Koratagere:** Ph: 9731713711, **Peresandra:** Ph: 9901502049, **For Bulk Deals/Corporate Purchase,** "Bangalore@Heromotocorp, com"& "Kiran, kumart@Heromotocorp, com" **For Buy/Sell/Exchange Old Any Vehicle Contact** VV Puram, Bengaluru **Olety Sai Hero Sure:** Ph: 9845074491.

RS/Hero/07/25

ಮೊಬೈಲ್‌ನಲ್ಲಿ ಟೈಪಿಂಗ್‌ನ ಸಮಯ ಮತ್ತು ಶ್ರಮ ಉಳಿತಾಯಕ್ಕೆ ಗೂಗಲ್ ಡಾಕ್ಸ್ ಅಥವಾ ಇತರೆ ಅಪ್ಲಿಕೇಷನ್‌ಗಳಲ್ಲಿ ಲಭ್ಯವಿರುವ ಧ್ವನಿ ಟೈಪಿಂಗ್ ಆಯ್ಕೆಯನ್ನು ಬಳಸಿಕೊಳ್ಳಿ.



ಮುಂದುವರಿದ ಮತ್ತು ಮುಂದುವರಿಯುತ್ತಿರುವ ದೇಶಗಳು ಡೇಟಾ ಸಂಗ್ರಹಣೆಗೂ ಸಂಗ್ರಹಗೊಂಡ ಡೇಟಾದ ವಿಶ್ಲೇಷಣೆಗೂ ಎ.ಐ. ಅನ್ನು ಬಳಸುತ್ತಿವೆ

ನಗರ ಸುಧಾರಣೆಗೆ ಕೃತಕ ಬುದ್ಧಿಮತ್ತೆ



• ಕೃಷ್ಣಭಟ್

ಕೋಟ್ಯಂತರ ಜನರು ವಾಸವಿರುವ ನಗರಗಳಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸಲು ಈ ಆಧುನಿಕ ಯುಗದಲ್ಲಿ ಮನುಷ್ಯನ ಬುದ್ಧಿಮತ್ತೆಯೊಂದೇ ಸಾಲುವುದಿಲ್ಲ. ಅದರ ಜೊತೆಗೆ ಯಂತ್ರಗಳ ಕೃತಕ ಬುದ್ಧಿಮತ್ತೆಯೂ ಬೇಕೇ ಬೇಕು. ಅಷ್ಟಕ್ಕೂ, ಕೃತಕ ಬುದ್ಧಿಮತ್ತೆಯೇ ಈ ವಿಷಯದಲ್ಲಿ ಒಂದು ಹೆಜ್ಜೆ ಮುಂದಿರುತ್ತದೆ. ಯಾಕೆಂದರೆ, ಮನುಷ್ಯನಲ್ಲಿ ನಡೆಯುವ ಭ್ರಷ್ಟ ಚಿಂತನೆಗಳು ಕೃತಕ ಬುದ್ಧಿಮತ್ತೆಯಲ್ಲಿ ಸದ್ಯಕ್ಕಂತೂ ನಡೆಯುತ್ತಿಲ್ಲ. ಹೀಗಾಗಿ, ಮುಂದುವರಿದ ಮತ್ತು ಮುಂದುವರಿಯುತ್ತಿರುವ ದೇಶಗಳು ಹಲವು ವಿಷಯಗಳಲ್ಲಿ ಮಾಹಿತಿ, ಡೇಟಾ ಸಂಗ್ರಹಣೆಗೆ ಹಾಗೂ ಸಂಗ್ರಹಗೊಂಡ ಡೇಟಾದ ವಿಶ್ಲೇಷಣೆಗೆ ವಿವಿಧ ರೀತಿಯ ಎ.ಐ. ಸಲಕರಣೆಗಳನ್ನು ಬಳಸುತ್ತಿವೆ. ಕಸ ನಿರ್ವಹಣೆಯಿಂದ, ರಸ್ತೆ ಸುಧಾರಣೆ, ಟ್ರಾಫಿಕ್ ನಿರ್ವಹಣೆ ಸೇರಿದಂತೆ ಪ್ರತಿ ವಲಯದಲ್ಲೂ ಜೆನ್ ಎ.ಐ. ಬಳಕೆಯನ್ನೂ ನಗರಗಳು ಮಾಡುತ್ತಿವೆ. ಇದಕ್ಕಾಗಿ ಹಲವು ಮುಂದುವರಿದ ನಗರಗಳಲ್ಲಿ ಎ.ಐ. ಲೀಡರ್‌ಗಳನ್ನೇ ನೇಮಿಸಲಾಗಿದೆ ಎಂದರೆ ನೀವು ಅಚ್ಚರಿಪಡುತ್ತೀರಿ. ಕಂಪನಿಗಳಲ್ಲಿ ಎ.ಐ. ಅಳವಡಿಕೆ ವಿಭಾಗವನ್ನು ಮಾಡಿದ ಹಾಗೆ ನಗರದ ಆಡಳಿತ ಪ್ರಾಧಿಕಾರಗಳು ತಮ್ಮ ನಗರದ ವ್ಯಾಪ್ತಿಯಲ್ಲಿ ಯಾವ ಯಾವ ವಲಯದಲ್ಲಿ ಎ.ಐ. ಅಳವಡಿಕೆ ಮಾಡಿಕೊಳ್ಳಬಹುದು ಎಂಬ ಬಗ್ಗೆ ಯೋಚಿಸಿ, ಅದನ್ನು ಜಾರಿಗೆ ತರುವುದಕ್ಕೆ ಎ.ಐ. ಅಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ. ದುಬೈ ಈ ವಿಷಯದಲ್ಲಿ ಭಾರಿ ಮುಂಚೂಣಿಯಲ್ಲಿದೆ. ಅಲ್ಲಿ 22 ಎ.ಐ. ಅಧಿಕಾರಿಗಳು ಇದ್ದಾರೆ. ಅಷ್ಟೇ ಅಲ್ಲ, ಅವರಲ್ಲಿ ದೊಡ್ಡದೊಂದು ತಂಡವೇ ಇದೆ. ಅವರು ಎ.ಐ. ಟೂಲ್‌ಗಳನ್ನು ಬಳಸಿ ನಗರವನ್ನು ಸುಧಾರಿಸುವುದು ಹೇಗೆ ಎಂಬ ಸಂಶೋಧನೆಯಲ್ಲಿ ನಿರತರಾಗಿದ್ದಾರೆ. ಇನ್ನು ನ್ಯೂಯಾರ್ಕ್ ಹಾಗೂ ಸಿಂಗಪುರದಲ್ಲಿ ಒಬ್ಬೊಬ್ಬ ವ್ಯಕ್ತಿಯನ್ನು ಚೀಫ್ ಎ.ಐ. ಆಫೀಸರ್ ಎಂದು ನೇಮಿಸಲಾಗಿದೆ. ಕೆಲವು ಕಡೆ ನಿರ್ದೇಶಕ ಎಂಬ ಹುದ್ದೆಯನ್ನೂ ನೀಡಲಾಗಿದೆ. ಸ್ಯಾನ್ ಫ್ರಾನ್ಸಿಸ್ಕೋ, ಬಾರ್ಸಿಲೋನಾ, ಟೊರಾಂಟೋ ಹಾಗೂ ಆಮ್‌ಸ್ಟರ್‌ಡ್ಯಾಮ್‌ನಲ್ಲಿ ಮುಖ್ಯ ಡೇಟಾ ಆಫೀಸರ್ ನೇಮಕ ಮಾಡಿ ಅವರಿಗೆ ಎ.ಐ.ಜವಾಬ್ದಾರಿ ನೀಡಲಾಗಿದೆ.

ಇನ್ನು ನಿರ್ದಿಷ್ಟ ಎ.ಐ. ಅಧಿಕಾರಿ ಇಲ್ಲದ ನಗರಗಳಲ್ಲೂ ಜಿಲ್ಲಾಧಿಕಾರಿಗಳ ತತ್ಸಮಾನ ಹುದ್ದೆಯ ಅಧಿಕಾರಿಗಳು ಎ.ಐ. ಬಳಸಿಕೊಂಡು ಮಹತ್ವದ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಿ, ನಗರದ ಸುಧಾರಣೆಗೆ ಪ್ರಯತ್ನ ನಡೆಸುತ್ತಿದ್ದಾರೆ.

ಕಸ ಪತ್ತೆಗೆ ಎ.ಐ.!

ಫ್ರಾನ್ಸ್‌ನ ರಾಜಧಾನಿ ಪ್ಯಾರಿಸ್‌ನಿಂದ 10 ಕಿ.ಮೀ ದೂರದಲ್ಲಿ ಡ್ರ್ಯಾನ್ಸಿ ಎಂಬ ಪ್ರದೇಶವಿದೆ. ಇಲ್ಲಿ ರಸ್ತೆಯ ಮೇಲೆ ಹಾಗೂ ರಸ್ತೆಯ ಇಕ್ಕೆಲಗಳಲ್ಲಿ ಉಗುಳುವುದು ಮತ್ತು ಕಸ ಸುರಿಯುವ ಸಮಸ್ಯೆಯನ್ನು ನಿರ್ವಹಿಸಲು ಅಧಿಕಾರಿಗಳು ಬೇಸತ್ತಿದ್ದರು. ಇದನ್ನು ನಿರ್ವಹಿಸುವುದಕ್ಕೆ ಅಲ್ಲಿನ ಸಿಐಒ ಡೇವಿಡ್ ಲಾರೋಸ್ ಎ.ಐ. ಮೊರೆ ಹೋದರು. ಈ ಪ್ರದೇಶದಲ್ಲಿ ಈಗಾಗಲೇ ವ್ಯಾಪಕ ಪ್ರಮಾಣದಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಅದನ್ನು ಲೈವ್ ಆಗಿ ವಿಶ್ಲೇಷಣೆ ಮಾಡುವ ಎ.ಐ. ಏಜೆಂಟ್ ಅನ್ನು ಅವರು ಅಭಿವೃದ್ಧಿಪಡಿಸಿದರು. ಈ ಸಿಸಿಟಿವಿ ವ್ಯಾಪ್ತಿಯಲ್ಲಿ ಎಲ್ಲೇ ಕಸ ಸುರಿದರೂ ಹಾಗೂ ಉಗುಳಿದರೂ ಅದನ್ನು ವಿಶ್ಲೇಷಣೆ ಮಾಡಿ ತಕ್ಷಣವೇ ಸೂಚನೆ ಬರುವ ಹಾಗೆ ವ್ಯವಸ್ಥೆ ಮಾಡಿದರು. ತಕ್ಷಣವೇ ಸ್ವಚ್ಛತೆ ತಂಡ ಅಲ್ಲಿಗೆ ಹೋಗಿ ಆ ಪ್ರದೇಶವನ್ನು ಸ್ವಚ್ಛಗೊಳಿಸುವುದಕ್ಕೆ ಇದು ಸಹಾಯ ಮಾಡಿತು.

ಕೂದಲೆಳೆ ಅಂತರದಲ್ಲಿ ತಪ್ಪಿದ ಅಪಘಾತ!

ಸಾಮಾನ್ಯವಾಗಿ ರಸ್ತೆಯಲ್ಲಿ ಒಂದು ಅಪಘಾತವಾದರೆ ಅದು ತಕ್ಷಣವೇ ಅಧಿಕಾರಿಗಳ ಗಮನಕ್ಕೆ ಬರುತ್ತದೆ. ಇದಕ್ಕೆ ಸಂಬಂಧಿಸಿದ ದೂರನ್ನು ಸಂತ್ರಸ್ತರು ಕೊಡುವುದರಿಂದ ಇದನ್ನು ನಿರ್ವಹಿಸುವುದು ಅಧಿಕಾರಿಗಳಿಗೆ ಕಷ್ಟವಾಗುವುದಿಲ್ಲ. ಆದರೆ, ಒಂದು ಅಪಘಾತದಿಂದ ಕೂದಲೆಳೆ ಅಂತರದಲ್ಲಿ ತಪ್ಪಿಸಿಕೊಂಡ ಸನ್ನಿವೇಶಗಳು ಅಧಿಕಾರಿಗಳ ಗಮನಕ್ಕೆ ಬರುವುದೇ ಇಲ್ಲ. ಉದಾಹರಣೆಗೆ, ಒಂದು ಪ್ರದೇಶದಲ್ಲಿ ಪದೇ ಪದೇ ಅಪಘಾತವಾಗುವ ಸನ್ನಿವೇಶವಿದ್ದು, ಹಲವು ಪ್ರಕರಣಗಳಲ್ಲಿ ಕೂದಲೆಳೆ ಅಂತರದಲ್ಲಿ ಅಪಘಾತವಾಗುವುದು ತಪ್ಪಿದರೆ, ಅಲ್ಲಿ ಸಮಸ್ಯೆ ಏನಿದೆ ಎಂದು ಪರಿಶೀಲಿಸಿ ಅದನ್ನು ಸರಿಪಡಿಸಲು ಅಧಿಕಾರಿಗಳಿಗೆ ಸಹಾಯವಾಗುತ್ತದೆ. ಇದನ್ನು ವಿಶ್ಲೇಷಣೆ ಮಾಡಲು ಅಮೆರಿಕದ ಉತ್ತರ ಕೆರೊಲಿನಾದ ರಲೇ ನಗರದಲ್ಲಿ ಹೊಸದೊಂದು ಪ್ರಯೋಗ ನಡೆಯುತ್ತಿದೆ. ಅಲ್ಲಿ 100ಕ್ಕೂ ಹೆಚ್ಚು ಕಡೆಗಳಲ್ಲಿ ಕ್ಯಾಮೆರಾ ಅಳವಡಿಸಲಾಗಿದ್ದು, ಈ ಕ್ಯಾಮೆರಾಗಳ ಫೀಡ್‌ಗಳನ್ನು ಬಳಸಿಕೊಂಡು ಎ.ಐ. ಮೂಲಕ ವಿಶ್ಲೇಷಣೆ ನಡೆಸಲಾಗುತ್ತದೆ. ವಿಷನ್ ಮಾಡೆಲ್ ಬಳಸಿಕೊಂಡು ಈ ವಿಡಿಯೊಗಳನ್ನು ವಿಶ್ಲೇಷಣೆ ಮಾಡಲಾಗುತ್ತದೆ.

ಅಧಿಕಾರಿಗಳಿಗೆ ಎ.ಐ. ತರಬೇತಿಯೇ ಆದ್ಯತೆ

ಹಲವು ನಗರಗಳು ತಮ್ಮ ಅಧಿಕಾರಿಗಳಿಗೆ ಎ.ಐ. ಬಳಕೆ ಮಾಡುವುದು ಹೇಗೆ ಎಂಬ ಬಗ್ಗೆ ತರಬೇತಿಯ ಮೇಲೆಯೇ ಹೆಚ್ಚು ಗಮನ ಕೇಂದ್ರೀಕರಿಸಿವೆ. ಎಲ್ಲ ನಗರಗಳಲ್ಲೂ ಅಧಿಕಾರಿಗಳನ್ನು ಎ.ಐ. ಕಾಲಕ್ಕೆ ಸಿದ್ಧಪಡಿಸುವುದು ಒಂದು ಸವಾಲು. ಎ.ಐ. ಕೊಟ್ಟ ವಿಶ್ಲೇಷಣೆಯನ್ನು ಅರ್ಥ ಮಾಡಿಕೊಂಡು ಮುನ್ನಡೆಯುವುದು ಒಂದು ವಿಧಾನವಾದರೆ, ಎ.ಐ. ತಂಡವು ಸಿದ್ಧಪಡಿಸಿದ ಎ.ಐ. ಏಜೆಂಟ್‌ಗಳನ್ನು ಬಳಸುವುದು ಹೇಗೆ ಎಂದು ಕೆಳ ಹಂತದ ಅಧಿಕಾರಿಗಳಿಗೆ ತರಬೇತಿ ನೀಡುವುದು ಅತ್ಯಂತ ಮಹತ್ವದ ಕೆಲಸ. ಅಧಿಕಾರಿಗಳು ಸರಿಯಾಗಿ ಎ.ಐ. ಬಳಕೆ ಮಾಡುವುದನ್ನು ಕಲಿತರೆ ಒಟ್ಟಾರೆ ಆಡಳಿತವೂ ದಕ್ಷವಾಗುತ್ತದೆ. ಈ ನಿಟ್ಟಿನಲ್ಲಿ ಹಲವು ನಗರಗಳು ಒಂದೊಂದೇ ಹೆಜ್ಜೆ ಮುಂದಿಡುತ್ತಿರುವುದು ಗಮನಾರ್ಹ ಸಂಗತಿ.

ಜನದಟ್ಟಣೆ ನಿರ್ವಹಣೆಗೆ ಎ.ಐ. ಬಳಕೆ

ಇಟಲಿಯ ವೆನಿಸ್ ನಗರದ ಜನಸಂಖ್ಯೆ ಬರಿ 50 ಸಾವಿರವಾದರೂ ಅಲ್ಲಿಗೆ ಪ್ರವಾಸಿಗರಾಗಿ ಬರುವವರ ಸಂಖ್ಯೆ ಅಪಾರ. ವರ್ಷಕ್ಕೆ 2 ಕೋಟಿಗೂ ಹೆಚ್ಚಿನ ಜನರು ಅಲ್ಲಿಗೆ ಪ್ರವಾಸಿಗರಾಗಿ ಭೇಟಿ ನೀಡುತ್ತಾರೆ. ಹೀಗಾಗಿ, ಹಠಾತ್ ಜನದಟ್ಟಣೆ ಅಲ್ಲಿನ ಜನರಿಗೆ ಸಹಜ. ಇದನ್ನು ನಿರ್ವಹಿಸುವುದು ಅಧಿಕಾರಿಗಳಿಗೆ ಒಂದು ಸವಾಲು. ಇದಕ್ಕಾಗಿ ಅಲ್ಲಿನ ಅಧಿಕಾರಿಗಳು ಎ.ಐ. ಆಧರಿತ ಸ್ಮಾರ್ಟ್ ಕಂಟ್ರೋಲ್ ರೂಮ್ ಅಭಿವೃದ್ಧಿಪಡಿಸಿದ್ದಾರೆ. ಅಲ್ಲಿ ಅಳವಡಿಸಿರುವ ಕ್ಯಾಮೆರಾಗಳು, ಸೆನ್ಸರ್‌ಗಳು, ಸಾರಿಗೆ ವ್ಯವಸ್ಥೆಯ ಡೇಟಾಗಳನ್ನು ವಿಶ್ಲೇಷಣೆ ಮಾಡುವ ಈ ಎ.ಐ. ಸಿಸ್ಟಮ್‌ಗಳು ಯಾವ ಯಾವ ಪ್ರದೇಶದಲ್ಲಿ ಜನದಟ್ಟಣೆ ಇದೆ ಎಂಬುದನ್ನು ಊಹಿಸುತ್ತದೆ. ಅಲ್ಲದೆ, ಅದನ್ನು ಹೇಗೆ ನಿರ್ವಹಿಸಬೇಕು ಎಂಬುದರ ಸೂಚನೆಯನ್ನೂ ನೀಡುತ್ತದೆ.

ಫೋನ್ ಪರದೆರಕ್ಷಕ : ಏನಿದು ಟೆಂಪರ್ಡ್ ಗ್ಲಾಸ್?

ಫೋನ್‌ಗೆ ಸ್ಕ್ರೀನ್ ಗಾರ್ಡ್‌ಗಳು ಅನಿವಾರ್ಯ ಎನಿಸಿವೆ. ಬಿದ್ದರೂ ಸ್ಕ್ರೀನ್ ಒಡೆಯದಂತೆ, ಗೀರುಗಳಾಗದಂತೆ ರಕ್ಷಿಸುವ ಈ ಪರದೆ ರಕ್ಷಕ ಹೆಸರಿನ ಗಾಜಿನ ಹಾಳೆಯು, ಫೋನ್‌ನಲ್ಲಿ ತೀರಾ ದುಬಾರಿ ಎನಿಸಿರುವ ಡಿಸ್‌ಪ್ಲೇಗೆ ಹಾನಿಯಾಗದಂತೆ ತಡೆಯುತ್ತದೆ.

• ಅವಿನಾಶ್ ಬಿ.

ಈಗ ನಗರಗಳಲ್ಲಷ್ಟೇ ಅಲ್ಲ, ಗ್ರಾಮೀಣ ಪ್ರದೇಶಗಳಲ್ಲಿಯೂ ಮೊಬೈಲ್ ಫೋನ್‌ಗಳಿಗಾಗಿರುವ ಸ್ಕ್ರೀನ್ ಗಾರ್ಡ್ ಅಥವಾ ಸ್ಕ್ರೀನ್ ಪ್ರೊಟೆಕ್ಟರ್ ಎಂಬ 'ಪರದೆರಕ್ಷಕ ಗಾಜು' ಮಾರುವವರು ಅಲ್ಲಲ್ಲಿ ಕಾಣಿಸುತ್ತಾರೆ. ಅಕಸ್ಮಾತ್ ಸ್ಮಾರ್ಟ್‌ಫೋನ್ ನಮ್ಮ ಕೈಯಿಂದ ಜಾರಿ ಬಿದ್ದರೆ, ಇಲ್ಲವೇ ಜೇಬಿನಲ್ಲಿ, ಬ್ಯಾಗಿನಲ್ಲಿ ಇರಿಸಿದಾಗ ಸ್ಕ್ರೀನ್‌ಗೆ ಏನೂ ಆಗಬಾರದು ಅಥವಾ ಗೀರು ಆಗಬಾರದು ಎಂಬ ಕಾಳಜಿಯಿಂದಾಗಿ ಜನರೂ ಇದನ್ನು ಖರೀದಿಸಿ ಫೋನ್‌ಗಳಿಗೆ ಅಂಟಿಸಿಕೊಳ್ಳುತ್ತಿದ್ದಾರೆ. ಯಾಕೆಂದರೆ, ಸಣ್ಣ ಆಘಾತಕ್ಕೆ ಅಥವಾ ಲಘು ಏಟಿಗೆ, ಕೊಂಚ ಒತ್ತಿಹೋದರೆ ಈಗಿನ ಸ್ಮಾರ್ಟ್ ಫೋನ್‌ನೊಳಗಿರುವ ಅತ್ಯಂತ ಸೂಕ್ಷ್ಮ ಬಿಡಿಭಾಗಗಳುಳ್ಳ 'ಡಿಸ್‌ಪ್ಲೇ' ಕೆಟ್ಟು ಹೋಗುತ್ತದೆ. ಅದನ್ನು ಬದಲಾಯಿಸಬೇಕಿದ್ದರೆ ಐದಾರು ಸಾವಿರ ರೂಪಾಯಿಗೂ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಹೀಗಾಗಿ ₹ 50ರಿಂದ 100, 200 ಒಳಗೆ ದೊರೆಯುವ ಹದಗೊಳಿಸಿದ ಅಥವಾ ಟೆಂಪರ್ಡ್ ಗ್ಲಾಸ್ (Tempered Glass) ಹೆಸರಿನ ಈ ಸ್ಕ್ರೀನ್‌ಗಾರ್ಡ್‌ಗಳನ್ನು ಹಾಕಿಸಿಕೊಳ್ಳುತ್ತಿದ್ದಾರೆ ಜನ.

ಅನುಕ್ಷಣದ ಸಂಗಾತಿಯಾಗಿರುವ ಫೋನ್‌ನ ಸ್ಕ್ರೀನ್ ಗಾರ್ಡ್‌ಗೆ ಹೀಗೆ ಬೇಡಿಕೆ ಹೆಚ್ಚಾಗಿರುವ ಕಾರಣದಿಂದಾಗಿ, ಒಳ್ಳೆಯ ಗುಣಮಟ್ಟದವುಗಳ ಜೊತೆ ಲಾಭಕೋರರು ಸಾಕಷ್ಟು ಕಳಪೆ ಸ್ಕ್ರೀನ್‌ಗಾರ್ಡ್‌ಗಳನ್ನೂ ಮಾರುಕಟ್ಟೆಗೆ ಬಿಟ್ಟಿದ್ದಾರೆ. ಹೀಗಾಗಿ ಅವುಗಳ ಆಯ್ಕೆಯಲ್ಲಿ ಕಟ್ಟೆಚ್ಚರ ಬೇಕಾಗುತ್ತದೆ.

ಟೆಂಪರ್ಡ್ ಗ್ಲಾಸ್ ಹೀಗಿರುತ್ತದೆ

ನೀವು ವಾಹನಗಳ ಮುಂಭಾಗದ (ವಿಂಡ್ ಶೀಲ್ಡ್) ಗಾಜುಗಳನ್ನು ನೋಡಿರುತ್ತೀರಿ. ಅಪಘಾತವಾದಾಗಲೋ ಅಥವಾ ಅದಕ್ಕೆ ಕಲ್ಲೇಟು ಅಥವಾ ಬೇರಾವುದೇ ಏಟು ಬಿದ್ದಾಗ, ಆ ದೊಡ್ಡ ಗಾಜು ಚೂರುಚೂರಾಗಿ ಹರಳುಗಳಂತೆ ಉದುರಿ ಬೀಳುತ್ತದೆ. ಸಾಮಾನ್ಯ ಗಾಜು ಆಗಿದ್ದರೆ, ಗಾಜು ತುಂಡಾಗಿ ಚೂಪು ಚೂಪಾದ ಹಲವು ಚೂರುಗಳಾಗಿ, ಜೀವಕ್ಕೆ ಭಾರಿ ಹಾನಿ ಉಂಟು ಮಾಡುತ್ತವೆ. ಆದರೆ, ವಾಹನಗಳ ಗಾಜುಗಳಿಗೆ ಅಳವಡಿಸಿರುವುದು ಟೆಂಪರ್ಡ್ ಗ್ಲಾಸ್. ಏಟು ಬಿದ್ದಾಕ್ಷಣ ಪುಡಿಪುಡಿಯಾದರೂ ಅವುಗಳ ಅಂಚುಗಳು ಚೂಪಾಗಿರುವುದಿಲ್ಲ. ಇದರಿಂದ ಜನರಿಗೆ, ಪ್ರಾಣಿಗಳಿಗೆ ದೈಹಿಕ ಹಾನಿಯಾಗದಂತೆ ತಡೆಯುತ್ತದೆ. ಅದೇ ರೀತಿ ಅತಿಯಾದ ಶಾಖವನ್ನೂ ಇದು ತಾಳಿಕೊಳ್ಳುತ್ತದೆ. ಇದುವೇ ಟೆಂಪರ್ಡ್ ಗಾಜು.

ಗಾಜನ್ನು ಸುಮಾರು 500ರಿಂದ 600 ಡಿಗ್ರಿ ಸೆಲ್ಸಿಯಸ್ ತಾಪಮಾನಕ್ಕೆ ಒಳಪಡಿಸಿ, ತಕ್ಷಣವೇ ಅದನ್ನು ಶೈತ್ಯಗೊಳಿಸಲಾಗುತ್ತದೆ. ಈ ರೀತಿಯ ಗರಿಷ್ಠ ಹಾಗೂ ಕನಿಷ್ಠ ಉಷ್ಣ ಪ್ರಕ್ರಿಯೆಗೊಳಪಡಿಸಿದ ಗಾಜನ್ನು ಸಂಸ್ಕರಿಸಿ, ಅದರ ಪಾರದರ್ಶಕತೆಯನ್ನು, ಸ್ಪರ್ಶದ ಸಂವೇದನೆಯನ್ನು ಕಾಯ್ದುಕೊಂಡು, ಈ ರೀತಿಯ ಟೆಂಪರ್ಡ್ ಅಂದರೆ ಹದಗೊಳಿಸಿದ ಗಾಜನ್ನು ರೂಪಿಸಲಾಗುತ್ತದೆ. ಈ ತಂತ್ರಜ್ಞಾನವನ್ನು ಆಧರಿಸಿ ಸ್ಮಾರ್ಟ್‌ಫೋನ್‌ಗಳಿಗೂ ಸ್ಕ್ರೀನ್ ರಕ್ಷಕ ಗಾಜಿನ ಹಾಳೆಗಳನ್ನು ತಯಾರಿಸಲಾಗಿದೆ.

ಪ್ರಮುಖ ಉಪಯೋಗ

ಪ್ರತಿ ಕ್ಷಣದ ಸಂಗಾತಿಯೇ ಆಗಿಬಿಟ್ಟಿರುವ ಸ್ಮಾರ್ಟ್‌ಫೋನ್‌ನ ಪರದೆಗೆ ಏಟು ಬೀಳುವುದು, ಗೀರು ಆಗುವುದು ಅಥವಾ ಕೈಯಿಂದ ಬೀಳುವುದು, ಜೇಬು ಅಥವಾ ಬ್ಯಾಗಿನೊಳಗೆ ಕೀಲಿಕೈ, ನಾಣ್ಯ ಮುಂತಾದವುಗಳೊಂದಿಗೆ ಇಟ್ಟರೆ ಗಾಜಿಗೆ ಹಾನಿಯಾಗುವುದು - ಇವೆಲ್ಲ ಸರ್ವೇಸಾಮಾನ್ಯ. ಸ್ಕ್ರೀನ್ ಗಾರ್ಡ್ ಇವೆಲ್ಲದರಿಂದ ಬಹುತೇಕ ರಕ್ಷಣೆ ನೀಡುತ್ತದೆ. ಕೆಳಗೆ ಬಿದ್ದಾಗ ಅಂಚಿಗೆ ಏಟಾದರೆ ಅದರಿಂದಲೂ ಫೋನ್‌ನ ಮೂಲ ಸ್ಕ್ರೀನ್ ಗಾಜನ್ನು ಅದು ರಕ್ಷಿಸುತ್ತದೆ. ಆಕಸ್ಮಿಕ ಸಂಭವಿಸಿದಾಗ ಡಿಸ್‌ಪ್ಲೇ ಸ್ಕ್ರೀನ್ ಬದಲಾಗಿ ಈ ಗಾಜಿಗಷ್ಟೇ ಹಾನಿಯಾಗುತ್ತದೆ. ಇದರಲ್ಲಿಯೂ 2ಡಿ, 2.5ಡಿ, 3ಡಿ ಅಂತೆಲ್ಲ ಮಾದರಿಗಳು ಬಂದಿವೆ. 2ಡಿ ಗಾಜುಗಳು ಸಾಮಾನ್ಯ ಸ್ಕ್ರೀನ್‌ಗಳನ್ನು ಗೀರುಗಳಾಗದಂತೆ, ಒಡೆಯದಂತೆ ರಕ್ಷಿಸಿದರೆ, ಉಳಿದವು ಅತ್ಯಾಧುನಿಕವಾದ ಮತ್ತು ಬಾಗಿದ ಅಂಚುಳ್ಳ ಸ್ಕ್ರೀನ್‌ಗಳಿಗಾಗಿ ತಯಾರಿಸಲ್ಪಟ್ಟವು. ಉಳಿದಂತೆ 9ಡಿ, 11ಡಿ ಅಂತೆಲ್ಲ ವೈವಿಧ್ಯಮಯ ಬ್ರ್ಯಾಂಡುಗಳ ಹೆಸರಲ್ಲಿ ಸ್ಕ್ರೀನ್‌ಗಾರ್ಡ್‌ಗಳು ಮಾರಾಟವಾಗುತ್ತಿವೆ. ಇವೆಲ್ಲ 3ಡಿಗಿಂತ ಹೆಚ್ಚೇನೂ ವ್ಯತ್ಯಾಸ ಹೊಂದಿರುವುದಿಲ್ಲ.

ಈಗಿನ ಸುಧಾರಿತ ತಂತ್ರಜ್ಞಾನದ ಸ್ಕ್ರೀನ್‌ಗಾರ್ಡ್‌ಗಳು, ಸ್ಕ್ರೀನ್ ಮೇಲೆ ನಮ್ಮ ಬೆರಳಚ್ಚು ಉಳಿಯದಂತೆಯೂ ರಕ್ಷಿಸುತ್ತವೆ. ಅಲ್ಲದೆ, ಇನ್ನೂ ಅತ್ಯಾಧುನಿಕ ಸ್ಕ್ರೀನ್ ಗಾರ್ಡ್‌ಗಳು ನಮ್ಮ ಕಣ್ಣಿಗೆ ಅತ್ಯಂತ ಹಾನಿಯುಂಟು ಮಾಡುವ ನೀಲ ಕಿರಣಗಳನ್ನು (ಬ್ಲೂ ರೇ) ಸ್ವಲ್ಪಮಟ್ಟಿಗೆ ತಡೆಯುತ್ತವೆ. ಒಟ್ಟಿನಲ್ಲಿ ತಿಂಡಿ ತಿನ್ನುತ್ತಾ, ಅಂತರ್ಜಾಲದಲ್ಲಿ ವಿಹರಿಸುತ್ತಾ ಇದ್ದರೂ, ಗಾಜಿನ ಮೇಲೆ ದೂಳು, ಬೆವರು, ಎಣ್ಣೆ ಗುರುತುಗಳಿರದಂತೆ, ಬಿದ್ದರೂ ಹಾನಿಯಾಗದಂತೆ, ಗಾಜು ಒಡೆದರೂ ಚೂಪಾದ ಚೂರುಗಳಾಗದಂತೆ ಮತ್ತು ಕಣ್ಣುಗಳಿಗೂ ಹೆಚ್ಚು ಆಯಾಸವಾಗದಂತೆ ರಕ್ಷಣೆ ನೀಡುವಲ್ಲಿ ಸ್ಕ್ರೀನ್‌ಗಾರ್ಡ್‌ಗಳು ಪ್ರಮುಖ ಪಾತ್ರ ವಹಿಸುತ್ತವೆ.

ರಸ್ತೆ ಬದಿಗಳಲ್ಲೆಲ್ಲ ಲಭ್ಯವಾಗುತ್ತಿರುವ ಸ್ಕ್ರೀನ್ ಗಾರ್ಡ್‌ಗಳಲ್ಲಿ ಎಲ್ಲವೂ ಚೆನ್ನಾಗಿ ಕೆಲಸ ಮಾಡುತ್ತವೆ ಎಂದು ಹೇಳಲಾಗದು. ಹೇಳಹೆಸರಿಲ್ಲದ ಕಂಪನಿಗಳ ಮುದ್ರೆಯೊಂದಿಗೆ ದೊರೆಯುತ್ತಿರುವುದರಿಂದ ಆಯ್ಕೆಯಲ್ಲಿ ನಾವೇ ಎಚ್ಚರವಹಿಸಬೇಕಾಗುತ್ತದೆ. ಗೀರುಗಳಾಗುತ್ತವೆಯೇ, ಕೈಬೆರಳಚ್ಚು ಉಳಿಯುತ್ತದೆಯೇ, ಸ್ಪರ್ಶದ ಸಂವೇದನೆ ಸರಿಯಾಗಿರುತ್ತದೆಯೇ ಮತ್ತು ಚಿತ್ರ, ಪಠ್ಯಗಳು ಸ್ಪಷ್ಟವಾಗಿ ಗೋಚರಿಸುವಷ್ಟು ಪಾರದರ್ಶಕತೆ ಖಚಿತವೇ ಎಂದು ನೋಡಿಕೊಳ್ಳಬೇಕಾಗುತ್ತದೆ. ಇದರ ಜೊತೆಗೆ, ಸ್ಕ್ರೀನ್‌ಗಾರ್ಡ್ ಅಳವಡಿಸುವಾಗ, ಫೋನ್ ಸ್ಕ್ರೀನ್ ಮತ್ತು ಗಾರ್ಡ್ ನಡುವೆ ಗಾಳಿ ಗುಳ್ಳೆಗಳಿಲ್ಲದಂತೆ, ಅಂಚುಗಳೆಲ್ಲವೂ ಸರಿಯಾಗಿ ಅಂಟಿಕೊಂಡಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕಾಗುತ್ತದೆ.



ಮೊಬೈಲ್ ಸ್ಕ್ರೀನ್‌ಗೆ ಗೀರು ಆಗದಂತೆ ತಡೆಯುತ್ತದೆ ಸ್ಕ್ರೀನ್ ಗಾರ್ಡ್

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

43) ಬಿಟ್ಟ ಸ್ಥಳ ತುಂಬಿ

3) ಆಮ್ಲವು ಲೋಹದೊಂದಿಗೆ ವರ್ತಿಸಿದಾಗ, ... ಅನಿಲದ ಬಿಡುಗಡೆಯಾಗುತ್ತದೆ ಮತ್ತು ಸಂಬಂಧಪಟ್ಟ ಲವಣ ಉಂಟಾಗುತ್ತದೆ.
ಉತ್ತರ:– ಹೈಡ್ರೋಜನ್

4) ಪ್ರತ್ಯಾಮ್ಲವೊಂದು ಲೋಹದೊಂದಿಗೆ ವರ್ತಿಸಿದಾಗ, ಹೈಡ್ರೋಜನ್ ಅನಿಲದ ಬಿಡುಗಡೆಯೊಂದಿಗೆ ಲವಣವನ್ನು ಉಂಟು ಮಾಡುತ್ತದೆ. ಲವಣವು ಆಕ್ಸಿಜನ್ ಮತ್ತು ....ಋಣ ಅಯಾನನ್ನು ಒಳಗೊಂಡಿರುತ್ತದೆ.
ಉತ್ತರ:– ಲೋಹದಿಂದಾದ

5) ಒಂದು ಆಮ್ಲವು ಒಂದು ಲೋಹದ ಕಾರ್ಬೋನೇಟ್ ಅಥವಾ ಲೋಹದ ಹೈಡ್ರೋಜನ್‌ಕಾರ್ಬೋನೇಟ್‌ನೊಂದಿಗೆ ವರ್ತಿಸಿದಾಗ, ಸಂಬಂಧಪಟ್ಟ ಲವಣ, ...ಅನಿಲ ಮತ್ತು ನೀರನ್ನು ಉಂಟುಮಾಡುತ್ತದೆ.
ಉತ್ತರ:– ಕಾರ್ಬನ್ ಡೈಆಕ್ಸೈಡ್

6) ಆಮ್ಲ ಮತ್ತು ಪ್ರತ್ಯಾಮ್ಲದ ಜಲೀಯ ದ್ರಾವಣಗಳು ವಿದ್ಯುತ್‌ವಾಹಕಗಳಾಗಿವೆ. ಏಕೆಂದರೆ, ಅವು ಕ್ರಮವಾಗಿ ಹೈಡ್ರೋಜನ್ ಮತ್ತು ....ಅಯಾನುಗಳನ್ನು ಉತ್ಪತ್ತಿ ಮಾಡುತ್ತವೆ.
ಉತ್ತರ:– ಹೈಡ್ರಾಕ್ಸೈಡ್

7) ಆಮ್ಲ ಅಥವಾ ಪ್ರತ್ಯಾಮ್ಲದ ಸಾಮರ್ಥ್ಯವನ್ನು pH ಅಳತೆ ಪಟ್ಟಿ (0–14) ಎಂಬ ಮಾಪಕ ಬಳಸಿ ಪರೀಕ್ಷಿಸಲಾಗುತ್ತದೆ. ಇದು ದ್ರಾವಣದಲ್ಲಿನ ....ಅಯಾನುಗಳ ಸಾರತೆಯನ್ನು ಸೂಚಿಸುತ್ತದೆ.
ಉತ್ತರ:– ಹೈಡ್ರೋಜನ್

8) ತಟಸ್ಥ ದ್ರಾವಣದ ನಿಖರವಾದ pH ಮೌಲ್ಯ 7. ಆಮ್ಲೀಯ ದ್ರಾವಣದ pH ಮೌಲ್ಯ 7ಕ್ಕಿಂತ ಕಡಿಮೆ ಇದ್ದರೆ, ...ದ್ರಾವಣದ pH ಮೌಲ್ಯ 7ಕ್ಕಿಂತ ಹೆಚ್ಚಿರುತ್ತದೆ.
ಉತ್ತರ:– ಪ್ರತ್ಯಾಮ್ಲೀಯ

9) ಜೀವಿಗಳು ಸೂಕ್ತ pH ವ್ಯಾಪ್ತಿಯಲ್ಲಿ ತಮ್ಮ ....ಕ್ರಿಯೆಗಳನ್ನು ನಡೆಸುತ್ತವೆ.
ಉತ್ತರ:– ಉಪಾಪಚಯ

10) ಸಾರೀಕೃತ ಆಮ್ಲ ಅಥವಾ ಪ್ರತ್ಯಾಮ್ಲಗಳನ್ನು ನೀರಿನೊಂದಿಗೆ ಮಿಶ್ರಗೊಳಿಸುವುದು .... ಪ್ರಕ್ರಿಯೆಯಾಗಿದೆ.
ಉತ್ತರ:– ಅತಿಬಹಿರುಷ್ಣಕ

11) ಆಮ್ಲ ಮತ್ತು ಪ್ರತ್ಯಾಮ್ಲಗಳು ಒಂದನ್ನೊಂದು ....ಸಂಬಂಧಪಟ್ಟ ಲವಣ ಮತ್ತು ನೀರನ್ನು ಉಂಟುಮಾಡುತ್ತವೆ.
ಉತ್ತರ:– ತಟಸ್ಥಗೊಳಿಸಿ

12) ಸ್ಫಟಿಕೀಕರಣ ನೀರು ಸ್ಫಟಿಕ ರೂಪದಲ್ಲಿರುವ ಲವಣದ ಪ್ರತಿ ಘಟಕ ಸೂತ್ರ ಅಣುವಿನಲ್ಲಿರುವ ನೀರಿನ ಅಣುಗಳ ....
ಉತ್ತರ:– ಸ್ಥಿರ ಸಂಖ್ಯೆಯಾಗಿದೆ.

44) ವೈಜ್ಞಾನಿಕ ಕಾರಣ ಕೊಡಿ

1) ಆಮ್ಲವನ್ನು ಸಾರರಿಕ್ತಗೊಳಿಸುವಾಗ ಆಮ್ಲವನ್ನು ನೀರಿಗೆ ಸೇರಿಸಬೇಕು

2) ಪ್ಲಾಸ್ಟರ್ ಆಫ್ ಪ್ಯಾರಿಸ್ ಅನ್ನು ತೇವಾಂಶ ನಿರೋಧಕ ಸಂಗ್ರಾಹಕದಲ್ಲಿ ಸಂಗ್ರಹಿಸಿ ಇಡಬೇಕು (ಜೂನ್– 2019)

ಉತ್ತರ:– (1) ನೀರನ್ನು ಸಾರಿಕೃತ ಆಮ್ಲಕ್ಕೆ ಸೇರಿಸಿದರೆ ಉತ್ಪತ್ತಿಯಾಗುವ ಉಷ್ಣವು ಮಿಶ್ರಣ ಹೊರಸಿಡಿಯುವಂತೆ ಮಾಡಬಹುದು ಮತ್ತು ಸುಟ್ಟಗಾಯಗಳು ಉಂಟಾಗಬಹುದು.

(2) ಪ್ಲಾಸ್ಟರ್ ಆಫ್ ಪ್ಯಾರಿಸ್ ಅನ್ನು ತೇವಾಂಶ ನಿರೋಧಕ ಸಂಗ್ರಾಹಕದಲ್ಲಿ ಸಂಗ್ರಹಿಸಿ ಇಡಬೇಕು ಇಲ್ಲವೆಂದರೆ ಅದೂ ತೇವಾಂಶದೊಂದಿಗೆ ವರ್ತಿಸುತ್ತದೆ ಮತ್ತು ಗಟ್ಟಿಯಾದ ಘನರೂಪದ ಜಿಪ್ಸಂ ಆಗಿ ಬದಲಾಗುತ್ತದೆ.

45) ಜಲೀಯ ಸೋಡಿಯಂ ಕ್ಲೋರೈಡ್ ದ್ರಾವಣದಲ್ಲಿ ಕೆಂಪು ಲಿಟ್ಮಸ್ ಕಾಗದ ಮತ್ತು ನೀಲಿ ಲಿಟ್ಮಸ್ ಕಾಗದಗಳನ್ನು ಅದ್ದಿದಾಗ ಅವುಗಳ ಬಣ್ಣದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಆದರೆ ಅದೇ ದ್ರಾವಣದ ಮೂಲಕ ನೇರ ವಿದ್ಯುತ್ ಹಾಯಿಸಿದ ನಂತರ ಕೆಂಪು ಲಿಟ್ಮಸ್ ನೀಲಿ ಬಣ್ಣಕ್ಕೆ ತಿರುಗುತ್ತದೆ. ಈ ಬದಲಾವಣೆಗೆ ಕಾರಣವಾದ ಉತ್ಪನ್ನ ಯಾವುದು? ಈ ಉತ್ಪನ್ನದ ಯಾವುದಾದರೂ ಎರಡು ಉಪಯೋಗಗಳನ್ನು ತಿಳಿಸಿ (ಏಪ್ರಿಲ್–20219)

ಉತ್ತರ:– ಸೋಡಿಯಂ ಹೈಡ್ರಾಕ್ಸೈಡ್
ಉಪಯೋಗಗಳು:–
1) ಲೋಹಗಳ ಜಿಡ್ಡು ನಿವಾರಣೆ
2) ಕಾಗದದ ತಯಾರಿಕೆ

46) ಪ್ರಬಲ ಆಮ್ಲ ಎಂದರೇನು? ಹಲ್ಲಿನ ಸವೆತ ಹೇಗೆ ಉಂಟಾಗುತ್ತದೆ ಎಂಬುದನ್ನು ವಿವರಿಸಿ. ಅದನ್ನು ಹೇಗೆ ತಡೆಗಟ್ಟಬಹುದು? (ಸೆಪ್ಟೆಂಬರ್– 2020)

ಉತ್ತರ:– ಹೆಚ್ಚು H+ ಅಯಾನುಗಳನ್ನು ಉತ್ಪತ್ತಿ ಮಾಡುವ ಆಮ್ಲವನ್ನು ಪ್ರಬಲ ಆಮ್ಲ ಎಂದು ಕರೆಯುತ್ತಾರೆ

ಆಹಾರ ಸೇವನೆಯ ನಂತರ ಬಾಯಿಯಿಯಲ್ಲಿ ಉಳಿದ ಸಕ್ಕರೆ ಮತ್ತು ಆಹಾರದ ಕಣಗಳ ವಿಘಟನೆಯಿಂದ ಬಾಯಿಯಲ್ಲಿರುವ ಬ್ಯಾಕ್ಟೀರಿಯಾಗಳು ಅವುಗಳನ್ನು ಉತ್ಪತ್ತಿ ಮಾಡುತ್ತದೆ. ಇದರಿಂದ ಬಾಯಿಯಲ್ಲಿ ಕಡಿಮೆಯಾಗುತ್ತದೆ. ಮತ್ತು ಹಲ್ಲಿನ ಎನಾಮಲ್ ಸವೆತಕ್ಕೆ ಒಳಗಾಗುತ್ತದೆ.

ಪ್ರತ್ಯಾಮ್ಲೀಯವಾಗಿರುವ ಟೂತ್ ಪೇಸ್ಟ್‌ಗಳನ್ನು ಬಳಸಿ ಹಲ್ಲುಗಳನ್ನು ಸ್ವಚ್ಛಗೊಳಿಸುವ ಮೂಲಕ ಇದನ್ನು ತಡೆಗಟ್ಟಲು ಸಾಧ್ಯ.

47). ಈ ಕೆಳಗಿನ ಸಂದರ್ಭಗಳಲ್ಲಿ ಉಂಟಾಗುವ ರಾಸಾಯನಿಕ ಕ್ರಿಯೆಗಳ ಪದ ಸಮೀಕರಣ ಮತ್ತು ನಂತರ ಸರಿದೂಗಿಸಿದ ಸಮೀಕರಣ ಬರೆಯಿರಿ.

(a) ಸಾರರಿಕ್ತ ಸಲ್ಫ್ಯೂರಿಕ್ ಆಮ್ಲ ಸತುವಿನ ಚೂರುಗಳೊಂದಿಗೆ ವರ್ತಿಸಿದಾಗ.

(b) ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲ ಮೆಗ್ನೀಸಿಯಂ ಪಟ್ಟಿಯೊಂದಿಗೆ ವರ್ತಿಸಿದಾಗ.

(c) ಸಾರರಿಕ್ತ ಸಲ್ಫ್ಯೂರಿಕ್ ಆಮ್ಲ ಅಲ್ಯುಮಿನಿಯಂ ಪುಡಿಯೊಂದಿಗೆ ವರ್ತಿಸಿದಾಗ.

(d) ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲ ಕಬ್ಬಿಣದ ರಜಗಳೊಂದಿಗೆ ವರ್ತಿಸಿದಾಗ.

ಉತ್ತರ:– (ಎ) ಸತು+ ಸಲ್ಫ್ಯೂರಿಕ್ ಆಮ್ಲ → ಸತುವಿನ ಸಲ್ಫೇಟ್ + ಹೈಡ್ರೋಜನ್

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CHEMISTRY

ELECTROCHEMISTRY

60. In the dry cell
(a) Which substance acts as anode and which as cathode?
(b) Which electrolyte is used in the cell?
(c) What is the cell potential of the cell?
(d) Why does the cell voltage not change during operation?

Ans:- (a) Zinc container acts as anode while carbon rod behaves as cathode.
(b) A paste of HgO and KOH acts as the electrolyte.
(c) The cell potential is 1.35 V
(d) The cell voltage does not change because the overall redox reaction taking place in the cell does not involve any ions and there is no change in concentration.

$$Zn(s) + HgO(s) \rightarrow ZnO(s) + Hg(l)$$

61. Two platinum electrodes are dipped in an aqueous solution of copper sulphate blue in colour. A current is passed through it –
(a) What will happen on the two electrodes?
(b) What will happen to the colour of the solution?
(c) What is the nature of the solution left in the electrolytic cell.

Ans:- (a) Copper will be deposited on the cathode i.e., the electrode connected to the negative terminal. Oxygen gas (O_2) will evolve at the anode.
(b) The blue of the solution will slowly disappear and it will become colourless.
(c) The solution left in the electrolytic cell will be acidic (aqueous solution of H_2SO_4).

62. Can you store copper sulphate solution in a zinc pot?

Ans:- No, it is not possible. The E° values of the copper and zinc electrodes are as follows:

$$Zn^{2+}(aq) + 2e^- \rightarrow Zn(s)\ ;\ E^\circ = -0.76\ V$$
$$Cu^{2+}(aq) + 2e^- \rightarrow Cu(s)\ ;\ E^0 = +0.34\ V$$

This shows that zinc is a stronger reducing agent than copper. It will lose electrons to Cu^{2+} ions and redox reaction will immediately set in.

$$Zn(s) + Cu^{2+}(aq) \rightarrow Zn^{2}(aq) + Cu(s)$$

Thus, copper sulphate solution cannot be stored in zinc pot.

63. Calculate the potential of hydrogen electrode in contact with a solution with *p*H equal to 10.

Ans:- For hydrogen electrode, $H^+ + e^- \rightarrow 1/2H_2$
Applying Nernst equation,

$$E_{(H^+/1/2H_2)} = E^o_{(H^+/1/2H_2)} - \frac{0.0591}{n}\log\frac{1}{[H^+]}$$
$$= 0 - \frac{0.0591}{1}\log\frac{1}{(10^{-10})}$$
$$[pH = 10;\ [H^+] = 10^{-10} M]$$
$$= 0 - \frac{0.0591}{1} x (10 \log 10)$$
$$= -0.591 V$$

64. The cell in which the following reaction occurs
$2Fe^{3+}(aq) + 2I^-(aq) \rightarrow 2Fe^{2+}(aq) + I_2(S)$ has $E^o_{cell} = 0.236$ V at 298 K
Calculate standard Gibbs energy and equilibrium constant for the reaction

Ans:- The two half reactions are:

$$2Fe^{3+} + 2e^- \rightarrow 2Fe^{2+} \text{ and } 2I^- \rightarrow I_2 + 2e^-$$

For the above reaction, $n = 2$

$$\Delta G^\circ = -nFE^\circ_{cell}$$
$$= (-2mol) x (96500\ C\,mol^{-1}) x (0.236V)$$
$$= -455480\,CV = -455480\ J = -45.55\,kJ$$
$$\log K_c = \frac{\Delta G^\circ}{2.303\,RT}$$
$$= -\frac{(-45.55kJ)}{2.303 x (8.314 x 10^{-3}\,kJ\,K^{-1}) x (298\,K)}$$
$$= 7.983$$
$$K_c = Anti\log(7.983) = 9.616 x 10^7$$

65. Why does the conductivity of a solution decrease with dilution?

Ans:- The conductivity of a solution is linked with the number of ions present per unit volume. With dilution, these decrease and the corresponding conductivity or specific conductance of the solution decreases.

66. If a current of 0.5 ampere flows through a metallic wire for hours, then how many electrons flow through the wire?

Ans:- Quantity of charge (Q) passed =
Current in amperes x Time in seconds
= (0.5 A) x (2 x 60 x 60 s)
= 3600 As
= 3600 C

Number of electrons flowing through the wire by passing a charge of one faraday (96500 C)
$= 6.022 x 10^{23}$

Number of electrons flowing through the wire by passing a charge of 3600 C

$$= 6.022\ x 10^{23} x \frac{(3600\,C)}{(96500\ C)}$$
$$= 2.246 x 10^{22}$$

67. The conductivity of 0.20 M solution of KCl at 298 K is 0.0248 S cm^{-1}. Calculate its molar conductivity.

Ans:- Conductivity (κ) = 0.0248 S cm^{-1}
= 0.0248 $0hm^{-1}$ cm^{-1}

$$\text{Molar concentration (C)} = 0.20\,M = 0.2\,mol\ L^{-1}$$
$$= \frac{(0.2\,mol)}{(1000\,cm^3)}$$
$$= 2.0 x 10^{-4}\ mol\,cm^{-3}$$
$$\text{Molar conductivity } (L_m) = \frac{\kappa}{C} = \frac{(0.0248\,ohm^{-1}cm^{-1})}{(2.0 x 10^{-4}\,mol\,cm^{-3})}$$
$$= 124\,ohm^{-1}mol^{-1}cm^2$$
$$= 124\ S\,mol^{-1}cm^2$$

68. The resistance of a conductivity cell containing 0.001M KCl solution at K is 1500 Ω. What is the cell constant if the conductivity of 0.001 M KCl solution at 298 K is 0.146 x 10^{-3} S cm^{-2}?

(contd....)

‘ರಕ್ಷಣಾ ಪಾರ್ಕ್ ಕಸಿಯಲು ಯತ್ನ’

ಚನ್ನರಾಯಪಟ್ಟಣ ರೈತರ ಹೋರಾಟ • ಸಚಿವ ಎಂ.ಬಿ.ಪಾಟೀಲ ಕಳವಳ

ಆಂಧ್ರದ ಯೋಜನೆ ಗೆದ್ದರೆ, ನಮ್ಮಲ್ಲಿರುವ ವೈಮಾನಿಕ ರಕ್ಷಣಾ ಕಂಪನಿಗಳು ಅಲ್ಲಿಗೆ ಹೋಗಬಹುದು. ಇದರಿಂದ ರಾಜ್ಯಕ್ಕೆ ಆಗುವ ನಷ್ಟ ಅಂದಾಜು ಮಾಡಲೂ ಸಾಧ್ಯವಿಲ್ಲ

ಎಂ.ಬಿ.ಪಾಟೀಲ, ಕೈಗಾರಿಕಾ ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಂತೆಯೇ ಏರೋಸ್ಪೇಸ್ ಪಾರ್ಕ್ ಇದೆ. ಈಗ ಉದ್ದೇಶಿತ ವೈಮಾನಿಕ ಮತ್ತು ರಕ್ಷಣಾ ಪಾರ್ಕ್‌ಗಾಗಿ ಭೂಸ್ವಾಧೀನ ಪ್ರಕ್ರಿಯೆ ಕೈಬಿಟ್ಟರೆ, ಆ ಅವಕಾಶವನ್ನು ಕಸಿದುಕೊಳ್ಳಲು ಆಂಧ್ರಪ್ರದೇಶ ಕಾದು ಕುಳಿತಿದೆ’ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ ರೈತರು ಭೂಸ್ವಾಧೀನ ವಿರೋಧಿಸಿ ರೈತರು ನಡೆಸುತ್ತಿರುವ ಹೋರಾಟ ಕುರಿತು ಕೇಳಲಾದ ಪ್ರಶ್ನೆಗೆ, ‘ಆಂಧ್ರ ಪ್ರದೇಶ ಸರ್ಕಾರವು ಮಡಕಶಿರಾ ಮತ್ತು ಪೆನುಕೊಂಡ ನಡುವೆ 10,000 ಎಕರೆ ಜಮೀನನ್ನು ಈಗಾಗಲೇ ಸ್ವಾಧೀನಕ್ಕೆ ತೆಗೆದುಕೊಂಡಿದೆ. ಬೆಂಗಳೂರು ವಿಮಾನ ನಿಲ್ದಾಣದಿಂದ 100 ಕಿ.ಮೀ ಅಂತರದಲ್ಲಿ ವೈಮಾನಿಕ ಮತ್ತು ರಕ್ಷಣಾ ಪಾರ್ಕ್‌ಗಾಗಿ ಜಮೀನು ಕೊಡುತ್ತೇವೆ ಎಂದು ಉದ್ಯಮಿಗಳನ್ನು ಆಹ್ವಾನಿಸಿದೆ’ ಎಂದು ‘ಪ್ರಜಾವಾಣಿ’ಗೆ ಉತ್ತರಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಕರ್ನಾಟಕವು ದೇಶದ ರಕ್ಷಣೆ ಮತ್ತು ವೈಮಾಂತರಿಕ್ಷ ವಹಿವಾಟಿನಲ್ಲಿ ಶೇಕಡ 65ರಷ್ಟು ಪಾಲು ಹೊಂದಿದೆ. ಈ ವಲಯದಲ್ಲಿನ ನಮ್ಮ ‘ಕಾರ್ಯ ಪರಿಸರ’ವು ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ. ಎಚ್‌ಎಎಲ್, ಸ್ಯಾಫ್ರಾನ್, ಬೋಯಿಂಗ್, ಏರ್ ಬಸ್, ಕಾಲಿನ್ಸ್, ಲಾಕ್ ಹೀಡ್ ಮಾರ್ಟಿನ್ ಮುಂತಾದ ಬೃಹತ್ ಕಂಪನಿಗಳು ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇದನ್ನು ವಿಸ್ತರಿಸುವ ಉದ್ದೇಶದಿಂದ ವೈಮಾನಿಕ ರಕ್ಷಣಾ ಪಾರ್ಕ್ ಸ್ಥಾಪಿಸಲಾಗುತ್ತದೆ’ ಎಂದರು.

‘ಆಂಧ್ರಪ್ರದೇಶದಲ್ಲಿ ಬೇರೆ ಬೇರೆ ಕೈಗಾರಿಕಾ ಉದ್ದೇಶಗಳಿಗೆ 45,000 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಇನ್ಫೋಸಿಸ್, ಕಾಗ್ನಿಜೆಂಟ್, ಟಿಸಿಎಸ್ ಮೊದಲಾದ 100 ಕಂಪನಿಗಳಿಗೆ ವಿಶಾಖಪಟ್ಟಣದಲ್ಲಿ ಎಕರೆಗೆ 99 ಪೈಸೆಯಂತೆ ಜಮೀನು ಕೊಡಲಾಗಿದೆ ಎಂಬ ವರದಿ ಇದೆ. ಈ ಹಂತದಲ್ಲಿ ಹಿಂದೇಟು ಹಾಕಿದರೆ, ರಾಜ್ಯಕ್ಕೆ ತೀವ್ರ ಹಿನ್ನಡೆಯಾಗುತ್ತದೆ’ ಎಂದು ಹೇಳಿದರು.

‘ಉದ್ದೇಶಿತ ಪಾರ್ಕ್‌ಗೆ ಜಮೀನು ನೀಡುವ ಸಂತ್ರಸ್ತ ರೈತರಿಗೆ 2013ರ ಭೂಸ್ವಾಧೀನ ಕಾಯ್ದೆಯ ಪ್ರಕಾರವೇ ನ್ಯಾಯಯುತ ಪರಿಹಾರ ಕೊಡಲಾಗುತ್ತದೆ’ ಎಂದು ಮಾಹಿತಿ ನೀಡಿದರು.

‘ಇತ್ತ ತಮಿಳುನಾಡಿನ ಹೊಸೂರು ನಮ್ಮಿಂದ ಕೇವಲ 50 ಕಿ.ಮೀ. ದೂರದಲ್ಲಿದೆ. ಅಲ್ಲಿನ ಸರ್ಕಾರ ಈಗ ಆ ಪ್ರದೇಶವನ್ನು ಕೇಂದ್ರೀಕರಿಸಿ ಕೈಗಾರಿಕಾ ಬೆಳವಣಿಗೆಯನ್ನು ವಿಸ್ತರಿಸುತ್ತಿದೆ. ಜತೆಗೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನೂ ನಿರ್ಮಿಸಲು ಮುಂದಾಗಿದೆ. ಕೈಗಾರಿಕೆಗಳಿಗೆ ಅಲ್ಲೂ ಅಗ್ಗದ ದರದಲ್ಲಿ ಭೂಮಿ ಕೊಡಲಾಗುತ್ತಿದೆ’ ಎಂದರು.

ಪ್ರಕಾಶ್‌ರಾಜ್ ಆಂಧ್ರ, ತಮಿಳುನಾಡಿನಲ್ಲಿ ಹೋರಾಡುವುದಿಲ್ಲವೇಕೆ?: ‘ನಮ್ಮಲ್ಲಿ ಏರೋಸ್ಪೇಸ್ ಪಾರ್ಕಿಗಾಗಿ ಕೇವಲ 1,282 ಎಕರೆ ಸ್ವಾಧೀನ ಪಡಿಸಿಕೊಳ್ಳಲು ತೀರ್ಮಾನಿಸಿದ್ದೇವೆ. ಆಂಧ್ರದಲ್ಲಿ ಅದೇ ಉದ್ದೇಶಕ್ಕೆ 10,000 ಎಕರೆ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಪ್ರಕಾಶ್ ರಾಜ್ ಅವರು ಅಲ್ಲೇಕೆ ಹೋರಾಡುವುದಿಲ್ಲ’ ಎಂದು ಸಚಿವ ಎಂ.ಬಿ.ಪಾಟೀಲ ಪ್ರಶ್ನಿಸಿದರು.

‘ಅವರ ವಿರುದ್ಧ ನನಗೆ ವೈಯಕ್ತಿಕ ಸಿಟ್ಟೇನೂ ಇಲ್ಲ. ಅವರು ಇಲ್ಲಿಗಿಂತ ಆಂಧ್ರದಲ್ಲಿ ಹೆಚ್ಚು ಜನಪ್ರಿಯರು. ಆದ್ದರಿಂದ ಅವರು ಬೇರೆ ಬೇರೆ ರಾಜ್ಯಗಳಲ್ಲೂ ರೈತರ ಭೂಸ್ವಾಧೀನದ ವಿರುದ್ಧ ಹೋರಾಟ ಮಾಡಿದರೆ ಒಳ್ಳೆಯದು’ ಎಂದರು.

ಬುಧವಾರ ರಾಜನಾಥ್ ಸಿಂಗ್ ಭೇಟಿ

‘ಹಿಂದೆ ಕೇಂದ್ರ ಸರ್ಕಾರ ನಮ್ಮನ್ನು ಕಡೆಗಣಿಸಿ ತಮಿಳುನಾಡು ಮತ್ತು ಉತ್ತರಪ್ರದೇಶಕ್ಕೆ ರಕ್ಷಣಾ ಕಾರಿಡಾರ್ ಮಂಜೂರು ಮಾಡಿದೆ. ಈ ಲೋಪವನ್ನು ನಾನು ಹಿಂದೆಯೇ ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಕೋಲಾರ-ಚಿಕ್ಕಬಳ್ಳಾಪುರ ಮತ್ತು ಹುಬ್ಬಳ್ಳಿ-ಬೆಳಗಾವಿ ನಡುವೆ ನಮಗೆ ಎರಡು ರಕ್ಷಣಾ ಕಾರಿಡಾರ್ ಕೊಡಬೇಕು. ಇದನ್ನು ಮನದಟ್ಟು ಮಾಡಿಕೊಡಲೆಂದೇ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಬುಧವಾರ ದೆಹಲಿಯಲ್ಲಿ ಭೇಟಿ ಮಾಡುತ್ತಿದ್ದೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಭೇಟಿಯ ವೇಳೆ ಇರಲಿದ್ದಾರೆ’ ಎಂದು ಎಂ.ಬಿ.ಪಾಟೀಲ ತಿಳಿಸಿದ್ದಾರೆ.

‘ಈ ಕ್ಷೇತ್ರದಲ್ಲಿ ರಾಜ್ಯವು, ದೇಶಕ್ಕೇ ಅಗ್ರಸ್ಥಾನದಲ್ಲಿದೆ. ಹೀಗಾಗಿ ನಮಗೆ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗದಲ್ಲಿ ಒಂದೊಂದು ರಕ್ಷಣಾ ಕಾರಿಡಾರ್ ಅಗತ್ಯವಾಗಿ ಬೇಕಾಗಿದೆ. ಬೇರೆ ರಾಜ್ಯದವರಿಗೆ ರಕ್ಷಣಾ ಕಾರಿಡಾರ್ ಕೊಡುವುದರಲ್ಲಿ ತಪ್ಪಿಲ್ಲ. ಆದರೆ, ನಮಗೆ ಸಲ್ಲಬೇಕಾದ್ದು ಸಲ್ಲಲೇಬೇಕು. ಹಿಂದೆ ಮಾಡಿದ ತಪ್ಪು ಕೇಂದ್ರ ಸರ್ಕಾರಕ್ಕೂ ಅರಿವಾಗಿದೆ. ನಮ್ಮ ಹಿಂದಿನ ಭೇಟಿಗಳಲ್ಲಿ ರಾಜನಾಥ್ ಸಿಂಗ್ ಅವರೇ ಇದನ್ನು ಒಪ್ಪಿಕೊಂಡಿದ್ದರು’ ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ತೊಗರಿ ಬೆಳೆಗಾರರಿಗೆ ಕೇಂದ್ರದಿಂದ ವಂಚನೆ’

ಬೆಂಗಳೂರು: ‘ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಬಿಜೆಪಿ ಸರ್ಕಾರ ಕರ್ನಾಟಕದ ರೈತರ ಜೀವ ಹಿಂಡುತ್ತಿದೆ. ರೈತರ ಮಾರುಕಟ್ಟೆಯನ್ನು ಹಾಳುಗೆಡವುತ್ತಿದೆ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಕೇಂದ್ರದ ತೊಗರಿ ಬೇಳೆ ಆಮದು ನೀತಿಯಿಂದಾಗಿ ರಾಜ್ಯದ ತೊಗರಿ ಬೆಳೆಗಾರರು ವಾರ್ಷಿಕವಾಗಿ ₹ 1,550 ಕೋಟಿ ಕಳೆದುಕೊಳ್ಳುತ್ತಿದ್ದಾರೆ’ ಎಂದರು.

‘ರಾಜ್ಯದಿಂದ ಕೇಂದ್ರದಲ್ಲಿ ಸಚಿವರಾಗಿರುವ ಪ್ರಲ್ಹಾದ ಜೋಶಿ, ವಿ. ಸೋಮಣ್ಣ ಏನು ಮಾಡುತ್ತಿದ್ದಾರೆ? ಕೇಂದ್ರ ಸರ್ಕಾರ ಕರ್ನಾಟಕದ ರೈತರ ಕತ್ತು ಹಿಸುಕುತ್ತಿದ್ದರೂ ಎಚ್‌.ಡಿ. ಕುಮಾರಸ್ವಾಮಿ ಏನೂ ಮಾತನಾಡದೆ ಸುಮ್ಮನಿದ್ದಾರೆ’ ಎಂದರು.

‘ಬೇರೆ ದೇಶಗಳ ರೈತರಿಗೆ ಕೇಂದ್ರ ಸರ್ಕಾರ ಉತ್ತೇಜನ ನೀಡುತ್ತಿದೆ. ತೆರಿಗೆ ರಹಿತವಾಗಿ 2021ರಲ್ಲಿ ತೊಗರಿಯನ್ನು ಆಮದು ಮಾಡಿಕೊಂಡಿದೆ. ಯಾವುದೇ ದೇಶ ದಿಂದ ತೊಗರಿ ತೆಗೆದುಕೊಳ್ಳಬಹುದು ಎಂದು ನಿಯಮ ರೂಪಿಸಲಾಗಿದೆ. ಈ ನೀತಿಯಿಂದಾಗಿ ಕಳೆದ ಐದು ವರ್ಷಗಳಿಂದ ರೈತರಿಗೆ ವಂಚನೆ ಆಗುತ್ತಿದೆ’ ಎಂದರು.

ಅನ್ಬುಕುಮಾರ್ ಮುಖ್ಯ ಚುನಾವಣಾಧಿಕಾರಿ

ಬೆಂಗಳೂರು: ಕೇಂದ್ರ ಚುನಾವಣಾ ಆಯೋಗದ ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಯಾಗಿ 2004ನೇ ಸಾಲಿನ ಐಎಎಸ್ ಅಧಿಕಾರಿ ವಿ. ಅನ್ಬುಕುಮಾರ್ ಅವರನ್ನು ನೇಮಿಸಲಾಗಿದೆ.

ಈ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ. ರಾಜ್ಯ ವಸತಿ ಇಲಾಖೆಯ ಕಾರ್ಯದರ್ಶಿ ಹುದ್ದೆಯಿಂದ ಅನ್ಬುಕುಮಾರ್ ಅವರನ್ನು ಬಿಡುಗಡೆ ಮಾಡಲಾಗಿದೆ.

ಮುಖ್ಯ ಚುನಾವಣಾಧಿಕಾರಿಯಾಗಿದ್ದ ಮನೋಜ್‌ಕುಮಾರ್ ಮೀನಾ ಅವರ ಸ್ಥಾನಕ್ಕೆ ಅನ್ಬುಕುಮಾರ್ ಅವರನ್ನು ನಿಯೋಜಿಸಲಾಗಿದೆ.

ನಗರ ಪಾಲಿಕೆಗಳ ನೌಕರರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು

‘ಪಾಲಿಕೆ ನೌಕರರ ಹೋರಾಟ ನಿಲ್ಲಲ್ಲ’

ಇಲಾಖಾ ಸಚಿವರು, ಕಾರ್ಯದರ್ಶಿ ಮೇಲೆ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಾಭಿವೃದ್ಧಿ ಇಲಾಖೆ ಸಚಿವರು ಹಾಗೂ ಕಾರ್ಯದರ್ಶಿಯವರು ನೌಕರರ ಸಮಸ್ಯೆಗಳಿಗೆ ಸ್ಪಂದಿಸದಿರುವುದರಿಂದ 10 ಮಹಾನಗರ ಪಾಲಿಕೆಗಳಲ್ಲಿ ಬುಧವಾರದಿಂದ ಪ್ರತಿಭಟನೆ ಮುಂದುವರಿಸಲು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್ ನಿರ್ಧರಿಸಿದೆ.

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯದಲ್ಲಿನ 10 ಮಹಾನಗರ ಪಾಲಿಕೆಗಳ ನೌಕರರು ಮಂಗಳವಾರ ಸಾಮೂಹಿಕ ರಜೆ ಹಾಕಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ದಿನಪೂರ್ತಿ ಪ್ರತಿಭಟನೆ ನಡೆಸಿದರು.

ಮೈಸೂರು, ಹುಬ್ಬಳ್ಳಿ, ಧಾರವಾಡ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ, ಬಳ್ಳಾರಿ, ಶಿವಮೊಗ್ಗ, ವಿಜಯಪುರ ಮಹಾನಗರ ಪಾಲಿಕೆಗಳ ಕಚೇರಿಗಳಲ್ಲೂ ಬಹುತೇಕ ಸಿಬ್ಬಂದಿ ಕರ್ತವ್ಯಕ್ಕೆ ಹಾಜರಿರಲಿಲ್ಲ. ಆಯಾ ಕಚೇರಿಗಳ ಆವರಣದಲ್ಲಿ ನೌಕರರು ಪ್ರತಿಭಟನೆ ನಡೆಸಿದರು.

‘ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯ ಸ್ಥಳಕ್ಕೆ ಬಂದು ನೌಕರರ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದರು. ಆದರೆ, 10 ಮಹಾನಗರ ಪಾಲಿಕೆಗಳಿಗೆ ಸಂಬಂಧಿಸಿದ ನಗರಾಭಿವೃದ್ಧಿ ಇಲಾಖೆಯಿಂದ ಸಚಿವರಾಗಲಿ, ಅಧಿಕಾರಿಗಳಾಗಲಿ ಯಾರೂ ಬರಲಿಲ್ಲ. ಹೀಗಾಗಿ, ಆಯಾ ಮಹಾನಗರ ಪಾಲಿಕೆಗಳ ಆವರಣದಲ್ಲಿ ಹೋರಾಟ ಮುಂದುವರಿಯಲಿದೆ’ ಎಂದು ಪರಿಷತ್‌ನ ಅಧ್ಯಕ್ಷ ಎ.ಅಮೃತ್‌ರಾಜ್ ತಿಳಿಸಿದರು.

ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ಪ್ರಭುಲಿಂಗ ಕವಳಿಕಟ್ಟಿ ಅವರು ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿ, ‘ಪೌರಾಡಳಿತ ಇಲಾಖೆಗೆ ಸಂಬಂಧಪಡುವ ಮಹಾನಗರ ಪಾಲಿಕೆಯಲ್ಲಿನ ಸಮಸ್ಯೆ, ಕಷ್ಟಗಳ ಅರಿವು ನಮಗಿದೆ. ಅವುಗಳನ್ನು ಸರಿಪಡಿಸಲು ಸರ್ಕಾರದ ಜೊತೆಯಲ್ಲಿ ಚರ್ಚಿಸಿ, ಕ್ರಮ ಕೈಗೊಳ್ಳಲಾಗುವುದು. 7ನೇ ವೇತನ ಆಯೋಗ, ವೃಂದ ನೇಮಕಾತಿಗೆ ಮಾರ್ಪಡು ಮಾಡಿ ಮುಂಬಡ್ತಿ ನೀಡಲಾಗುವುದು. ನಿಮ್ಮ ಬೇಡಿಕೆಗಳಲ್ಲಿ ಐದು ಈಡೇರಿಸಲಾಗಿದ್ದು, ಹಣಕಾಸು ಇಲಾಖೆ ಅನುಮೋದನೆ ಕೋರಲಾಗಿದೆ’ ಎಂದರು.

ಪಾಲಿಕೆ ನೌಕರರ ಬೇಡಿಕೆಗಳು

ಸರ್ಕಾರಿ ನೌಕರರಿಗೆ ನೀಡಲಾಗಿರುವ 7ನೇ ವೇತನ ಆಯೋಗದ ಸೌಲಭ್ಯ ನೀಡಲು ಪಾಲಿಕೆಗಳ ಸಿಬ್ಬಂದಿಗೂ ಆರ್ಥಿಕ ಇಲಾಖೆಯಿಂದಲೇ ಅನುದಾನ ಬಿಡುಗಡೆ ಮಾಡಬೇಕು. ರಾಜ್ಯ ಮಹಾನಗರ ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ತಿದ್ದುಪಡಿ ಮಾಡಿ ಕರಡು ಅಧಿಸೂಚನೆಯನ್ನು ಪ್ರಕಟಿಸಬೇಕು. ಸರ್ಕಾರಿ ನೌಕರರಿಗೆ ಜಾರಿ ಮಾಡಿರುವ ಕೆಜಿಐಡಿ ಮತ್ತು ಜಿಪಿಎಫ್ ಸೌಲಭ್ಯವನ್ನು ಮಹಾನಗರ ಪಾಲಿಕೆ ಅಧಿಕಾರಿ/ನೌಕರರಿಗೆ ಜಾರಿಗೊಳಿಸಬೇಕು. ಆರೋಗ್ಯ ಸೌಲಭ್ಯದ ಜ್ಯೋತಿ/ ಆರೋಗ್ಯ ಸಂಜೀವಿನಿ ಯೋಜನೆಯನ್ನು ಪಾಲಿಕೆ ಸಿಬ್ಬಂದಿಗೆ ನೀಡಬೇಕು. ಪ್ರತಿ ವರ್ಷ ಕ್ರೀಡೆ ಆಯೋಜಿಸಬೇಕು. ವಿವಿಧ ವೃಂದದ ಹುದ್ದೆಗಳಿಗೆ ವೃಂದವಾರು ಮುಂಬಡ್ತಿ ನೀಡಬೇಕು.

‘ವಾಂತಿ ಭೇದಿ ಪ್ರಕರಣ: ಕಲುಷಿತ ನೀರು ಕಾರಣವಲ್ಲ’

ಯಾದಗಿರಿ: ಜಿಲ್ಲೆಯ ಸುರಪುರ ತಾಲ್ಲೂಕಿನ ತಿಪ್ಪನಟಗಿ ಗ್ರಾಮದಲ್ಲಿ ವಾಂತಿ ಭೇದಿ ಪ್ರಕರಣದ ಪ್ರಯೋಗಾಲಯದ ವರದಿ ಬಂದಿದ್ದು, ಮೂವರ ಸಾವಿಗೆ ಕಲುಷಿತ ನೀರು ಕಾರಣವಲ್ಲ ಎಂದು ಟಿಎಚ್‌ಒ ಡಾ.ಆರ್.ವಿ.ನಾಯಕ ತಿಳಿಸಿದ್ದಾರೆ.

ಗ್ರಾಮದಲ್ಲಿ ತಾತ್ಕಾಲಿಕ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಿದ್ದು, ಮಂಗಳವಾರ 8 ಹೊರರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ. ಇಬ್ಬರನ್ನು ತಾಲ್ಲೂಕು ಆಸ್ಪತ್ರೆಗೆ ಕಳುಹಿಸಿದ್ದು, ಮುಂಜಾಗ್ರತೆ ವಹಿಸಲಾಗಿದೆ ಎಂದು ಹೇಳಿದ್ದಾರೆ.

ಸಿಇಒ ಭೇಟಿ: ಗ್ರಾಮಕ್ಕೆ ಜಿಲ್ಲಾ ಪಂಚಾಯಿತಿ ಸಿಇಒ ಲವೀಶ್ ಒರಡಿಯಾ ಭೇಟಿ ನೀಡಿದ್ದು, ಸ್ವಚ್ಛತೆ ಕಾಪಾಡಲು ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಸೂಚಿಸಿದರು.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ನೇತೃತ್ವದಲ್ಲಿ ಸಭೆ

ಚುನಾವಣೆ: ಶಿಕ್ಷಕರ ನಿಯೋಜನೆ– ಚರ್ಚೆ

ಪ್ರಜಾವಾಣಿ ವಾರ್ತೆ

ಶಾಲಿನಿ ರಜನೀಶ್

ಬೆಂಗಳೂರು: ಮತದಾರರ ಪಟ್ಟಿ ಪರಿಷ್ಕರಣೆ ಸೇರಿದಂತೆ ಚುನಾವಣಾ ಕಾರ್ಯಗಳಿಗೆ ಶಿಕ್ಷಕರನ್ನು ನೇಮಕ ಮಾಡುತ್ತಿರುವ ವಿಷಯವನ್ನು ಸಂಪುಟ ಸಭೆಯಲ್ಲಿ ಚರ್ಚಿಸಿ, ಭಾರತ ಚುನಾವಣಾ ಆಯೋಗಕ್ಕೆ ಪತ್ರ ಬರೆಯಲು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ನೇತೃತ್ವದಲ್ಲಿ ನಡೆದ ಸಭೆ ನಿರ್ಧರಿಸಿದೆ.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳ ಜತೆ ಮಂಗಳವಾರ ನಡೆದ ಸಭೆಯಲ್ಲಿ ಈ ಕುರಿತು ವಿಸ್ತೃತವಾಗಿ ಚರ್ಚೆ ನಡೆಸಲಾಯಿತು.

ಮತದಾರರ ಪಟ್ಟಿ ಪರಿಷ್ಕರಣಾ ಕಾರ್ಯಕ್ಕೆ ಶಿಕ್ಷಕರನ್ನು ನಿಯೋಜಿಸಬಾರದು ಎಂದು ಕೋರಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಅವರು ರಾಜ್ಯ ಚುನಾವಣಾಧಿಕಾರಿಗೆ ಪತ್ರ ಬರೆದಿದ್ದರು. ಆದರೆ, ಅವರ ಪತ್ರಕ್ಕೆ ಪ್ರತಿಕ್ರಿಯಿಸಿದ್ದ ಕರ್ನಾಟಕದ ಜಂಟಿ ಮುಖ್ಯ ಚುನಾವಣಾಧಿಕಾರಿ ಎಸ್. ಯೋಗೇಶ್ವರ, ‘ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ಕೆ ನಿಯೋಜಿಸಿರುವ ಶಿಕ್ಷಕರನ್ನು ಸಾರ್ವಜನಿಕ ಹಿತಾಸಕ್ತಿ ಅಡಿಯಲ್ಲಿ ಹಿಂಪಡೆಯಬೇಕು ಎಂಬ ಕೋರಿಕೆ ಪರಿಗಣಿಸಲು ಸಾಧ್ಯವಿಲ್ಲ. ರಜಾ ದಿನಗಳು ಹಾಗೂ ಬೋಧಕೇತರ ಸಮಯದಲ್ಲಿ ಬೋಧಕ ಸಿಬ್ಬಂದಿಯನ್ನು ಚುನಾವಣಾ ಕಾರ್ಯ, ಮತದಾರರ ಪಟ್ಟಿಯ ಪರಿಷ್ಕರಣಾ ಕಾರ್ಯಕ್ಕೆ ನಿಯೋಜನೆ ಮಾಡಲು ಸುಪ್ರೀಂಕೋರ್ಟ್ ಸಹ ಸಮ್ಮತಿಸಿದೆ. ಭಾರತ ಚುನಾವಣಾ ಅಯೋಗವೂ ಈ ಕುರಿತು ಸುತ್ತೋಲೆ ಹೊರಡಿಸಿದೆ’ ಎಂದು ಪ್ರತಿಕ್ರಿಯೆ ನೀಡಿದ್ದರು.

ಈ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಿದ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ, ‘ಚುನಾವಣಾ ಕಾರ್ಯಗಳಿಗಾಗಿ ಶಿಕ್ಷಕರನ್ನು ನೇಮಕ ಮಾಡುವುದರಿಂದ ತರಗತಿ ಪಾಠಗಳಿಗೆ ತೊಂದರೆಯಾಗುತ್ತಿದೆ. ಈ ಕುರಿತು ಭಾರತ ಚುನಾವಣಾ ಆಯೋಗಕ್ಕೆ ಪತ್ರ ಬರೆಯಬೇಕು’ ಎಂದು ಕೋರಿದರು.

ಚುನಾವಣೆ ಸೇರಿ ಬೇರೆ ಯಾವುದೇ ಚಟುವಟಿಕೆಗಳಿಗೆ ಸರ್ಕಾರಿ ಶಾಲೆ ಶಿಕ್ಷಕರ ನಿಯೋಜಿಸದಿರಲು ನಿರ್ಧರಿಸಲಾಗಿದೆ. ಮುಖ್ಯಮಂತ್ರಿ ಅವರಿಗೆ ಮನವರಿಕೆ ಮಾಡಿರುವೆ

ಮಧು ಬಂಗಾರಪ್ಪ, ಶಿಕ್ಷಣ ಸಚಿವ

ನಲಿಕಲಿ ಪದ್ಧತಿ ರದ್ದುಗೊಳಿಸಿ, ಸಾಮಾನ್ಯ ಶಿಕ್ಷಣ ಪದ್ಧತಿ ಜಾರಿಗೊಳಿಸುವುದು, ಮುಖ್ಯ ಶಿಕ್ಷಕರ ಕಾರ್ಯಭಾರದ ಒತ್ತಡ ಕಡಿಮೆ ಮಾಡುವುದು, ಒಂದನೇ ತರಗತಿಯಿಂದಲೇ ಎನ್‌ಸಿಇಆರ್‌ಟಿ ಪಠ್ಯಕ್ರಮ ಅಳವಡಿಕೆ, ಒಂದನೇ ಸೆಮಿಷ್ಟರ್ ಅವಧಿಯಲ್ಲಿ ಪ್ರತಿಭಾಕಾರಂಜಿ, ಎರಡನೇ ಸೆಮಿಷ್ಟರ್ ಅವಧಿಯಲ್ಲಿ ಕ್ರೀಡಾಕೂಟ ಆಯೋಜಿಸುವ ಕುರಿತು ಚರ್ಚಿಸಲಾಯಿತು.

ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಆಯುಕ್ತ ಡಾ.ತ್ರಿಲೋಕ ಚಂದ್ರ, ಸಂಘದ ಅಧ್ಯಕ್ಷ ಕೆ. ನಾಗೇಶ್ ಉಪಸ್ಥಿತರಿದ್ದರು.

ಸ್ವಚ್ಛತಾ ಕಾರ್ಯಕ್ಕೆ ಹೊರಗುತ್ತಿಗೆ: ಮನವಿ

ಶಾಲೆಗಳಲ್ಲಿ ಶೌಚಾಲಯ ಹಾಗೂ ಸ್ವಚ್ಛತೆಯ ಕೆಲಸವನ್ನು ಹೊರಗುತ್ತಿಗೆ ನೀಡಬೇಕು ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು ಮನವಿ ಮಾಡಿದರು. ಬಹುತೇಕ ಶಾಲೆಗಳಲ್ಲಿ ಸ್ವಚ್ಛತಾ ಕಾರ್ಯಕ್ಕೆ ಸಿಬ್ಬಂದಿ ಸಿಗುವುದಿಲ್ಲ. ಕೆಲವೆಡೆ ಮಕ್ಕಳಿಂದ ಸ್ವಚ್ಛತಾ ಕೆಲಸ ಮಾಡಿಸಿದ್ದಕ್ಕೆ ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಹಾಗಾಗಿ, ಹೊರಗುತ್ತಿಗೆ ಸಂಸ್ಥೆಗಳಿಗೆ ನೀಡಿದರೆ ಅನುಕೂಲವಾಗುತ್ತದೆ ಎಂದು ಕೋರಿದರು.

ಕೇಂದ್ರ ಆಕ್ಷೇಪಣೆಗೆ ರಾಜ್ಯದ ಉತ್ತರ

ಎತ್ತಿನಹೊಳೆ ಯೋಜನೆ: ಭೂಪೇಂದರ್ ಯಾದವ್ ಭೇಟಿ ಮಾಡಿದ ಡಿಸಿಎಂ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಎತ್ತಿನಹೊಳೆ ಯೋಜನೆ ವಿಚಾರವಾಗಿ ಎದುರಾಗಿರುವ ತಾಂತ್ರಿಕ ಆಕ್ಷೇಪಣೆಗಳ ಬಗ್ಗೆ ಕೇಂದ್ರ ಪರಿಸರ ಸಚಿವರಿಗೆ ಸ್ಪಷ್ಟನೆ ನೀಡಿದ್ದು, ಆಕ್ಷೇಪಗಳನ್ನು ನಿವಾರಣೆ ಮಾಡುವುದಾಗಿ ಆಶ್ವಾಸನೆ ನೀಡಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವ ಭೂಪೇಂದರ್ ಯಾದವ್ ಅವರನ್ನು ಮಂಗಳವಾರ ಇಲ್ಲಿ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದರು.

'ಭೂಪೇಂದರ್ ಯಾದವ್ ಅವರನ್ನು ಭೇಟಿ ಮಾಡಿ ಎತ್ತಿನಹೊಳೆ ಯೋಜನೆ ವಿಚಾರವಾಗಿ ಚರ್ಚೆ ಮಾಡಲಾಗಿದ್ದು, ಅರಣ್ಯ ಇಲಾಖೆಗೆ ಪರ್ಯಾಯ ಭೂಮಿ ಕೊಟ್ಟಿರುವ ವಿಚಾರವನ್ನು ಅವರಿಗೆ ವಿವರಿಸಿದ್ದೇವೆ. ಈ ಯೋಜನೆಯ ಶೇ 60ರಷ್ಟು ಕಾಮಗಾರಿ ಮುಕ್ತಾಯಗೊಂಡಿದ್ದು, ಕೆಲವು ತಾಂತ್ರಿಕ ಕಾರಣಗಳಿಂದ ಕಾಮಗಾರಿಗೆ ಅಡ್ಡಿ ಎದುರಾಗಿದೆ. ಈ ವಿಚಾರವಾಗಿ ಕೇಂದ್ರ ಪರಿಸರ ಇಲಾಖೆ ಮಾಡಿರುವ ಆಕ್ಷೇಪಣೆಗಳ ಬಗ್ಗೆ ಸ್ಪಷ್ಟನೆ ನೀಡಿದ್ದೇವೆ' ಎಂದರು.

ಎತ್ತಿನಹೊಳೆ ಯೋಜನೆಯಲ್ಲಿ 423 ಎಕರೆ ಅರಣ್ಯ ಪ್ರದೇಶ ಬಳಕೆಗೆ ಕೇಂದ್ರ ಅರಣ್ಯ ಇಲಾಖೆ ನಿರಾಕರಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಾವು ಈಗಾಗಲೇ ಪರ್ಯಾಯ ಭೂಮಿ ನೀಡಿದ್ದೇವೆ. ಇಲ್ಲಿ ಕೆಲವು ಪ್ರದೇಶ ಅರಣ್ಯ ಇಲಾಖೆಗೆ ಸೇರಿದ್ದು, ಮತ್ತೆ ಕೆಲವು ಕಂದಾಯ ಇಲಾಖೆಯ ಭೂಮಿಯಾಗಿವೆ. ಈ ಜಾಗವನ್ನು 40–50 ವರ್ಷಗಳ ಹಿಂದೆ ರೈತರು ಬಳಸುತ್ತಿದ್ದು, ನಾವು ಅವರಿಗೆ ಪರಿಹಾರ ನೀಡಿ ಭೂಮಿ ವಶಕ್ಕೆ ಪಡೆದಿದ್ದೇವೆ. ಇದಾದ ನಂತರ ಈ ತಮಗೆ ಸೇರಿದ್ದು, ಅರಣ್ಯ ಇಲಾಖೆಯವರು ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಬಗ್ಗೆ ನಾವು ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಿದ್ದೇವೆ. ಈ ಭಾಗದಲ್ಲಿ ಅರ್ಧಕ್ಕಿಂತ ಹೆಚ್ಚು ಕೆಲಸ ಆಗಿದೆ. ಅಲ್ಲಿ ಕಾಲುವೆಗೆ ಅಗೆದಿರುವ ಮಣ್ಣನ್ನು ಪಕ್ಕದಲ್ಲಿ ಹಾಕಿರುವುದಕ್ಕೆ ತಕರಾರು ಎತ್ತಿದ್ದಾರೆ. ಈಗ ಅದನ್ನು ತೆರವುಗೊಳಿಸಲು ಒಪ್ಪಿದ್ದೇವೆ. ಅದನ್ನು ಬೇಕಿದ್ದರೆ 25 ಕಿ.ಮೀ. ದೂರದಲ್ಲಿ ಹಾಕಲು ಸಿದ್ಧರಿದ್ದೇವೆ. ನಮಗೆ ಕೆಲಸ ಆಗಬೇಕು. ಈ ಯೋಜನೆಗೆ ₹24 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಿದ್ದೇವೆ. ಈ ಎಲ್ಲ ವಿಚಾರ ತಿಳಿಸಿದ್ದೇವೆ' ಎಂದರು.

'ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ಕಳಸಾ ಬಂಡೂರಿ ಯೋಜನೆ ಬಗ್ಗೆ ಚರ್ಚೆ ಮಾಡಲಾಗಿದೆ. ಗೋವಾ ಸರ್ಕಾರವು ನಮ್ಮ ರಾಜ್ಯದ ಕಾಮಗಾರಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ಬಗ್ಗೆ ಕಾನೂನು ತಂಡದ ಜೊತೆ ಚರ್ಚೆ ಮಾಡಲಾಗಿದೆ. ಅವರು ತಮ್ಮ ರಾಜ್ಯದ ವನ್ಯಜೀವಿ ಪ್ರದೇಶ ಸಂರಕ್ಷಣೆ ಮಾಡಲಿ. ನಮ್ಮ ರಾಜ್ಯದ ಬಗ್ಗೆ ಚರ್ಚೆ ಮಾಡುವ ಅಧಿಕಾರ ಅವರಿಗಿರುವುದಿಲ್ಲ. ಮಹದಾಯಿ ನ್ಯಾಯಮಂಡಳಿ ತೀರ್ಪು ಬಂದ ನಂತರ ನಾವು ಟೆಂಡರ್ ಕರೆದಿದ್ದೇವೆ. ಕೇಂದ್ರ ಸರ್ಕಾರ ದಿಟ್ಟ ತೀರ್ಮಾನ ಮಾಡಬೇಕಿದೆ. ಕೇಂದ್ರ ಸಚಿವ ಪ್ರಲ್ಹಾದ ಜೋಷಿ ಅವರೊಂದಿಗೆ ಈ ವಿಷಯದ ಬಗ್ಗೆ ಚರ್ಚಿಸಲಾಗಿದೆ' ಎಂದು ತಿಳಿಸಿದರು.

'ಸಂಸದರ ಜತೆಗೆ ಸಭೆ'

'ಮೇಕೆದಾಟು, ಕೃಷ್ಣಾ ಮೇಲ್ದಂಡೆ, ಮಹದಾಯಿ ಸೇರಿದಂತೆ ವಿವಿಧ ನೀರಾವರಿ ಯೋಜನೆಗಳ ಬಗ್ಗೆ ರಾಜ್ಯದ ಸಂಸದರ ಜತೆಗೆ ಸಂಸತ್ ಅಧಿವೇಶನದ ಸಂದರ್ಭದಲ್ಲಿ ಸಭೆ ನಡೆಸಲಾಗುವುದು. ಅವರೂ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು' ಎಂದು ಡಿಸಿಎಂ ಮನವಿ ಮಾಡಿದರು.

ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅವರಿಗೆ ಡಿ.ಕೆ. ಶಿವಕುಮಾರ್ ಮನವಿ ಸಲ್ಲಿಸಿದರು. ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಉಪಸ್ಥಿತರಿದ್ದರು

ಪರಿಷ್ಕೃತ ಯೋಜನಾ ವೆಚ್ಚ ಸಲ್ಲಿಕೆ

ಭದ್ರಾ ಮೇಲ್ದಂಡೆ ಯೋಜನೆಯ ಪರಿಷ್ಕೃತ ಮಾಸ್ಟರ್ ಪ್ಲಾನ್ ಹಾಗೂ ಪರಿಷ್ಕೃತ ಅಂದಾಜು ವೆಚ್ಚವನ್ನು ಕೇಂದ್ರ ಜಲಶಕ್ತಿ ಸಚಿವಾಲಯಕ್ಕೆ ರಾಜ್ಯ ಸರ್ಕಾರ ಸಲ್ಲಿಸಿದೆ.

'ಮಾಸ್ಟರ್ ಪ್ಲಾನ್ ಅನ್ನು ಮಾರ್ಚ್‌ನಲ್ಲಿ ಹಾಗೂ ಅಂದಾಜು ವೆಚ್ಚವನ್ನು ಜೂನ್‌ನಲ್ಲಿ ಸಲ್ಲಿಸಲಾಗಿದೆ. ಈ ಯೋಜನೆ ಬಗ್ಗೆ ಹಣಕಾಸು ಇಲಾಖೆಯ ನಾಲ್ಕು ಸಮಿತಿಗಳು ಈಗಾಗಲೇ ಅನುಮೋದನೆ ಕೊಟ್ಟಿವೆ. ಮತ್ತೊಮ್ಮೆ ಸಮಿತಿಯ ಅನುಮೋದನೆ ಪಡೆಯಬಾರದು. ಹೀಗಾದರೆ, ಅನುದಾನ ಬಿಡುಗಡೆ ಮತ್ತಷ್ಟು ವಿಳಂಬವಾಗಲಿದೆ' ಎಂದು ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅವರ ಗಮನಕ್ಕೆ ತಂದರು.

'ಈ ಯೋಜನೆಯು ಮಧ್ಯ ಕರ್ನಾಟಕ ಭಾಗದ ಅತಿ ದೊಡ್ಡ ಏತ ನೀರಾವರಿ ಯೋಜನೆ. ಈ ಯೋಜನೆ ಮೂಲಕ 29.90 ಟಿಎಂಸಿ ನೀರನ್ನು ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಹಾಗೂ ದಾವಣಗೆರೆಯ 2,25,515 ಹೆಕ್ಟೇರ್ ಕೃಷಿ ಭೂಮಿಗೆ ಒದಗಿಸಲಾಗುವುದು. ಜೊತೆಗೆ ಬರಪೀಡಿತ ತಾಲ್ಲೂಕುಗಳ 367 ಕೆರೆಗಳಿಗೆ ನೀರು ತುಂಬಿಸಿ ಅಂತರ್ಜಲ ಮರುಪೂರಣ ಮಾಡಲಾಗುತ್ತದೆ. ಈ ಯೋಜನೆ ಜಾರಿಗೆ ಪರಿಷ್ಕೃತ ಅಂದಾಜು ಮೊತ್ತ ₹21,473 ಕೋಟಿ ಆಗಿದೆ. ಈ ಯೋಜನೆಗೆ ಕೇಂದ್ರ ಜಲಶಕ್ತಿ ಸಚಿವಾಲಯದ ಸಲಹಾ ಸಮಿತಿಯು ಒಪ್ಪಿಗೆ ನೀಡಿದೆ. ಈ ಯೋಜನೆಗೆ ಪಿಎಂಕೆಎಸ್ ವೈ-ಎಐಬಿಪಿ ಯೋಜನೆಯಡಿ ಅನುದಾನ ಬಿಡುಗಡೆ ಮಾಡಬೇಕು' ಎಂದು ಆಗ್ರಹಿಸಿದರು.

ಐಶ್ವರ್ಯ ಗೌಡ ಚಿನ್ನಾಭರಣ ವಂಚನೆ ಪ್ರಕರಣ • ಕೆಲವು ದಾಖಲೆಗಳ ಸಲ್ಲಿಕೆ

ಇ.ಡಿ ವಿಚಾರಣೆಗೆ ಹಾಜರಾದ ಸುರೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಶ್ವರ್ಯ ಗೌಡ ಅವರ ಚಿನ್ನಾಭರಣ ವಂಚನೆ ಪ್ರಕರಣದಲ್ಲಿ ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮಂಗಳವಾರ ವಿಚಾರಣೆ ನಡೆಸಿದರು.

ಡಿ.ಕೆ.ಸುರೇಶ್ ಅವರ ಮನೆಗೆ ಜೂನ್ 17ರಂದು ತೆರಳಿದ್ದ ಇ.ಡಿ ಅಧಿಕಾರಿಗಳು, ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದ್ದರು. ಜೂನ್‌ನಲ್ಲಿಯೇ ವಿಚಾರಣೆಗೆ ಹಾಜರಾಗಿದ್ದ ಸುರೇಶ್ ಅವರಿಗೆ, ಆಸ್ತಿ ಮತ್ತು ಆದಾಯಕ್ಕೆ ಸಂಬಂಧಿಸಿದ ವಿವರಗಳನ್ನು ನೀಡುವಂತೆ ಸೂಚಿಸಿದ್ದರು.

ಮಂಗಳವಾರ ಇ.ಡಿ ಕಚೇರಿಗೆ ತೆರಳಿದ್ದ ಸುರೇಶ್ ಅವರು ದಾಖಲೆಗಳನ್ನು ಸಲ್ಲಿಸಿದ್ದಾರೆ. ಕೆಲಕಾಲದ ವಿಚಾರಣೆಯ ನಂತರ ಅವರು ಕಚೇರಿಯಿಂದ ಹೊರನಡೆದರು.

'ಉದ್ಯಮಿಗಳಿಂದ ಚಿನ್ನ ಮತ್ತು ಹಣ ಪಡೆದುಕೊಂಡ ನಂತರ ಐಶ್ವರ್ಯ ಅವರು ಹಲವು ರಾಜಕಾರಣಿಗಳ ಹೆಸರನ್ನು ಬಳಸಿಕೊಂಡಿದ್ದಾರೆ. ಸುರೇಶ್ ಅವರ ಹೆಸರೂ ಹಲವು ಬಾರಿ ಬಳಕೆಯಾಗಿದೆ. ಹೀಗಾಗಿಯೇ ಅವರಿಂದ ಕೆಲ ಮಾಹಿತಿ ಪಡೆದುಕೊಳ್ಳಲಾಗಿದೆ. ಅಗತ್ಯವಾದರೆ ಮತ್ತೆ ಮಾಹಿತಿ ಕೇಳುತ್ತೇವೆ' ಎಂದು ಇ.ಡಿ ಮೂಲಗಳು ತಿಳಿಸಿವೆ.

ಸುರೇಶ್ ಅವರ ಆದಾಯದ ಮೂಲಗಳು, ಆಸ್ತಿಯ ವಿವರ ಮತ್ತು ಬ್ಯಾಂಕ್ ಖಾತೆಗಳ ವಹಿವಾಟಿನ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಗಿದೆ. ಐಶ್ವರ್ಯ ಅವರ ಜತೆ ಯಾವುದಾದರೂ ವಹಿವಾಟು ನಡೆಸಿದ್ದಾರೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ ಎಂದೂ ಮಾಹಿತಿ ನೀಡಿವೆ.

'ಐಶ್ವರ್ಯ ಗೌಡ ಅವರು ಚಿನ್ನ ಮತ್ತು ಹಣ ಹೂಡಿಕೆಗೆ ದುಪ್ಪಟ್ಟು ಲಾಭ ಕೊಡಿಸುತ್ತೇನೆ ಎಂದು ಹೇಳಿ ಹಲವು ಚಿನ್ನಾಭರಣ ವ್ಯಾಪಾರಿಗಳಿಂದ ಚಿನ್ನ ಪಡೆದುಕೊಂಡಿದ್ದರು. ಆದರೆ ಹಣವನ್ನೂ ನೀಡಿಲ್ಲ, ಚಿನ್ನವನ್ನೂ ವಾಪಸ್ ಮಾಡಿಲ್ಲ' ಎಂದು ಕೆಲ ಚಿನ್ನಾಭರಣ ವ್ಯಾಪಾರಿಗಳು ಪೊಲೀಸರಿಗೆ ದೂರು ನೀಡಿದ್ದರು. 'ಹಣ ವಾಪಸ್ ಕೇಳಿದಾಗ, ತಾನು ಡಿ.ಕೆ. ಸುರೇಶ್ ಅವರ ಸೋದರಿ ಎಂದು ಹೇಳಿ ಬೆದರಿಕೆ ಹಾಕಿದ್ದರು' ಎಂದೂ ದೂರಿನಲ್ಲಿ ವಿವರಿಸಿದ್ದರು.

'ನನ್ನ ಹೆಸರನ್ನು ದುರುಪಯೋಗ ಮಾಡಿಕೊಳ್ಳಲಾಗಿದೆ' ಎಂದು ಡಿ.ಕೆ. ಸುರೇಶ್ ಸಹ ಪೊಲೀಸರಿಗೆ ದೂರು ನೀಡಿದ್ದರು.

'ಸಂಬಂಧವೇ ಅರ್ಥವಾಗುತ್ತಿಲ್ಲ'

ಡಿ.ಕೆ.ಸುರೇಶ್

'ಐಶ್ವರ್ಯ ಗೌಡ ಪ್ರಕರಣಕ್ಕೂ ನನಗೂ ಯಾವುದೇ ರೀತಿಯ ಸಂಬಂಧವಿಲ್ಲ. ವಂಚನೆಯಲ್ಲಿ ನನ್ನ ಹೆಸರು ಬಳಕೆಯಾಗಿದೆ ಎಂಬುದರ ಬಗ್ಗೆ ಪೊಲೀಸರಲ್ಲಿ ನಾನೇ ದೂರು ದಾಖಲಿಸಿದ್ದೇನೆ. ಆದರೆ ಈ ಪ್ರಕರಣಕ್ಕೂ ನನಗೂ ಹೇಗೆ ತಳುಕು ಹಾಕುತ್ತಿದ್ದಾರೆ ಎಂಬುದೇ ಗೊತ್ತಾಗುತ್ತಿಲ್ಲ. ಅದನ್ನು ಇ.ಡಿ ಅಧಿಕಾರಿಗಳೇ ಹೇಳಬೇಕು' ಎಂದು ಡಿ.ಕೆ.ಸುರೇಶ್ ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ್ದಾರೆ.

'ಹಿಂದಿನ ವಿಚಾರಣೆ ವೇಳೆ, ಕೆಲ ದಾಖಲೆಗಳನ್ನು ತನ್ನಿ ಎಂದು ಸೂಚಿಸಿದ್ದರು. ಅದರಂತೆ ಆದಾಯ ಮತ್ತು ಆಸ್ತಿಯ ವಿವರಗಳು ಇರುವ ದಾಖಲೆಗಳನ್ನು ಸಲ್ಲಿಸಿದ್ದೇನೆ. ಅವರ ಪ್ರಶ್ನೆಗಳಿಗೂ ಉತ್ತರಿಸಿದ್ದೇನೆ. ತನಿಖೆಗೆ ಪೂರ್ಣ ಸಹಕಾರ ನೀಡುತ್ತೇನೆ' ಎಂದಿದ್ದಾರೆ.

ಸಿ.ಎಂ 'ಸ್ವೀಟ್' ರೂಮಲ್ಲಿ ಡಿಸಿಎಂ ದರ್ಬಾರ್!

ಪ್ರಜಾವಾಣಿ ವಾರ್ತೆ

ನವದೆಹಲಿ: ಹೈಕಮಾಂಡ್ ಹೆಣೆದಿರುವ ಅಧಿಕಾರ ಹಂಚಿಕೆ ಸೂತ್ರದ ಪ್ರಕಾರ, ನವೆಂಬರ್ ವೇಳೆಗೆ ಮುಖ್ಯಮಂತ್ರಿ ಸ್ಥಾನ ದಕ್ಕಲಿದೆ ಎಂಬ ನಿರೀಕ್ಷೆಯಲ್ಲಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕರ್ನಾಟಕ ಭವನದಲ್ಲಿರುವ ಮುಖ್ಯಮಂತ್ರಿ ಅವರಿಗೆ ಮೀಸಲಿಟ್ಟಿರುವ ಸ್ವೀಟ್ ರೂಮಿನಲ್ಲಿ ಈಗಾಗಲೇ 'ದರ್ಬಾರ್' ಆರಂಭಿಸಿದ್ದಾರೆ.

ಚಾಣಕ್ಯಪುರಿಯಲ್ಲಿ ನೂತನ ಕರ್ನಾಟಕ ಭವನ ಏಪ್ರಿಲ್‌ನಲ್ಲಿ ಉದ್ಘಾಟನೆಯಾಗಿದೆ. ಇದರಲ್ಲಿ ಎರಡು ವಿವಿಐಪಿ ಸ್ವೀಟ್ ರೂಮ್‌ಗಳಿವೆ. ಇದರಲ್ಲಿ ಒಂದು ಸ್ವೀಟ್ ಮುಖ್ಯಮಂತ್ರಿ ಅವರಿಗೆ ಮೀಸಲಾಗಿದೆ. ಭವನದ ಉದ್ಘಾಟನೆಯ ದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಕೊಠಡಿಯಲ್ಲಿ ತಂಗಿದ್ದರು. ಶೌಚಾಲಯ ಕಿರಿದಾಗಿರುವ ಕಾರಣ ಹಾಗೂ ಸರಿಯಾಗಿ ನಿದ್ದೆ ಬಾರದ ಕಾರಣ ಅಲ್ಲಿ ತಂಗುವುದನ್ನು ನಿಲ್ಲಿಸಿದ್ದರು. ಆ ಬಳಿಕ ನಾಲ್ಕೈದು ಸಲ ಬಂದಾಗಲೂ ಅವರು ತಂಗಿದ್ದು ಹಳೆಯ ಕರ್ನಾಟಕ ಭವನದಲ್ಲೇ.

ಈ ವಿಷಯ ತಿಳಿದ ಶಿವಕುಮಾರ್ ಅವರು ಸಿದ್ದರಾಮಯ್ಯ ಅವರಲ್ಲಿ ಪ್ರಶ್ನಿಸಿದ್ದಾರೆ. 'ನಂಗೆ ಆ ಕೊಠಡಿ ಹೊಂದಾಣಿಕೆ ಆಗುತ್ತಿಲ್ಲಪ್ಪ. ಹಾಗಾಗಿ, ಹಳೆಯ ಭವನದಲ್ಲೇ ಉಳಿಯುತ್ತೇನೆ' ಎಂದು ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ. 'ನಾನು ಹೊಸ ಸ್ವೀಟ್ ರೂಮ್ ಬಳಸಲೇ' ಎಂದು ಶಿವಕುಮಾರ್ ಕೇಳಿದ್ದಾರೆ. ಅದಕ್ಕೆ ಸಿದ್ದರಾಮಯ್ಯ, 'ಧಾರಾಳವಾಗಿ' ಎಂದಿದ್ದಾರೆ. ಕೇಂದ್ರ ಸಚಿವರನ್ನು ಭೇಟಿ ಮಾಡಲು ನವದೆಹಲಿಗೆ ಮಂಗಳವಾರ ಬಂದ ಶಿವಕುಮಾರ್ ಅವರು ಈ ಸ್ವೀಟ್ ರೂಮಿನಲ್ಲೇ ಉಳಿದುಕೊಂಡರು.

ಹಾಸನ ಜಿಲ್ಲಾಧಿಕಾರಿಗೆ ₹2 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಜ್ಞಾನದ ಕೂಪದಲ್ಲಿ ಮುಳುಗಿರುವ ಅಧಿಕಾರಿ ವರ್ಗದ ಕರ್ತವ್ಯ ಲೋಪವನ್ನು ಕಡೆಗಣಿಸುವುದಾದರೂ ಹೇಗೆ' ಎಂದು ಪ್ರಶ್ನಿಸಿರುವ ಹೈಕೋರ್ಟ್, ಆದಾಯ ಪ್ರಮಾಣ ಪತ್ರ ನೀಡಿಕೆಯಲ್ಲಿ ವಿಳಂಬ ಧೋರಣೆ ಪ್ರದರ್ಶಿಸಿದ ಹಾಸನ ಜಿಲ್ಲಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಸೇರಿ ಅಧಿಕಾರಿ ವರ್ಗಕ್ಕೆ ₹2 ಲಕ್ಷ ದಂಡ ವಿಧಿಸಿದೆ.

ಈ ಸಂಬಂಧ ಚನ್ನರಾಯಪಟ್ಟಣದ ಬಿ.ಎನ್.ಮುತ್ತುಲಕ್ಷ್ಮಿ ಸಲ್ಲಿಸಿದ್ದ ರಿಟ್ ಅರ್ಜಿ (ಡಬ್ಲ್ಯು.ಪಿ.10897/2024) ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಸ್ಪಷ್ಟವಾದ ಕಾನೂನುಗಳಿದ್ದರೂ ಅವುಗಳನ್ನು ಪಾಲನೆ ಮಾಡದ ಅಧಿಕಾರಿ ವರ್ಗ ಅರಿವಿನ ಕೊರತೆಯಿಂದ ಬಳಲುತ್ತಿದೆ. ಇಂತಹ ನಡೆ ಅಕ್ಷಮ್ಯ. ಸಾರ್ವಜನಿಕ ಹುದ್ದೆಯನ್ನು ಹೊಂದಿರುವ ಎಲ್ಲರಿಗೂ ಎಚ್ಚರಿಕೆ ಆಗಲಿ ಎಂದು ಈ ದಂಡ ವಿಧಿಸಲಾಗುತ್ತಿದೆ' ಎಂದು ಆದೇಶದಲ್ಲಿ ಉಲ್ಲೇಖಿಸಿದೆ.

'ಚನ್ನರಾಯಪಟ್ಟಣ ತಹಶೀಲ್ದಾರ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ, ಹಾಸನ ಜಿ.ಪಂ ಆಡಳಿತ ಉಪ ಕಾರ್ಯದರ್ಶಿ ಹಾಗೂ ಜಿಲ್ಲಾಧಿಕಾರಿ ದಂಡದ ಮೊತ್ತವನ್ನು 4 ವಾರಗಳಲ್ಲಿ ತಮ್ಮ ಸ್ವಂತ ಹಣದಿಂದ ಅರ್ಜಿದಾರರಿಗೆ ಪಾವತಿ ಮಾಡತಕ್ಕದ್ದು' ಎಂದು ನ್ಯಾಯಪೀಠ ತಾಕೀತು ಮಾಡಿದೆ.

ಏನಿದು ಪ್ರಕರಣ?: ರಾಜ್ಯ ಪ್ರಾಸಿಕ್ಯೂಷನ್ ನಿರ್ದೇಶನಾಲಯ 181 ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗಳ ಭರ್ತಿಗೆ ಅಭ್ಯರ್ಥಿಗಳಿಂದ 2019ರ ಸೆಪ್ಟೆಂಬರ್‌ನಲ್ಲಿ ಅರ್ಜಿ ಆಹ್ವಾನಿಸಿತ್ತು. ಇದಕ್ಕೆ ಮುತ್ತುಲಕ್ಷ್ಮಿ ಕೂಡ 3ಎ ಪ್ರವರ್ಗದಡಿ ಅರ್ಜಿ ಸಲ್ಲಿಸಿದ್ದರು. ಇವರ ಜಾತಿ–ಆದಾಯ ಪ್ರಮಾಣ ಪತ್ರದ ಪರಿಶೀಲಿಸಿದ್ದ ಅಧಿಕಾರಿಗಳು, 'ಅರ್ಜಿದಾರರ ಪತಿ ಖಾಸಗಿ ಕಾಲೇಜಿನಲ್ಲಿ ಪ್ರಾಧ್ಯಾಪಕರಿದ್ದಾರೆ. ಇವರಿಬ್ಬರ ಕುಟುಂಬದ ವಾರ್ಷಿಕ ಆದಾಯ ₹8 ಲಕ್ಷ ಮೀರಿರುವ ಕಾರಣ ಮುತ್ತುಲಕ್ಷ್ಮಿ ಸಿಂಧುತ್ವ ಪ್ರಮಾಣ ಪತ್ರ ಪಡೆಯಲು ಅನರ್ಹರಾಗಿದ್ದಾರೆ' ಎಂದು ಇವರ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದರು. ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ಎ.ಆರ್.ಶಾರದಾಂಬ ವಾದ ಮಂಡಿಸಿದ್ದರು.

ಅವಧಿ ಕಳೆದರೂ ಆಗದ ಕಾಮಗಾರಿ • ಶಿರಸಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಗುಂಡಿಮಯ

ಕಾಮಗಾರಿಗೆ ಗ್ರಹಣ, ಸವಾರರು ಹೈರಾಣ

• ರಾಜೇಂದ್ರ ಹೆಗಡೆ

ಶಿರಸಿ: 'ಸಾಗರಮಾಲಾ ಯೋಜನೆ'ಯಡಿ ಕೈಗೆತ್ತಿಕೊಂಡಿರುವ ಹಾವೇರಿ–ಶಿರಸಿ–ಕುಮಟಾ ರಾಷ್ಟ್ರೀಯ ಹೆದ್ದಾರಿ–766ಇ ಕಾಮಗಾರಿ ನಿಗದಿತ ಅವಧಿ ಮೀರಿದರೂ ಇನ್ನೂ ಮುಗಿದಿಲ್ಲ. ರಸ್ತೆ ಹದಗೆಟ್ಟಿದ್ದು, ಉತ್ತರ ಕರ್ನಾಟಕದೊಂದಿಗೆ ಮಲೆನಾಡು ಸಂಪರ್ಕ ಕಷ್ಟವಾಗಿದೆ.

ಶಿರಸಿಯಿಂದ ಬೇಲೆಕೇರಿ ಬಂದರಿಗೆ ಸಂಪರ್ಕ ಕಲ್ಪಿಸುವ ಯೋಜನೆಯಡಿ ಮೊದಲ ಹಂತದಲ್ಲಿ ಶಿರಸಿಯಿಂದ ಕುಮಟಾ ತಾಲ್ಲೂಕಿನ ದೀವಗಿವರೆಗೆ ರಸ್ತೆ ನಿರ್ಮಿಸುವ ಕೆಲಸ 2020ರಲ್ಲಿ ಆರಂಭಗೊಂಡಿತ್ತು. 2023ರಲ್ಲಿಯೇ ಮುಗಿಯಬೇಕಿತ್ತು. ಇನ್ನೂ ಮುಗಿದಿಲ್ಲ.

ಈ ರಸ್ತೆಯು ನೀಲೆಕಣಿ ಬಳಿ ಸಂಪೂರ್ಣ ಹಾಳಾಗಿದೆ. ದುಸ್ಥಿತಿಯ ಚಿತ್ರ ಈಚೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿತ್ತು. ಈ ರಸ್ತೆಯ ಕಾಮಗಾರಿ ನಿರ್ವಹಣೆ ಗುತ್ತಿಗೆ ಪಡೆದಿದ್ದ ಆರ್‌ಎನ್‌ಎಸ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ವಿರುದ್ಧ ಆಕ್ಷೇಪ ವ್ಯಕ್ತವಾಗಿದೆ.

ನಗರದ ಮೂಲಕ ಹಾದುಹೋಗುವ ಶಿರಸಿ–ಹಾವೇರಿ ಹೆದ್ದಾರಿ ಕಾಮಗಾರಿ ಯೋಜನೆಯ ಎರಡನೇ ಹಂತದಲ್ಲಿ ಈ ವರ್ಷಾಂತ್ಯಕ್ಕೆ ಪೂರ್ಣಗೊಳ್ಳಬೇಕಿದೆ. ಆದರೆ, ಇನ್ನೂ ಕೆಲಸವೇ ಆರಂಭಗೊಂಡಿಲ್ಲ. ಅಮ್ಮಾಪುರ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಕಾಮಗಾರಿಯ ಗುತ್ತಿಗೆ ಪಡೆದಿದೆ.

'ಶಿರಸಿ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಯುದ್ದಕ್ಕೂ ಗುಂಡಿಗಳಿವೆ. ಶಿರಸಿ–ಹಾವೇರಿ ನಡುವೆ ವಾಹನ ಸಂಚಾರ ಹೆಚ್ಚಿದೆ. ಸರಕು ಸಾಗಣೆ ವಾಹನ ಸವಾರರು ಇಲ್ಲಿ ಸಾಗಲು ಹಿಂಜರಿಕೆ ಇದೆ. ದುರಸ್ತಿಗೆ ನಿರ್ಲಕ್ಷ್ಯ ತೋರಲಾಗಿದೆ' ಎಂದು ಸ್ಥಳೀಯರು ತೀವ್ರ ಬೇಸರ ವ್ಯಕ್ತಪಡಿಸಿದರು.

ನಿರ್ವಹಣೆ ಕಾಣದೇ ಗುಂಡಿಮಯವಾಗಿರುವ ಶಿರಸಿ ನಗರದ ಡ್ರೈವರ್ ಕಟ್ಟೆ ಪಕ್ಕದ ರಸ್ತೆ

ಹೆದ್ದಾರಿಯಲ್ಲಿ ಹದಗೆಟ್ಟಿರುವ ಕಡೆಗಳಲ್ಲಿ ನಿರ್ವಹಣೆಗೆ ಸೂಚಿಸಲಾಗಿದೆ. ತೀರಾ ಹಾಳಾಗಿರುವ ಕಡೆ ಆದ್ಯತೆ ಮೇರೆಗೆ ದುರಸ್ತಿ ಕಾರ್ಯ ನಡೆಯಲಿದೆ

ಕೆ.ಶಿವಕುಮಾರ್, ಯೋಜನಾ ನಿರ್ದೇಶಕ, ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ

ಚಿಟಿಕೆ ಸುದ್ದಿ

ವಕೀಲ ಜಗದೀಶ್‌ಗೆ ಬೆದರಿಕೆ: ಪ್ರಕರಣ

ಬೆಂಗಳೂರು: ಬಿಗ್‌ಬಾಸ್ ಮಾಜಿ ಸ್ಪರ್ಧಿ, ವಕೀಲ ಕೆ.ಎನ್. ಜಗದೀಶ್ ಕುಮಾರ್ ಅವರಿಗೆ ಜೀವ ಬೆದರಿಕೆ ಹಾಕಿದ ಆರೋಪ ಸಂಬಂಧ ಅಪರಿಚಿತ ಆಟೊ ಚಾಲಕನ ವಿರುದ್ಧ ಈಶಾನ್ಯ ಸೈಬರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಗರದಲ್ಲಿ ಅನಧಿಕೃತ ಆಟೊಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಾಲತಾಣಗಳ ಮೂಲಕ ಧ್ವನಿ ಎತ್ತಿದ ಪರಿಣಾಮ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಹಾಗೂ ಸಂಚಾರ ಪೊಲೀಸರು 900 ಪ್ರಕರಣ ದಾಖಲಿಸಿ, 500ಕ್ಕೂ ಹೆಚ್ಚು ಆಟೊ ಜಪ್ತಿ ಮಾಡಿದ್ದಾರೆ. ಆಟೊ ಚಾಲಕನೊಬ್ಬ ನನ್ನ ಮತ್ತು ಕುಟುಂಬದ ವಿರುದ್ಧ ಅಸಭ್ಯ ಪದ ಬಳಸಿ, ಜೀವ ಬೆದರಿಕೆ ಹಾಕಿದ್ದಾನೆ' ಎಂದು ಜಗದೀಶ್ ದೂರಿನಲ್ಲಿ ತಿಳಿಸಿದ್ದಾರೆ.

ಅತ್ತೆ ಮಗಳ ಮೇಲೆ ಆ್ಯಸಿಡ್ ದಾಳಿ

ಚಿಕ್ಕಬಳ್ಳಾಪುರ: ವಿವಾಹಕ್ಕೆ ಒಪ್ಪಲಿಲ್ಲ ಎಂದು ಅತ್ತೆ ಮಗಳ ಮೇಲೆಯೇ ವ್ಯಕ್ತಿಯೊಬ್ಬ ಶೌಚಾಲಯ ಸ್ವಚ್ಛಗೊಳಿಸಲು ಬಳಸುವ ಆ್ಯಸಿಡ್ ಎರಚಿ, ತಾನೂ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿರುವ ಪ್ರಕರಣ ತಾಲ್ಲೂಕಿನ ಮಂಚನಬಲೆ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ಶಿಡ್ಲಘಟ್ಟ ತಾಲ್ಲೂಕಿನ ಬಶೆಟ್ಟಿಹಳ್ಳಿಯ ಆನಂದ್ ಕುಮಾರ್ ಮಂಚನಬಲೆ ಗ್ರಾಮದಲ್ಲಿರುವ ಅತ್ತೆ ಮಗಳನ್ನು ಪ್ರೀತಿಸುತ್ತಿದ್ದ. ವಿವಾಹ ಮಾಡಿಕೊಡಬೇಕು ಎಂದು ಆಗ್ರಹಿಸಿದ್ದ. ಇದಕ್ಕೆ ಯುವತಿ ಹಾಗೂ ಅವರ ಪೋಷಕರು ಒಪ್ಪಿರಲಿಲ್ಲ ಎನ್ನಲಾಗಿದೆ. ಇದರಿಂದ ಕುಪಿತಗೊಂಡ ಆನಂದ್, ಆ್ಯಸಿಡ್ ದಾಳಿ ಮಾಡಿದ್ದಾನೆ. ತಾನೂ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಯುವತಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಆನಂದ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ವಿಮಾನ ಟಿಕೆಟ್ ದರ ಏರಿಕೆ ತಡೆಗೆ ಕ್ರಮ: ಡಿಜಿಸಿಎ

ನವದೆಹಲಿ (ಪಿಟಿಐ): ವಿಮಾನಯಾನ ಸಂಸ್ಥೆಗಳು ಕೆಲವು ಸಂದರ್ಭಗಳಲ್ಲಿ ವಿಮಾನ ಟಿಕೆಟ್ ದರವನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡುವುದನ್ನು ತಡೆಯಲು ಕಾರ್ಯವಿಧಾನವೊಂದನ್ನು ಜಾರಿಗೆ ತರುವುದಾಗಿ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ತಿಳಿಸಿದೆ.

ಸಂಸದೀಯ ಸ್ಥಾಯಿ ಸಮಿತಿ ಸದಸ್ಯರು ಮಂಗಳವಾರ ನಡೆದ ಸಭೆಯಲ್ಲಿ ನಾಗರಿಕ ವಿಮಾನಯಾನ ಸಚಿವಾಲಯದ ಹಿರಿಯ ಅಧಿಕಾರಿಗಳು, ವಿವಿಧ ವಿಮಾನಯಾನ ಸಂಸ್ಥೆಗಳು ಮತ್ತು ವಿಮಾನ ನಿಲ್ದಾಣದ ಅಧಿಕಾರಿಗಳ ಜತೆ ಚರ್ಚಿಸಿದರು.

3 ತಾಸು: 3 ಠಾಣಾ ವ್ಯಾಪ್ತಿಯಲ್ಲಿ ಕಳವು

ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಆರೋಪಿ, ಪರಿಚಯಸ್ಥನ ಜತೆ ಕೃತ್ಯ

ಪ್ರಜಾವಾಣಿ ವಾರ್ತೆ

ಅಚ್ಯುತ್ ಕುಮಾರ್

ಅಪರಾಧ ಸುದ್ದಿ

ಬೆಂಗಳೂರು: ಮೂರು ತಾಸಿನಲ್ಲಿ ನಗರದ ಮೂರು ಠಾಣೆಗಳ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿ ಪರಾರಿ ಆಗಿದ್ದ ಆರೋಪಿಯನ್ನು ಗಿರಿನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅಚ್ಯುತ್ ಕುಮಾರ್ ಅಲಿಯಾಸ್ ಗಣಿ ಬಂಧಿತ ಆರೋಪಿ. ಮತ್ತೊಬ್ಬ ಆರೋಪಿಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಆರೋಪಿಯಿಂದ ₹52.89 ಲಕ್ಷ ಮೌಲ್ಯದ 541 ಗ್ರಾಂ ಚಿನ್ನಾಭರಣ, ಒಂದು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಳ್ಳತನ ಮಾಡಿ ಆರೋಪಿ ಜೈಲು ಸೇರಿದ್ದ. ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದ ಬಳಿಕ ಆರೋಪಿ ಮತ್ತೆ ಕಳ್ಳತನಕ್ಕೆ ಇಳಿದಿದ್ದ. ಗಿರಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ ಮೂರು ತಾಸು ಓಡಾಟ ನಡೆಸಿ ಅರ್ಧ ಕೆ.ಜಿ ಚಿನ್ನಾಭರಣ ಕಳ್ಳತನ ಮಾಡಿದ್ದ ಎಂದು ಪೊಲೀಸರು ಹೇಳಿದರು.

2018ರಲ್ಲಿ ಕಾಲಿಗೆ ಗುಂಡು ಹಾರಿಸಿ ಆರೋಪಿಯನ್ನು ಬಂಧಿಸಲಾಗಿತ್ತು. ಜೈಲಿನಿಂದ ಹೊರಬಂದು ಮನೆಗಳ್ಳತನದಲ್ಲಿ ಭಾಗಿಯಾಗಿದ್ದ ಎಂದು ಪೊಲೀಸರು ತಿಳಿಸಿದರು.

ದೋಚಿದ್ದ ಚಿನ್ನಾಭರಣಗಳನ್ನು ಕೇರಳ, ಆಂಧ್ರಪ್ರದೇಶ, ತೆಲಂಗಾಣದಲ್ಲಿ ಮಾರಾಟ ಮಾಡಿದ್ದ. ಅಲ್ಲಿಂದ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿ ಬಂಧನದಿಂದ ಗಿರಿನಗರ, ಕೊಡಿಗೇಹಳ್ಳಿ, ಸಂಜಯನಗರ, ಯಲಹಂಕ ನ್ಯೂ ಟೌನ್, ಕೆಂಗೇರಿ, ಕೋಣನಕುಂಟೆ, ತಿಲಕ್ ನಗರ, ಬನಶಂಕರಿ, ಬೇಗೂರು, ಬ್ಯಾಟರಾಯನಪುರ ಠಾಣೆಗಳಲ್ಲಿ ತಲಾ ಒಂದೊಂದು ಸರಗಳ್ಳತನ ಪ್ರಕರಣಗಳು ಹಾಗೂ ಬಳ್ಳಾರಿಯ ಕೌಲ್ ಬಜಾರ್ ಠಾಣೆಯಲ್ಲಿ ಒಂದು ಮನೆ ಕಳ್ಳತನ ಪ್ರಕರಣ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದರು.

ಹಲವು ವರ್ಷಗಳಿಂದ ಸರಗಳ್ಳತನ ಮಾಡುತ್ತಿದ್ದ ಆರೋಪಿಯ ವಿರುದ್ಧ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ 200ಕ್ಕೂ ಅಧಿಕ ಪ್ರಕರಣಗಳು ದಾಖಲಾಗಿವೆ.

ಇತ್ತೀಚೆಗಷ್ಟೇ ಜೈಲಿನಿಂದ ಬಿಡುಗಡೆಗೊಂಡು ಜೈಲಿನಲ್ಲಿ ಪರಿಚಯವಾಗಿದ್ದ ಮತ್ತೊಬ್ಬ ಆರೋಪಿ ಜತೆಗೆ ಸೇರಿಕೊಂಡು ಕಳ್ಳತನ ಮಾಡುತ್ತಿದ್ದ. ಬಳ್ಳಾರಿಯ ಮನೆಯೊಂದರಲ್ಲಿ ಅರ್ಧ ಕೆ.ಜಿ ಚಿನ್ನಾಭರಣ ದೋಚಿದ್ದ ಅಚ್ಯುತ್ ಕುಮಾರ್, ನಂತರ ಬೆಂಗಳೂರಿಗೆ ಬಂದು ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

₹2.50 ಕೋಟಿ ಮೌಲ್ಯದ ಆಭರಣ ಜಪ್ತಿ

ಚಿನ್ನಾಭರಣ ಅಂಗಡಿ ಮಾಲೀಕರು ನೀಡಿದ್ದ ಚಿನ್ನದಗಟ್ಟಿಯನ್ನು ದೋಚಿ ಪರಾರಿಯಾಗಿದ್ದ ಆರೋಪಿಯನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ಮನೀಶ್ ಕುಮಾರ್ ಸೋನಿ (40) ಬಂಧಿತ ಆರೋಪಿ.

ಆರೋಪಿಯಿಂದ ₹2.50 ಕೋಟಿ ಮೌಲ್ಯದ 3 ಕೆ.ಜಿ. 166 ಗ್ರಾಂ ತೂಕದ ಚಿನ್ನದ ಗಟ್ಟಿ ಮತ್ತು ₹8.53 ಲಕ್ಷ ನಗದು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

'ಅಕ್ಕಸಾಲಿಗನಾಗಿ ಕೆಲಸ ಮಾಡುತ್ತಿದ್ದ ಮನೀಶ್ ಕುಮಾರ್ ಸೋನಿ ಹನುಮಂತನಗರದಲ್ಲಿ ವಾಸವಾಗಿದ್ದ. ನಾಲ್ಕು ವರ್ಷಗಳಿಂದ ಜಯನಗರ ಮೂರನೇ ಬ್ಲಾಕ್‌ನ ಚಿನ್ನಾಭರಣ ಅಂಗಡಿಯಿಂದ ಚಿನ್ನದಗಟ್ಟಿ ಪಡೆದು, ವಿವಿಧ ಶೈಲಿಯ ಚಿನ್ನಾಭರಣ ತಯಾರಿಸಿಕೊಡುತ್ತಿದ್ದ. ಏಪ್ರಿಲ್‌ನಿಂದ ಜೂನ್‌ವರೆಗೆ ಪಡೆದುಕೊಂಡಿದ್ದ 8 ಕೆ.ಜಿ 351 ಗ್ರಾಂ ಚಿನ್ನದ ಗಟ್ಟಿಯಲ್ಲಿ ಆಭರಣವನ್ನೂ ತಯಾರಿಸಿಕೊಡದೆ, ಸಂಪರ್ಕಕ್ಕೂ ಸಿಗದೆ ಪರಾರಿಯಾಗಿದ್ದ. ಈ ಸಂಬಂಧ ಆರೋಪಿಯ ವಿರುದ್ಧ ದೂರು ನೀಡಲಾಗಿತ್ತು. ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಹೇಳಿದರು.

ಸೋನಿ

ಗೋವಾದಲ್ಲಿ ಬಂಧನ: ಆರೋಪಿ ಗೋವಾಕ್ಕೆ ಪರಾರಿ ಆಗಿರುವ ಮಾಹಿತಿ ಸಿಕ್ಕಿತ್ತು. ಮಾಹಿತಿ ಆಧರಿಸಿ ಅಲ್ಲಿಗೆ ತೆರಳಿದ ಪೊಲೀಸ್ ತಂಡವು ಬಂಧಿಸಿದೆ.

ಆರೋಪಿ ಜೀವನ ನಿರ್ವಹಣೆ ಹಾಗೂ ಇತರೆ ಅಗತ್ಯಗಳಿಗೆ ಲಕ್ಷಾಂತರ ರೂಪಾಯಿ ಸಾಲ ಮಾಡಿಕೊಂಡಿದ್ದ. ಆ ಸಾಲ ತೀರಿಸಲು ಸಾಧ್ಯವಾಗದೆ ಚಿನ್ನದಗಟ್ಟಿ ಕಳ್ಳತನ ಮಾಡಿದ್ದ ಎಂದು ಪೊಲೀಸರು ಹೇಳಿದರು.

ಪಾರ್ಕಿಂಗ್ ಸ್ಥಳಗಳಲ್ಲಿ ಬೈಕ್ ಕಳ್ಳತನ: ಆರೋಪಿ ಸೆರೆ

ಪಾರ್ಕಿಂಗ್ ಸ್ಥಳಗಳಲ್ಲಿ ನಿಲುಗಡೆ ಮಾಡುತ್ತಿದ್ದ ದ್ವಿಚಕ್ರ ವಾಹನಗಳ ಕಳ್ಳತನ ಮಾಡುತ್ತಿದ್ದ ಹೊರ ರಾಜ್ಯದ ಆರೋಪಿಯನ್ನು ಯಲಹಂಕ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಕದಿರಿಯ ರವಿನಾಯಕ್ (42) ಬಂಧಿತ ಆರೋಪಿ. ಬಂಧಿತನಿಂದ ₹30 ಲಕ್ಷ ಮೌಲ್ಯದ 40 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಮಾರುತಿ ನಗರದ ನಿವಾಸಿಯೊಬ್ಬರು, ಏಪ್ರಿಲ್ 6ರಂದು ಮನೆಯ ಎದುರು ದ್ವಿಚಕ್ರ ವಾಹನವನ್ನು ನಿಲುಗಡೆ ಮಾಡಿದ್ದರು. ಹತ್ತು ನಿಮಿಷದ ನಂತರ ಬಂದು ನೋಡಿದಾಗ ಸ್ಥಳದಲ್ಲಿ ವಾಹನ ಇರಲಿಲ್ಲ. ಮಾಲೀಕರು ನೀಡಿದ ದೂರು ಆಧರಿಸಿ ತನಿಖೆ ನಡೆಸಿ ಆರೋಪಿಯನ್ನು ಬಾಗಲೂರು ಕ್ರಾಸ್ ಬಳಿ ಬಂಧಿಸಲಾಯಿತು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರದಲ್ಲಿ ಆರೋಪಿ ಬೈಕ್‌ಗಳನ್ನು ಕಳ್ಳತನ ಮಾಡುತ್ತಿದ್ದ. ಕದ್ದ ವಾಹನಗಳನ್ನು ಆಂಧ್ರಪ್ರದೇಶಕ್ಕೆ ಕೊಂಡೊಯ್ದು ಮಾರಾಟ ಮಾಡುತ್ತಿದ್ದ. ಆಂಧ್ರಪ್ರದೇಶದ ವಿವಿಧೆಡೆ ಆರೋಪಿ ನಿಲುಗಡೆ ಮಾಡಿದ್ದ 27 ವಾಹನಗಳೂ ಸೇರಿದಂತೆ 40 ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ರವಿನಾಯಕ್

'ಆರೋಪಿಯ ಬಂಧನದಿಂದ ಯಲಹಂಕ, ಸಂಪಿಗೆಹಳ್ಳಿ, ಕೊಡಿಗೇಹಳ್ಳಿ, ಅಮೃತಹಳ್ಳಿ, ಅವಲಹಳ್ಳಿ, ಚಿಕ್ಕಬಳ್ಳಾಪುರ, ಹೊಸಕೋಟೆ, ಹೆಬ್ಬಾಳ, ನಂದಿಗಿರಿ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ಪ್ರಕರಣಗಳು ಪತ್ತೆಯಾಗಿವೆ' ಎಂದು ಪೊಲೀಸರು ಹೇಳಿದರು.

ವಕ್ಫ್ ಮಂಡಳಿಗೆ ₹3.82 ಕೋಟಿ ವಾಪಸ್ ಮಾಡಿದ ಇ.ಡಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 2017ರಲ್ಲಿ ವಕ್ಫ್ ಖಾಸಗಿ ಕಂಪನಿಗಳಿಗೆ ಅಕ್ರಮವಾಗಿ ಹಣ ವರ್ಗಾವಣೆ
- ಮರ್ಸಿಡೆಸ್ ಕಾರು ಖರೀದಿಸಿದ್ದ ವರ್ಕೀಸ್ ರಿಯಾಲಿಟೀಸ್

ಬೆಂಗಳೂರು: 2017ರಲ್ಲಿ ಕರ್ನಾಟಕ ವಕ್ಫ್ ಮಂಡಳಿಯ ₹4 ಕೋಟಿಯನ್ನು ಖಾಸಗಿ ಕಂಪನಿಗಳ ಖಾತೆಗಳಿಗೆ ಅಕ್ರಮವಾಗಿ ವರ್ಗಾವಣೆ ಮಾಡಿದ್ದ ಪ್ರಕರಣದಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದ ₹3.82 ಕೋಟಿಯನ್ನು ಜಾರಿ ನಿರ್ದೇಶನಾಲಯವು (ಇ.ಡಿ), ವಾಪಸ್ ಮಾಡಿದೆ.

'ತಾನು ವಿಜಯ ಬ್ಯಾಂಕ್ ನೌಕರ ಎಂದು ಹೇಳಿಕೊಂಡಿದ್ದ ವ್ಯಕ್ತಿಯೊಬ್ಬ ವಕ್ಫ್ ಮಂಡಳಿಗೆ ಭೇಟಿ ನೀಡಿ, 'ತಮ್ಮ ಬ್ಯಾಂಕ್‌ನಲ್ಲಿ ಠೇವಣಿ ಇರಿಸಿ. ಹೆಚ್ಚಿನ ಬಡ್ಡಿ ಬರುತ್ತದೆ' ಎಂದು ತಿಳಿಸಿದ್ದ. ಇದಕ್ಕೆ ಒಪ್ಪಿದ್ದ ಮಂಡಳಿಯ ಅಧಿಕಾರಿಗಳು ಆತನಿಗೆ ಎರಡು ಚೆಕ್‌ಗಳನ್ನು ನೀಡಿದ್ದರು' ಎಂದು ಇ.ಡಿ ತಿಳಿಸಿದೆ.

'ಚೆಕ್ ನೀಡಿ ಹಲವು ದಿನಗಳಾದರೂ, ಠೇವಣಿಯ ರಸೀದಿಯನ್ನು ಬ್ಯಾಂಕ್ ಒದಗಿಸಿರಲಿಲ್ಲ. ಮಂಡಳಿಯ ಅಧಿಕಾರಿಗಳು ಬ್ಯಾಂಕ್‌ನಲ್ಲಿ ವಿಚಾರಿಸಿದಾಗ, ಅಜಯ್ ಶರ್ಮಾ ಟ್ರೇಡಿಂಗ್ ಕಾರ್ಪೊರೇಷನ್ ಎಂಬ ಕಂಪನಿಯ ಖಾತೆಗೆ ಆ ಹಣ ವರ್ಗಾವಣೆ ಆಗಿತ್ತು. ಅಧಿಕಾರಿಗಳು ನೀಡಿದ್ದ ದೂರಿನನ್ವಯ ಪೊಲೀಸರು ಪ್ರಕರಣ ದಾಖಲಿಸಿದ್ದರು. ಬಹುಕೋಟಿ ಹಗರಣವಾಗಿದ್ದ ಕಾರಣ ಇಸಿಐಆರ್ ದಾಖಲಿಸಿ, ತನಿಖೆ ಆರಂಭಿಸಿದ್ದೆವು' ಎಂದು ಇ.ಡಿ ತಿಳಿಸಿದೆ.

'ಅಜಯ್ ಶರ್ಮಾ ಕಂಪನಿಯಿಂದ ವರ್ಕೀಸ್ ರಿಯಾಲಿಟೀಸ್ ಪ್ರೈವೇಟ್ ಲಿಮಿಟೆಡ್‌ಗೆ ₹1.10 ಕೋಟಿ ವರ್ಗಾವಣೆಯಾಗಿತ್ತು. ಆ ಹಣದಲ್ಲಿ ಮರ್ಸಿಡೆಸ್ ಬೆಂಜ್ ಕಂಪನಿಯ ಕಾರು ಖರೀದಿಸಲಾಗಿತ್ತು ಎಂಬುದು ತನಿಖೆಯ ವೇಳೆ ಪತ್ತೆಯಾಗಿತ್ತು' ಎಂದು ಮಾಹಿತಿ ನೀಡಿದೆ.

ವಕ್ಫ್ ಮಂಡಳಿಯ ಇಬ್ಬರು ಅಧಿಕಾರಿಗಳು ಮತ್ತು ವಿಜಯ ಬ್ಯಾಂಕ್‌ನ ನೌಕರರ ವಿರುದ್ಧ ಇ.ಡಿ ಪ್ರಕರಣ ದಾಖಲಿಸಿತ್ತು. ಜತೆಗೆ 2017ರ ಫೆಬ್ರವರಿಯಲ್ಲಿ ₹3.82 ಕೋಟಿಯನ್ನು ಮುಟ್ಟುಗೋಲು ಹಾಕಿಕೊಂಡಿತ್ತು. ಪ್ರಕರಣದ ವಿಚಾರಣೆ ನಡೆಸುತ್ತಿದ್ದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಮಧ್ಯಂತರ ಅರ್ಜಿ ಸಲ್ಲಿಸಿದ್ದ ಮಂಡಳಿಯು, 'ಹಣವನ್ನು ವಾಪಸ್ ಮಾಡುವಂತೆ ಇ.ಡಿಗೆ ನಿರ್ದೇಶನ ನೀಡಿ' ಎಂದು ಕೋರಿತ್ತು.

ಮಂಡಳಿಯ ಅರ್ಜಿಯನ್ನು ಮಾನ್ಯ ಮಾಡಿದ ನ್ಯಾಯಾಲಯವು, ಹಣವನ್ನು ವಾಪಸ್ ಮಾಡಿ ಎಂದು ಜುಲೈ 1ರಂದು ಇ.ಡಿಗೆ ಸೂಚಿಸಿತ್ತು. ಅದರಂತೆ ಜುಲೈ 7ರಂದು ಇ.ಡಿಯು, ಮಂಡಳಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಜೀಲಾನಿ ಮೊಕಾಶಿ ಅವರಿಗೆ ₹3.82 ಕೋಟಿ ಮೊತ್ತದ ಚೆಕ್ ಅನ್ನು ಹಸ್ತಾಂತರಿಸಿದೆ.

ಗೃಹ ಸಚಿವ ಜಿ.ಪರಮೇಶ್ವರ ಸೂಚನೆ ಮೇರೆಗೆ ನಿರ್ಮಾಣ: ಕಮಿಷನರ್

3 ಠಾಣೆಗಳಲ್ಲಿ 'ಮಕ್ಕಳ ಸ್ನೇಹಿ ಕೊಠಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯನಗರ ಉಪ ವಿಭಾಗದ ಮಾಗಡಿ ರಸ್ತೆ, ಗೋವಿಂದ ರಾಜನಗರ ಹಾಗೂ ವಿಜಯನಗರ ಪೊಲೀಸ್ ಠಾಣೆಗಳಲ್ಲಿ 'ಮಕ್ಕಳ ಸ್ನೇಹಿ ಕೊಠಡಿ' ನಿರ್ಮಿಸಲಾಗಿದ್ದು, ಈ ಕೊಠಡಿಗಳು ಎಲ್ಲರ ಗಮನ ಸೆಳೆಯುತ್ತಿವೆ.

ಗೃಹ ಸಚಿವ ಜಿ.ಪರಮೇಶ್ವರ ಅವರ ಸೂಚನೆಯ ಮೇರೆಗೆ ಮೊದಲ ಹಂತದಲ್ಲಿ ನಗರದ ಮೂರು ಠಾಣೆಗಳಲ್ಲಿ ಮಕ್ಕಳ ಸ್ನೇಹಿ ಕೊಠಡಿ ನಿರ್ಮಿಸಲಾಗಿದೆ. ಹಂತಹಂತವಾಗಿ ಇನ್ನೂ ಕೆಲವು ಪೊಲೀಸ್ ಠಾಣೆಗಳಲ್ಲಿ ಈ ರೀತಿಯ ಕೊಠಡಿ ನಿರ್ಮಿಸಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಮಕ್ಕಳ ಸ್ನೇಹಿ ಕೊಠಡಿಗಳು

'ಮಕ್ಕಳ ಮೇಲಿನ ಅಪರಾಧಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಹಾಗೂ ಮಕ್ಕಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಈ ಕೊಠಡಿ ನಿರ್ಮಿಸಲಾಗಿದೆ. ಸಾರ್ವಜನಿಕರು ಮಕ್ಕಳ ಜತೆಗೆ ಠಾಣೆಗೆ ಭೇಟಿ ನೀಡುವ ಸಂದರ್ಭಗಳಲ್ಲಿ ಮಕ್ಕಳ ಗಮನ ಸೆಳೆಯುವ ವಾತಾವರಣ ನಿರ್ಮಿಸಲಾಗಿದೆ' ಎಂದು ಹೇಳಿದರು.

ವಿಜಯನಗರ ಠಾಣೆಯ ಪಿಎಸ್‌ಐ ನೇತ್ರಾವತಿ, ಮಾಗಡಿ ರಸ್ತೆ ಠಾಣೆಯ ಪಿಎಸ್‌ಐ ಮಂಜುನಾಥ್, ಗೋವಿಂದರಾಜನಗರ ಠಾಣೆಯ ಪಿಎಸ್‌ಐ ಮಹೇಶ್ ಬ್ಯಾಕೋಡು ಅವರ ನೇತೃತ್ವದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದು ವಿವರಿಸಿದರು.

ಕಾರ್ಮಿಕರ ಮುಷ್ಕರಕ್ಕೆ ಎಡ ಪಕ್ಷಗಳ ಬೆಂಬಲ

ಬೆಂಗಳೂರು: ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ರದ್ದುಪಡಿಸುವಂತೆ ಆಗ್ರಹಿಸಿ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಜುಲೈ 9ರ ಮುಷ್ಕರಕ್ಕೆ ಎಡ ಪಕ್ಷಗಳು ಬೆಂಬಲ ಘೋಷಿಸಿವೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಪಿಐ ರಾಜ್ಯ ಮಂಡಳಿ ಕಾರ್ಯದರ್ಶಿ ಸಾತಿ ಸುಂದರೇಶ್, 'ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕುವ ನಾಲ್ಕು ಕಾಯ್ದೆಗಳ ಜಾರಿಗೆ ಕೇಂದ್ರ ಸರ್ಕಾರ ಮುಂದಾಗಿದೆ. ಇದು ಖಂಡನೀಯ. ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಕರೆ ನೀಡಿರುವ ಮುಷ್ಕರದಲ್ಲಿ ಭಾಗಿಯಾಗುತ್ತೇವೆ' ಎಂದು ತಿಳಿಸಿದರು.

'ಕೆಲಸದ ಅವಧಿಯನ್ನು 12 ಗಂಟೆಗಳಿಗೆ ಹೆಚ್ಚಿಸುವುದು, ಮಹಿಳೆಯರನ್ನು ರಾತ್ರಿ ಪಾಳಿಗಳಲ್ಲಿ ಕೆಲಸಕ್ಕೆ ತೊಡಗಿಸುವುದು ಸೇರಿ ವಿವಿಧ ಕಾರ್ಮಿಕ ನೀತಿಗಳನ್ನು ವಾಪಸ್ ಪಡೆಯಬೇಕು. ರಾಜ್ಯದ ಕಾಂಗ್ರೆಸ್ ಸರ್ಕಾರವೂ ಕೇಂದ್ರದ ಬಿಜೆಪಿ ಸರ್ಕಾರದ ದಾರಿಯಲ್ಲೇ ಸಾಗುತ್ತಿದೆ. ಕಾರ್ಮಿಕ ಕಾನೂನುಗಳನ್ನು ಬಂಡವಾಳದಾರರ ಹಿತಾಸಕ್ತಿಯಂತೆ ಬದಲಾವಣೆ ಮಾಡುತ್ತಿದೆ' ಎಂದು ದೂರಿದರು.

ಸಿಪಿಎಂ ರಾಜ್ಯ ಮಂಡಳಿ ಕಾರ್ಯದರ್ಶಿ ಪ್ರಕಾಶ್ ಕೆ., ಸಿಪಿಐ ರಾಜ್ಯ ಘಟಕದ ಕಾರ್ಯದರ್ಶಿ ಕ್ಲಿಫ್ಟನ್ ರೊಜಾರಿಯೋ, ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ ರಾಜ್ಯ ಘಟಕದ ಕಾರ್ಯದರ್ಶಿ ಉಮಾ ಕೆ. ಹಾಗೂ ಆಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್‌ನ ರಾಜ್ಯ ಘಟಕದ ಕಾರ್ಯದರ್ಶಿ ಜಿ.ಆರ್.ಶಿವಶಂಕರ್ ಅವರು ಮುಷ್ಕರಕ್ಕೆ ಬೆಂಬಲ ಸೂಚಿಸಿದರು.

ಕ್ವಾಂಟಮ್ ಇಂಡಿಯಾ ಸಮಾವೇಶ 31ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ವಾಂಟಮ್ ತಂತ್ರಜ್ಞಾನ ಅಭಿವೃದ್ಧಿಗೆ ಪೂರಕ ಸೌಕರ್ಯಗಳನ್ನು ಹೊಂದಿರುವ ಕಾರಣದಿಂದ ಬೆಂಗಳೂರು ನಗರದಲ್ಲಿ ಜುಲೈ 31 ಹಾಗೂ ಆಗಸ್ಟ್ 1ರಂದು 'ಕ್ವಾಂಟಮ್ ಇಂಡಿಯಾ ಬೆಂಗಳೂರು ಸಮ್ಮೇಳನ' ಆಯೋಜಿಸಲಾಗಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ತಿಳಿಸಿದರು.

ನಗರದ ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೇಶದಲ್ಲೇ ಮೊದಲ ಬಾರಿಗೆ ಆಯೋಜಿಸಲಾಗುತ್ತಿರುವ ಸಮಾವೇಶದ ಮೊದಲ ದಿನ ಕ್ವಾಂಟಮ್ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಡಂಕನ್ ಹಲ್ಡಾನೆ ಹಾಗೂ ಪ್ರೊ. ಡೇವಿಡ್ ಗ್ರಾಸ್ ಪ್ರಧಾನ ಭಾಷಣ ಮಾಡಲಿದ್ದಾರೆ. ಸಮಾವೇಶದಲ್ಲಿ ಕ್ವಾಂಟಮ್ ಇನ್ ಕಂಪ್ಯೂಟಿಂಗ್, ಫೈನಾನ್ಸ್ ಮತ್ತು ಎಐ - ಕ್ವಾಂಟಮ್ ಇನ್ ಹೆಲ್ತ್ ಕೇರ್, ಕ್ವಾಂಟಮ್ ಇನ್ ಪೆರಿಫೆರಿಲ್ಸ್ ಆ್ಯಂಡ್ ಹಾರ್ಡ್‌ವೇರ್, ಕ್ವಾಂಟಮ್ ಇನ್ ಸೊಸೈಟಿ ಆ್ಯಂಡ್ ಆರ್ಟ್, ಕ್ವಾಂಟಮ್ ಇನ್ ಸೆಕ್ಯೂರಿಟಿ ಸೇರಿದಂತೆ ಹಲವು ವಿಷಯಗಳ ಬಗ್ಗೆ ತಜ್ಞರಿಂದ ಮಾಹಿತಿಯ ವಿನಿಮಯವಾಗಲಿದೆ' ಎಂದು ಹೇಳಿದರು.

'ಕ್ವಾಂಟಮ್ ತಂತ್ರಜ್ಞಾನದಲ್ಲಿ ಕರ್ನಾಟಕವನ್ನು ಮುಂಚೂಣಿ ರಾಜ್ಯವನ್ನಾಗಿ ರೂಪಿಸುವಲ್ಲಿ ಸರ್ಕಾರ ಬದ್ಧವಾಗಿದೆ. ರಾಜ್ಯವನ್ನು ವಿಶ್ವದ ಕ್ವಾಂಟಮ್ ಕ್ಷೇತ್ರದ ಪ್ರಮುಖ ಹಬ್ ಆಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ 'ಕರ್ನಾಟಕ ಕ್ವಾಂಟಮ್ ಕ್ರಿಯಾ ಯೋಜನೆ' ಸಿದ್ಧಪಡಿಸಲಾಗುತ್ತಿದೆ. ಈ ಸಂಬಂಧ ಕ್ವಾಂಟಮ್ ಕ್ಷೇತ್ರದ ಸಾಧಕರನ್ನೊಳಗೊಂಡ ಕಾರ್ಯಪಡೆ ರಚಿಸಲಾಗುವುದು' ಎಂದು ವಿವರಿಸಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಏಕರೂಪ್ ಕೌರ್, ಕೆಸ್ಟೆಪ್ಸ್ ನಿರ್ದೇಶಕ ಸದಾಶಿವ ಪ್ರಭು, ಸಮ್ಮೇಳನದ ಸಂಚಾಲಕ ಪ್ರೊ. ಅರಿಂದಮ್ ಘೋಷ್, ಸಹ ಸಂಚಾಲಕ ಪ್ರೊ.ಅಕ್ಷಯ್ ನಾಯ್ಕ್ ಮತ್ತಿತರರು ಉಪಸ್ಥಿತರಿದ್ದರು.

ಕ್ರಿಯಾ ಯೋಜನೆ ಪ್ರಮುಖ ಅಂಶಗಳು

ಕ್ವಾಂಟಮ್ ಶಿಕ್ಷಣವನ್ನು ವಿವಿಧ ಹಂತದ ಶೈಕ್ಷಣಿಕ ವ್ಯವಸ್ಥೆಗಳಲ್ಲಿ ಅಳವಡಿಸುವುದು. ಐಐಎಸ್‌ಸಿ ಮುಂತಾದ ಅಗ್ರಗಣ್ಯ ಸಂಸ್ಥೆಗಳ ಸಹಕಾರದಲ್ಲಿ ಆಧುನಿಕ ಸಂಶೋಧನಾ ಸೌಕರ್ಯ ಸ್ಥಾಪಿಸುವುದು. ಕ್ವಾಂಟಮ್ ಕಂಪ್ಯೂಟಿಂಗ್, ಸಂವಹನ, ಕ್ರಿಪ್ಟೋಗ್ರಫಿ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಟಾರ್ಟ್‌ಅಪ್‌ಗಳು ಮತ್ತು ಕೈಗಾರಿಕೆಗಳಿಗೆ ಬೆಂಬಲ ನೀಡುವುದು ಕ್ರಿಯಾಯೋಜನೆಯ ಮುಖ್ಯಾಂಶಗಳಾಗಿವೆ ಎಂದು ಸಚಿವರು ತಿಳಿಸಿದರು.

ಕಾಡುಹಂದಿ ಬೇಟೆ ಆರೋಪಿಗಳ ಬಂಧನ

ಕುಣಿಗಲ್: ತಾಲ್ಲೂಕಿನ ಹುಲಿಯೂರುದುರ್ಗ ಹೋಬಳಿ ನಿಂಗಿಕೊಪ್ಪಲು ಅಂಚಿನಲ್ಲಿ ನಾಡಬಾಂಬ್ ಇಟ್ಟು ಹಂದಿ ಬೇಟೆಯಾಡಿದ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ನಾಗಮಂಗಲದ ಶಂಕರ್ ನಾಗ್ ಮತ್ತು ಇಬ್ಬರು ಬಾಲಕರು ಬಂಧಿತರು.

ಸೋಮವಾರ ರಾತ್ರಿ ಅರಣ್ಯ ಪ್ರದೇಶದ ಅಂಚಿನಲ್ಲಿರುವ ನಿಂಗಿಕೊಪ್ಪಲು ಗ್ರಾಮದ ಬಳಿ ಸ್ಫೋಟದ ಸದ್ದು ಕೇಳಿದ ವಲಯ ಅರಣ್ಯಾಧಿಕಾರಿ ಜಗದೀಶ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿದಾಗ ಕಾಡು ಹಂದಿ ಸತ್ತಿರುವುದು ಕಂಡಿದೆ. ಬೇಟೆಯಾಡಿರುವ ಶಂಕೆಯಿಂದ ಕ್ಯಾಮೆರಾ ಅಳವಡಿಸಿ ಕಾದು ಕುಳಿತಿದ್ದರು.

ಮಂಗಳವಾರ ಬೆಳಿಗ್ಗೆ ಕಾಡು ಹಂದಿಯನ್ನು ತೆಗೆದುಕೊಂಡು ಹೋಗಲು ಬಂದ ಮೂವರನ್ನು ವಶಕ್ಕೆ ಪಡೆದು, ಹುಲಿಯೂರುದುರ್ಗ ಪೊಲೀಸರ ವಶಕ್ಕೆ ನೀಡಿ, ದೂರು ದಾಖಲಿಸಿದ್ದರು.

ಪೊಲೀಸರು ಬಾಂಬ್ ನಿಷ್ಕ್ರಿಯ ದಳದ ಜತೆ ತನಿಖೆ ನಡೆಸಿ, ಅರಣ್ಯ ಅಂಚಿನಲ್ಲಿ ಬೇಟೆಯಾಡಲು ಅಡಗಿಸಿಟ್ಟಿದ್ದ 25 ನಾಡಬಾಂಬ್‌ಗಳನ್ನು ಪತ್ತೆಹಚ್ಚಿದ್ದಾರೆ.

'ಸರ್ಕಾರಿ ಶಿಕ್ಷಣ ಬಲವರ್ಧನೆಗೆ ಹೋರಾಟ ಅನಿವಾರ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ವಿಶ್ವವಿದ್ಯಾಲಯಗಳನ್ನು ನಿರ್ಲಕ್ಷಿಸುತ್ತಿರುವ ಸರ್ಕಾರ, ಖಾಸಗಿ ವಿಶ್ವವಿದ್ಯಾಲಯಗಳಿಗೆ ಆದ್ಯತೆ ನೀಡುತ್ತಾ ಬಡವರ ಮಕ್ಕಳನ್ನು ಉನ್ನತ ಶಿಕ್ಷಣದಿಂದ ದೂರ ಮಾಡುತ್ತಿದೆ' ಎಂದು ವಿಶ್ರಾಂತ ಕುಲಪತಿ ಪ್ರೊ. ಮುರಿಗೆಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಸಾರ್ವಜನಿಕ ಶಿಕ್ಷಣ ಉಳಿಸಿ, ಸರ್ಕಾರಿ ವಿಶ್ವವಿದ್ಯಾಲಯಗಳ ನಿರ್ವಹಣೆಗೆ ಸಮರ್ಪಕ ಅನುದಾನ ಹಾಗೂ ಮೂಲ ಸೌಲಭ್ಯಗಳಿಗಾಗಿ ಆಗ್ರಹಿಸಿ ಎಐಡಿಎಸ್‌ಒ ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣದಲ್ಲಿ ಆಯೋಜಿಸಿದ್ದ ವಿದ್ಯಾರ್ಥಿ ಸಮಾವೇಶದಲ್ಲಿ ಅವರು ಮಾತನಾಡಿದರು.

ಸಮಾವೇಶದಲ್ಲಿ ಭಿತ್ತಿ ಪತ್ರಗಳನ್ನು ಪ್ರದರ್ಶಿಸಲಾಯಿತು

'ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಕರ ನೇಮಕಾತಿ ನಡೆಯುತ್ತಿಲ್ಲ. ಹೊರಗುತ್ತಿಗೆ ನೌಕರರಿಗೆ ಹತ್ತು ತಿಂಗಳಿನಿಂದ ವೇತನ ಬಂದಿಲ್ಲ. ಹಂತ ಹಂತವಾಗಿ ಸರ್ಕಾರಿ ವಿಶ್ವವಿದ್ಯಾಲಯಗಳನ್ನು ಮುಚ್ಚಿ, ಖಾಸಗಿ ವಿಶ್ವವಿದ್ಯಾಲಯಗಳಿಗೆ ಆದ್ಯತೆ ನೀಡಲಾಗುತ್ತಿದೆ' ಎಂದು ದೂರಿದರು.

ವಿಶ್ರಾಂತ ಕುಲಪತಿ ಪ್ರೊ. ರಾಜಾಸಾಬ್ ಮಾತನಾಡಿ, 'ವಿವಿಧ ಹಂತಗಳಲ್ಲಿ ವಿಶ್ವವಿದ್ಯಾಲಯಗಳನ್ನು ವಿಭಜಿಸುತ್ತಾ, ಅಗತ್ಯ ನೆರವಿಲ್ಲದೇ, ಗುಣಮಟ್ಟದ ಬೋಧಕವರ್ಗದ ಕೊರತೆಯಿಂದ ಬಳಲುತ್ತಿವೆ' ಎಂದರು.

'ಸರ್ಕಾರಿ ವಿಶ್ವವಿದ್ಯಾಲಯಗಳು ಉಳಿಯಬೇಕಾದರೆ, ರೈತರು, ಕಾರ್ಮಿಕರು, ವಿದ್ಯಾರ್ಥಿಗಳು ಒಗ್ಗಟ್ಟಿನ ಹೋರಾಟ ಮಾಡಬೇಕಿದೆ' ಎಂದು ಅಭಿಪ್ರಾಯಪಟ್ಟರು.

ಎಐಡಿಎಸ್‌ಒ ಕೇಂದ್ರ ಮಂಡಳಿಯ ಪ್ರಧಾನ ಕಾರ್ಯದರ್ಶಿ ಶಿಬಾಷಿಸ್ ಪ್ರಹರಾಜ್ ಮಾತನಾಡಿ, 'ವಿಶ್ವವಿದ್ಯಾಲಯ ಜ್ಞಾನಾರ್ಜನೆಯ ತಾಣ. ಜ್ಞಾನದ ಪ್ರಸಾರ ಮತ್ತು ಅಭಿವೃದ್ಧಿ ವಿಶ್ವವಿದ್ಯಾಲಯಗಳ ಮುಖ್ಯ ಕೆಲಸ. ಆದರೆ ಇದು ಸಾಕಾರವಾಗದಿರುವುದು ಆತಂಕಕಾರಿ ಸಂಗತಿ' ಎಂದರು. ವಿದ್ಯಾರ್ಥಿಗಳು ಸಂಘಟಿತರಾಗಿ ಸಾರ್ವಜನಿಕ ಶಿಕ್ಷಣ ಉಳಿಸಲು, ವಿಶ್ವವಿದ್ಯಾಲಯಗಳನ್ನು ಬಲಪಡಿಸಲು ಹೋರಾಟ ನಡೆಸಬೇಕು' ಎಂದು ಕರೆ ನೀಡಿದರು.

ಎಐಡಿಎಸ್‌ಒ ರಾಜ್ಯ ಘಟಕದ ಅಧ್ಯಕ್ಷೆ ಅಶ್ವಿನಿ. ಕೆ. ಎಸ್ , ಕಾರ್ಯದರ್ಶಿ ಅಜಯ್ ಕಾಮತ್ ಕಚೇರಿ ಕಾರ್ಯದರ್ಶಿ ಮಹಾಂತೇಶ್ ಬೀಳೂರು ಉಪಸ್ಥಿತರಿದ್ದರು.

ಗೊತ್ತುವಳಿ ಮಂಡನೆ

ಬೆಂಗಳೂರು ವಿ.ವಿ ಆವರಣದಲ್ಲಿ ಅಭಿವೃದ್ಧಿಗಾಗಿ 400 ಮರಗಳನ್ನು ಕಡಿಯುತ್ತಿರುವುದು ಹಾಗೂ ಹಲವು ಕೋರ್ಸ್‌ಗಳನ್ನು ಮುಚ್ಚುತ್ತಿರುವುದನ್ನು ವಿರೋಧಿಸಿ ಹಾಗೂ ಕರ್ನಾಟಕದಲ್ಲಿ ದ್ವಿಭಾಷಾ ಸೂತ್ರವನ್ನು ಜಾರಿಗೊಳಿಸಲು ಆಗ್ರಹಿಸಿ ಗೊತ್ತುವಳಿಯನ್ನು ಸಮಾವೇಶದಲ್ಲಿ ಮಂಡಿಸಲಾಯಿತು.

ಸಾಲ ತೀರಿಸಲು ಕಳ್ಳತನಕ್ಕಿಳಿದ ಸಾಫ್ಟ್‌ವೇರ್ ಎಂಜಿನಿಯರ್

ಬೆಟ್ಟಿಂಗ್ ಗೀಳು; ಆಸ್ತಿ ಮಾರಾಟ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ₹25 ಲಕ್ಷ ಸಾಲ ಮಾಡಿದ್ದ ಮಗ; ಜಮೀನು ಮಾರಿದ ಅಪ್ಪ
- ಸಾಲ ತೀರಿಸಲಿಕ್ಕಾಗಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡಿದ ತಂದೆ
- ಬಿಡದ ಬೆಟ್ಟಿಂಗ್ ಚಟ

ಬೆಂಗಳೂರು: ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಲಕ್ಷಾಂತರ ರೂಪಾಯಿ ಕಳೆದುಕೊಂಡು ಸಾಲ ತೀರಿಸಲು ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿಯನ್ನು ಮಾಗಡಿ ರಸ್ತೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೂರ್ತಿ

ಹೊಂಗಸಂದ್ರ ನಿವಾಸಿ ಕೆ.ಎನ್. ಮೂರ್ತಿ (27) ಬಂಧಿತ ಆರೋಪಿ. ಆರೋಪಿಯಿಂದ ₹17 ಲಕ್ಷ ಮೌಲ್ಯದ 245 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಶಿವಮೊಗ್ಗದ ಆರೋಪಿ ಬಿಸಿಎ ಪಧವೀಧರನಾಗಿದ್ದು, ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ. ಬೇಗೂರಿನ ಹೊಂಗಸಂದ್ರದಲ್ಲಿ ವಾಸವಾಗಿದ್ದ. ಆನ್‌ಲೈನ್ ಬೆಟ್ಟಿಂಗ್ ಆಡುತ್ತಿದ್ದ. ಬೆಟ್ಟಿಂಗ್‌ನಿಂದ ಲಕ್ಷಾಂತರ ರೂಪಾಯಿ ಕಳೆದುಕೊಂಡಿದ್ದ. ಹೀಗಾಗಿ, ಸಾಲದ ಹೊರೆ ಹೆಚ್ಚಾಗಿತ್ತು. ಸಾಲ ತೀರಿಸಲು ನಗರದ ವಿವಿಧೆಡೆ ಕಳ್ಳತನ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಆರೋಪಿ ತಂದೆ ಅಣ್ಣಪ್ಪ ಶಿವಮೊಗ್ಗದಲ್ಲಿ ವಾಸವಾಗಿದ್ದರು. ಪುತ್ರ ಮಾಡಿದ್ದ ಸಾಲದಲ್ಲಿ ಸುಮಾರು ₹25 ಲಕ್ಷವನ್ನು ಊರಿನಲ್ಲಿದ್ದ ಜಮೀನು ಮಾರಾಟ ಮಾಡಿ ತೀರಿಸಿದ್ದರು. ಇನ್ನಷ್ಟು ಸಾಲ ತೀರಿಸಲು ನಗರಕ್ಕೆ ಬಂದು ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. ಆದರೂ, ಮಗನ ಆನ್‌ಲೈನ್ ಬೆಟ್ಟಿಂಗ್ ವ್ಯಾಮೋಹ ಕಡಿಮೆ ಆಗಿರಲಿಲ್ಲ ಎಂದು ಪೊಲೀಸರು ಹೇಳಿದರು.

'ಇತ್ತೀಚೆಗೆ ಬಿನ್ನಿಮಿಲ್ ಅಂಗಾಳಪರಮೇಶ್ವರಿ ದೇವಸ್ಥಾನದ ಬಳಿ ದೇವರ ದರ್ಶನಕ್ಕಾಗಿ ಸರದಿಯಲ್ಲಿ ನಿಂತಿದ್ದ ಮಹಿಳೆಯ ಸರ ಕಸಿದು ಪರಾರಿಯಾಗಿದ್ದ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಿದಾಗ 2022ರಿಂದಲೂ ರಾಜಗೋಪಾಲನಗರ, ಸುದ್ದಗುಂಟೆಪಾಳ್ಯ, ಆವಲಹಳ್ಳಿ ಹಾಗೂ ಕೋಣನಕುಂಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಗಳ್ಳತನ ಹಾಗೂ ಸರಗಳ್ಳತನ ಪ್ರಕರಣಗಳಲ್ಲಿ ಆರೋಪಿ ಭಾಗಿಯಾಗಿರುವುದು ಗೊತ್ತಾಗಿತ್ತು. ಕದ್ದ ಚಿನ್ನಾಭರಣವನ್ನು ಮಡಿವಾಳ, ಪರಪ್ಪನ ಅಗ್ರಹಾರ ಹಾಗೂ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಇರುವ ಚಿನ್ನಾಭರಣ ಅಂಗಡಿಗಳಲ್ಲಿ ಅಡವಿಟ್ಟು ಹಣ ಸಂಪಾದಿಸಿ ಬೆಟ್ಟಿಂಗ್ ಆಡುತ್ತಿದ್ದ' ಎಂದು ತನಿಖಾಧಿಕಾರಿಗಳು ಹೇಳಿದರು.

ಉದ್ಯೋಗ ವಾಣಿ

WAYANAMAC EDUCATION TRUST ®
DON BOSCO INSTITUTE OF MANAGEMENT STUDIES AND COMPUTER APPLICATIONS
(Recognised by Govt. of Karnataka, Affiliated to Bangalore University, Approved by AICTE New Delhi & Accredited by NAAC)
Mysore Road, Kumbalagodu, Bangalore-560074. Ph No. 91-80-28437027, E-Mail : careers.donbosco@gmail.com

APPLICATIONS ARE INVITED FOR THE POST OF
MBA Program Director, MCA Program Director, Research Head, Academic Director
Professors, Associate Professors & Assistant Professors
UG Programs: BBA, BCA, B Com | PG Programs : MBA, MCA, M Com
Qualification & Experience : As per AICTE, UGC Norms

-: NON TEACHING STAFF :-
- Head, Placement Office & Students support
- Head, HR
- Head, Admissions
- Head, Data Analytics
- Head, Digital Media
- Head, Brand Management
- Head, Systems & IT, Website Management
- Head, Office & Administration
- Head, Quality & Productivity
- Manager, HR
- Admission Coordinators & Counsellors
- Coordinator, Placement Office
- Data Analysts
- Social Media Specialist
- System Admin & IT Support
- Content Manager
- Physical Education Director (Female & Male)
- Program Managers
- Process Specialists

Qualification:
Any Degree with minimum 3 years experience in the relevant field. Candidates from Industry can also apply.

- Send your resume with copies of testimonials and recent colour passport size photo within 10 days by post to Principal.
- Candidates can also E-mail their profile with relevant details to careers.donbosco@gmail.com
- Salary Commensurate with Qualification & Experience. More weightage will be given for Ph.D. Degree holders.
- Preference will be given to SC/ST candidates.
- No TA/DA will be given for candidates appearing for interview.

Principal

ಕರ್ನಾಟಕ ಸರ್ಕಾರ
(ಆರ್ಥಿಕ ಇಲಾಖೆ)
ವಿತ್ತೀಯ ಕಾರ್ಯನೀತಿ ಸಂಸ್ಥೆ (ವಿಕಾಸಂ)
ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು – 560060
ದೂ: 080–26971000, ವೆಬ್‌ಸೈಟ್: www.fpibengaluru.karnataka.gov.in

ಸಂಖ್ಯೆ: FPI-PROC0ADVT/1/2025-ADMN-FPI ದಿನಾಂಕ: 08.07.2025

ಅಧಿಸೂಚನೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇರೆಗೆ **ಒಂದು ಸಿಸ್ಟಂ ಅಡ್ಮಿನಿಸ್ಟ್ರೇಟರ್ ಹುದ್ದೆಯ ನೇಮಕಾತಿಗಾಗಿ** ವಿತ್ತೀಯ ಕಾರ್ಯನೀತಿ ಸಂಸ್ಥೆ, ಆರ್ಥಿಕ ಇಲಾಖೆಯಿಂದ ಅರ್ಜಿಯನ್ನು ಕರೆಯಲಾಗಿದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ಹೆಚ್ಚಿನ ವಿವರ ಮತ್ತು ನಿಗದಿತ ನಮೂನೆಯ ಅರ್ಜಿಗಾಗಿ ವಿತ್ತೀಯ ಕಾರ್ಯನೀತಿ ಸಂಸ್ಥೆಯ **www.fpibengaluru.karnataka.gov.in** ವೆಬ್‌ಸೈಟ್ ಸಂಪರ್ಕಿಸುವುದು. ಸಂಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಯನ್ನು ಸಂಬಂಧಪಟ್ಟ ಅಗತ್ಯ ದಾಖಲೆಗಳೊಂದಿಗೆ **"ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ ಅಂಚೆ, ಕೆಂಗೇರಿ, ಬೆಂಗಳೂರು–560060"** ಗೆ ಖುದ್ದಾಗಿ ಅಥವಾ ಅಂಚೆ ಅಥವಾ ಇ–ಮೇಲ್ ವಿಳಾಸ: **director@fpibangalore.gov.in** ಮೂಲಕ **ದಿನಾಂಕ: 21.07.2025 ಸಂಜೆ 5.30 ರೊಳಗೆ** ಸಲ್ಲಿಸುವುದು.

ಸಹಿ/– ನಿರ್ದೇಶಕರ ಪರವಾಗಿ
ವಿತ್ತೀಯ ಕಾರ್ಯನೀತಿ ಸಂಸ್ಥೆ

DIPR/CP/YC/1708/2025-26

‘ಇಆರ್‌ಎಎಸ್‌ಆರ್’ ಪರೀಕ್ಷೆ ಯಶಸ್ವಿ

ನವದೆಹಲಿ (ಪಿಟಿಐ): ಜಲಾಂತರ್ಗಾಮಿ ನೌಕೆಗಳ ಮೇಲೆ ದಾಳಿ ನಡೆಸುವ ಶತ್ರುದೇಶಗಳನ್ನು ಬಹು ದೂರದಿಂದಲೇ ಹೊಡೆದುರುಳಿಸಬಲ್ಲ ಸಾಮರ್ಥ್ಯ ಹೊಂದಿರುವ ರಾಕೆಟ್‌ಗಳನ್ನು (ಇಆರ್‌ಎಎಸ್‌ಆರ್) ಭಾರತ ಅಭಿವೃದ್ಧಿಪಡಿಸಿದ್ದು, ಇದರ ಪ್ರಾಯೋಗಿಕ ಪರೀಕ್ಷೆ ಯಶಸ್ವಿಯಾಗಿ ನಡೆಯಿತು.

‘ಐಎನ್‌ಎಸ್ ಕವರತ್ತಿ’ ಯುದ್ಧನೌಕೆಯಿಂದ ಈ ರಾಕೆಟ್‌ಗಳ ಪ್ರಾಯೋಗಿಕ ಪರೀಕ್ಷೆ ನಡೆಸಲಾಯಿತು. ರಕ್ಷಣಾ ಸಚಿವ ರಾಜನಾಥ್ ಸಿಂಗ್ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಸಿಬ್ಬಂದಿ, ಸೇನಾ ಅಧಿಕಾರಿಗಳನ್ನು ಅಭಿನಂದಿಸಿದ್ದಾರೆ. ‘ಇಆರ್‌ಎಎಸ್‌ಆರ್’ ಭಾರತದ ನೌಕಾ ಪಡೆಯ ಶಸ್ತ್ರಾಸ್ತ್ರ ಬಲವನ್ನು ಮತ್ತಷ್ಟು ಹೆಚ್ಚಿಸಿದೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಪಘಾತ: 3 ವಿದ್ಯಾರ್ಥಿಗಳ ಸಾವು

ಕಡಲೂರು: ರೈಲಿಗೆ ಶಾಲಾ ವಾಹನ ಡಿಕ್ಕಿ ಗೇಟ್‌ಕೀಪರ್ ಅಮಾನತು, ಬಂಧನ

ಕಡಲೂರು(ತಮಿಳುನಾಡು) (ಪಿಟಿಐ): ಕಡಲೂರು ಮತ್ತು ಅಲಪ್ಪಕ್ಕಮ್ ನಡುವಿನ ರೈಲ್ವೆ ಲೆವೆಲ್ ಕ್ರಾಸಿಂಗ್ ವೊಂದರಲ್ಲಿ ಮಂಗಳವಾರ ಶಾಲಾ ವಾಹನವೊಂದು ಪ್ಯಾಸೆಂಜರ್ ರೈಲಿಗೆ ಡಿಕ್ಕಿ ಹೊಡೆದ ಪರಿಣಾಮ, ಮೂವರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.

ಶಾಲಾ ವಾಹನ ಚಾಲಕ ಮತ್ತು ಒಬ್ಬ ವಿದ್ಯಾರ್ಥಿ ಗಾಯಗೊಂಡಿದ್ದಾರೆ. ವಿದ್ಯಾರ್ಥಿಯನ್ನು ಕಡಲೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ, ಚಾಲಕನನ್ನು ಪುದುಚೇರಿಯಲ್ಲಿನ ಜಿಪ್‌ಮರ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ದಕ್ಷಿಣ ರೈಲ್ವೆ ತಿಳಿಸಿದೆ.

ರೈಲ್ವೆ ಕ್ರಾಸಿಂಗ್‌ನಲ್ಲಿ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಗೇಟ್‌ಕೀಪರ್ ಅವರನ್ನು ಅಮಾನತುಗೊಳಿಸಿದ್ದು, ಅವರನ್ನು ಬಂಧಿಸಲಾಗಿದೆ ಎಂದಿರುವ ದಕ್ಷಿಣ ರೈಲ್ವೆ, ‘ದುರದೃಷ್ಟಕರ ಘಟನೆ’ಗೆ ಕ್ಷಮೆಯಾಚಿಸಿದೆ.

ಈ ಅಪಘಾತ ಸಂಭವಿಸಿದ ವೇಳೆ, ವಾಹನದಲ್ಲಿ ನಾಲ್ವರು ವಿದ್ಯಾರ್ಥಿಗಳು ಇದ್ದರು.

‘ರೈಲು ಡಿಕ್ಕಿ ಹೊಡೆದ ರಭಸಕ್ಕೆ, ಶಾಲಾ ವಾಹನವು ರೈಲ್ವೆ ಕ್ರಾಸಿಂಗ್ ಗೇಟ್‌ನಿಂದ ದೂರಕ್ಕೆ ಹಾರಿ ಬಿದ್ದಿದೆ. ಅಪಘಾತ ಸಂಭವಿಸಿದ ನಂತರ, ಸ್ವಲ್ಪ ದೂರ ಚಲಿಸಿದ ಬಳಿಕ ರೈಲನ್ನು ಲೋಕೊಪೈಲಟ್ ನಿಲ್ಲಿಸಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ.

ಶಾಲಾ ವಾಹನದ ಭಾಗಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ದೃಶ್ಯಗಳು ಸುದ್ದಿವಾಹಿನಿಗಳಲ್ಲಿ ಪ್ರಸಾರವಾಗಿವೆ.

ವ್ಯಕ್ತಿಗೆ ವಿದ್ಯುತ್ ಆಘಾತ: ಅಪಘಾತ ಕಂಡು, ನೆರವಿಗೆ ಧಾವಿಸಿದ ಪ್ರತ್ಯಕ್ಷದರ್ಶಿಯೊಬ್ಬರು ವಿದ್ಯುತ್ ಪ್ರವಹಿಸುತ್ತಿದ್ದ ತಂತಿಯ ಸಂಪರ್ಕಕ್ಕೆ ಬಂದು ವಿದ್ಯುತ್ ಆಘಾತಕ್ಕೆ ಒಳಗಾಗಿದ್ದಾರೆ. ಅವರನ್ನು ಕೂಡ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಪರಿಹಾರ ಘೋಷಣೆ: ಮೃತಪಟ್ಟವರ ಕುಟುಂಬಗಳಿಗೆ ತಲಾ ₹5 ಲಕ್ಷ, ಗಂಭೀರವಾಗಿ ಗಾಯಗೊಂಡಿರುವವರ ಕುಟುಂಬಗಳಿಗೆ ತಲಾ ₹2.5 ಲಕ್ಷ ಹಾಗೂ ಸಣ್ಣಪುಟ್ಟ ಗಾಯ ಆಗಿರುವವರಿಗೆ ₹50 ಸಾವಿರ ನೀಡಲಾಗುವುದು ಎಂದು ರೈಲ್ವೆ ತಿಳಿಸಿದೆ. ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಕೂಡ ಮೃತರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ಘೋಷಿಸಿದ್ದಾರೆ. ಗಂಭೀರವಾಗಿ ಗಾಯಗೊಂಡವರಿಗೆ ₹1 ಲಕ್ಷ, ಸಣ್ಣ ಗಾಯಗಳಾಗಿರುವವರಿಗೆ ₹50 ಸಾವಿರ ಪರಿಹಾರ ನೀಡುವುದಕ್ಕೂ ಅವರು ಆದೇಶಿಸಿದ್ದಾರೆ.

ತಮಿಳುನಾಡಿನ ಕಡಲೂರು ಬಳಿ ಶಾಲಾವಾಹನವೊಂದು ರೈಲ್ವೆ ಕ್ರಾಸಿಂಗ್ ಗೇಟ್ ದಾಟಲು ಯತ್ನಿಸುತ್ತಿದ್ದ ವೇಳೆ ಪ್ಯಾಸೆಂಜರ್ ರೈಲೊಂದು ಡಿಕ್ಕಿ ಹೊಡೆದಿದೆ ಎನ್ನಲಾಗಿದ್ದು, ಡಿಕ್ಕಿಯ ರಭಸಕ್ಕೆ ಶಾಲಾವಾಹನ ನಜ್ಜುಗುಜ್ಜಾಗಿದೆ –ಪಿಟಿಐ ಚಿತ್ರ

ಅವಘಡ: ಭಿನ್ನ ವ್ಯಾಖ್ಯಾನಗಳು

ಶಾಲಾ ವಾಹನ ಮತ್ತು ರೈಲು ನಡುವೆ ಸಂಭವಿಸಿದ ಅಪಘಾತ ಕುರಿತಂತೆ ವಿಭಿನ್ನ ವ್ಯಾಖ್ಯಾನಗಳು ಕೇಳಿಬರುತ್ತಿವೆ.

- ‘ಬೆಳಿಗ್ಗೆ 7.45ರ ವೇಳೆಗೆ, ಕಡಲೂರು ಮತ್ತು ಅಲಪ್ಪಕ್ಕಮ್ ನಡುವೆ ಇರುವ ರೈಲ್ವೆ ಲೆವೆಲ್ ಕ್ರಾಸಿಂಗ್ ಗೇಟ್ ನಂ.170 ಅನ್ನು ದಾಟಲು ಶಾಲಾ ವಾಹನದ ಚಾಲಕ ಪ್ರಯತ್ನಿಸಿದ್ದಾನೆ. ಈ ವೇಳೆ, ವಿಲ್ಲುಪುರಂ–ಮೈಲಾಡುತುರೈ ಪ್ಯಾಸೆಂಜರ್ ರೈಲು (ಸಂಖ್ಯೆ 56813) ಶಾಲಾ ವಾಹನಕ್ಕೆ ಡಿಕ್ಕಿ ಹೊಡೆದಿದೆ’ ಎಂದು ದಕ್ಷಿಣ ರೈಲ್ವೆ ಪ್ರಕಟಣೆ ಹೇಳಿದೆ.
- ‘ಅಪಘಾತ ಸಂಭವಿಸಿದ ಸಂದರ್ಭದಲ್ಲಿ, ರೈಲ್ವೆ ಕ್ರಾಸಿಂಗ್ ಗೇಟ್ ಮುಚ್ಚಿದ ಸ್ಥಿತಿಯಲ್ಲಿ ಇತ್ತು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ’ ಎಂದೂ ಹೇಳಿದೆ.
- ‘ರೈಲ್ವೆ ಕ್ರಾಸಿಂಗ್‌ನ ಗೇಟ್ ತೆರೆದ ಸ್ಥಿತಿಯಲ್ಲಿಯೇ ಇತ್ತು’ ಎಂದು ಶಾಲಾ ವಾಹನ ಚಾಲಕ ಶಂಕರ್ ಹಾಗೂ ಗಾಯಗೊಂಡಿರುವ 12ನೇ ತರಗತಿ ವಿದ್ಯಾರ್ಥಿ ವಿಶ್ವೇಶ್ ಹೇಳಿದ್ದಾರೆ.
- ‘ಶಾಲೆ ತಲುಪುವುದು ತಡವಾಗುವುದನ್ನು ತಪ್ಪಿಸುವ ಸಲುವಾಗಿ ರೈಲ್ವೆ ಕ್ರಾಸಿಂಗ್ ಗೇಟ್ ಅನ್ನು ತೆರೆದು, ಹೋಗಲು ಅನುವು ಮಾಡಿಕೊಡುವಂತೆ ಶಾಲಾ ವಾಹನ ಚಾಲಕ ಒತ್ತಾಯಿಸಿದರು’ ಎಂದು ದಕ್ಷಿಣ ರೈಲ್ವೆ ಹೇಳಿದೆ.
- ‘ಗೇಟ್ ಕೀಪರ್ ತಪ್ಪಾಗಿ ಗೇಟ್ ತೆರೆದು ವಾಹನ ಚಲಿಸಲು ಅನುಮತಿ ನೀಡಿದ್ದಾರೆ. ಇದು, ನಿಯಮಗಳ ಹಾಗೂ ಶಿಷ್ಟಾಚಾರದ ಉಲ್ಲಂಘನೆ’ ಎಂದಿದೆ. ‘ಗೇಟ್ ಕೀಪರ್‌ನನ್ನು ಅಮಾನತುಗೊಳಿಸಲಾಗಿದ್ದು, ಆತನನ್ನು ಸೇವೆಯಿಂದ ವಜಾಗೊಳಿಸುವ ಕುರಿತ ಪ್ರಕ್ರಿಯೆ ಚಾಲನೆ ನೀಡಲಾಗಿದೆ. ಕ್ರಿಮಿನಲ್ ನಿರ್ಲಕ್ಷ್ಯಕ್ಕಾಗಿ ಎಫ್‌ಐಆರ್ ದಾಖಲಿಸಿ, ಆತನನ್ನು ಬಂಧಿಸಲಾಗಿದೆ’ ಎಂದೂ ದಕ್ಷಿಣ ರೈಲ್ವೆ ಹೇಳಿದೆ.

ಅಂಡರ್‌ಪಾಸ್–ವರ್ಷವಾದರೂ ಸಿಗದ ಅನುಮತಿ: ರೈಲ್ವೆ ಕ್ರಾಸಿಂಗ್ ಗೇಟ್ ನಂ. 170ರಲ್ಲಿ ಅಂಡರ್‌ಪಾಸ್ ನಿರ್ಮಾಣಕ್ಕೆ ದಕ್ಷಿಣ ರೈಲ್ವೆ ಮಂಜೂರಾತಿ ನೀಡಿದೆ. ಯೋಜನೆಯ ಪೂರ್ಣ ವೆಚ್ಚವನ್ನು ಕೂಡ ರೈಲ್ವೆ ಭರಿಸಲಿದೆ. ಆದರೆ, ಅಂಡರ್‌ಪಾಸ್ ನಿರ್ಮಾಣಕ್ಕೆ ಕಳೆದ ಒಂದು ವರ್ಷದಿಂದ ಜಿಲ್ಲಾಧಿಕಾರಿ ಅನುಮತಿ ನೀಡುತ್ತಿಲ್ಲ ಎಂದು ದಕ್ಷಿಣ ರೈಲ್ವೆ ಹೇಳಿದೆ.

ಸಂಕ್ಷಿಪ್ತ ಸುದ್ದಿ

‘ನ್ಯಾಯಾಂಗದಲ್ಲಿ ಹಸ್ತಕ್ಷೇಪ ಸಲ್ಲದು’

ಮುಂಬೈ (ಪಿಟಿಐ): ‘ನ್ಯಾಯಾಂಗವು ಕಾರ್ಯಾಂಗದ ಹಸ್ತಕ್ಷೇಪದಿಂದ ಸಂಪೂರ್ಣವಾಗಿ ಮುಕ್ತವಾಗಿರಬೇಕು ಎಂದು ಡಾ.ಬಿ.ಆರ್.ಅಂಬೇಡ್ಕರ್ ಬಯಸಿದ್ದರು’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಭೂಷಣ್ ರಾಮಕೃಷ್ಣ ಗವಾಯಿ ಅವರು ಅಭಿಪ್ರಾಯಪಟ್ಟರು.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಪದೋನ್ನತಿ ಹೊಂದಿದ್ದ ಗವಾಯಿ ಅವರಿಗೆ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮ ದಲ್ಲಿ ಅವರು ಮಾತನಾಡಿದರು.

‘ಶಾಂತಿ ಹಾಗೂ ಯುದ್ಧದ ಸಮಯದಲ್ಲಿಯೂ ದೇಶವನ್ನು ಒಗ್ಗಟ್ಟಿನಿಂದ ಇಡುವ ದೇಶದ ಸಂವಿಧಾನ ಶ್ರೇಷ್ಠತೆಯನ್ನು ನಾವೆಲ್ಲರೂ ನಂಬುತ್ತೇವೆ ಎಂದು ಅಂಬೇಡ್ಕರ್ ಹೇಳಿದ್ದರು. ಸಂವಿಧಾನವು ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗಕ್ಕೆ ಹಕ್ಕುಗಳನ್ನು ನೀಡಿದೆ. ಅಂಬೇಡ್ಕರ್ ಅವರ ಪ್ರಕಾರ, ನ್ಯಾಯಾಂಗವು ನಾಗರಿಕರ ಹಕ್ಕುಗಳ ರಕ್ಷಕ ಆಗಿದ್ದು, ಕಾವಲುನಾಯಿಯಂತೆ ಕೆಲಸ ಮಾಡಬೇಕು. ಸಂವಿಧಾನವು ಸ್ಥಿರವಾಗಿರಲು ಸಾಧ್ಯವಿಲ್ಲ,ಸದಾ ವಿಕಸನ ಗೊಳ್ಳುತ್ತಿರಬೇಕು ಎಂದು ಬಯಸಿದ್ದರು’ ಎಂದು ಗವಾಯಿ ತಿಳಿಸಿದರು.

ಬಾಂಬ್ ಸ್ಫೋಟ: ನಕ್ಸಲನ ಬಂಧನ

ಸುಕ್ಮಾ (ಪಿಟಿಐ): ಕಳೆದ ತಿಂಗಳು ಇಲ್ಲಿನ ಕಲ್ಲು ಕ್ವಾರಿಯೊಂದರಲ್ಲಿ ನಕ್ಸಲರು ಸ್ಫೋಟಿಸಿದ ಕಚ್ಚಾ ಬಾಂಬ್‌ನಿಂದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮೃತಪಟ್ಟಿದ್ದ ಪ್ರಕರಣದಲ್ಲಿ ಸೋಧಿ ಗಂಗಾ ಎಂಬ ನಕ್ಸಲನನ್ನು ಬಂಧಿಸಲಾಗಿದೆ.

₹244 ಕೋಟಿ ಬಿಡುಗಡೆ: ರಸ್ತೆಗಿಳಿದ ಲಾರಿಗಳು

ಒಂದನೇ ಪುಟದಿಂದ...

4,500 ಲಾರಿಗಳು ಪ್ರತಿ ತಿಂಗಳಿಗೆ 4.5 ಲಕ್ಷ ಟನ್‌ನಂತೆ ಐದು ತಿಂಗಳು ಸುಮಾರು 25 ಲಕ್ಷ ಟನ್ ಆಹಾರ ಧಾನ್ಯ ಸಾಗಣೆ ಮಾಡಿದ್ದವು. ₹250 ಕೋಟಿ ಬಿಡುಗಡೆ ಮಾಡಬೇಕಿತ್ತು.

ಗುತ್ತಿಗೆದಾರರ ಸಂಘದ ಬೇಡಿಕೆಗೆ ಸ್ಪಂದಿಸಿದ ಸರ್ಕಾರ, ಫೆಬ್ರುವರಿಯಿಂದ ಮೇ ತಿಂಗಳವರೆಗೂ ಹೆಚ್ಚುವರಿ 5ಕೆ.ಜಿ ಅಕ್ಕಿ ಖರೀದಿ ಹೊರತುಪಡಿಸಿ ಸಗಟು, ಚಿಲ್ಲರೆ, ಲಾಭಾಂಶ, ಸಾಗಾಣಿಕೆ ಶುಲ್ಕಗಳಿಗೆ ಅನುದಾನವನ್ನು ಅನ್ನಭಾಗ್ಯ ಯೋಜನೆ ಅಡಿ ಖಜಾನೆ–2 ತಂತ್ರಾಂಶದ ಮೂಲಕ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿಗೆ ಬಿಡುಗಡೆ ಮಾಡಿದೆ.

‘ಸರ್ಕಾರ ನಮ್ಮ ಬೇಡಿಕೆಗೆ ಸ್ಪಂದಿಸಿ ₹244.10 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಆಯಾ ಜಿಲ್ಲಾಧಿಕಾರಿ ಮೂಲಕ ಹಣ ಬಿಡುಗಡೆ ಮಾಡಲಾಗುತ್ತಿದೆ. ಬಾಕಿ ಹಣವನ್ನು ಎರಡು ದಿನದಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಸರ್ಕಾರ ಭರವಸೆ ನೀಡಿದೆ. ಹಾಗಾಗಿ ಮುಷ್ಕರ ವಾಪಸ್ ಪಡೆದಿದ್ದು, ಲಾರಿಗಳು ಡಿಪೋಗೆ ತೆರಳಿ ಲೋಡಿಂಗ್ ಕಾರ್ಯ ಆರಂಭಿಸಿವೆ. ಮುಷ್ಕರ ನಡೆಸುವುದೇ ನಮ್ಮ ಕೆಲಸವಲ್ಲ’ ಎಂದು ಲಾರಿ ಮಾಲೀಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಜಿ.ಆರ್.ಷಣ್ಮುಗಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಛೇರಿ, ನವನಗರ, ಪಿ.ಬಿ.ರಸ್ತೆ, ಹುಬ್ಬಳ್ಳಿ – 580 025.
ದೂರವಾಣಿ: (0836) 2223536. Website: www.hescom.co.in
E-mail: seepmc.hescom@gmail.com; eepmc1.hescom@gmail.com
(CIN No: U31401KA2002SGC030437)
No: HESCOM/SEE(PMC)/EE-P1/AEE-2/2025-26/CYS-3212 Date: 08-07-2025
ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)
ಅಧೀಕ್ಷಕ ಇಂಜಿನಿಯರ್ (ವಿ), ಪಿಎಮ್‌ಸಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಪೂರ್ಣ ಗುತ್ತಿಗೆ ಆಧಾರದಮೇಲೆ ಕೆಳಕಂಡ ಕಾಮಗಾರಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ.

Particulars	Bid Indent No.
ರಾಣೆಬೆನ್ನೂರ ಹಾಗೂ ಧಾರವಾಡದಲ್ಲಿರುವ ಹಾಲಿ ವಿದ್ಯುತ್ ಉಪಕೇಂದ್ರಗಳಿಂದ 11ಕೆವಿ ವಿದ್ಯುತ್ ಮಾರ್ಗಗಳ ನಿರ್ಮಾಣ.	HESCOM/2025-26/EL/ WORK_INDENT 892 & 893 (2 packages)

ಸದರಿ ಟೆಂಡರ್‌ಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್ www.kppp.karnataka.gov.in ರಲ್ಲಿ ದಿನಾಂಕ: 09.07.2025 ನಂತರ ಪಡೆಯಬಹುದು.
ಅಧೀಕ್ಷಕ ಇಂಜಿನಿಯರರು (ವಿ), (ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ.
ವಾಸಾಸಂಇ/ಧಾ/ದಿಶಾ/399/2025–26

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ
ನಂ.24, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು – 560024, ಫೋನ್ ನಂ. . 8431235867 / 8431235858
ಇ–ಮೇಲ್ : : ifablimited@gmail.com, ವೆಬ್‌ಸೈಟ್ :-www.ifabindia.org
No.IFAB/2025-26/SE0024/CALL-3 Date: 21.06.2025
ಅಂತರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ, ಬೆಂಗಳೂರು ಸಂಸ್ಥೆಯ ಟೆಂಡರ್ ಪ್ರಕಟಣೆ
ಅಂತರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ, ಬೆಂಗಳೂರು ಸಂಸ್ಥೆಗೆ RIDF ಯೋಜನೆಯಡಿ ಮೂಲಸೌಕರ್ಯ ಬಲಪಡಿಸಲು, ಯೋಜನೆಯ ಯಶಸ್ವಿ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ ಯೋಜನಾ ಸಂಯೋಜನಾ ಸಲಹಾ (ಪಿಸಿಸಿ) ಸೇವೆ ಪಡೆಯಲು ಆಸಕ್ತಿಯುಳ್ಳ, ವಹಿವಾಟುದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ವಿವರ ಮತ್ತು ದಾಖಲೆಗಳು ದಿ:21.06.2025 ರಿಂದ ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಮಾತ್ರ ಲಭ್ಯವಿರುತ್ತದೆ. ಟೆಂಡರ್ ಸಲ್ಲಿಸಲು ದಿ: 18.07.2025 ಸಂಜೆ 5.00 ಗಂಟೆ ಕೊನೆಯ ದಿನಾಂಕ ಆಗಿರುತ್ತದೆ.
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ವಾ.ಸಾ.ಸಂ.ಇ/ವಾಪ್ರ/1703/ಎಸ್‌ಎಸ್‌ಸಿ/2025–26

ಪುರಸಭಾ ಕಾರ್ಯಾಲಯ, ಬೊಮ್ಮಸಂದ್ರ
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560 099
ಸ್ವಚ್ಛ ಭಾರತ
ಫೋನ್: 080–27834655, E-Mail: itstaff_ulb_bommasandra@yahoo.com
ಸಂಖ್ಯೆ:TMCB/ENG/MF/Tender03/2025-26 ದಿನಾಂಕ: 08.07.2025
ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಕೆಡಬ್ಲ್ಯೂರ ನಿಬಂಧನೆಗಳಂತೆ ಟೆಂಡರ್ ಆಹ್ವಾನಿಸಲಾಗಿದೆ)
ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯಲ್ಲಿ ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯಲ್ಲಿ 2025–26ನೇ ಸಾಲಿನ ಪುರಸಭಾ ನಿಧಿ, 2025–26ನೇ ಸಾಲಿನ ಎಸ್.ಎಫ್.ಸಿ, ಮುಕ್ತನಿಧಿಯಡಿ ಕೈಗೊಳ್ಳಲು ಉದ್ದೇಶಿಸಿರುವ 05 ಕಾಮಗಾರಿಗಳ ಒಟ್ಟು ಮೊತ್ತ ರೂ. 29.89 ಲಕ್ಷಗಳಿಗೆ ಐಟಂವಾರು ಮತ್ತು ಕೆ.ಪಿ.ಪಿ ಪೋರ್ಟಲ್ ಏಕಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಕೆ.ಪಿ.ಪಿ ಪೋರ್ಟಲ್‌ನ ವೆಬ್‌ಸೈಟ್: https://www.kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು.
ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.07.2025ರ 17:00 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: 17.07.2025ರ 17:30 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ itstaff_ulb_bommasandra@yahoo.com ಅಥವಾ ಪುರಸಭೆಯ ಕಿರಿಯ ಅಭಿಯಂತರರನ್ನು ಸಂಪರ್ಕಿಸುವುದು.
ಸಹಿ/– ಆಡಳಿತಾಧಿಕಾರಿಗಳು/ ಉಪವಿಭಾಗಾಧಿಕಾರಿಗಳು ಪುರಸಭೆ, ಬೊಮ್ಮಸಂದ್ರ.
ವಾಸಾಸಂಇ/ವಾಪ್ರ/ಜಿಎ/1700/2025–26
ಸಹಿ/– ಮುಖ್ಯಾಧಿಕಾರಿ ಕೆ.ಎಂ.ಎ.ಎಸ್. ಶ್ರೇಣಿ–1 ಪುರಸಭೆ, ಬೊಮ್ಮಸಂದ್ರ.

ನಗರ ಸಭೆಕಾರ್ಯಾಲಯ, ಬಾಗಲಕೋಟ–587103
Post Box No.19 STD: 08354 :235011 Website:www.bagalkotecity.gov.in
FAX No: 235732, Help Line: 235792 E-mailD: itstaff_ulb_bagalkote@yahoo.co.in.
ಜಿಲ್ಲಾ: ಬಾಗಲಕೋಟ) (ಕರ್ನಾಟಕ ರಾಜ್ಯ
ಕ್ರ.ಸಂ: ನಸಬಾ/ಲೋ.ವಿ/SFC 15th/TND/2025–26/348 ದಿನಾಂಕ:07 –07–2025
ಟೆಂಡರ್ ಪ್ರಕಟಣೆ Karnataka Public Procurement Portal ಮುಖಾಂತರ https://kppp.karnataka.gov.in
ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟ ನಗರಸಭೆ ವ್ಯಾಪ್ತಿಯಲ್ಲಿ ಸನ್ 2025–26 ನೇ ಸಾಲಿನ 15ನೇ ಹಣಕಾಸುಆಯೋಗ, ಎಸ್‌ಎಫ್ ಸಿ ಮುಕ್ತನಿಧಿ, ಎಸ್ ಸಿ ಪಿ & ಟಿ ಎಸ್ ಪಿ,7.25%,5% ಹಾಗೂ ಸ್ಥಳಿಯ ಅನುದಾನದಡಿಯ ಎಸ್ ಸಿ ಪಿ & ಟಿ ಎಸ್ ಪಿ,7.25%,5% ಅನುದಾನದಡಿಯಲ್ಲಿ ಈ ಕೆಳಗೆ ನಮೂದಿಸಿದ ಅಭಿವೃದ್ಧಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಹಾಗೂ Karnataka Public Procurement Portal ನಲ್ಲಿ ನೋಂದಾಯಿತ ಅರ್ಹಅಧಿಕೃತ ಗುತ್ತಿಗೆದಾರರಿಂದ Standard Tender Documents Kw-1& 2 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕೆ (ತಿದ್ದುಪಡಿ) ಅಧಿನಿಯಮ 2016 ಗೆಜೆಟ್‌ಅಧಿಸೂಚನೆ ದಿನಾಂಕ : 29.06.2017ರನ್ವಯ ಟೆಂಡರನ್ನುಆಹ್ವಾನಿಸಲಾಗಿದ್ದು, ವಿವರ ಕೆಳಗಿನಂತಿರುತ್ತದೆ.

1	DMA/2025 -26/WS/WORK_INDENT44127
2	DMA/2025 -26/WS/WORK_INDENT44130
3	DMA/2025 -26/WS/WORK_INDENT44135
4	DMA/2025 -26/OW/WORK_INDENT44137
5	DMA/2025 -26/WS/WORK_INDENT44138
6	DMA/2025 -26/OW/WORK_INDENT44139
7	DMA/2025 -26/OW/WORK_INDENT44141
8	DMA/2025 -26/OW/WORK_INDENT44174
9	DMA/2025 -26/OW/WORK_INDENT44176
10	DMA/2025 -26/OW/WORK_INDENT44179
11	DMA/2025 -26/RD/WORK_INDENT44181
12	DMA/2025 -26/RD/WORK_INDENT44182
13	DMA/2025 -26/RD/WORK_INDENT44183
14	DMA/2025 -26/RD/WORK_INDENT44185
15	DMA/2025 -26/RD/WORK_INDENT44187
16	DMA/2025 -26/RD/WORK_INDENT44189
17	DMA/2025 -26/RD/WORK_INDENT44191
18	DMA/2025 -26/EL/WORK_INDENT44193
19	DMA/2025 -26/EL/WORK_INDENT44194
20	DMA/2025 -26/EL/WORK_INDENT44196
21	DMA/2025 -26/OW/WORK_INDENT44197
22	DMA/2025 -26/OW/WORK_INDENT44198
23	DMA/2025 -26/OW/WORK_INDENT44199
24	DMA/2025 -26/OW/WORK_INDENT44200
25	DMA/2025 -26/OW/WORK_INDENT44201
26	DMA/2025 -26/OW/WORK_INDENT44202
27	DMA/2025 -26/OW/WORK_INDENT44205
28	DMA/2025 -26/OW/WORK_INDENT44212
29	DMA/2025 -26/RD/WORK_INDENT44217
30	DMA/2025 -26/OW/WORK_INDENT44220
31	DMA/2025 -26/OW/WORK_INDENT44222
32	DMA/2025 -26/OW/WORK_INDENT44224
33	DMA/2025 -26/OW/WORK_INDENT44227
34	DMA/2025 -26/EL/WORK_INDENT44235
35	DMA/2025 -26/OW/WORK_INDENT44238

ಹೀಗೆ ಒಟ್ಟು ರೂ. 355.49 ಲಕ್ಷಗಳ ಕಾಮಗಾರಿಗಳಿರುತ್ತವೆ.
ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ದಲ್ಲಿ ಅಥವಾ ಈ ಕಛೇರಿಯ ತಾಂತ್ರಿಕ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.
7)Last date for submission of bid throughKarnataka Public Procurement Portal before : 05-08-2025At 16.30 hours.
8)Opening of Technicalbid bids on or after : 07-08-2025at 11.30 AM
9)Opening of Financial bidis on or after : 11-08-2025at 11.30 AM
ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು ನಗರಸಭೆ, ಬಾಗಲಕೋಟ
ಸಹಿ/–ಪೌರಾಯುಕ್ತರು, ನಗರಸಭೆ, ಬಾಗಲಕೋಟ
DIPR/BGK/RO-NO-157/KSMCA/2025-26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
#49, ಈಸ್ಟ್ ವಿಂಗ್, 4ನೇ & 5ನೇ ಮಹಡಿ, ಖನಿಜ ಭವನ ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001
Phone No.: 080-22265383
ಸಾರ್ವಜನಿಕ ಪ್ರಕಟಣೆ
ವಿಷಯ: ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆಯಾದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಜಾಲತಾಣ ಮರು ವಿನ್ಯಾಸಗೊಂಡಿರುವ ಬಗ್ಗೆ.
ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕೆಐಎಡಿಬಿ ಹಳೆ ಜಾಲತಾಣ ವೆಬ್‌ಸೈಟ್ http://kiadb.in/ ಅನ್ನು ಮರು ವಿನ್ಯಾಸಗೊಳಿಸಿದ್ದು ಮತ್ತು ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರ (ಕೆಎಸ್‌ಡಿಸಿ)ಗೆ ಯಶಸ್ವಿಯಾಗಿ ಹೊಂದಾಣಿಕೆ ಮಾಡಲಾಗಿದೆ. ದಿನಾಂಕ: 07.07.2025 ರಿಂದ ಹೊಸ ಜಾಲತಾಣ https://kiadb.karnataka.gov.inವನ್ನು ಬಳಕೆ ಮಾಡಬಹುದಾಗಿದೆ.
ಸಹಿ/–
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ & ಕಾರ್ಯನಿರ್ವಾಹಕ ಸದಸ್ಯರು ಕೆಐಎಡಿಬಿ, ಬೆಂಗಳೂರು
ಡಿಐಪಿಆರ್/ಸಿಪಿ/1712/ಸಿಸಿಎಲ್/2025–26

ಕರ್ನಾಟಕ ಸರ್ಕಾರ
ಜಿಲ್ಲಾ ನಗರಾಭಿವೃದ್ಧಿಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.
ದೂ.ಸಂಖ್ಯೆ:08172–234839 E-mail: pdhassandudc@gmail.com
ನಂ:ಮುನಿಸಿ(2)/ಸಿ.ಆರ್/69/2025–26 ದಿನಾಂಕ: 07–07–2025
: ಟೆಂಡರ್ ಪ್ರಕಟಣೆ :(ಕೆ.ಪಿ.ಪಿ.ಪೋರ್ಟಲ್ ಇಂಡೆಂಟ್ ನಂ.ಡಿಎಂಎ/2025–26/ಎಸ್.ಇ 5592)
ಹಾಸನ ಜಿಲ್ಲೆಯ ಹಾಸನ ಮಹಾನಗರ ಪಾಲಿಕೆ ವ್ಯಾಪಿಯಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಬೀದಿ ದೀಪಗಳ ಬದಲಾಗಿ ಇಂಧನ ಉಳಿತಾಯವಾಗುವ ಎಲ್.ಇ.ಡಿ. ದೀಪಗಳನ್ನು ಹಾಗೂ ಕೇಂದ್ರೀಕೃತ ನಿಯಂತ್ರಣ ವ್ಯವಸ್ಥೆಯನ್ನು (ಸಿ.ಸಿ.ಎಂ.ಎಸ್) ಅಳವಡಿಸುವ ಸಂಬಂಧ ಅಗತ್ಯ ವಿಸ್ತೃತಾ ಯೋಜನಾ ವರದಿಯನ್ನು (ಡಿ.ಪಿ.ಆರ್.) ತಯಾರಿಸಲು ಟ್ರಾನ್ಸಾಕ್ಷನ್ ಅಡ್ವೈಸರ್ ನೇಮಕಾತಿ ಮಾಡಿಕೊಳ್ಳಲು ಆಸಕ್ತಿಯುಳ್ಳ ನೋಂದಾಯಿತ ಅರ್ಹ ಸಂಸ್ಥೆಗಳಿಂದ ಟೆಂಡರ್ ಅಹ್ವಾನಿಸಿದೆ. ವಿವರ ಕೆಳಕಂಡಂತಿದೆ:– ಕ್ರ.ಸಂ.1)ವಿವರ: 1.ಟೆಂಡರ್‌ನ ಪೂರ್ವಭಾವಿ ಸಭೆ ದಿನಾಂಕ 10–7–2025 ರ ಬೆಳಿಗ್ಗೆ:11.00ಗಂಟೆಗೆ 2.ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ 08–08–2025ರ ಸಂಜೆ:5.30ಗಂಟೆಗೆ 3.ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಅರ್ಹತೆಯ ಬಿಡ್) ದಿನಾಂಕ 11–08–2025ರ ಬೆಳಿಗ್ಗೆ:11.00ಗಂಟೆಗೆ 4.ಇ.ಎಂ.ಡಿ. ಮೊತ್ತ ರೂ.2,00,000–00 ಟೆಂಡರ್ ಮುಂದೂಡಿಕೆ ಬಗ್ಗೆ ಮಾಹಿತಿಗಳಿದ್ದಲ್ಲಿ ಕೆ.ಪಿ.ಪಿ. ಪೋರ್ಟಲ್ ಮೂಲಕ ಪ್ರಚುರಪಡಿಸ ಲಾಗುವುದು. ಯಾವುದೇ ದಿನಪತ್ರಿಕೆ ಪ್ರಕಟಣೆ ಇರುವುದಿಲ್ಲ. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ.ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ kppp.gov.in ನಲ್ಲಿರುವ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಕುರಿತು ಹೆಚ್ಚಿನ ಮಾಹಿತಿಗಳನ್ನು ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. (ಮಾನ್ಯ ಜಿಲ್ಲಾಧಿಕಾರಿಯವರ ಕಚೇರಿ ಟಿಪ್ಪಣಿ ಅನುಮೋದನೆಯಂತೆ)
ಸಹಿ/–ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿಕೋಶ, ಹಾಸನ
ವಾಸಾಸಂಇ/ಹಿಸನಿ/ಹಾಸನ/308/ಕೆಎಸ್‌ಎಂಸಿಎ/2025–26

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಿಭಾಗ, 5ನೇ ಮಹಡಿ, ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560 001.
ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಲಯ, ಬೆಂಗಳೂರು, ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವೃತ್ತ, ಬೆಂಗಳೂರು, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಿಭಾಗ, ಬೆಂಗಳೂರು ಹಾಗೂ ಇದರ ಅಧೀನದಲ್ಲಿ ಬರುವ ಗುಣ ಭರವಸೆ ಉಪವಿಭಾಗ ಕಛೇರಿಗಳಾದ ಲೋಕೋಪಯೋಗಿ ಇಲಾಖೆ, ಗುಣ ಭರವಸೆ ಉಪವಿಭಾಗ ಬೆಂಗಳೂರು, ಕೋಲಾರ, ಚಿತ್ರದುರ್ಗ, ಶಿವಮೊಗ್ಗ ಹಾಗೂ ವಿಶೇಷ ಗುಣ ಭರವಸೆ ಉಪವಿಭಾಗ ತುಮಕೂರು ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಪಡೆಯಲು, ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ಮತ್ತು ಕಾರ್ಮಿಕ ಇಲಾಖೆಯಿಂದ ಪರವಾನಗಿ ಹೊಂದಿರುವ ನೋಂದಾಯಿತ ಅರ್ಹ ಏಜೆನ್ಸಿ/ಸಂಸ್ಥೆಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಮಾನವ ಸಂಪನ್ಮೂಲ ಪೂರೈಕೆಗಾಗಿ ದಿನಾಂಕ: 09.07.2025 ರಂದು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದ್ದು, ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ.

1	Supply of Lab Technician, Computer Operator, Driver and Lab Assistant for the Offices of QA Zone, QA Circle, Bengaluru QA Division, Bengaluru and QA Subdivisions Bengaluru, Tumkur Spl, Kolar, Chitradurga & Shivamogga. (PWD/2025-26/ SE0380)	ಅಂದಾಜು ಮೊತ್ತ: ರೂ.49.78 ಲಕ್ಷಗಳು.	ಇಎಂಡಿ: ರೂ.1.00 ಲಕ್ಷಗಳು ಮಾತ್ರ.

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ತೆರೆಯುವ ದಿನಾಂಕ: 09.07.2025. 2) ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: 16.07.2025 & ಸಮಯ: ಸಂಜೆ 4.30 ಗಂಟೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: 17.07.2025 ಸಂಜೆ 5.00 ಗಂಟೆ ಆಗಿರುತ್ತದೆ. 4) ಆರ್ಥಿಕ ಬಿಡ್‌ಗಳನ್ನು ತೆರೆಯುವುದು ತಾಂತ್ರಿಕ ಬಿಡ್‌ಗಳ ಅನುಮೋದನೆಯ ನಂತರ. 5) ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ https://kppp.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋ.ಇ. ಗುಣ ಭರವಸೆ ವಿಭಾಗ, ಬೆಂಗಳೂರು
ವಾಸಾಸಂಇ/ವಾಪ್ರ/1693/ಎಂಎಎ/25–26

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816–2281105 Email:eemitmk@gmail.com
ಐ.ಎಫ್.ಟಿ ಸಂಖ್ಯೆ.04/2025–26 KW-3 & KW-4, (ದ್ವಿ ಲಕೋಟೆ)
ದಿನಾಂಕ:30.06.2025 ಕಾರಿಜಾಂಡಮ್ ನಂ–01/2025–26
ದಿನಾಂಕ: 04.07.2025
ಮುಂದೂಡಲಾದ ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 04.07.2025
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2025–26ನೇ ಸಾಲಿನ ಲೆಕ್ಕ ಶೀರ್ಷಿಕೆ: PMKSY-HKKP-SMI, 4711– ಪ್ರವಾಹ ನಿಯಂತ್ರಣ–ಸಣ್ಣ ಕಾಮಗಾರಿಗಳು ಮತ್ತು 4702–ಅಣೆಕಟ್ಟು ಮತ್ತು ಪಿಕಪ್ ಪ್ರಧಾನ ಕಾಮಗಾರಿಗಳು ಅಡಿಯಲ್ಲಿ ಅನುಮೋದನೆ ಗೊಂಡಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೆ.ಪಿ.ಪಿ.ಪಿ ಪೋರ್ಟಲ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 04/2025–26, ದಿನಾಂಕ: 30–06–2025 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ https://kppp.karnataka.gov.in/ ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:
1. ಟೆಂಡರ್ ಪ್ರಕಟಣೆಯನ್ನು ದಿನಾಂಕ: 03–07–2025 ರಂದು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. 2. ಪ್ರಿ.ಬಿಡ್ ಮೀಟಿಂಗ್‌ನ್ನು ದಿನಾಂಕ: 11–07–2025 ಬೆಳಗ್ಗೆ 11.00 ಗಂಟೆಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವೃತ್ತ, ಬೆಂಗಳೂರುರವರ ಕಛೇರಿಯಲ್ಲಿ ನಡೆಸಲಾಗುವುದು. 3. ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ: 11–07–2025 ಸಾಯಂಕಾಲ 4.00ಗಂಟೆಯವರೆಗೆ ಸ್ವೀಕರಿಸಲಾಗುವುದು. 4. ಗುತ್ತಿಗೆದಾರರಿಂದ ಟೆಂಡರ್‌ನ್ನು “ಕೆ.ಪಿ.ಪಿ.ಪಿ” ಪೋರ್ಟಲ್ ಮೂಲಕ ದಿನಾಂಕ: 19–07–2025 ಸಾಯಂಕಾಲ 5.00 ಗಂಟೆಯವರೆಗೆ ಸ್ವೀಕರಿಸಲಾಗುವುದು. 5. ತಾಂತ್ರಿಕ ಬಿಡ್ಡನ್ನು ದಿನಾಂಕ: 21–07–2025 ಸಾಯಂಕಾಲ 5.05 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.
DIPR/TUM/184/KSMCA/2025-26

ಕರ್ನಾಟಕ ಸರ್ಕಾರ
ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯ ಕೋಶ)
ನಂ.8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560052
ಸಂಖ್ಯೆ: ಜಿ/ಎನ್/121/ಇ–ಟೆಂಡರ್ ಬೋಟ್ ಕೀಪರ್/25–26 ದಿನಾಂಕ: 08.07.2025
ಟೆಂಡರ್ ಪ್ರಕಟಣೆ
2025–26ನೇ ಸಾಲಿನ ಎನ್.ಸಿ.ಸಿ ಇಲಾಖೆಯಲ್ಲಿ ಖಾಲಿಯಿರುವ 03Xಬೋಟ್ ಕೀಪರ್ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಲು ಕರ್ನಾಟಕ ಸರ್ಕಾರದ ಕೆಪಿಪಿಪಿ–ಟೆಂಡರ್ ಪೋರ್ಟಲ್‌ನಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಟೆಂಡರ್ ವಿವರಗಳು https://kppp.karnataka.gov.in ವೆಬ್‌ಸೈಟ್‌ನಲ್ಲಿ ದಿನಾಂಕ 07.07.2025 ರಿಂದ ಲಭ್ಯವಿದ್ದು, kppp-portal ಮೂಲಕ ಟೆಂಡರ್ ಸಲ್ಲಿಸಲು 18.07.2025 ಕೊನೆಯ ದಿನಾಂಕವಾಗಿರುತ್ತದೆ. ಟೆಂಡರ್ ಸಂಖ್ಯೆ : NCC/2025-26/SE0007
ಸಹಿ/– (ಮಲ್ಲಿನಾಥ), ಆಡಳಿತಾಧಿಕಾರಿಗಳು
ಎನ್.ಸಿ.ಸಿ ಉಪಮಹಾನಿರ್ದೇಶಕರ ಪರವಾಗಿ
ವಾ.ಸಾ.ಸಂ.ಇ/ವಾಪ್ರ/1695/ಆಕಾರ್/2025–26

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು–570017, ದೂರವಾಣಿ ಸಂಖ್ಯೆ: 0821–2544963
ಇ–ಮೇಲ್ ಐಡಿ: gmit@cescmysore.org, ವೆಬ್‌ಸೈಟ್: www.cescmysore.org
ಸಂಖ್ಯೆ: ಚಾವಿಸನಿನಿ/ಪ್ರವ್ಯ(ಐಟಿ & ಎಂಐಎಸ್)/ಉಪ್ರವ್ಯ(ಖರೀದಿ)/ಸಪ್ರವ್ಯ(ಯೋ–3)/2025–26/10256 ದಿನಾಂಕ: 08.07.2025
ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ) Call-5
ಚಾ.ವಿ.ಸ.ನಿ.ನಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಅಲ್ಪಾವಧಿ ಮರು ಟೆಂಡರ್‌ನ್ನು ಆಹ್ವಾನಿಸಿದೆ.

ವಿಷಯ	ಟೆಂಡರ್ ಸಂಖ್ಯೆ	MW ನಲ್ಲಿ ಒಟ್ಟು ಫೀಡರ್ ಸೌರ ಸ್ಥಾವರ ಸಾಮರ್ಥ್ಯ
ಪಿ.ಎಮ್.ಕುಸುಮ್ ಕಾಂಪೊನೆಂಟ್ ಸಿ ಯೋಜನೆ –ಫೀಡರ್ ಮಟ್ಟದ ಸೌರೀಕರಣದ ಅಡಿಯಲ್ಲಿ 25 ವರ್ಷಗಳ ಕಾಲ RESCO ಮೋಡ್ ಮೂಲಕ ಚಾವಿಸನಿನಿ ವ್ಯಾಪ್ತಿಯಲ್ಲಿ ಒಟ್ಟು 17 ಉಪ–ಕೇಂದ್ರ (55) ಮಟ್ಟದಲ್ಲಿ ಆಯ್ದ ಕೃಷಿ ಫೀಡರ್‌ಗಳ ಸೌರೀಕರಣ.	CESC/IT&MIS/PM-KUSUM-C/2025-26/246-Call - 5	65.00

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 09.07.2025 ರ ನಂತರ ಪಡೆಯಬಹುದಾಗಿದೆ ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91–8046010000, +91–8068948777 ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912
ಸಹಿ/– ಪ್ರಧಾನ ವ್ಯವಸ್ಥಾಪಕರು ಐ.ಟಿ & ಎಂ.ಐ.ಎಸ್. ಚಾವಿಸನಿನಿ, ಮೈಸೂರು
ವಾಸಾಸಂಇ/ಮೈಸೂರು/601/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಆಯುಕ್ತರ ಕಾರ್ಯಾಲಯ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18, ದೂರವಾಣಿ:26709689/ 26706775, Email: endowmentcommissioner@gmail.com.
ಸಂಖ್ಯೆ: HRICE-ADM0ADM8/180/2024/E-1426188 ದಿನಾಂಕ: 08.07.2025
ಪ್ರಕಟಣೆ
ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಸೆಕ್ಷನ್ 25 ರನ್ವಯ ರಾಜ್ಯದಲ್ಲಿನ ‘ಎ’ ಪ್ರವರ್ಗದ ಈ ಕೆಳಕಂಡ 4 ಅಧಿಸೂಚಿತ ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಕುರಿತು ಆಸಕ್ತ ಭಕ್ತಾಧಿಗಳು/ ಸಾರ್ವಜನಿಕರಿಂದ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಲು ತಿಳಿಸಿ ದಿನಾಂಕ: 20.02.2020, 30.04.2020, 02.06.2020, 21.01.2021, 17.01.2022, 19.01.2021, 02.03.2023 ಮತ್ತು ದಿನಾಂಕ: 06.11.2024 ರಂದು ಪ್ರಕಟಣೆ ಹೊರಡಿಸಲಾಗಿದ್ದು, ಆದರೆ ಕೆಲವು ದೇವಾಲಯಗಳಿಗೆ ವ್ಯವಸ್ಥಾಪನಾ ಸಮಿತಿ ರಚಿಸುವಂತೆ ಕೋರಿ ಹೊಸದಾಗಿ ಹಲವಾರು ಮನವಿಗಳು ಸ್ವೀಕೃತವಾಗುತ್ತಿರುವುದರಿಂದ ಸದರಿ ಅಧಿಸೂಚಿತ ಸಂಸ್ಥೆ/ ದೇವಾಲಯಗಳಿಗೆ ವ್ಯವಸ್ಥಾಪನಾ ಸಮಿತಿಗಳನ್ನು ರಚಿಸಲು ಅರ್ಜಿಗಳನ್ನು ಆಹ್ವಾನಿಸಿ ಮರು ಪ್ರಕಟಣೆಯನ್ನು ಹೊರಡಿಸಲು ದಿನಾಂಕ: 27.03.2025 ರಂದು ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 8ನೇ ಸಭೆಯ ವಿಷಯ ಸೂಚಿ ಸಂಖ್ಯೆ: 16(ಉ) ರಂತೆ ತೀರ್ಮಾನಿಸಲಾಗಿರುವಂತೆ ಹಾಗೂ ರಾಜ್ಯ ಧಾರ್ಮಿಕ ಪರಿಷತ್ತಿನ ಅಧ್ಯಕ್ಷರಿಂದ ಅನುಮೋದನೆಗೊಂಡಿರುವಂತೆ.

ಕ್ರ.ಸಂ.	ದೇವಸ್ಥಾನದ ಹೆಸರು ವಿಳಾಸ
1.	ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಾಲಯ, ನಾಗಲಮಡಿಕೆ ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ
2.	ಶ್ರೀ ಲಕ್ಷ್ಮೀನಾರಾಯಣಸ್ವಾಮಿ ಮತ್ತು ಶ್ರೀ ಆಂಜನೇಯಸ್ವಾಮಿ ದೇವಾಲಯ, ಮರಿಯಮ್ಮನಹಳ್ಳಿ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ,
3.	ಶ್ರೀ ತಿರುಮಲೆ ರಂಗನಾಥಸ್ವಾಮಿ ದೇವಾಲಯ, ಮಾಗಡಿ ಟೌನ್, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ.
4.	ಶ್ರೀ ಪ್ರಸನ್ನ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಾಲಯ, ರಾಬರ್ಟ್‌ಸನ್ ಗ್ರಾಮ, ಕೆ.ಜಿ.ಎ.ಫ್ ತಾಲ್ಲೂಕು, ಕೋಲಾರ ಜಿಲ್ಲೆ.

ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ 3 ಅಧಿಸೂಚಿತ ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿಯ ಅವಧಿಯು ದೇವಾಲಯದ ಹೆಸರಿನ ಮುಂದೆ ನಮೂದಿಸಿರುವ ದಿನಾಂಕಗಳಂದು ಮುಕ್ತಾಯವಾಗಲಿರುವುದರಿಂದ ಸದರಿ ದೇವಾಲಯಗಳಿಗೆ ಕಾಯ್ದೆಯ ಕಲಂ 25ರನ್ವಯ ಹೊಸದಾಗಿ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ದಿನಾಂಕ: 27.03.2025 ರಂದು ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 8ನೇ ಸಭೆಯ ವಿಷಯ ಸೂಚಿ ಸಂಖ್ಯೆ:(3)ರ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಕ್ರ. ಸಂ.	ದೇವಸ್ಥಾನದ ಹೆಸರು ವಿಳಾಸ	ಮೂರು ವರ್ಷಗಳ ವ್ಯವಸ್ಥಾಪನಾ ಸಮಿತಿಯ ಅವಧಿಯು ಮುಕ್ತಾಯಗೊಳ್ಳುವ ದಿನಾಂಕ
1.	ಶ್ರೀ ಭಾಗ್ಯವಂತಿ ದೇವಸ್ಥಾನ, ಘತ್ತರಗಾ, ಅಫಜಲಪುರ ತಾಲ್ಲೂಕು	28.04.2025
2.	ಶ್ರೀ ರೇವಣಸಿದ್ದೇಶ್ವರ ದೇವಸ್ಥಾನ, ರೇವಗ್ಗಿ, ಚಿತ್ತಾಪುರ ತಾಲ್ಲೂಕು	28.04.2025
3.	ಶ್ರೀ ಕೆಂಗಲ್ ಆಂಜನೇಯಸ್ವಾಮಿ ದೇವಸ್ಥಾನ, ವಂದಾರಗುಪ್ಪೆ ಗ್ರಾಮ, ಚನ್ನಪಟ್ಟಣ ತಾಲ್ಲೂಕು	18.05.2025

ದಿನಾಂಕ:27.03.2025ರಂದು ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 8ನೇ ಸಭೆಯ ವಿಷಯ ಸೂಚಿ ಸಂಖ್ಯೆ:(8)ರಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಆಡಳಿತಕ್ಕೆ ಒಳಪಡುವ ಈ ಕೆಳಕಂಡ 3 ದೇವಾಲಯಗಳ ಆದಾಯವು ಕಳೆದ ಮೂರು ವರ್ಷಗಳಲ್ಲಿ ರೂ.25.00 ಲಕ್ಷಗಳನ್ನು ಮೀರಿರುವುದರಿಂದ ಸದರಿ ದೇವಾಲಯಗಳನ್ನು ಪ್ರವರ್ಗ “ಎ” ಶ್ರೇಣಿಯ ದೇವಾಲಯಗಳೆಂದು ಪರಿಗಣಿಸಲು ಸಭೆಯು ನಿರ್ಣಯಿಸಿ, ಸದರಿ ದೇವಾಲಯಗಳಿಗೆ ಕಾಯ್ದೆಯ ಕಲಂ 25ರನ್ವಯ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಆಸಕ್ತ ಭಕ್ತಾಧಿಗಳಿಂದ/ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆಯನ್ನು ಹೊರಡಿಸಲು ತೀರ್ಮಾನಿಸಲಾಗಿರುತ್ತದೆ.

ಕ್ರ.ಸಂ.	ದೇವಸ್ಥಾನದ ಹೆಸರು ವಿಳಾಸ
1.	ಶ್ರೀ ಮೃತ್ಯುಂಜೇಶ್ವರ ದೇವಾಲಯ, ನರಿಮೊಗರು ಗ್ರಾಮ, ಪುತ್ತೂರು ತಾಲ್ಲೂಕು.
2.	ಶ್ರೀ ಜಲದುರ್ಗಾದೇವಿ ದೇವಾಲಯ, ಪೆರುವಾಜೆ ಗ್ರಾಮ, ಸುಳ್ಯ ತಾಲ್ಲೂಕು.
3.	ಶ್ರೀ ಕಾರಂಜಿ ಆಂಜನೇಯಸ್ವಾಮಿ ದೇವಾಲಯ, ಬಸವನಗುಡಿ, ಬೆಂಗಳೂರು

ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 23909/2022, ದಿನಾಂಕ:11.04.2023 ರಂದು ನೀಡಿರುವ ತೀರ್ಪಿನ ನಿರ್ದೇಶನದಂತೆ ಈ ಕೆಳಕಂಡ ದೇವಾಲಯಕ್ಕೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಕಾಯ್ದೆ 2011ರ ಕಲಂ 25ರನ್ವಯ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಆಸಕ್ತ ಭಕ್ತಾಧಿಗಳಿಂದ/ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆಯನ್ನು ಹೊರಡಿಸಲು ದಿನಾಂಕ: 27.03.2025 ರಂದು ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 8ನೇ ಸಭೆಯ ವಿಷಯ ಸೂಚಿ ಸಂಖ್ಯೆ: (11)ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಕ್ರ.ಸಂ.	ದೇವಸ್ಥಾನದ ಹೆಸರು ವಿಳಾಸ
1.	ಶ್ರೀ ಗವಿರಂಗನಾಥಸ್ವಾಮಿ ದೇವಾಲಯ, ಗವಿಪುರಂ ಗ್ರಾಮ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯ ನಿರ್ಣಯದಂತೆ ಈ ಮೇಲ್ಕಂಡ ಒಟ್ಟು 11 “ಎ” ಪ್ರವರ್ಗದ ದೇವಾಲಯಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಸೆಕ್ಷನ್ 25 ರನ್ವಯ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಆಸಕ್ತ ಭಕ್ತಾಧಿಗಳಿಂದ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆ ಹೊರಡಿಸಲಾಗಿದೆ.
ಸದರಿ ದೇವಾಲಯಗಳ ವ್ಯವಸ್ಥಾಪನಾ ಸಮಿತಿಗೆ ಕನಿಷ್ಟ 25 ವರ್ಷಕ್ಕಿಂತ ಮೇಲ್ಪಟ್ಟ ಆಸ್ತಿಕ ಭಕ್ತಾಧಿಗಳು ಸದಸ್ಯತ್ವ ಕೋರಿ ಅರ್ಜಿಯನ್ನು ನಿಗಧಿತ ನಮೂನೆ–1(ಬಿ)(22ನೇ ನಿಯಮ) ನಮೂನೆಯಲ್ಲಿ ಭರ್ತಿ ಮಾಡಿ, ಅರ್ಜಿಯನ್ನು ದಿನಾಂಕ: 25.07.2025 ರೊಳಗಾಗಿ **“ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018”** ಇಲ್ಲಿಗೆ ನೇರವಾಗಿ ಸಲ್ಲಿಸತಕ್ಕದ್ದು, ಅಂತಹ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು, ನಿಗಧಿತ ಅವಧಿಯ ನಂತರದಲ್ಲಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ನಿಗಧಿತ ಅರ್ಜಿ ನಮೂನೆಯ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮತ್ತು www.itms.kar.gov.in ನಲ್ಲಿ ಲಭ್ಯವಿರುತ್ತದೆ.
ಸಹಿ/–
(ಡಾ॥ ಎಂ.ವಿ.ವೆಂಕಟೇಶ್, ಭಾ.ಆ.ಸೇ)
ಸದಸ್ಯ ಕಾರ್ಯದರ್ಶಿ, ರಾಜ್ಯ ಧಾರ್ಮಿಕ ಪರಿಷತ್ತು ಹಾಗೂ ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು
ವಾಸಸಂಇ/ವಾ.ಪ್ರ/1709/2025–26

'ಪ್ರತಿ ಚುನಾವಣೆಗೂ ಪಟ್ಟಿ ಪರಿಷ್ಕರಿಸಿ'

ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ, ಜುಲೈ 10ರಂದೇ ವಿಚಾರಣೆ ನಡೆಸಲು ಮನವಿ

ನವದೆಹಲಿ (ಪಿಟಿಐ): ದೇಶದಲ್ಲಿ ಪ್ರತಿ ಲೋಕಸಭೆ ಮತ್ತು ವಿಧಾನಸಭೆ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗೂ ಮುನ್ನ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಮಾಡಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿದೆ.

ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಮಾಡುವ ಚುನಾವಣಾ ಆಯೋಗದ ಕ್ರಮವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ಬಗ್ಗೆ ಸುಪ್ರೀಂ ಕೋರ್ಟ್ ಜುಲೈ 10ರಂದು ವಿಚಾರಣೆ ನಡೆಸುವುದಾಗಿ ತಿಳಿಸಿದೆ. ಇದರ ಮಧ್ಯೆಯೇ ಈ ಅರ್ಜಿ ಸಲ್ಲಿಕೆಯಾಗಿದೆ.

ಅಶ್ವಿನಿ ಉಪಾಧ್ಯಾಯ ಅವರು, ಚುನಾವಣಾ ಆಯೋಗದ ಕ್ರಮ ಪ್ರಶ್ನಿಸಿರುವ ಅರ್ಜಿಗಳ ಜೊತೆಯೇ ಈ ಅರ್ಜಿಯನ್ನೂ ವಿಚಾರಣೆ ನಡೆಸಬೇಕೆಂದು ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರನ್ನು ಒಳಗೊಂಡ ನ್ಯಾಯಪೀಠವನ್ನು ಮಂಗಳವಾರ ಕೋರಿದ್ದಾರೆ.

ದೇಶದ ಆಡಳಿತ ಚುಕ್ಕಾಣಿ ಯಾರು ಹಿಡಿಯಬೇಕೆಂದು ನೈಜ ಭಾರತೀಯ ಪ್ರಜೆಗಳು ಮಾತ್ರ ನಿರ್ಧಾರ ಮಾಡಬೇಕೇ ವಿನಾ ವಿದೇಶಿ ಅಕ್ರಮ ನುಸುಳುಕೋರರಲ್ಲ. ಹೀಗಾಗಿ ಪ್ರತಿ ಚುನಾವಣೆಗೂ ಮುನ್ನ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಮಾಡಲು ಆಯೋಗಕ್ಕೆ ನಿರ್ದೇಶನ ನೀಡಬೇಕು ಎಂದು ಅವರು ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

'ಸ್ವಾತಂತ್ರ್ಯ ನಂತರ ಅಕ್ರಮ ನುಸುಳುವಿಕೆ, ಜನಸಂಖ್ಯಾ ಸ್ಫೋಟದಿಂದಾಗಿ 200 ಜಿಲ್ಲೆಗಳ ಮತ್ತು 1,500 ತಾಲ್ಲೂಕುಗಳ ಜನಸಂಖ್ಯಾ ಸ್ವರೂಪ ಬದಲಾಗಿದೆ. ಈಗಾಗಲೇ ಸಾಕಷ್ಟು ಜಿಲ್ಲೆಗಳ ಭವಿಷ್ಯವನ್ನು ಭಾರತೀಯರಲ್ಲದವರು ರೂಪಿಸಿದ್ದಾರೆ' ಎಂದು ಅರ್ಜಿಯಲ್ಲಿ ಹೇಳಿದ್ದಾರೆ.

ಚುನಾವಣೆಗಳ ಮೂಲಕವೇ ದೇಶವು ತನ್ನ ರಾಜಕೀಯ ವ್ಯವಸ್ಥೆ ಮತ್ತು ನೀತಿಗಳನ್ನು ರೂಪಿಸುತ್ತದೆ. ನೈಜ ಪ್ರಜೆಗಳು ಮಾತ್ರ ಮತದಾನದ ಹಕ್ಕು ಹೊಂದಿರಬೇಕು ಎನ್ನುವುದನ್ನು ಖಚಿತಪಡಿಸುವುದು ಕೇಂದ್ರ, ರಾಜ್ಯಗಳು ಮತ್ತು ಚುನಾವಣಾ ಆಯೋಗದ ಕರ್ತವ್ಯ. ಹೀಗಾಗಿ ಕಾಲಕಾಲಕ್ಕೆ ಮತದಾರ ಪಟ್ಟಿಯ ವಿಶೇಷ ಪರಿಷ್ಕರಣೆ ಅತ್ಯಗತ್ಯ ಎಂದು ಪ್ರತಿಪಾದಿಸಿದ್ದಾರೆ.

ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗೆ ಪರಿಷ್ಕರಣೆ ಅಗತ್ಯ. ಬಿಹಾರದಲ್ಲಿ 243 ವಿಧಾನಸಭಾ ಕ್ಷೇತ್ರಗಳಿವೆ. ಪ್ರತಿ ಕ್ಷೇತ್ರದ ಮತದಾರರ ಪಟ್ಟಿಯಲ್ಲಿಯೂ 8000-10,000 ಅಕ್ರಮ, ನಕಲಿ ಮತದಾರರು ಸೇರಿಕೊಂಡಿದ್ದಾರೆ. ಕನಿಷ್ಠ 2,000–3000 ಮತಗಳ ವ್ಯತ್ಯಾಸವೂ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರುತ್ತದೆ ಎಂದು ವಿವರಿಸಿದ್ದಾರೆ.

ಮುಖ್ಯಾಂಶಗಳು

- 'ಬಿಹಾರದ ಪ್ರತಿ ಕ್ಷೇತ್ರದಲ್ಲಿಯೂ 8 ರಿಂದ 10 ಸಾವಿರ ನಕಲಿ ಮತದಾರರ ಸೇರ್ಪಡೆ'
- ಫಲಿತಾಂಶದ ಮೇಲೆ ಪರಿಣಾಮ ಸಾಧ್ಯತೆ: ಅರ್ಜಿದಾರರ ವಾದ

ಚುನಾವಣಾ ಆಯೋಗದಿಂದ ಸ್ಪಷ್ಟನೆ

ನವದೆಹಲಿ: ಬಿಹಾರದಲ್ಲಿ ಮತದಾರ ಪಟ್ಟಿಯ ವಿಶೇಷ ಪರಿಷ್ಕರಣೆ ಮಾಡುವ ಚುನಾವಣಾ ಆಯೋಗದ ಕ್ರಮವನ್ನು ವಿರೋಧ ಪಕ್ಷಗಳು ಒಗ್ಗೂಡಿ ವಿರೋಧ ವ್ಯಕ್ತಪಡಿಸುತ್ತಿವೆ. ಈ ಮಧ್ಯೆ ಚುನಾವಣಾ ಆಯೋಗವು, 'ಈ ಪ್ರಕ್ರಿಯೆಯು ಸಮರ್ಪಕವಾಗಿ ಪ್ರತಿ ಮತದಾರರನ್ನು ಒಳಗೊಂಡೇ ನಡೆಯುತ್ತಿದೆ' ಎಂದು ಮಂಗಳವಾರ ಪ್ರತಿಕ್ರಿಯಿಸಿದೆ.

ಪ್ರಕ್ರಿಯೆಯು ಬಿಹಾರದ 7.89 ಕೋಟಿ ಮತದಾರರನ್ನು ಒಳಗೊಂಡೇ ನಡೆಯಲಿದೆ ಎಂದು ಆಯೋಗದ ಅಧಿಕಾರಿಗಳು ಸ್ಪಷ್ಟಪಡಿಸಿದರು.

ಮತದಾರರ ಹೆಸರು, ವಿಳಾಸ ಮತ್ತಿತರ ದಸ್ತಾವೇಜು ದಾಖಲೆಗಳನ್ನು ಒಳಗೊಂಡ ಅರ್ಜಿ ನಮೂನೆಗಳನ್ನು 7.69 ಕೋಟಿ ಜನರಿಗೆ ಅಥವಾ ಶೇ 97.42ರಷ್ಟು ಮತದಾರರಿಗೆ ವಿತರಿಸಲಾಗಿದೆ. ಬೂತ್ ಮಟ್ಟದ ಅಧಿಕಾರಿಗಳು ಪ್ರತಿ ಮನೆಗೂ ಕನಿಷ್ಠ ಮೂರು ಬಾರಿ ಭೇಟಿ ನೀಡಿ ಅರ್ಜಿ ನಮೂನೆಯನ್ನು ಸಂಗ್ರಹಿಸುತ್ತಿದ್ದಾರೆ. ಮೊದಲನೇ ಭೇಟಿ ಪೂರ್ಣಗೊಂಡಿದೆ, ಎರಡನೇ ಭೇಟಿ ಪ್ರಕ್ರಿಯೆ ನಡೆಯುತ್ತಿದೆ ಎಂದು ತಿಳಿಸಿದರು.

ಆಗಸ್ಟ್ 1ರಂದು ಪ್ರಕಟಗೊಳ್ಳಲಿರುವ ಕರಡು ಮತದಾರರ ಪಟ್ಟಿಯು ಜುಲೈ 25ರ ಒಳಗಾಗಿ ಅರ್ಜಿ ನಮೂನೆ ಸಲ್ಲಿಸುವವರ ಹೆಸರನ್ನು ಒಳಗೊಂಡಿರಲಿದೆ ಎಂದು ಹೇಳಿದರು. ಆಕ್ಷೇಪಣೆ ಸಲ್ಲಿಸಲು ಸೆಪ್ಟೆಂಬರ್ 1 ಕಡೆಯ ದಿನವಾಗಿದ್ದು, ಆಗ ಅರ್ಹರ ದಾಖಲೆಗಳನ್ನು ಪ್ರತ್ಯೇಕವಾಗಿ ಸಲ್ಲಿಸಬಹುದು ಎಂದು ಒತ್ತಿ ಹೇಳಿದರು.

ಬೆಳ್ಮಣ್ಣು ದುರ್ಗಾಪರಮೇಶ್ವರಿ ಕ್ಷೇತ್ರಕ್ಕೆ ಭೇಟಿ ನೀಡಿದ್ದ ಗೃಹ ಸಚಿವ ಪರಮೇಶ್ವರ ದಂಪತಿ ಪೂಜೆಯಲ್ಲಿ ಪಾಲ್ಗೊಂಡಿದ್ದರು

ಗೃಹ ಸಚಿವರಿಂದ ಮಹಾಚಂಡಿಕಾ ಯಾಗ

ಪ್ರಜಾವಾಣಿ ವಾರ್ತೆ

ಕಾರ್ಕಳ (ಉಡುಪಿ): ಗೃಹ ಸಚಿವ ಜಿ. ಪರಮೇಶ್ವರ ಮಂಗಳವಾರ ಪತ್ನಿ ಜೊತೆ ಬೆಳ್ಮಣ್ಣು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಮಹಾಚಂಡಿಕಾ ಯಾಗದಲ್ಲಿ ಪಾಲ್ಗೊಂಡರು.

ಕ್ಷೇತ್ರದ ಆಡಳಿತ ಮೊಕ್ತೇಸರ ಬಿ.ವಿಘ್ನೇಶ್ ಭಟ್ ಅವರ ನೇತೃತ್ವದಲ್ಲಿ ವಿಶೇಷ ಪೂಜೆ, ಮಹಾ ಚಂಡಿಕಾಯಾಗ ನಡೆಯಿತು. ಬಳಿಕ ಸಚಿವರು ಸುಬ್ರಹ್ಮಣ್ಯ ಕ್ಷೇತ್ರಕ್ಕೆ ತೆರಳಿದರು.

ಇದಕ್ಕೆ ಮುನ್ನ ಸುದ್ದಿಗಾರರ ಜೊತೆಗೆ ಮಾತನಾಡುತ್ತಾ, 'ಮಂಗಳೂರಲ್ಲಿ ಬುಧವಾರ ಶಾಂತಿ ಸಭೆ ಕರೆದಿದ್ದೇವೆ. ಅದಕ್ಕೆ ಬರುವಾಗ ಹೆಂಡತಿಯೂ ಬರುತ್ತೇನೆ ಎಂದರು. ಬೇಡ ಅನ್ನೋಕಾಗುತ್ತಾ? ದೇವಸ್ಥಾನಕ್ಕೆ ಬಂದಿದ್ದೇನೆ. ಶಾಸ್ತ್ರೋಕ್ತವಾಗಿ ಜನಕಲ್ಯಾಣ, ಲೋಕಕಲ್ಯಾಣಕ್ಕಾಗಿ ಪೂಜೆ ನಡೆಸಿದ್ದೇನೆ' ಎಂದರು.

'ಭೇಟಿಯಲ್ಲಿ ವಿಶೇಷತೆ ಏನೂ ಇಲ್ಲ. ಏನೋ ಕೇಳಲು ಬಂದಿದ್ದೇನೆ ಎಂಬ ಕಲ್ಪನೆ ಬೇಡ. 2012 -13ರಲ್ಲಿ ಇಲ್ಲಿಗೆ ಬಂದಿದ್ದೆ. ಪಕ್ಷದ ಅಧ್ಯಕ್ಷನಾಗಿ ಗೆಲುವಿಗೆ ಪ್ರಾರ್ಥಿಸಿದ್ದೆ. 2013 ರಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿತ್ತು' ಎಂದರು.

'ಮೂರನೇ ಬಾರಿಗೆ ಗೃಹ ಖಾತೆ ಸಿಕ್ಕಿದ್ದು, ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದೇನೆ. ಯಾವುದೇ ಬದಲಾವಣೆಯನ್ನು ಬಯಸುವುದಿಲ್ಲ. ತಾವೇ ಐದು ವರ್ಷ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಪದೇ ಪದೇ ಆ ಬಗ್ಗೆ ಚರ್ಚೆ ಅನಗತ್ಯ' ಎಂದರು.

ಚಿಟಿಕೆ ಸುದ್ದಿ

ಕರಕಲಗಡ್ಡಿ: ಬಾಲಕಿ ಆರೋಗ್ಯ ತಪಾಸಣೆ

ಆರೋಗ್ಯ ಇಲಾಖೆ ಸಿಬ್ಬಂದಿ ಜನರ ಆರೋಗ್ಯ ತಪಾಸಣೆ ಮಾಡಿದರು

ಲಿಂಗಸುಗೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಕೃಷ್ಣಾ ತೀರದ ನಡುಗಡ್ಡೆ ಕರಕಲಗಡ್ಡಿಗೆ ಆರೋಗ್ಯ ಇಲಾಖೆ ಸಿಬ್ಬಂದಿ ಮಂಗಳವಾರ ತೆರಳಿ ಅನಾರೋಗ್ಯದಿಂದ ಬಳಲುತ್ತಿದ್ದ 11 ವರ್ಷ ವಯಸ್ಸಿನ ಬಾಲಕಿಯ ಆರೋಗ್ಯ ತಪಾಸಣೆ ಮಾಡಿದರು.

'ಕೃಷ್ಣಾ ನದಿಯಲ್ಲಿ ನೀರು ಹರಿವಿನ ವೇಗ ಹೆಚ್ಚಿದೆ. ಆರೋಗ್ಯ ನಿರೀಕ್ಷಣಾ ಅಧಿಕಾರಿ ಅಲಿ ಚಾವುಸ್ ಹಾಗೂ ಸಮುದಾಯ ಆರೋಗ್ಯ ಅಧಿಕಾರಿ ಪ್ರತಾಪ ಮಡ್ಡಿಕಾರ ತೆಪ್ಪದಲ್ಲಿ ಕರಕಲಗಡ್ಡಿಗೆ ತೆರಳಿದರು. 2-3 ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಬಾಲಕಿ ಅನಿತಾಳ ಆರೋಗ್ಯ ತಪಾಸಣೆ ಮಾಡಿ ಔಷಧ ವಿತರಿಸಿದರು.

'ಇತರೆ 6 ಜನರ ಆರೋಗ್ಯ ತಪಾಸಣೆ ಮಾಡಿ, ಅಗತ್ಯ ಔಷಧ ಹಾಗೂ ಪಡಿತರವನ್ನು ತಾಲ್ಲೂಕು ಆಡಳಿತದಿಂದ ವಿತರಿಸಲಾಯಿತು. 'ನಡುಗಡ್ಡೆಯಲ್ಲಿ ಜ್ವರದಿಂದ ಬಳಲುತ್ತಿರುವ ಬಾಲಕಿ' ಶೀರ್ಷಿಕೆಯಡಿ 'ಪ್ರಜಾವಾಣಿ'ಯ ಜುಲೈ 7ರ ಸಂಚಿಕೆಯಲ್ಲಿ ವರದಿ ಪ್ರಕಟವಾಗಿತ್ತು.

'ಕನ್ನಡ ಅಂಕ ನೂರಕ್ಕೆ ಇಳಿಸಬೇಡಿ'

ಬೆಂಗಳೂರು: 'ಕನ್ನಡ ಸೇರಿದಂತೆ ಪ್ರಥಮ ಭಾಷೆಗಳಿಗೆ 125ರ ಬದಲು, 100 ಅಂಕಗಳನ್ನು ನಿಗದಿಪಡಿಸುವ ನಿರ್ಧಾರವನ್ನು ಕೈಬಿಡಬೇಕು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಬರಗೂರು ರಾಮಚಂದ್ರಪ್ಪ

ಈ ಬಗ್ಗೆ ಅವರು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದಿದ್ದಾರೆ. 'ಪ್ರಥಮ ಭಾಷೆಗಳಿಗೆ ಅಂಕವನ್ನು ನೂರಕ್ಕೆ ನಿಗದಿಪಡಿಸುವ ನಿರ್ಧಾರ ಖಂಡನೀಯ. ಗೋಕಾಕ್ ಚಳವಳಿಯಿಂದ ಪ್ರಸಿದ್ಧವಾದ ಕನ್ನಡದ ಆಂದೋಲನದ ಫಲವಾಗಿ ಕನ್ನಡ ಸೇರಿದಂತೆ ಪ್ರಥಮ ಭಾಷೆಗಳಿಗೆ 125 ಅಂಕಗಳನ್ನು ನಿಗದಿಪಡಿಸಲಾಗಿತ್ತು. ಆಗ ಚಳವಳಿಯ ಫಲವಾಗಿ ರೂಪುಗೊಂಡ ಈ ಸರ್ವಸಮ್ಮತ ನಿರ್ಧಾರವನ್ನು ಈಗ ಬದಲಾಯಿಸಿ, 100 ಅಂಕಗಳನ್ನು ನಿಗದಿ ಮಾಡುವುದು ಯಾವ ತರ್ಕ? ಇದರ ಹಿಂದೆ ತರ್ಕವೂ ಇಲ್ಲ ತತ್ವವೂ ಇಲ್ಲ' ಎಂದು ಹೇಳಿದ್ದಾರೆ.

'ಈ ಕ್ರಮವು ಕನ್ನಡವೂ ಸೇರಿದಂತೆ ಮಾತೃಭಾಷೆಗಳ ಮಹತ್ವವನ್ನು ಕುಗ್ಗಿಸುವ ಕೆಲಸವಾಗಿದೆ. ಕನ್ನಡ ವಿರೋಧಿ ಈ ನಿರ್ಧಾರವನ್ನು ಕೂಡಲೇ ವಾಪಸ್ ಪಡೆಯಬೇಕು' ಎಂದು ಆಗ್ರಹಿಸಿದ್ದಾರೆ.

'ಬೆಳಗಾವಿ ವಿಭಜನೆ: ಸರ್ಕಾರಕ್ಕೆ ಬಿಟ್ಟಿದ್ದು'

ಬೆಳಗಾವಿ: 'ಬೆಳಗಾವಿ ಜಿಲ್ಲೆ ವಿಭಜನೆಗೆ ಹಲವು ಬೇಡಿಕೆಗಳಿವೆ. ವಿಭಜನೆಯನ್ನು ನಾವು ಬಯಸಿದ್ದೇವೆ. ಅಂತಿಮವಾಗಿ ಸರ್ಕಾರದ ಮಟ್ಟದಲ್ಲೇ ಆಗಬೇಕು' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅಥಣಿಯವರು ತಮ್ಮನ್ನು ವಿಜಯಪುರಕ್ಕೆ, ರಾಮದುರ್ಗದವರು ಬಾಗಲಕೋಟೆಗೆ ಸೇರಿಸಿ ಎನ್ನುತ್ತಾರೆ. ಸವದತ್ತಿಯವರು ಧಾರವಾಡಕ್ಕೆ ಸೇರಿಸಿ ಎನ್ನುತ್ತಾರೆ. ಎಲ್ಲರೂ ಅಭಿಪ್ರಾಯ ಹೇಳಲು ಸ್ವಾತಂತ್ರ್ಯವಿದೆ. ಈಗ ಜಿಲ್ಲಾ ವಿಭಜನೆ ಬಗ್ಗೆ ಮಾತನಾಡುವ ಬಿಜೆಪಿಯವರು, ಅಧಿಕಾರದಲ್ಲಿದ್ದಾಗ ಏಕೆ ನಿರ್ಧರಿಸಲಿಲ್ಲ' ಎಂದು ಪ್ರಶ್ನಿಸಿದರು.

ಅಂಗನವಾಡಿ ಮೇಲೆ ಬಿದ್ದ ಕೊಂಬೆ ಸಹಾಯಕಿಗೆ ಗಾಯ

ಅಂಗನವಾಡಿ ಕೇಂದ್ರದ ಸ್ಥಿತಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮಂಗಳವಾರ ಬಿರುಸಿನ ಮಳೆ ಮುಂದುವರಿದಿದೆ.

ಸೋಮವಾರಪೇಟೆ ತಾಲ್ಲೂಕಿನ ಗಣಗಳ್ಳಿಯಲ್ಲಿ ಅಂಗನವಾಡಿ ಮೇಲೆ ಮರದ ಕೊಂಬೆ ಮುರಿದು ಬಿದ್ದಿದ್ದು, ಸಹಾಯಕಿಗೆ ಪೆಟ್ಟಾಗಿದೆ. ಗಾಯಗೊಂಡ ಸಹಾಯಕಿ ಬೇಬಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅಂಗನವಾಡಿ ಕಟ್ಟಡಕ್ಕೆ ಹಾನಿಯಾಗಿದೆ.

ಮಡಿಕೇರಿ ನಗರದಲ್ಲಿ ಮಧ್ಯಾಹ್ನದ ನಂತರ ಮಳೆ ಬಿರುಸು ಪಡೆದಿದ್ದು, ಧಾರಾಕಾರವಾಗಿ ಬಿಟ್ಟು ಬಿಟ್ಟು ಸುರಿಯುತ್ತಿದೆ. ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಸಾಧಾರಣ ಮಳೆಯಾಗಿದೆ.

ಶಾಂತಳ್ಳಿ, ಶ್ರೀಮಂಗಲದಲ್ಲಿ ತಲಾ 5 ಸೆಂ.ಮೀ, ಭಾಗಮಂಡಲ, ಮಡಿಕೇರಿಯಲ್ಲಿ ತಲಾ 4 ಸೆಂ.ಮೀ, ಕೊಡ್ಲಿಪೇಟೆಯಲ್ಲಿ 3 ಸೆಂ.ಮೀನಷ್ಟು ಮಳೆ ಸುರಿದಿದೆ.

'ಹಣ ಪಡೆದು ಪಿಯು ಕಾಲೇಜುಗಳಿಗೆ ಅನುಮತಿ'

ಪ್ರಜಾವಾಣಿ ವಾರ್ತೆ

ಕೆ.ಎಸ್.ಆನಂದ್

ಕಡೂರು (ಚಿಕ್ಕಮಗಳೂರು): 'ಪದವಿಪೂರ್ವ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳು ಹಣ ಪಡೆದು ಖಾಸಗಿ ಪದವಿಪೂರ್ವ ಕಾಲೇಜುಗಳ ಆರಂಭಕ್ಕೆ ಅನುಮತಿ ನೀಡಿದ್ದಾರೆ' ಎಂದು ಕಾಂಗ್ರೆಸ್ ಶಾಸಕ ಕೆ.ಎಸ್.ಆನಂದ್ ಇಲ್ಲಿ ಆರೋಪಿಸಿದರು.

ತಾಲ್ಲೂಕಿನ ಚಿಕ್ಕಂಗಳ ಗ್ರಾಮದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ನಾಯಿಕೊಡೆಗಳಂತೆ ಪದವಿ ಪೂರ್ವ ಕಾಲೇಜುಗಳು ಆರಂಭಗೊಳ್ಳುತ್ತಿವೆ. ಇದರಲ್ಲಿ ದೊಡ್ಡ ಹಗರಣವೇ ನಡೆದಿದೆ' ಎಂದು ದೂರಿದರು.

'ಮೂಲಸೌಕರ್ಯ ಇಲ್ಲದಿದ್ದರೂ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಕ್ಷೇತ್ರದಲ್ಲಿ ಆರಂಭಿಸಲಾಗಿದೆ. ನಿಜಕ್ಕೂ ಇದು ದುರದೃಷ್ಟಕರ. ಬಡವರ ಮಕ್ಕಳು ಉತ್ತಮ ಶಿಕ್ಷಣ ಪಡೆಯುವ ಹಂಬಲ ಇಂತಹ ನಡೆಗಳ ಮೂಲಕ ಹಾಳಾಗುತ್ತಿದೆ' ಎಂದರು.

'ಇದನ್ನು ಸಿ.ಎಂ ಗಮನಕ್ಕೂ ತರಲಾಗುವುದು. ಸದನದಲ್ಲಿ ಪ್ರಸ್ತಾಪಿಸುತ್ತೇನೆ. ಅನುಮತಿ ನೀಡಿದ ಅಧಿಕಾರಿಗಳನ್ನು ಅಮಾನತುಗೊಳಿಸಿ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು.

'ಹಣ ಕೊಟ್ಟು ಪರವಾನಗಿ ಪಡೆದು ಬಡ ಮಕ್ಕಳನ್ನು ವಂಚಿಸುತ್ತಿರುವ ಕಾಲೇಜುಗಳು ಹಾಗೂ ಹಣ ಪಡೆದು ಪರವಾನಗಿ ನೀಡುವ ವ್ಯವಸ್ಥೆ ವಿರುದ್ಧ ಬೀದಿಗಿಳಿದು ಹೋರಾಟ ನಡೆಸಲಾಗುವುದು' ಎಂದು ಶಾಸಕರು ಎಚ್ಚರಿಸಿದರು.

'ಮೊರಾರ್ಜಿ ಶಾಲೆ ಸೀಟು ಭರ್ತಿಗೂ ಹಣ'

'ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಪ್ರವೇಶ ಮತ್ತು ಶಾಲೆಬಿಟ್ಟ ಮಕ್ಕಳ ಸ್ಥಾನ ಭರ್ತಿಗೆ ತರೀಕೆರೆ ಉಪವಿಭಾಗಾಧಿಕಾರಿ ಕಚೇರಿಯಲ್ಲಿ ಅವ್ಯವಹಾರ ನಡೆದಿದೆ' ಎಂದು ಕೆ.ಎಸ್.ಆನಂದ್ ಅವರು ಆರೋಪಿಸಿದರು.

'ವಸತಿ ಶಾಲೆಗಳ ಸೀಟು ಹಂಚಿಕೆ ಜವಾಬ್ದಾರಿ ಈಗ ಉಪವಿಭಾಗಾಧಿಕಾರಿ ನೇತೃತ್ವದ ಸಮಿತಿಗೆ ನೀಡಲಾಗಿದೆ. ತರೀಕೆರೆ ಕಚೇರಿಯಲ್ಲಿ ಸಿಬ್ಬಂದಿ ಮೂಲಕ ಹಣ ಪಡೆದು ಖಾಲಿ ಸೀಟುಗಳ ಭರ್ತಿ ಮಾಡಲಾಗಿದೆ' ಎಂದರು.

'ಈಗ ವಿದ್ಯಾರ್ಥಿಗಳಿಗೆ ನೀಡಿರುವ ಪ್ರವೇಶವನ್ನು ತಡೆ ಹಿಡಿಯಬೇಕು. ತನಿಖೆಗೆ ಸಮಿತಿಯನ್ನೂ ರಚಿಸಬೇಕು' ಎಂದು ಜಿಲ್ಲಾಧಿಕಾರಿಗೆ ಒತ್ತಾಯಿಸಿದರು.

13 ಐಎಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಆರು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೂ ಸೇರಿದಂತೆ 13 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮಂಗಳವಾರ ಅಧಿಸೂಚನೆ ಹೊರಡಿಸಿದೆ.

ವರ್ಗಾವಣೆಗೊಂಡವರು: ಝುಹೆರಾ ನಸೀಮ್ - ಪ್ರಾದೇಶಿಕ ಆಯುಕ್ತೆ, ಕಲಬುರಗಿ ವಿಭಾಗ. ಟಿ. ಭೂಬಾಲನ್– ಸಿಇಒ, ಇ-ಆಡಳಿತ ಕೇಂದ್ರ. ಬಿ. ಸುಶೀಲಾ– ಎಂ.ಡಿ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ. ಕೆ. ಆನಂದ– ಜಿಲ್ಲಾಧಿಕಾರಿ, ವಿಜಯನಗರ. ಪಡ್ವೆ ರಾಹುಲ್ ತುಕಾರಾಂ– ಹೆಚ್ಚುವರಿ ಆಯುಕ್ತ, ಶಾಲಾ ಶಿಕ್ಷಣ ಇಲಾಖೆ, ಕಲುಬುರಗಿ. ಭೋಯಾಲ್ ಹರ್ಷಲ್ ನಾರಾಯಣರಾವ್– ಜಿಲ್ಲಾಧಿಕಾರಿ, ಯಾದಗಿರಿ. ದಿಲೀಶ್ ಸಸಿ– ಸಿಇಒ, ಜಿಲ್ಲಾ ಪಂಚಾಯಿತಿ, ಉತ್ತರ ಕನ್ನಡ. ಈಶ್ವರ ಕುಮಾರ್ ಕಂಡೂ– ಸಿಇಒ, ಜಿಲ್ಲಾ ಪಂಚಾಯಿತಿ, ರಾಯಚೂರು. ಶಶಿಧರ್ ಕುರೇರಾ– ಜಂಟಿ ನಿರ್ದೇಶಕ, ಕೆಯುಐಡಿಎಫ್‌ಸಿ. ಎಸ್. ಆಕಾಶ್– ಸಿಇಒ, ಜಿಲ್ಲಾ ಪಂಚಾಯಿತಿ, ಬಾಗಲಕೋಟೆ. ಅಪರ್ಣಾ ರಮೇಶ್– ನಿರ್ದೇಶಕಿ, ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (ಇಡಿಸಿಎಸ್), ಎಚ್‌ಎಂಆರ್‌ಎಸ್ 2.0. ನರ್ವಡೆ ವಿನಾಯಕ ಕರ್ಭಾರಿ– ಸಿಇಒ, ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ. ಆರ್. ಯತೀಶ್– ಸಿಇಒ, ಜಿಲ್ಲಾ ಪಂಚಾಯಿತಿ, ಬೆಂಗಳೂರು ನಗರ ಜಿಲ್ಲೆ.

ಅಂಗನವಾಡಿಗೆ ನಿವೇಶನ ದಾನ...

ಒಂದನೇ ಪುಟದಿಂದ...

ಮನೆ ಕಟ್ಟಿಸಲು ಶಾಂತಮ್ಮ 2022ರಲ್ಲಿ ಗ್ರಾಮದಲ್ಲಿ ಎರಡು ನಿವೇಶನ ಖರೀದಿಸಿದ್ದರು. ಆ ಪೈಕಿ 1,200 ಚದರ ಅಡಿ ಅಳತೆಯ ಒಂದು ನಿವೇಶನವನ್ನು ಕೊಟ್ಟಿದ್ದಾರೆ. ಜೂನ್‌ನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹೆಸರಿಗೆ ಇ-ಖಾತೆ ಮಾಡಿಸಿಕೊಟ್ಟಿದ್ದಾರೆ. ನಿವೇಶನ ಇಂದು ₹3 ಲಕ್ಷ ಬಾಳುತ್ತದೆ. ನಿವೇಶನ ನೀಡುವ ಶಾಂತಮ್ಮ ಅವರ ನಿಲುವಿಗೆ ಮನೆಯಲ್ಲಿ ವಿರೋಧ ವ್ಯಕ್ತವಾಗಿಲ್ಲ. ಅಂಗನವಾಡಿ ಕೇಂದ್ರದಲ್ಲಿ 16 ಮಕ್ಕಳಿದ್ದಾರೆ. ನಾಲ್ವರು ಗರ್ಭಿಣಿಯರು, ಒಬ್ಬ ಬಾಣಂತಿ ಸರ್ಕಾರದ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ.

'ಪುಟಾಣಿಗಳ ಭವಿಷ್ಯಕ್ಕಾಗಿ ನಿವೇಶನ ನೀಡಿದ ಬಗ್ಗೆ ತೃಪ್ತಿ ಇದೆ. ಮನೆಯಲ್ಲಿ ಎಲ್ಲರೂ ಬೆಂಬಲ ನೀಡಿದರು. ಸರ್ಕಾರ ಶೀಘ್ರ ಕಟ್ಟಡ ನಿರ್ಮಿಸಿ ಮೂಲಸೌಕರ್ಯ ಕಲ್ಪಿಸಿದರೆ ನನ್ನ ಶ್ರಮ ಸಾರ್ಥಕವಾಗಲಿದೆ' ಎಂದು ಶಾಂತಮ್ಮ 'ಪ್ರಜಾವಾಣಿ'ಗೆ ತಿಳಿಸಿದರು.

ಸಣ್ಣ ಸಂಬಳದಲ್ಲಿ ಕೂಡಿಟ್ಟಿದ್ದ ಹಣದಲ್ಲಿ ಖರೀದಿಸಿದ್ದ ನಿವೇಶನವನ್ನು ಗ್ರಾಮದ ಅಂಗನವಾಡಿಗೆ ನೀಡಿರುವುದು ಶಾಂತಮ್ಮ ಔದಾರ್ಯಕ್ಕೆ ಸಾಕ್ಷಿ ಎಂದು ಓಬೇನಹಳ್ಳಿಯ ರಾಘವೇಂದ್ರ ಹೇಳಿದರು. ಶಾಂತಮ್ಮ ಅವರ ಈ ನಡೆ ಸಮುದಾಯ ಪ್ರಜ್ಞೆಯ ಪ್ರತೀಕ ಎಂದು ಎಸ್.ವಿಜಯಕುಮಾರ್ ಅವರು ಶ್ಲಾಘಿಸಿದ್ದಾರೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	122.50	33,197	29,126
ಹಾರಂಗಿ	2,859	2,852.31	4,686	7,083
ಕಬಿನಿ	2,284.00	2,281.20	14,948	12,000
ಹೇಮಾವತಿ	2,922	2,919.78	12,638	12,892
ಲಿಂಗನಮಕ್ಕಿ	1,819	1,794.90	39,118	7,018
ಸೂಪಾ (ಮೀ)	564	542.80	22,046	5,691.09
ಮಾಣಿ	595	585.80	4,720	0
ತುಂಗಭದ್ರಾ	1,633	1,624.83	52,423	61,145
ಮಲಪ್ರಭಾ	2,079.5	2,067.65	11,639	194
ಘಟಪ್ರಭಾ	2175	2,163.21	20,032	1,468
ಭದ್ರಾ *	186	171.10	19,043	5,201
ಆಲಮಟ್ಟಿ (ಮೀ)	519.6	517.26	1,08,286	1,15,670
ನಾರಾಯಣಪುರ (ಮೀ)	492.25	490.75	1,15,000	1,12,577

* ನೆಲಮಟ್ಟದಿಂದ

ಎಂಎನ್‌ಎಸ್ ನಾಯಕರು ವಶಕ್ಕೆ

ಮಹಾರಾಷ್ಟ್ರ ನವನಿರ್ಮಾಣ ಸೇನೆಯ ಕಾರ್ಯಕರ್ತರು ಮುಂಬೈನಲ್ಲಿ ಮಂಗಳವಾರ ಬೃಹತ್ ರ‍್ಯಾಲಿ ನಡೆಸಿದರು–ಪಿಟಿಐ ಚಿತ್ರ

ಠಾಣೆ (ಪಿಟಿಐ): ಮರಾಠಿ ಅಸ್ಮಿತೆಗಾಗಿ ಮೀರಾ ಭಾಯಂದರ್ ನಗರದಲ್ಲಿ ಆಯೋಜಿಸಿದ್ದ ಪ್ರತಿಭಟನಾ ರ‍್ಯಾಲಿಯಲ್ಲಿ ಪಾಲ್ಗೊಳ್ಳಲು ಹೊರಟಿದ್ದ ಮಹಾರಾಷ್ಟ್ರ ನವನಿರ್ಮಾಣ ಸೇನೆಯ (ಎಂಎನ್‌ಎಸ್) ಹಲವು ನಾಯಕರು ಮತ್ತು ಕಾರ್ಯಕರ್ತರನ್ನು ಮಾರ್ಗಮಧ್ಯೆಯೇ ಪೊಲೀಸರು ಮಂಗಳವಾರ ವಶಕ್ಕೆ ಪಡೆದರು.

ಮರಾಠಿ ಏಕೀಕರಣ ಸಮಿತಿ ಆಯೋಜಿಸಿದ್ದ ರ‍್ಯಾಲಿಯಲ್ಲಿ ಭಾಗವಹಿಸಲು ನೆರೆದಿದ್ದ ಪ್ರತಿಭಟನಕಾರರ ಸುತ್ತ ಪೊಲೀಸರು ಸುತ್ತುವರಿದರು. ನಂತರ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಮಹಿಳೆಯರು ಸೇರಿದಂತೆ ಎಂಎನ್‌ಎಸ್ ಕಾರ್ಯಕರ್ತರನ್ನು ಪೊಲೀಸ್ ವ್ಯಾನ್ ಒಳಗೆ ತುಂಬುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಎಷ್ಟು ಕಾರ್ಯಕರ್ತರನ್ನು ವಶಕ್ಕೆ ಪಡೆಯಲಾಗಿದೆ ಎಂಬ ಮಾಹಿತಿ ಲಭ್ಯವಾಗಿಲ್ಲ.

ಪ್ರತಿಭಟನಕಾರರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು, ರ‍್ಯಾಲಿಗೆ ಅವಕಾಶ ನೀಡದ ಸರ್ಕಾರವನ್ನು ಟೀಕಿಸಿದರು.

ನಾಟಕೀಯ ಬೆಳವಣಿಗೆ ಮಧ್ಯೆಯೇ ಶಿವಸೇನಾ (ಯುಬಿಟಿ), ಎನ್‌ಸಿಪಿ (ಎಸ್‌ಪಿ) ಪಕ್ಷಗಳ ನಾಯಕರು ಮತ್ತು ಕಾರ್ಯಕರ್ತರೂ ಪ್ರತಿಭಟನೆಯಲ್ಲಿ ಭಾಗಿಯಾದರು. ಈ ಪೈಕಿ ಹಲವರನ್ನು ಪೊಲೀಸರು ವಶಕ್ಕೆ ಪಡೆದರು.

ಪ್ರತಿಭಟನಾ ಸ್ಥಳಕ್ಕೆ ತೆರಳಿದ್ದ ರಾಜ್ಯ ಸಚಿವ ಪ್ರತಾಪ್ ಸರನಾಯ್ಕ್ ಅವರನ್ನು ಪ್ರತಿಭಟನಕಾರರು ಪ್ರಶ್ನಿಸಿ ಇಕ್ಕಟ್ಟಿಗೆ ಸಿಲುಕಿಸಿದರು.

ನಂತರ ಮಾತನಾಡಿದ ಪ್ರತಾಪ್ ಸರನಾಯ್ಕ್ ಅವರು, 'ಪೊಲೀಸರ ಈ ಕ್ರಮ 'ತಪ್ಪು'. ಅವರು ಸರ್ಕಾರದ ನಿರ್ದೇಶನಗಳನ್ನು ಪಾಲಿಸಿಲ್ಲ' ಎಂದರು.

'ಮರಾಠಿ ಜನರ ಹಿತಾಸಕ್ತಿಯನ್ನು ಬೆಂಬಲಿಸುವ ರ‍್ಯಾಲಿಯನ್ನು ಹತ್ತಿಕ್ಕುವಂತೆ ಸರ್ಕಾರ ಯಾವುದೇ ನಿರ್ದೇಶನಗಳನ್ನು ನೀಡಿರಲಿಲ್ಲ. ಈ ಬಗ್ಗೆ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸುತ್ತೇನೆ' ಎಂದರು.

ರ‍್ಯಾಲಿಯಲ್ಲಿ ಪಾಲ್ಗೊಳ್ಳುವುದನ್ನು ತಡೆಯಲು ಮಧ್ಯರಾತ್ರಿಯಿಂದಲೇ ಹಲವು ಪ್ರತಿಭಟನಕಾರರನ್ನು ಸಭಾಭವನವೊಂದರಲ್ಲಿ ಕೂಡಿ ಹಾಕಲಾಗಿತ್ತು ಎಂಬ ವರದಿಯನ್ನು ಪೊಲೀಸರು ಖಚಿತಪಡಿಸಿದರು.

> **ರ‍್ಯಾಲಿಗೆ ವಿರೋಧ ಇಲ್ಲ. ಆದರೆ ಆ ಮಾರ್ಗದಲ್ಲಿ ರ‍್ಯಾಲಿಗೆ ಅನುಮತಿ ನೀಡುವುದು ಕಷ್ಟ. ಮಾರ್ಗ ಬದಲಿಸಲು ಪೊಲೀಸರು ಮನವಿ ಮಾಡಿಕೊಂಡರೂ ಅವರು ಪಟ್ಟು ಸಡಿಲಿಸಲಿಲ್ಲ**
> **ದೇವೇಂದ್ರ ಫಡಣವೀಸ್,** ಮುಖ್ಯಮಂತ್ರಿ

ನಿಮ್ಮನ್ನು ಹೊಡೆದು ಸಾಯಿಸುತ್ತೇವೆ: ದುಬೆ– ಹೇಳಿಕೆಗೆ ಖಂಡನೆ

ಮುಂಬೈ: ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು ಮುಂಬೈನಲ್ಲಿ ಹಿಂದಿ ಭಾಷಿಕರ ವಿರುದ್ಧ ನಡೆದ ಹಲ್ಲೆಯನ್ನು ಖಂಡಿಸುತ್ತಾ, 'ನಿಮ್ಮನ್ನು ಹೊಡೆದು ಸಾಯಿಸುತ್ತೇವೆ' (ಪಟಕ್ ಪಟಕ್ ಕೆ ಮಾರೇಂಗೆ) ಎಂದು ಹೇಳಿರುವುದು ವಿವಾದಕ್ಕೆ ಕಾರಣವಾಗಿದೆ.

ದುಬೆ ಅವರು, 'ನೀವು ನಮ್ಮ ಹಣದಲ್ಲಿ ಬದುಕುತ್ತಿದ್ದೀರಿ. ನಿಮ್ಮ ಬಳಿ ಯಾವ ಕೈಗಾರಿಕೆಗಳಿವೆ? ಟಾಟಾ, ಬಿರ್ಲಾ, ಅಂಬಾನಿಯವರು ಇಲ್ಲಿ ಉದ್ಯಮ ನಡೆಸುತ್ತಿದ್ದಾರೆ. ನೀವು ಹಿಂದಿ ಭಾಷಿಕರನ್ನು ಹೊಡೆಯುವಷ್ಟು ದೊಡ್ಡವರಾಗಿದ್ದರೆ, ಉರ್ದು, ತಮಿಳು ಮತ್ತು ತೆಲುಗು ಭಾಷಿಕರನ್ನೂ ಹೊಡೆಯುವ ಧೈರ್ಯ ನಿಮಗಿರಬೇಕು. ನೀವು ಅಷ್ಟೊಂದು 'ದೊಡ್ಡ ಜನ'ರಾಗಿದ್ದರೆ ಮಹಾರಾಷ್ಟ್ರದಿಂದ ಹೊರಗೆ ಬಿಹಾರ, ಉತ್ತರ ಪ್ರದೇಶ ಅಥವಾ ತಮಿಳುನಾಡಿಗೆ ಬನ್ನಿ. ನಾವು ನಿಮ್ಮನ್ನು ಹೊಡೆದು ಸಾಯಿಸುತ್ತೇವೆ' ಎಂದಿದ್ದಾರೆ.

ಇಂಥ ಹೇಳಿಕೆ ಸರಿಯಲ್ಲ: ಈ ಬಗ್ಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, 'ದುಬೆ ಅವರು ಒಂದು ಸಂಘಟನೆ ಬಗ್ಗೆ ಈ ಮಾತುಗಳನ್ನು ಹೇಳಿದ್ದಾರೆಯೇ ಹೊರತು ಮರಾಠಿ ಜನರಿಗೆ ಹೇಳಿದ್ದಲ್ಲ. ಆದರೆ ಇಂಥ ಹೇಳಿಕೆ ನೀಡುವುದು ಸರಿಯಲ್ಲ. ಈ ಮಾತುಗಳು ಜನರಲ್ಲಿ ಗೊಂದಲವನ್ನು ಉಂಟುಮಾಡುತ್ತದೆ ಎಂದು ಹೇಳಿದ್ದಾರೆ.

ಖಾತೆಗಳ ಸ್ಥಗಿತ ಕಳವಳಕಾರಿ: 'ಎಕ್ಸ್'

ನವದೆಹಲಿ (ಎಎಫ್‌ಪಿ): ರಾಯಿಟರ್ಸ್ ಸುದ್ದಿಸಂಸ್ಥೆಯ ಎರಡು ಖಾತೆಗಳು ಸೇರಿದಂತೆ 2,355 ಖಾತೆಗಳನ್ನು ಸ್ಥಗಿತಗೊಳಿಸುವಂತೆ ಭಾರತ ಸರ್ಕಾರ ಜುಲೈ 3ರಂದು ಹೊರಡಿಸಿದ ಆದೇಶವು 'ಅತ್ಯಂತ ಕಳವಳಕಾರಿ ಸಂಗತಿ' ಎಂದು 'ಎಕ್ಸ್' ಹೇಳಿದೆ.

ಸಾಮಾಜಿಕ ಜಾಲತಾಣಗಳ ನಿರ್ಬಂಧ, ಭಾರತದಲ್ಲಿ ಮುಂದುವರಿದಿರುವ 'ಮಾಧ್ಯಮ ಸೆನ್ಸಾರ್‌ಶಿಪ್' ಬಗ್ಗೆಯೂ 'ಎಕ್ಸ್' ಆತಂಕ ವ್ಯಕ್ತಪಡಿಸಿದೆ.

ಭಾರತದಲ್ಲಿ 2 ಸಾವಿರಕ್ಕೂ ಹೆಚ್ಚು ಖಾತೆಗಳನ್ನು ಸ್ಥಗಿತಗೊಳಿಸಿದ ಬಗ್ಗೆ ವಿವರಣೆ ನೀಡಿರುವ 'ಎಕ್ಸ್'ನ ಜಾಗತಿಕ ವ್ಯವಹಾರಗಳ ತಂಡ, 'ಯಾವುದೇ ಸಮರ್ಥನೆ ನೀಡದೆ, ತುರ್ತಾಗಿ ಒಂದು ಗಂಟೆಯೊಳಗೆ ರಾಯಿಟರ್ಸ್, ರಾಯಿಟರ್ಸ್ ವರ್ಲ್ಡ್ ಸೇರಿದಂತೆ 2,355 ಎಕ್ಸ್ ಖಾತೆಗಳನ್ನು ಸ್ಥಗಿತಗೊಳಿಸಬೇಕು. ಮುಂದಿನ ಆದೇಶದವರೆಗೆ ಈ ಖಾತೆಗಳ ಮೇಲಿನ ನಿರ್ಬಂಧ ಮುಂದುವರಿಸಬೇಕು' ಎಂದು ಭಾರತ ಎಲೆಕ್ಟ್ರಾನಿಕ್ ಸಚಿವಾಲಯ ಜುಲೈ 3ರಂದು ಆದೇಶ ಹೊರಡಿಸಿತ್ತು' ಎಂದು ಹೇಳಿದೆ.

ಸ್ಥಗಿತಗೊಳಿಸಲಾಗಿದ್ದ ಖಾತೆಗಳನ್ನು 'ಎಕ್ಸ್' ಕೆಲವೇ ಗಂಟೆಗಳಲ್ಲಿ ಪುನಃಸ್ಥಾಪಿಸಿತ್ತು. ಆದರೆ, ಎಕ್ಸ್ ಖಾತೆ ಸ್ಥಗಿತದ ಹಿಂದೆ ತನ್ನ ಪಾತ್ರ ಇಲ್ಲ ಎಂದು ಭಾರತ ಸರ್ಕಾರ ಪುನರುಚ್ಚರಿಸಿದೆ.

'ಲಭ್ಯವಿರುವ ಕಾನೂನಿನ ಎಲ್ಲ ಆಯ್ಕೆಗಳನ್ನು ನಾವೂ ಪರಿಶೀಲಿಸುತ್ತಿದ್ದೇವೆ. ಭಾರತದಲ್ಲಿ ತೊಂದರೆಗೊಳಗಾಗಿರುವ ಬಳಕೆದಾರರು ಕೋರ್ಟ್ ಮೂಲಕ ಕಾನೂನಿನ ನೆರವು ಪಡೆದುಕೊಳ್ಳಬಹುದು ಎಂದು 'ಎಕ್ಸ್' ಹೇಳಿದೆ.

ಮಂಚ ಪೂರೈಕೆ: ಟೆಂಡರ್ ಮತ್ತೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಮಂಚಗಳನ್ನು ಪೂರೈಸಲು ಅರ್ಹತೆ ಇಲ್ಲದ ಕಂಪನಿಗೆ ನೀಡಿದ್ದ ₹5 ಕೋಟಿ ಮೊತ್ತದ ಟೆಂಡರ್ ಅನ್ನು ಸಮಾಜಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್ ಮತ್ತೆ ರದ್ದು ಮಾಡಿದ್ದಾರೆ.

ಸಮಾಜಕಲ್ಯಾಣ ಇಲಾಖೆ ಅಧೀನದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ ಎರಡು ಸ್ತರದ ಮಂಚಗಳನ್ನು (ಟೂ-ಟಯರ್ ಕಾಟ್) ಪೂರೈಸಲು ಇಲಾಖೆಯ ಆಯುಕ್ತರ ಕಚೇರಿಯ ಟೆಂಡರ್ ಪ್ರಾಧಿಕಾರ ₹5 ಕೋಟಿ ಹಾಗೂ ₹9.5 ಕೋಟಿ ಮೊತ್ತಕ್ಕೆ ಅರ್ಹ ಉತ್ಪಾದಕರು, ಸರಬರಾಜುದಾರರಿಂದ ಇದೇ ವರ್ಷದ ಮಾರ್ಚ್‌ನಲ್ಲಿ ಇ-ಟೆಂಡರ್ ಆಹ್ವಾನಿಸಿತ್ತು. ಆಯ್ಕೆಯಾದ ಕಂಪನಿಗೆ ಅರ್ಹತೆಯೇ ಇಲ್ಲ ಎಂದು ಬೆಂಗಳೂರು ನಗರ ಜಿಲ್ಲಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘ ಸೇರಿದಂತೆ ಹಲವು ಕಂಪನಿಗಳು ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ದೂರು ಸಲ್ಲಿಸಿದ್ದವು.

ವಿಚಾರಣೆ ನಡೆಸಿದ್ದ ಮಣಿವಣ್ಣನ್, ₹5 ಕೋಟಿಯ ಒಂದು ಟೆಂಡರ್ ಅನ್ನು ಅಂದೇ ರದ್ದುಪಡಿಸಿದ್ದರು. ಉಳಿದ ₹9.5 ಕೋಟಿ ಟೆಂಡರ್ ಬಗ್ಗೆ ಮರುಪರಿಶೀಲನೆ ನಡೆಸಬೇಕು. ಸಚಿವ ಸಂಪುಟದ ಅನುಮೋದನೆ ಪಡೆದು ಎರಡೂ ಮೊತ್ತಕ್ಕೆ ಒಟ್ಟಿಗೆ ಇ-ಟೆಂಡರ್ ಅಧಿಸೂಚನೆ ಹೊರಡಿಸಲು ಕ್ರಮವಹಿಸಬೇಕು. ಈ ಕುರಿತು ಲಿಖಿತ ವರದಿ ಸಲ್ಲಿಸಬೇಕು ಎಂದು ಆದೇಶ ಹೊರಡಿಸಿದ್ದರು. ಟೆಂಡರ್ ರದ್ದಾದರೂ, ಇಲಾಖೆಯ ಆಯುಕ್ತರ ಕಚೇರಿ ₹5 ಕೋಟಿ ಮೊತ್ತದ ಮಂಚಗಳನ್ನು ಪೂರೈಸಲು ಬಿಡ್‌ದಾರರನ್ನು ಆಯ್ಕೆ ಮಾಡಿತ್ತು.

ಈ ಕುರಿತು 'ಪ್ರಜಾವಾಣಿ' ಜೂನ್ 28ರ ಸಂಚಿಕೆಯಲ್ಲಿ 'ಟೆಂಡರ್ ರದ್ದಾದರೂ ಮಂಚ' ಶೀರ್ಷಿಕೆ ಅಡಿ ವಿಶೇಷ ವರದಿ ಪ್ರಕಟಿಸಿತ್ತು. ವರದಿ ಆಧಾರದಲ್ಲಿ ಸ್ವಯಂ ವಿಚಾರಣೆ ಕೈಗೆತ್ತುಕೊಂಡ ಪ್ರಧಾನ ಕಾರ್ಯದರ್ಶಿ, ಟೆಂಡರ್ ಅನ್ನು ರದ್ದು ಮಾಡಿ ಆದೇಶ ಹೊರಡಿಸಿದ್ದಾರೆ.

ತಾಂತ್ರಿಕ ವರದಿಯೇ ನಿಯಮಬಾಹಿರ

ಮಂಚಗಳ ಗುಣಮಟ್ಟ ಕುರಿತು ನಿಯಮ ಬಾಹಿರವಾಗಿ ತಾಂತ್ರಿಕ ವರದಿ ನೀಡಿದ್ದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಇಬ್ಬರು ಅಧ್ಯಾಪಕರಿಗೆ ತಾಂತ್ರಿಕ ಶಿಕ್ಷಣ ಇಲಾಖೆ ನೋಟಿಸ್ ನೀಡಿದೆ.

₹14.5 ಕೋಟಿ ಮೊತ್ತದ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಗುತ್ತಿಗೆದಾರರು ನೀಡುವ ಮಂಚಗಳ ಗುಣಮಟ್ಟ ಪರಿಶೀಲಿಸಿ, ತಾಂತ್ರಿಕ ವರದಿ ನೀಡಲು ಪರಿಣತರನ್ನು ನಿಯೋಜಿಸುವಂತೆ ಸಮಾಜಕಲ್ಯಾಣ ಇಲಾಖೆ ಆಯುಕ್ತರು ತಾಂತ್ರಿಕ ಶಿಕ್ಷಣ ಇಲಾಖೆಗೆ ಪತ್ರ ಬರೆದಿದ್ದರು. ಆದರೆ, ಪತ್ರ ಇದುವರೆಗೂ ಇಲಾಖೆ ನಿರ್ದೇಶಕರಿಗೆ ತಲುಪಿಲ್ಲ.

ಮಂಚಗಳ ಗುಣಮಟ್ಟ ಪರಿಶೀಲನೆಗೆ, ಟೆಂಡರ್ ಪರಿಶೀಲನಾ ಸಮಿತಿಗೆ ತಾಂತ್ರಿಕ ಪರಿಣತರನ್ನು ನಿಯೋಜನೆ ಮಾಡದಿದ್ದರೂ, ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಧ್ಯಾಪಕರಾದ ಎ.ಎಂ, ಸತೀಶ್, ಎನ್. ಮಲ್ಲಿಕಾರ್ಜುನ ಭಾಗವಹಿಸಿ, ನಿಯಮಬಾಹಿರವಾಗಿ ತಾಂತ್ರಿಕ ಗುಣಮಟ್ಟದ ವರದಿ ಸಲ್ಲಿಸಿದ್ದಾರೆ. ಈ ಇಬ್ಬರಿಗೆ ತಾಂತ್ರಿಕ ಶಿಕ್ಷಣ ಇಲಾಖೆ ನೋಟಿಸ್ ನೀಡಿದ್ದು, ಕಾನೂನು ಕ್ರಮಕ್ಕೆ ಮುಂದಾಗಿದೆ.

ಕಾಲ್ತುಳಿತಕ್ಕೆ ಆರ್‌ಸಿಬಿಯೇ ಕಾರಣ...

ಒಂದನೇ ಪುಟದಿಂದ...

ಅದಾದ ಮೇಲೆ ಕಬ್ಬನ್‌ಪಾರ್ಕ್ ಠಾಣೆಯಲ್ಲಿ ದಾಖಲಾಗಿದ್ದ ಎರಡೂ ಪ್ರಕರಣಗಳ ತನಿಖೆಯನ್ನೂ ರಾಜ್ಯ ಸರ್ಕಾರವು ಸಿಐಡಿಗೆ ವಹಿಸಿತ್ತು. ಕಾಲ್ತುಳಿತಕ್ಕೆ ಕಾರಣವಾದ ಅಂಶಗಳನ್ನು ಸಿಐಡಿ ತನಿಖಾಧಿಕಾರಿಗಳು ಪತ್ತೆ ಮಾಡಿದ್ದಾರೆ.

'ಘಟನೆಗೆ ಸಂಬಂಧಿಸಿದಂತೆ ಸಾಮಾಜಿಕ ಮಾಧ್ಯಮ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಹರಿದಾಡಿದ ವಿಡಿಯೊಗಳನ್ನು ವಶಕ್ಕೆ ಪಡೆದು ಪರಿಶೀಲಿಸಲಾಗಿದೆ. ಕ್ರೀಡಾಂಗಣದ ಗೇಟ್‌ಗಳ ಬಳಿಯ ಅವ್ಯವಸ್ಥೆ, ಪೊಲೀಸರ ನಿಯೋಜನೆ ಹಾಗೂ ನೂಕುನುಗ್ಗಲು ಉಂಟಾಗಲು ಕಾರಣವೇನು ಎಂಬುದರ ಬಗ್ಗೆ ತನಿಖೆ ನಡೆಸಲಾಗಿದೆ. ಈ ಎಲ್ಲ ಅಂಶಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಆರ್‌ಸಿಬಿ ತಂಡವು ಐಪಿಎಲ್ ಟ್ರೋಫಿ ಜಯಿಸಿದರೆ ಜೂನ್ 4ರಂದೇ ವಿಜಯೋತ್ಸವ ಆಯೋಜನೆ ಮಾಡಬೇಕೆಂದು ಆಡಳಿತ ಮಂಡಳಿ ನಿರ್ಧಾರ ಮಾಡಿತ್ತು. ಆರ್‌ಸಿಬಿ ಸಿಇಒ ರಾಜೇಶ್ ಮೆನನ್, ಮಾರುಕಟ್ಟೆ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆ ಅವರು ಕಾರ್ಯಕ್ರಮ ಆಯೋಜನೆಯ ನಿರ್ಧಾರ ಮಾಡಿದ್ದರು. ವಿರಾಟ್ ಕೊಹ್ಲಿಯವರ ಕಾರಣ ಮುಂದಿಟ್ಟಿದ್ದ ಕೊಹ್ಲಿ ಆಪ್ತ ನಿಖಿಲ್ ಸೋಸ್ಲೆ ಕೆಎಸ್‌ಸಿಎ ಮೇಲೆ ಒತ್ತಡ ತಂದು ಕಾರ್ಯಕ್ರಮ ಆಯೋಜಿಸಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿದೆ. ಅದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಕಾರ್ಯಕ್ರಮ ಮುಂದೂಡಿಕೆ ಬಗ್ಗೆ ಪೊಲೀಸ್ ಇಲಾಖೆ ಹಾಗೂ ಕೆಎಸ್‌ಸಿಎ ಅಭಿಪ್ರಾಯ ವ್ಯಕ್ತಪಡಿಸಿತ್ತು. ಆದರೆ, ಕೊಹ್ಲಿ ಕಾರಣ ಹೇಳಿ ಜೂನ್ 4ರಂದೇ ಕಾರ್ಯಕ್ರಮ ಆಯೋಜನೆ ಆಗಬೇಕು ಎಂದು ನಿಖಿಲ್ ಸೋಸಲೆ ಒತ್ತಡ ಹೇರಿದ್ದರು. ಕೊಹ್ಲಿ ಲಂಡನ್‌ಗೆ ಹೋಗಬೇಕಿದ್ದು, ವಿಜಯೋತ್ಸವ ಮುಂದೂಡಿದರೆ ಕೊಹ್ಲಿ ಕಾರ್ಯಕ್ರಮಕ್ಕೆ ಬರುವುದಿಲ್ಲ ಎಂಬುದಾಗಿ ಕಾರಣ ನೀಡಿದ್ದರು. ನಿಖಿಲ್ ಸೋಸಲೆ ಒತ್ತಡದಿಂದಾಗಿ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕೇರಳದ ಅಶ್ರಫ್ ಕುಟುಂಬಕ್ಕೆ ₹15 ಲಕ್ಷ ನೆರವು

ಮಂಗಳೂರು: ಗುಂಪು ಹಲ್ಲೆಯಿಂದ ಕುಡುಪುನಲ್ಲಿ ಹತ್ಯೆಯಾಗಿದ್ದ ಕೇರಳದ ಅಶ್ರಫ್ ಅವರ ಕುಟುಂಬಕ್ಕೆ ಸಚಿವ ಜಮೀರ್ ಅಹ್ಮದ್ ಖಾನ್ ₹10 ಲಕ್ಷ ಹಾಗೂ ವಿಧಾನಸಭೆಯ ಅಧ್ಯಕ್ಷ ಯು.ಟಿ.ಖಾದರ್ ₹5 ಲಕ್ಷ ವೈಯಕ್ತಿಕ ನೆರವು ನೀಡಿದರು.

ಬೆಂಗಳೂರಿನಲ್ಲಿಯ ಖಾದರ್ ಅವರ ಸರ್ಕಾರಿ ನಿವಾಸದಲ್ಲಿ ಅಶ್ರಫ್ ಅವರ ಮನೆಯವರಿಗೆ ಇತ್ತೀಚೆಗೆ ನೆರವು ಹಸ್ತಾಂತರಿಸಲಾಯಿತು.

ಎಐಸಿಸಿ ಪ್ರಧಾನ ಕಾರ್ಯದರ್ಶಿ, ಸಂಸದ ಕೆ.ಸಿ.ವೇಣುಗೋಪಾಲ್ ಕೋರಿಕೆಯಂತೆ ಈ ನೆರವು ನೀಡಲಾಯಿತು. ಕುಟುಂಬಸ್ಥರೊಂದಿಗೆ ಈ ಮುಖಂಡರು ಚರ್ಚಿಸಿದರು. ಪ್ರಕರಣ ಕುರಿತು ಕಾನೂನು ಹೋರಾಟಕ್ಕೆ ವಿಶೇಷ ಅಭಿಯೋಜಕರನ್ನು ನೇಮಿಸಲು ಸರ್ಕಾರವನ್ನು ಕೋರಲು ತೀರ್ಮಾನಿಸಲಾಯಿತು ಎಂದು ಈ ಕುರಿತ ಪ್ರಕಟಣೆ ತಿಳಿಸಿದೆ.

ಡಿಸಿಇಟಿ: ಆಯ್ಕೆ ದಾಖಲು ಅವಧಿ ವಿಸ್ತರಣೆ

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳ ಎರಡನೇ ವರ್ಷಕ್ಕೆ ನೇರ ಪ್ರವೇಶ ನೀಡುವ ಡಿಸಿಇಟಿ ಮೊದಲ ಸುತ್ತಿನ ಸೀಟು ಹಂಚಿಕೆಗೆ ಇಚ್ಛೆ, ಆಯ್ಕೆಗಳನ್ನು ದಾಖಲಿಸಲು ಜುಲೈ 9ರಂದು ಸಂಜೆ 4ರವರೆಗೆ ಅವಕಾಶ ನೀಡಲಾಗಿದೆ.

ಮೊದಲ ಸುತ್ತಿನ ಸೀಟು ಹಂಚಿಕೆಗೆ ಅಣಕು ಫಲಿತಾಂಶ ಪ್ರಕಟವಾಗಿದ್ದು, ಅಭ್ಯರ್ಥಿಗಳ ಕೋರಿಕೆ ಮೇರೆಗೆ ಆಯ್ಕೆಗಳನ್ನು (ಆಪ್ಷನ್ಸ್) ದಾಖಲಿಸಲು ದಿನಾಂಕ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಕೈ-ಕಮಲ ಆಂತರಿಕ ತುಮುಲ....

ದೂರು– ದುಮ್ಮಾನ ಲಿಖಿತವಾಗಿ ಕೊಡಿ

ಒಂದನೇ ಪುಟದಿಂದ...

ಆ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಹೇಳಿದ್ದೇನೆ. ಮುಖ್ಯಮಂತ್ರಿ ಬದಲಾವಣೆ ಮಾಡುವುದು ಹೈಕಮಾಂಡ್. ಶಾಸಕರಿಗೆ ಕೆಲವು ಆಸೆಗಳು ಇರಬಹುದು. ಆದರೆ, ಈ ವಿಚಾರ ಈಗ ಪ್ರಸ್ತುತ ಅಲ್ಲ' ಎಂದರು.

ಶಾಸಕರಾದ ಎಚ್.ಆರ್. ಗವಿಯಪ್ಪ, ಹಂಪನಗೌಡ ಬಾದರ್ಲಿ, ಶ್ರೀನಿವಾಸ್, ಸಹ ಸದಸ್ಯ ಲತಾ ಮಲ್ಲಿಕಾರ್ಜುನ್ ಮತ್ತಿತರರು ಸುರ್ಜೇವಾಲಾ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಚರ್ಚೆ ನಡೆಸಿದರು.

ಸುರ್ಜೇವಾಲಾ ಅವರನ್ನು ಭೇಟಿ ಮಾಡಿದ ಶಾಸಕ ಆರ್.ವಿ. ದೇಶಪಾಂಡೆ, 'ಮುಖ್ಯಮಂತ್ರಿ ಬದಲಾವಣೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತ ಚರ್ಚೆ ಪಕ್ಷದಲ್ಲಿ ಕಾರ್ಯಕರ್ತರ ಗೊಂದಲಕ್ಕೆ ಕಾರಣವಾಗಿದೆ. ಈ ರೀತಿ ಚರ್ಚೆ ಮಾಡುವುದು ಸರಿಯಲ್ಲ. ಬಹಿರಂಗ ಹೇಳಿಕೆಗಳಿಗೆ ಕಡಿವಾಣ ಹಾಕಬೇಕು' ಎಂದು ಮನವಿ ಮಾಡಿದ್ದಾರೆಂದು ಗೊತ್ತಾಗಿದೆ

'ಕೆಲವು ಸಮಸ್ಯೆ ಇರುವುದು ನಿಜ. ನಾನೂ ಸುದೀರ್ಘ ಅವಧಿ ಸಚಿವನಾದವನು. ಶಾಸಕರ ಸಮಸ್ಯೆಗಳನ್ನು ಹತ್ತಿರದಿಂದ ಕಂಡವನು. ಶಾಸಕರಿಂದ ವೈಯುಕ್ತಿಕವಾಗಿ ಅಭಿಪ್ರಾಯ ಕೇಳುವುದರಿಂದ ಪಕ್ಷ ಮತ್ತು ಸರ್ಕಾರದಲ್ಲಿ ಸುಧಾರಣೆ ತರಲು ಸಾಧ್ಯವಾಗಲಿದೆ' ಎಂದು ಅವರು ಸಲಹೆ ನೀಡಿದ್ದಾರೆ.

'ಬಿಎಸ್‌ವೈ ಮತ್ತೇಕೆ ಮರಳಿದರೋ'

ಒಂದನೇ ಪುಟದಿಂದ...

ಸಿದ್ದೇಶ್ವರರನ್ನು ಪಕ್ಷದಲ್ಲಿ ಉಳಿಸಿಕೊಳ್ಳುವ ಹೊಣೆ ನಮ್ಮೆಲ್ಲರ ಮೇಲಿದೆ' ಎಂದು ಹೇಳಿದರು.

'ಇದು ರಾಜಕೀಯ ಸಭೆಯಲ್ಲ' ಎಂದು ಕಾರ್ಯಕ್ರಮದಲ್ಲಿ ಹೇಳಿದ ಬಹುತೇಕರು, ಬಿ.ಎಸ್.ಯಡಿಯೂರಪ್ಪ ಕುಟುಂಬದ ವಿರುದ್ಧ ವಾಗ್ದಾಳಿ ನಡೆಸಿದರು. 'ಲೋಕಸಭಾ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ಮಾಡಿದವರನ್ನು ಹೊರಹಾಕಬೇಕು' ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೆಸರು ಉಲ್ಲೇಖಿಸದೇ ಒತ್ತಾಯಿಸಿದರು.

'ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯ ಬೆನ್ನಿಗೆ ಚೂರಿ ಹಾಕಿದವರಿಗೆ ತಕ್ಕ ಉತ್ತರ ನೀಡಲೇಬೇಕಿದೆ'. ಪಕ್ಷಕ್ಕಿಂತ ದೊಡ್ಡವರು ಯಾರೂ ಇಲ್ಲ' ಎಂದು ಮಾಜಿ ಸಚಿವ ಕುಮಾರ್ ಬಂಗಾರಪ್ಪ ಹೇಳಿದರು.

'ನಾನು ಬಿಜೆಪಿಯ ಶಿಸ್ತಿನ ಸಿಪಾಯಿ. ಭದ್ರಾ ಜಲಾಶಯದ ಬಲದಂಡೆ ನಾಲೆ ವಿಚಾರವಾಗಿ ಚರ್ಚಿಸಲು ಸಚಿವ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿದ್ದೆನೇ ವಿನಾ ಬಿಜೆಪಿ ತೊರೆದು ಕಾಂಗ್ರೆಸ್ ಸೇರುವುದಕ್ಕಲ್ಲ' ಎಂದು ಜಿ.ಎಂ.ಸಿದ್ದೇಶ್ವರ ಸ್ಪಷ್ಟಪಡಿಸಿದರು.

> **ಕೆಲವು ವಿಷಯಗಳನ್ನು ಹೇಳಿಕೊಳ್ಳಲು ಶಾಸಕರು ಒಂದಷ್ಟು ಇರುಸುಮುರುಸು ಅನುಭವಿಸುತ್ತಿದ್ದಾರೆ. ಇದನ್ನು ಲಿಖಿತ ರೂಪದಲ್ಲಿ ಕೊಡುವಂತೆ ಹೇಳಿದ್ದೇನೆ**
> **ರಣದೀಪ್ ಸಿಂಗ್ ಸುರ್ಜೇವಾಲಾ**
> ಕಾಂಗ್ರೆಸ್ ಉಸ್ತುವಾರಿ

> **ಜಿ.ಎಂ.ಸಿದ್ದೇಶ್ವರ ಅವರ ಜೊತೆಗೆ ನಾವಿದ್ದೇವೆ. ಒಗ್ಗಟ್ಟಿನಲ್ಲಿ ಬಲವಿದೆ, ಯಶಸ್ಸು ಕೂಡಾ ಇದೆ. ಪಕ್ಷವನ್ನು ಕಟ್ಟಿ ಬೆಳೆಸುವ ಸಂಕಲ್ಪ ಮಾಡಿದ್ದೇವೆ**
> **ಪ್ರತಾಪ್ ಸಿಂಹ**
> ಮಾಜಿ ಸಂಸದ

ಚಿಟಿಕೆ ಸುದ್ದಿ

ವಿದ್ಯಾರ್ಥಿನಿ ಗರ್ಭಿಣಿ ಕ್ಲರ್ಕ್ ಬಂಧನ

ಚಿಕ್ಕಬಳ್ಳಾಪುರ: ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಎಸಗಿ ಆಕೆಯನ್ನು ಗರ್ಭಿಣಿ ಮಾಡಿರುವ ಆರೋಪದಡಿ ಪದವಿ ಕಾಲೇಜೊಂದರ ಎಸ್‌ಡಿಎ ಭೀಮರಾಜ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ವಿದ್ಯಾರ್ಥಿನಿ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಯ ಸಿದ್ಧತೆಗೆ ಸಹಕರಿಸುವುದಾಗಿ ವಿದ್ಯಾರ್ಥಿನಿಯನ್ನು ಮನೆಗೆ ಕರೆದೊಯ್ದು ಭೀಮರಾಜ್ ಅತ್ಯಾಚಾರ ಎಸಗಿದ್ದಾನೆ.

ವಿದ್ಯಾರ್ಥಿನಿ ನೀಡಿದ ದೂರಿನ ಮೇರೆಗೆ ಪೊಲೀಸರು ಭೀಮರಾಜ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಆರೋಪಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳು ಇದ್ದಾರೆ. ಭೀಮರಾಜ್ ವಿರುದ್ಧ ಮಹಿಳಾ ಠಾಣೆಯಲ್ಲಿ ಅತ್ಯಾಚಾರ, ಪ್ರಾಣ ಬೆದರಿಕೆ, ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ದೂರು ದಾಖಲಾಗಿದೆ.

ಬಾಲಕಿ ಮೇಲೆ ಅತ್ಯಾಚಾರ 20 ವರ್ಷ ಜೈಲು

ಕೊಪ್ಪಳ: ಬಾಲಕಿ ಮೇಲೆ ಅತ್ಯಾಚಾರ ಎಸಗಿದ ತುಮಕೂರು ಜಿಲ್ಲೆಯ ಬೀರನಕಲ್ ಗ್ರಾಮದ ರಮೇಶ ಎಂ. ಎಂಬಾತನಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯ 20 ವರ್ಷ ಜೈಲು ಹಾಗೂ ₹25 ಸಾವಿರ ದಂಡ ವಿಧಿಸಿದೆ.

ಇನ್‌ಸ್ಟಾಗ್ರಾಂ ಮೂಲಕ ಬಾಲಕಿಯನ್ನು ಪರಿಚಯಿಸಿಕೊಂಡಿದ್ದ ರಮೇಶ ಆಗಾಗ್ಗೆ ಫೋನ್‌ನಲ್ಲಿ ಮಾತನಾಡಿ ಸಲುಗೆ ಬೆಳೆಸಿಕೊಂಡಿದ್ದ. 2023ರ ಅಕ್ಟೋಬರ್‌ನಲ್ಲಿ ಬಾಲಕಿ ಮನೆಯಲ್ಲಿ ಒಬ್ಬಳೇ ಇದ್ದಾಗ ಮದುವೆಯಾಗೋಣ ಎಂದು ನಂಬಿಸಿ ಅತ್ಯಾಚಾರ ಎಸಗಿದ್ದಾನೆ ಎಂದು ಇಲ್ಲಿನ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈಗಿನ ಪೊಲೀಸ್ ಇನ್‌ಸ್ಪೆಕ್ಟರ್ ಆಂಜಿನೇಯ ಡಿ.ಎಸ್. ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಧೀಶ ಕುಮಾರ ಡಿ.ಕೆ. ಆದೇಶ ಪ್ರಕಟಿಸಿದರು. ಸರ್ಕಾರದ ಪರ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಗೌರಮ್ಮ ದೇಸಾಯಿ ವಾದ ಮಂಡಿಸಿದ್ದರು.

ಅತ್ಯಾಚಾರ ಪಶ್ಚಿಮ ಬಂಗಾಳದ ಅಪರಾಧಿಗೆ ಶಿಕ್ಷೆ

ಕೊಪ್ಪಳ: ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಪಶ್ಚಿಮ ಬಂಗಾಳದ ಮಾಣಿಕರಾಯ್ ಚಂದುರಾಯ್ ಎಂಬಾತನ ಮೇಲಿನ ಆರೋಪ ಸಾಬೀತಾಗಿದ್ದು, ಇಲ್ಲಿನ ಪೋಕ್ಸೊ ನ್ಯಾಯಾಲಯವು 20 ವರ್ಷ ಜೈಲು ಹಾಗೂ ₹15 ಸಾವಿರ ದಂಡ ವಿಧಿಸಿದೆ.

ಪಶ್ಚಿಮ ಬಂಗಾಳದಿಂದ ಬಂದಿದ್ದ ಬಾಲಕಿಯನ್ನು ಪರಿಚಯಿಸಿಕೊಂಡ ಮಾಣಿಕರಾಯ್ 2022ರಲ್ಲಿ ಪ್ರೀತಿಸುವುದಾಗಿ ನಂಬಿಸಿ ಪುಸಲಾಯಿಸಿ ಹೊಸಪೇಟೆಗೆ ಕರೆದುಕೊಂಡು ಹೋಗಿ ಶ್ರೀರಂಗಪಟ್ಟಣದಲ್ಲಿ ಕೊಠಡಿ ಬಾಡಿಗೆ ಪಡೆದು ಅತ್ಯಾಚಾರ ಎಸಗಿದ್ದ.

ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಪಬ್ಲಿಕ್ ಪ್ರಾಸಿಕ್ಯೂಟರ್ ಗೌರಮ್ಮ ದೇಸಾಯಿ ವಾದ ಮಂಡಿಸಿದ್ದರು.

ದೇಣಿಗೆ ನೆಪ ಇಸ್ಕಾನ್‌ಗೆ ₹ 26 ಸಾವಿರ ವಂಚನೆ

ಮಂಗಳೂರು: ದೇಣಿಗೆ ನೀಡುವ ನೆಪದಲ್ಲಿ ಇಸ್ಕಾನ್ ದೇವಸ್ಥಾನಕ್ಕೆ ₹ 26 ಸಾವಿರ ವಂಚನೆ ನಡೆಸಿದ ಬಗ್ಗೆ ಸುರತ್ಕಲ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜೂನ್ 6ರಂದು ರಾತ್ರಿ ಅಪರಿಚಿತ ಸಂಖ್ಯೆಯಿಂದ ಕರೆ ಬಂತು. ಮಾತನಾಡಿದ ವ್ಯಕ್ತಿ ತನ್ನನ್ನು ಯೆಯ್ಯಾಡಿಯಲ್ಲಿ ಬಾಲಾಜಿ ಟ್ರಾನ್ಸ್‌ಪೋರ್ಟ್ ಸಂಸ್ಥೆಯನ್ನು ನಡೆಸುತ್ತಿರುವ ರಾಹುಲ್ ಎಂದು ಪರಿಚಯಿಸಿಕೊಂಡಿದ್ದ.

ಇಸ್ಕಾನ್ ದೇವಸ್ಥಾನಕ್ಕೆ ದೇಣಿಗೆ ನೀಡುವುದಾಗಿ ತಿಳಿಸಿದ್ದ ಆತ ನನ್ನ ಮೊಬೈಲ್‌ಗೆ ಸಂಜೆ 7.20 ಗಂಟೆಗೆ ₹ 1 ಕಳುಹಿಸಿದ್ದ. ಬಳಿಕ ಹಣ ವರ್ಗಾವಣೆಯಾದ ಬಗ್ಗೆ ಸಂದೇಶ ಕಳುಹಿಸಿದ್ದ. ನಿಮಗೆ ₹ 3 ಸಾವಿರದ ಬದಲು ತಪ್ಪಿ ₹ 30ಸಾವಿರ ಹಣ ವರ್ಗಾವಣೆಯಾಗಿದೆ. ಅದರಲ್ಲಿ₹ 26 ಸಾವಿರವನ್ನು ಮರಳಿಸುವಂತೆ ತಿಳಿಸಿದ. ಆತನ ಮಾತನ್ನು ನಂಬಿ, ಆತ ಹೇಳಿದ ಖಾತೆಗೆ ₹ 26ಸಾವಿರವನ್ನು ಪಾವತಿಸಿದ್ದೆ. ಬಳಿಕ ಮತ್ತೆ ಕರೆ ಮಾಡಿದ ಆರೋಪಿ ಮತ್ತೆ ₹ 40 ಸಾವಿರ ಹಣ ವರ್ಗಾವಣೆ ಆಗಿದ್ದು, ಅದನ್ನೂ ಮರಳಿಸುವಂತೆ ಕೋರಿದ್ದ.

ಆರೋಪಿ ರಾಹುಲ್‌ನ ಗೂಗಲ್ ಪೇ ಖಾತೆಯಲ್ಲಿ ಸಂಜಯ್ ಕುಮಾರ್ ಎಂದು ಬರೆದಿತ್ತು.

ಆರೋಪಿ ರಾಹುಲ್ ಅಲಿಯಾಸ್ ಸಂಜಯ್ ಕುಮಾರ್ ಹಣ ವರ್ಗಾವಣೆಯಾದ ಬಗ್ಗೆ ಸುಳ್ಳು ಸಂದೇಶ ಕಳುಹಿಸಿ ವಂಚಿಸಿದ್ದಾನೆ ಎಂದು ಸಂತ್ರಸ್ತ ವ್ಯಕ್ತಿ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೦ Volume 160	ಬೆಂಗಳೂರು, ಬುಧವಾರ, ೦೨ ಜುಲೈ, ೨೦೨೫ (ಆಷಾಡ ೧೧, ಶಕವರ್ಷ ೧೯೪೭) BENGALURU, WEDNESDAY, 02 JULY, 2025 (ASHADHA 11, SHAKAVARSHA 1947)	ಸಂಚಿಕೆ ೧೨೬ Issue 126

ಭಾಗ 3

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ನಮೂನೆ–V

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.

[ಕರ್ನಾಟಕ ತಿದ್ದುಪಡಿ ನಿಯಮ–5, 20(1) (ಬಿ)]

ಸಂಖ್ಯೆ:ಕಗೃಮಂ/ಭೂಸ್ವಾವಿ/ಬೆಂಗಳೂರು/ಬಿ.ಎಂ.ಕಾವಲ್/35/2025–26 ದಿನಾಂಕ: 23–06–2025

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013ರ ಕಲಂ –11(1)ರ ಮೇರೆಗೆ ಅಧಿಸೂಚನೆ

ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ವಸತಿ ಯೋಜನೆಗಾಗಿ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ. ಕಾವಲ್ ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)**ಕ್ಕೆ ಅನುಗುಣವಾಗಿ **ಕರ್ನಾಟಕ ರಾಜ್ಯಕ್ಕೆ** ಅನ್ವಯಿಸುವಂತೆ **ದಿನಾಂಕ: 23–07–2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ – 2019** (2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 16)ರ ಕಲಂ–10(ಎ)ರಡಿ ಮೂಲ ಕಾಯ್ದೆಯ ಅಧ್ಯಾಯ–II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸರ್ಕಾರದ ಸಂಖ್ಯೆ: ಆರ್‌ಡಿ/62/ಎಕ್ಯೂಬಿ/2025 ದಿನಾಂಕ: 21–04–2025ರ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಈ ಅಧಿಸೂಚನೆ ರಾಜ್ಯ ಪತ್ರದಲ್ಲಿ ದಿನಾಂಕ: 05–05–2025ರಂದು ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013** (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ–12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013** (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ–11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಭಂದಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ –15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿ–1, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ : ಬೆಂಗಳೂರು ನಗರ   ತಾಲ್ಲೂಕು: ಬೆಂಗಳೂರು ದಕ್ಷಿಣ   ಹೋಬಳಿ: ಕೆಂಗೇರಿ   ಗ್ರಾಮ ಬಿ.ಎಂ. ಕಾವಲ್(ಬ್ಲಾಕ್–I)

ಕ್ರ. ಸಂ.	ಖಾತೆದಾರರ ಹೆಸರು (ಪಹಣಿಯಂತೆ)		ಸರ್ವೆ / ಖಾತಾ ನಂಬರ್	ಸರ್ವೆ/ಖಾತಾ ನಂಬರಿನಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತಾರ ಅನ್ವಯ)		ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚಕ್ಕುಬಂದಿ /ಸರಹದ್ದು				ಷರಾ
	ಭೂಮಾಲೀಕರ / ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)	ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1	2	3	4	5	6	7	8	9	10	11	12	13	14
1.	ಎ. ಎಂ. ನಾರಾಯಣಸ್ವಾಮಿರಾಜು ಬಿನ್ ಮುನಿಸ್ವಾಮಿರಾಜು	ಎ. ಎಂ. ನಾರಾಯಣಸ್ವಾಮಿರಾಜು ಬಿನ್ ಮುನಿಸ್ವಾಮಿರಾಜು	30/2	4–29	0–02	4–27	0–02	ಖುಷ್ಕಿ	ಸ ನಂ. 30/1ಬಿ	ಸ ನಂ. 32	ಹಳ್ಳ/ಗಂಗಸಂದ್ರ ಗ್ರಾಮದ ಗಡಿ	ಸ ನಂ. 31	
2.	ಎ. ಎಂ. ನಾರಾಯಣಸ್ವಾಮಿರಾಜು ಎಸ್. ಗಂಗಾಧರ್ ಬಿನ್ ಲೇ. ಸಿದ್ದಲಿಂಗಪ್ಪ ಎನ್. ವೆಂಕಟೇಶರೆಡ್ಡಿ ಬಿನ್ ಲೇ. ನಾರಾಯಣಪ್ಪ ಎನ್. ಸಂಧ್ಯಾದೇವಿ ಬಿನ್ ಲೇ. ನಾರಾಯಣಪ್ಪ ಮಂಜುಳ ಶರ್ಮ ಬಿನ್ ಲೇ. ನಾರಾಯಣಪ್ಪ ವಿಜಯಮ್ಮ ಬಿನ್ ಲೇ. ನಾರಾಯಣಪ್ಪ ಜಿ. ಟಿ. ನಂಜಾರೆಡ್ಡಿ ಬಿನ್ ಲೇ. ತಿಮ್ಮಾರೆಡ್ಡಿ ವೈ. ವಿ. ಅಣ್ಣಯ್ಯ ಎ ಷೆಡ್ಯೂಲ್ ಬಿನ್ ವೆಂಕಟಪ್ಪ ಕೆ. ಮಂಜುನಾಥ್ ಬಿನ್ ಲೇ. ಕೃಷ್ಣಪ್ಪ ಜೆ. ಕೆ. ಆನಂದ್ ಬಿನ್ ಲೇ. ಕೃಷ್ಣಪ್ಪ ಕೆ. ಮುನಿಸಂಜೀವಪ್ಪ ಬಿನ್ ಲೇ. ಕೃಷ್ಣಪ್ಪ ನಾಗೇಂದ್ರ ಪ್ರಸಾದ್ ಎಸ್. ಬಿನ್ ಲೇ. ಎನ್. ಆರ್. ಶೇಷಗಿರಿ ರಾವ್ ಕೃಷ್ಣಪ್ಪ ಬಿನ್ ಅಬ್ಬಯ್ಯಪ್ಪ ನಂಜಮ್ಮ ಕೋಂ ಲೇ. ನಾರಾಯಣಸ್ವಾಮಿ	ಎ. ಎಂ. ನಾರಾಯಣಸ್ವಾಮಿರಾಜು ಎಸ್. ಗಂಗಾಧರ್ ಬಿನ್ ಲೇ. ಸಿದ್ದಲಿಂಗಪ್ಪ ಎನ್. ವೆಂಕಟೇಶರೆಡ್ಡಿ ಬಿನ್ ಲೇ. ನಾರಾಯಣಪ್ಪ ಎನ್. ಸಂಧ್ಯಾದೇವಿ ಬಿನ್ ಲೇ. ನಾರಾಯಣಪ್ಪ ಮಂಜುಳ ಶರ್ಮ ಬಿನ್ ಲೇ. ನಾರಾಯಣಪ್ಪ ವಿಜಯಮ್ಮ ಬಿನ್ ಲೇ. ನಾರಾಯಣಪ್ಪ ಜಿ. ಟಿ. ನಂಜಾರೆಡ್ಡಿ ಬಿನ್ ಲೇ. ತಿಮ್ಮಾರೆಡ್ಡಿ ವೈ. ವಿ. ಅಣ್ಣಯ್ಯ ಎ ಷೆಡ್ಯೂಲ್ ಬಿನ್ ವೆಂಕಟಪ್ಪ ಕೆ. ಮಂಜುನಾಥ್ ಬಿನ್ ಲೇ. ಕೃಷ್ಣಪ್ಪ ಜೆ. ಕೆ. ಆನಂದ್ ಬಿನ್ ಲೇ. ಕೃಷ್ಣಪ್ಪ ಕೆ. ಮುನಿಸಂಜೀವಪ್ಪ ಬಿನ್ ಲೇ. ಕೃಷ್ಣಪ್ಪ ನಾಗೇಂದ್ರ ಪ್ರಸಾದ್ ಎಸ್. ಬಿನ್ ಲೇ. ಎನ್. ಆರ್. ಶೇಷಗಿರಿ ರಾವ್ ಕೃಷ್ಣಪ್ಪ ಬಿನ್ ಅಬ್ಬಯ್ಯಪ್ಪ ನಂಜಮ್ಮ ಕೋಂ ಲೇ. ನಾರಾಯಣಸ್ವಾಮಿ	31	13–23	0–23 0–04	12–36	0–23 0–04	ಖುಷ್ಕಿ	ಸ ನಂ. 36	ಸ ನಂ. 32, 34	ಸ ನಂ. 30	ಸ ನಂ. 36 34/15,16	
3.	ವೈ. ವಿ. ಅಣ್ಣಯ್ಯ ಎ ಷೆಡ್ಯೂಲ್ ಬಿನ್ ವೆಂಕಟಪ್ಪ ಎಸ್. ಎನ್. ರಾಜಾರಾಂ	ವೈ. ವಿ. ಅಣ್ಣಯ್ಯ ಎ ಷೆಡ್ಯೂಲ್ ಬಿನ್ ವೆಂಕಟಪ್ಪ ಎಸ್. ಎನ್. ರಾಜಾರಾಂ	32/1ಎ1	3–03	0–05	2–38	0–05	ಖುಷ್ಕಿ	ಸ ನಂ. 30, 31	ಗಂಗಸಂದ್ರ ಗ್ರಾಮದ ಗಡಿ/ ಹಳ್ಳ	ಗಂಗಸಂದ್ರ ಗ್ರಾಮದ ಗಡಿ/ ಹಳ್ಳ	ಸ ನಂ. 34	
4.	ಎ. ಸುರೇಶ್ ಬಿನ್ ವೈ. ವಿ. ಅಣ್ಣಯ್ಯ ಎಸ್. ಎನ್. ರಾಜಾರಾಂ	ಎ. ಸುರೇಶ್ ಬಿನ್ ವೈ. ವಿ. ಅಣ್ಣಯ್ಯ ಎಸ್. ಎನ್. ರಾಜಾರಾಂ	32/1ಎ2	2–35	–	2–35	–	ಖುಷ್ಕಿ					
5.	ಎ. ಮೋಹನ್‌ಕುಮಾರ್ ಬಿ ಷೆಡ್ಯೂಲ್ ಬಿನ್ ವೈ. ವಿ. ಅಣ್ಣಯ್ಯ ಎಸ್. ಎನ್. ರಾಜಾರಾಂ	ಎ. ಮೋಹನ್‌ಕುಮಾರ್ ಬಿ. ಷೆಡ್ಯೂಲ್ ಬಿನ್ ವೈ. ವಿ. ಅಣ್ಣಯ್ಯ ಎಸ್. ಎನ್. ರಾಜಾರಾಂ	32/1ಎ3	2–39	0–04	2–35	0–04	ಖುಷ್ಕಿ					
6.	ಎಸ್. ಎನ್. ರಾಜಾರಾಂ	ಎಸ್. ಎನ್. ರಾಜಾರಾಂ	32/1ಬಿ ರ ಪೈಕಿ	4–21	0–10	4–00.08	–	ಖುಷ್ಕಿ					
7.	ಎಸ್. ಗಂಗಾಧರ್ ಬಿನ್ ಲೇ. ಸಿದ್ದಿಂಗಪ್ಪ	ಎಸ್. ಗಂಗಾಧರ್ ಬಿನ್ ಲೇ. ಸಿದ್ದಿಂಗಪ್ಪ	32/2	4–10	0–10	4–00	0–10	ಖುಷ್ಕಿ					
8.	ಎನ್. ಲಕ್ಷ್ಮಣ ಬಿನ್ ನರಸೇಗೌಡ ಆರ್. ಮೋಹನ್ ಬಿನ್ ಲೇ. ರಾಮಯ್ಯ ಆರ್. ನರಿಸಂಹರಾಜ್ ಬಿನ್ ಲೇ. ರಾಮಯ್ಯ ದೊಡ್ಡನಂಜಯ್ಯ ಬಿನ್ ಈರಪ್ಪ ಈರಣ್ಣ ಬಿನ್ ಲೇ. ಓಬಳಯ್ಯ ರಾಮಸಂಜೀವಯ್ಯ ಬಿನ್ ಓಬಳಯ್ಯ ರೇವಮ್ಮ ಕೋಂ ಲೇ. ಕೃಷ್ಣಪ್ಪ ಸರ್ಕಾರ	ಎನ್. ಲಕ್ಷ್ಮಣ ಬಿನ್ ನರಸೇಗೌಡ ಆರ್. ಮೋಹನ್ ಬಿನ್ ಲೇ. ರಾಮಯ್ಯ ಆರ್. ನರಿಸಂಹರಾಜ್ ಬಿನ್ ಲೇ. ರಾಮಯ್ಯ ದೊಡ್ಡನಂಜಯ್ಯ ಬಿನ್ ಈರಪ್ಪ ಈರಣ್ಣ ಬಿನ್ ಲೇ. ಓಬಳಯ್ಯ ರಾಮಸಂಜೀವಯ್ಯ ಬಿನ್ ಓಬಳಯ್ಯ ರೇವಮ್ಮ ಕೋಂ ಲೇ. ಕೃಷ್ಣಪ್ಪ ಸರ್ಕಾರ	34/1	14–38	4–18	10–20	4–18	ಖುಷ್ಕಿ	ಸ ನಂ. 34/2 34/8 34/4	ಚಿನ್ನಕುರ್ಚಿ ಗ್ರಾಮದ ಗಡಿ	ಸ ನಂ. 32, ಗಂಗಸಂದ್ರ ಗ್ರಾಮದ ಗಡಿ	ಚಿನ್ನಕುರ್ಚಿ ಗ್ರಾಮದ ಗಡಿ	
9.	ಗುಡ್ಡಯ್ಯ ಬಿನ್ ಚಿಕ್ಕಹನುಮಂತಯ್ಯ	ಗುಡ್ಡಯ್ಯ ಬಿನ್ ಚಿಕ್ಕಹನುಮಂತಯ್ಯ	34/2	13–26	3–20	5–01	3–20	ಖುಷ್ಕಿ	ಸ ನಂ. 31	ಸ ನಂ.34/2ರ ಉಳಿಕೆ	ಸ ನಂ. 32	ಸ ನಂ. 34/9, 15	
10.	ಹೆಚ್. ವಿ. ಸೌಭಾಗ್ಯ ಕೋಂ ಹೆಚ್. ಡಿ. ಗಂಗರಾಜು ಎಸ್. ಜಿ. ಗಿರೀಶ್‌ಕುಮಾರ್ ಬಿನ್ ಹೆಚ್. ಡಿ. ಗಂಗರಾಜು ಹೆಚ್. ವಿ. ರಾಮಚಂದ್ರ ಬಿನ್ ವೆಂಕಟಕೃಷ್ಣಪ್ಪ ಹೆಚ್. ವಿ. ಕೃಷ್ಣಕುಮಾರ್ ಬಿನ್ ವೆಂಕಟಕೃಷ್ಣಪ್ಪ	ಹೆಚ್. ವಿ. ಸೌಭಾಗ್ಯ ಕೋಂ. ಹೆಚ್. ಡಿ. ಗಂಗರಾಜು ಎಸ್. ಜಿ. ಗಿರೀಶ್‌ಕುಮಾರ್ ಬಿನ್ ಹೆಚ್. ಡಿ. ಗಂಗರಾಜು ಹೆಚ್. ವಿ. ರಾಮಚಂದ್ರ ಬಿನ್ ವೆಂಕಟಕೃಷ್ಣಪ್ಪ ಹೆಚ್. ವಿ. ಕೃಷ್ಣಕುಮಾರ್ ಬಿನ್ ವೆಂಕಟಕೃಷ್ಣಪ್ಪ	34/4	15–16	3–16	–	3–16	ಖುಷ್ಕಿ	ಸ ನಂ. 34/4ರ ಉಳಿಕೆ	ಸ ನಂ. 34/1	ಸ ನಂ. 34/8	ಸ ನಂ. 34/5	
11.	ಬಿ. ಎಸ್. ವಿರೂಪಾಕ್ಷಮ್ಮ ಕೋಂ. ಎಸ್. ಜಿ. ಶಿವಣ್ಣ ದೊಡ್ಡನಂಜಯ್ಯ ಬಿನ್ ಈರಪ್ಪ ಗೌರಮ್ಮ ಕೋಂ. ಲೇ. ಡಿ. ವಿ. ಈಶ್ವರರಾವ್	ಬಿ. ಎಸ್. ವಿರೂಪಾಕ್ಷಮ್ಮ ಕೋಂ. ಎಸ್. ಜಿ. ಶಿವಣ್ಣ ದೊಡ್ಡನಂಜಯ್ಯ ಬಿನ್ ಈರಪ್ಪ ಗೌರಮ್ಮ ಕೋಂ. ಲೇ. ಡಿ. ವಿ. ಈಶ್ವರರಾವ್	34/5	22–29	8–31	13–38	8–31	ಖುಷ್ಕಿ	ಸ ನಂ. 179/1, 180/1ಬಿ	ಚಿನ್ನಕುರ್ಚಿ ಗ್ರಾಮದ ಗಡಿ	ಸ ನಂ. 34/4	ಸ ನಂ. 34/6	
12.	ವೆಂಕಟಪ್ಪ ಬಿನ್ ದಾಸಪ್ಪ ಹೆಚ್. ಎಲ್. ಜಯರಾಮ್ ಬಿನ್ ಲೇ. ಹೆಚ್. ಸಿ. ಲಿಂಗಾರೆಡ್ಡಿ	ವೆಂಕಟಪ್ಪ ಬಿನ್ ದಾಸಪ್ಪ ಹೆಚ್. ಎಲ್. ಜಯರಾಮ್ ಬಿನ್ ಲೇ. ಹೆಚ್. ಸಿ. ಲಿಂಗಾರೆಡ್ಡಿ	34/8	12–11	5–29	6–22	5–29	ಖುಷ್ಕಿ	ಸ ನಂ. 34/3,9, 10, 19,11,12	ಸ ನಂ. 34/1	ಸ ನಂ. 34/2	ಸ ನಂ. 34/4	

(ವಿ.ಸೂ: ಅಧಿಸೂಚನೆಯಲ್ಲಿ ತಿಳಿಸಿರುವಂತೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪಣಾ ಅರ್ಜಿಯಲ್ಲಿ ಅಂಚೆ ವಿಳಾಸ ಮತ್ತು ಮೊಬೈಲ್ ನಂಬರನ್ನುತಪ್ಪದೇ ಸ್ಪಷ್ಟವಾಗಿ ನಮೂದಿಸಿ ಸಲ್ಲಿಸುವುದು)

ಘೋಷ್ವಾರೆ

ಗ್ರಾಮ: ಬಿ.ಎಂ. ಕಾವಲ್

ತರಹೆ	ಒಟ್ಟು ವಿಸ್ತೀರ್ಣ (ಎ–ಗು)
ಖುಷ್ಕಿ	70–12.08
ತರಿ	–
ಬಾಗಾಯ್ತು	–
ಖರಾಬು	27–02
ಒಟ್ಟು	97–14.08

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು.

ನಮೂನೆ–V

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.

[ಕರ್ನಾಟಕ ತಿದ್ದುಪಡಿ ನಿಯಮ–5, 20(1) (ಬಿ)]

ಸಂಖ್ಯೆ:ಕಗೃಮಂ/ಭೂಸ್ವಾವಿ/ಬೆಂಗಳೂರು/ಬಿ.ಎಂ.ಕಾವಲ್/36/2025–26 ದಿನಾಂಕ: 23–06–2025

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013ರ ಕಲಂ –11(1)ರ ಮೇರೆಗೆ ಅಧಿಸೂಚನೆ

ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ವಸತಿ ಯೋಜನೆಗಾಗಿ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ. ಕಾವಲ್ ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)**ಕ್ಕೆ ಅನುಗುಣವಾಗಿ **ಕರ್ನಾಟಕ ರಾಜ್ಯಕ್ಕೆ** ಅನ್ವಯಿಸುವಂತೆ **ದಿನಾಂಕ: 23–07–2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ – 2019** (2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 16)ರ ಕಲಂ–10(ಎ)ರಡಿ ಮೂಲ ಕಾಯ್ದೆಯ ಅಧ್ಯಾಯ–II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸರ್ಕಾರದ ಸಂಖ್ಯೆ: ಆರ್‌ಡಿ/62/ಎಕ್ಯೂಬಿ/2025 ದಿನಾಂಕ: 21–04–2025ರ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಈ ಅಧಿಸೂಚನೆ ರಾಜ್ಯ ಪತ್ರದಲ್ಲಿ ದಿನಾಂಕ: 05–05–2025ರಂದು ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013** (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ–12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013** (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ–11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಭಂದಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ –15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿ–1, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಮುಂದುವರಿಯುವುದು.....

ಅನುಸೂಚಿ

ಜಿಲ್ಲೆ : ಬೆಂಗಳೂರು ನಗರ   ತಾಲ್ಲೂಕು: ಬೆಂಗಳೂರು ದಕ್ಷಿಣ   ಹೋಬಳಿ: ಕೆಂಗೇರಿ   ಗ್ರಾಮ ಬಿ.ಎಂ. ಕಾವಲ್(ಬ್ಲಾಕ್–II)

ಕ್ರ. ಸಂ.	ಖಾತೆದಾರರ ಹೆಸರು (ಪಹಣಿಯಂತೆ)		ಸರ್ವೆ / ಖಾತಾ ನಂಬರ್	ಸರ್ವೆ/ಖಾತಾ ನಂಬರಿನಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತಾರ ಅನ್ವಯ)		ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚಕ್ಕುಬಂದಿ /ಸರಹದ್ದು				ಷರಾ
	ಭೂಮಾಲೀಕರ / ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)	ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1	2	3	4	5	6	7	8	9	10	11	12	13	14
1.	ಹೆಚ್. ಡಿ. ಗಂಗರಾಜು ಬಿನ್ ಹೆಚ್. ರೇವಣ್ಣ ಹೆಚ್. ಜಿ. ಗಿರೀಶ್‌ಕುಮಾರ್ ಬಿನ್ ಹೆಚ್. ಡಿ. ಗಂಗರಾಜು ಹೆಚ್. ಜೀವಕುಮಾರ್ ಬಿನ್ ಹೆಚ್. ಡಿ. ಗಂಗರಾಜು	ಹೆಚ್. ಡಿ. ಗಂಗರಾಜು ಬಿನ್ ಹೆಚ್. ರೇವಣ್ಣ ಮತ್ತು ಇತರರು	34/6 ರ ಪೈಕಿ	35–28	16–16	03–16	–	ಖುಷ್ಕಿ	ಸ ನಂ. 181/1	ಚಿನ್ನಕುರ್ಚಿ ಗ್ರಾಮದ ಗಡಿ	ಸ ನಂ. 34/6ರ ಉಳಿಕೆ	ಸ ನಂ. 34/6ರ ಉಳಿಕೆ	
2.	ಖರಾಬು	ಖರಾಬು	35ರ ಪೈಕಿ	93–24	–	15–00	–	ಖುಷ್ಕಿ	ಅಗರ ಗ್ರಾಮದ ಗಡಿ	175/1, 175/2 175/3	36	35ರ ಉಳಿಕೆ	
3.	ಟಿ. ಪಿ. ಸುಜಾತ ಬಿನ್ ಪುಟ್ಟಮಾರಯ್ಯ	ಟಿ. ಪಿ. ಸುಜಾತ ಬಿನ್ ಪುಟ್ಟಮಾರಯ್ಯ	175/1	02–09	–	02–09	–	ಖುಷ್ಕಿ	ಸ ನಂ. 35	ಸ ನಂ.176/7	ಸ ನಂ.36	ಸ ನಂ.175/2	
4.	ಪುಟ್ಟಮಾರಯ್ಯ ಬಿನ್ ಲೇ. ನರಸೇಗೌಡ	ಪುಟ್ಟಮಾರಯ್ಯ ಬಿನ್ ಲೇ. ನರಸೇಗೌಡ	176/4	1–00	–	1–00	–	ಖುಷ್ಕಿ	ಸ ನಂ. 176/6	ಸ ನಂ. 176/3, 4,1	ಸ ನಂ. 36	ಸ ನಂ. 176/5	
5.	ಸುಜಾತ ಮಂಜುನಾಥ ಕೋಂ ಮಂಜುನಾಥ	ಸುಜಾತ ಮಂಜುನಾಥ ಕೋಂ ಮಂಜುನಾಥ	176/5	5–03	0–14	4–29	0–14	ಖುಷ್ಕಿ	ಸ ನಂ. 175/2	ಸ ನಂ. 176/1,8	ಸ ನಂ. 176/2, 6,7	ಸ ನಂ. 177/1,2	
6.	ರುದ್ರಪ್ಪ ಬಿನ್ ಪೆದ್ದಪ್ಪರೆಡ್ಡಿ	ರುದ್ರಪ್ಪ ಬಿನ್ ಪೆದ್ದಪ್ಪರೆಡ್ಡಿ	176/6	2–00	–	2–00	–	ಖುಷ್ಕಿ	ಸ ನಂ.176/7	ಸ ನಂ.176/2	ಸ ನಂ. 36	ಸ ನಂ.176/5	
7.	ವಿ. ಬಾಲಕೃಷ್ಣ ಬಿನ್ ವೆಂಕಟಸ್ವಾಮಪ್ಪ	ವಿ. ಬಾಲಕೃಷ್ಣ ಬಿನ್ ವೆಂಕಟಸ್ವಾಮಪ್ಪ	176/7	2–36	–	2–36	–	ಖುಷ್ಕಿ	ಸ ನಂ. 175/1, 2	ಸ ನಂ. 176/6	ಸ ನಂ. 36	ಸ ನಂ. 176/5	
8.	ಡಿ. ಭಾನುಮತಿ ಕೋಂ ಕೆ. ರವೀಂದ್ರ	ಡಿ. ಭಾನುಮತಿ ಕೋಂ ಕೆ. ರವೀಂದ್ರ	176/8	2–14	0–15	01–39	0–15	ಖುಷ್ಕಿ	ಸ ನಂ. 176/5	ಸ ನಂ. 179/3	ಸ ನಂ. 176/1	ಸ ನಂ. 177/1	
9.	ರುದ್ರಹನುಮಯ್ಯ ಬಿನ್ ರುದ್ರಪ್ಪ ಉ // ದೊಡ್ಡರುದ್ರಪ್ಪತೋಪಯ್ಯ ಬಿನ್ ರುದ್ರಪ್ಪ ಉ// ದೊಡ್ಡರುದ್ರಪ್ಪ ನಾಗಪ್ಪ ಬಿನ್ ರುದ್ರಪ್ಪ ಉ// ದೊಡ್ಡರುದ್ರಪ್ಪ	ರುದ್ರಹನುಮಯ್ಯ ಬಿನ್ ರುದ್ರಪ್ಪ ಉ // ದೊಡ್ಡರುದ್ರಪ್ಪತೋಪಯ್ಯ ಬಿನ್ ರುದ್ರಪ್ಪ ಉ// ದೊಡ್ಡರುದ್ರಪ್ಪ ನಾಗಪ್ಪ ಬಿನ್ ರುದ್ರಪ್ಪ ಉ// ದೊಡ್ಡರುದ್ರಪ್ಪ	177/1	4–10	0–12	3–38	0–12	ಖುಷ್ಕಿ	ಸ ನಂ. 177/2	ಸ ನಂ. 180/1ಎ, 1ಬಿ	ಸ ನಂ. 176/5,8	ಸ ನಂ. 177/2,3	
10.	ಸೈಯದ್ ಸಲಾಮ್ ಬಿನ್ ಸೈಯದ್ ವಹಾಬ್	ಸೈಯದ್ ಸಲಾಮ್ ಬಿನ್ ಸೈಯದ್ ವಹಾಬ್	177/2	4–15	0–15	4–00	0–15	ಖುಷ್ಕಿ	ಸ ನಂ. 175/2, 3	ಸ ನಂ. 177/1	ಸ ನಂ. 176/5	ಸ ನಂ. 177/3	
11.	ಎನ್. ನರಸಿಂಹಯ್ಯ ಬಿನ್ ದೊಡ್ಡನರಸಪ್ಪ ಮಾರಕ್ಕ ಕೋಂ. ರಾಮಯ್ಯ, ಮಾರಕ್ಕ ಕೋಂ. ರಾಮಯ್ಯ	ಎನ್. ನರಸಿಂಹಯ್ಯ ಬಿನ್ ದೊಡ್ಡನರಸಪ್ಪ ಮಾರಕ್ಕ ಕೋಂ. ರಾಮಯ್ಯ, ಮಾರಕ್ಕ ಕೋಂ. ರಾಮಯ್ಯ	177/3	5–30	0–18	5–12	0–18	ಖುಷ್ಕಿ	ಸ ನಂ. 175/4	ಸ ನಂ. 180/1ಸಿ, 2	ಸ ನಂ. 177/1 177/2	ಸ ನಂ. 246, 247	
12.	ಆರ್. ಚಂದ್ರಶೇಖರ ಬಿನ್ ರುದ್ರಹನುಮಯ್ಯ ಮೋಹನಮೂರ್ತಿ ಆರ್. ಬಿನ್. ರಾಮಕೃಷ್ಣಯ್ಯ ಆರ್. ಮಂಜುನಾಥ್ ಬಿನ್ ರುದ್ರಹನುಮಯ್ಯ	ಆರ್. ಚಂದ್ರಶೇಖರ ಬಿನ್ ರುದ್ರಹನುಮಯ್ಯ ಮೋಹನಮೂರ್ತಿ ಆರ್. ಬಿನ್. ರಾಮಕೃಷ್ಣಯ್ಯ ಆರ್. ಮಂಜುನಾಥ್ ಬಿನ್ ರುದ್ರಹನುಮಯ್ಯ	179/1	11–05	1–10	9–35	1–10	ಖುಷ್ಕಿ	ಸ ನಂ. 176, 179/3	ಸ ನಂ. 34/4,5	ಸ ನಂ. 178	ಸ ನಂ. 179/2 180/1ಬಿ	
13.	ಎಸ್. ಜಿ. ಗಿರೀಶ್‌ಕುಮಾರ್ ಬಿನ್ ಹೆಚ್. ಡಿ. ಗಂಗರಾಜು	ಎಸ್. ಜಿ. ಗಿರೀಶ್‌ಕುಮಾರ್ ಬಿನ್ ಹೆಚ್. ಡಿ. ಗಂಗರಾಜು	179/2	4–00	0–11	3–29	0–11	ಖುಷ್ಕಿ	ಸ ನಂ. 179/3	ಸ ನಂ. 179/1	ಸ ನಂ. 179/1	ಸ ನಂ. 180/1ಬಿ	
14.	ರುದ್ರಹನುಮಯ್ಯ ಬಿನ್ ರುದ್ರಪ್ಪ ಉ// ದೊಡ್ಡರುದ್ರಪ್ಪ ತೋಪಯ್ಯ ಬಿನ್ ರುದ್ರಪ್ಪ ಉ// ದೊದ್ದರುದ್ರಪ್ಪ ನಾಗಪ್ಪ ಬಿನ್ ರುದ್ರಪ್ಪ ಉ// ದೊಡ್ಡರುದ್ರಪ್ಪ	ರುದ್ರಹನುಮಯ್ಯ ಬಿನ್ ರುದ್ರಪ್ಪ ಉ// ದೊಡ್ಡರುದ್ರಪ್ಪ ತೋಪಯ್ಯ ಬಿನ್ ರುದ್ರಪ್ಪ ಉ// ದೊದ್ದರುದ್ರಪ್ಪ ನಾಗಪ್ಪ ಬಿನ್ ರುದ್ರಪ್ಪ ಉ// ದೊಡ್ಡರುದ್ರಪ್ಪ	179/3	4–00	0–24	3–16	0–24	ಖುಷ್ಕಿ	ಸ ನಂ. 176/4, 1,8	ಸ ನಂ. 179/2	ಸ ನಂ. 179/1	ಸ ನಂ. 180/1ಎ	
15.	ಹೆಚ್. ಜಿ. ಗಿರೀಶ್‌ಕುಮಾರ್ ಬಿನ್ ಹೆಚ್. ಡಿ. ಗಂಗರಾಜು	ಹೆಚ್. ಜಿ. ಗಿರೀಶ್‌ಕುಮಾರ್ ಬಿನ್ ಹೆಚ್. ಡಿ. ಗಂಗರಾಜು	180/1ಎ	2–33	–	2–33	–	ಖುಷ್ಕಿ	ಸ ನಂ. 177/1	ಸ ನಂ. 180/1ಬಿ	ಸ ನಂ. 179/3	ಸ ನಂ. 180/1ಬಿ	
16.	ಸರ್ಕಾರಿ ಬೀಳು	ಸರ್ಕಾರಿ ಬೀಳು	180/1ಸಿ 180/2	2–26	–	2–26	–	ಖುಷ್ಕಿ	ಸ ನಂ. 177/3	ಸ ನಂ. 34/6	ಸ ನಂ. 180/1ಬಿ	ಸ ನಂ. 181/2	
17.	ಎಂ. ಎನ್. ನಾಗರಾಜು ಬಿನ್ ಲೇ. ನರಸಿಂಗರಾವ್ ಕೆ. ಮಾಧವಭಟ್ ಬಿನ್ ಲೇ. ಗೋಪಾಲಕೃಷ್ಣ ಭಟ್	ಎಂ. ಎನ್. ನಾಗರಾಜು ಬಿನ್ ಲೇ. ನರಸಿಂಗರಾವ್ ಕೆ. ಮಾಧವಭಟ್ ಬಿನ್ ಲೇ. ಗೋಪಾಲಕೃಷ್ಣ ಭಟ್	181/1	12–09	5–33	6–16	5–33	ಖುಷ್ಕಿ	ಸ ನಂ. 248 249 250 251	ಸ ನಂ. 34/6	ಸ ನಂ. 181/4	ಸ ನಂ. 185	
18.	ನರಸಿಂಹಯ್ಯ ಬಿನ್ ಲೇ. ಮುನಿಮುತ್ತಪ್ಪ	ನರಸಿಂಹಯ್ಯ ಬಿನ್ ಲೇ. ಮುನಿಮುತ್ತಪ್ಪ	181/2	2–11	0–28	1–23	0–28	ಖುಷ್ಕಿ	ಸ ನಂ. 246	ಸ ನಂ. 34/6	ಸ ನಂ. 180/1ಸಿ, 180/2	ಸ ನಂ. 181/3	
19.	ನರಸಿಂಹಯ್ಯ ಬಿನ್ ಲೇ. ಮುನಿಮುತ್ತಪ್ಪ	ನರಸಿಂಹಯ್ಯ ಬಿನ್ ಲೇ. ಮುನಿಮುತ್ತಪ್ಪ	181/3	2–12	0–37	1–15	0–37	ಖುಷ್ಕಿ	ಸ ನಂ. 246	ಸ.ನಂ 34/6	ಸ ನಂ. 181/2	ಸ ನಂ. 181/4	
20.	ರಾಮಕೃಷ್ಣಪ್ಪ ಬಿನ್ ಲೇ. ಮುನಿಮುತ್ತಪ್ಪ	ರಾಮಕೃಷ್ಣಪ್ಪ ಬಿನ್ ಲೇ. ಮುನಿಮುತ್ತಪ್ಪ	181/4	2–10	0–38	1–12	0–38	ಖುಷ್ಕಿ	ಸ ನಂ. 246, 248	ಸ ನಂ. 34/6	ಸ ನಂ. 181/3	ಸ ನಂ. 181/1	
21.	ಹೆಚ್. ಡಿ. ಗಂಗರಾಜು ಬಿನ್ ಲೇ. ಎಂ. ದೇವಣ್ಣ	ಹೆಚ್. ಡಿ. ಗಂಗರಾಜು ಬಿನ್ ಲೇ. ಎಂ. ದೇವಣ್ಣ	246	3–00	–	3–00	–	ಖುಷ್ಕಿ	ಸ ನಂ. 247	ಸ ನಂ. 181/2, 181/3 4	ಸ ನಂ. 177/3	ಸ ನಂ. 248	
22.	ಶಿವಲಿಂಗಯ್ಯ ಬಿನ್ ದೇವೇಗೌಡ	ಶಿವಲಿಂಗಯ್ಯ ಬಿನ್ ದೇವೇಗೌಡ	247	3–00	–	3–00	–	ಖುಷ್ಕಿ	ಸ ನಂ. 183/2	ಸ ನಂ. 246	ಸ ನಂ. 177/3	ಸ ನಂ. 248	
23.	ವಿ. ಎಂ. ಕಮಲಮ್ಮ ಕೋಂ ಜಿ. ಸುಬ್ರಮಣ್ಯ	ವಿ. ಎಂ. ಕಮಲಮ್ಮ ಕೋಂ ಜಿ. ಸುಬ್ರಮಣ್ಯ	248	2–34	0–04	2–30	0–04	ಖುಷ್ಕಿ	ಸ ನಂ.183/2 182/1	ಸ ನಂ.181/1 181/4	ಸ ನಂ. 246, 247	ಸ ನಂ. 182, 249	
24.	ಆರ್. ಶಿವರಾಜು ಬಿನ್ ರುದ್ರಹನುಮಯ್ಯ	ಆರ್. ಶಿವರಾಜು ಬಿನ್ ರುದ್ರಹನುಮಯ್ಯ	249	2–06	0–06	2–00	0–06	ಖುಷ್ಕಿ	ಸ ನಂ. 182/1	ಸ ನಂ. 181/1	ಸ ನಂ. 248	ಸ ನಂ. 250	
25.	ಹೆಚ್. ಡಿ. ಗಂಗರಾಜು ಬಿನ್ ಲೇ. ಎಂ. ದೇವಣ್ಣ	ಹೆಚ್. ಡಿ. ಗಂಗರಾಜು ಬಿನ್ ಲೇ. ಎಂ. ದೇವಣ್ಣ	250	2–06	0–06	2–00	0–06	ಖುಷ್ಕಿ	ಸ ನಂ. 182	ಸ ನಂ. 181/1	ಸ ನಂ. 249	ಸ ನಂ. 251	
26.	ಹೆಚ್. ಡಿ. ಗಂಗರಾಜು ಬಿನ್ ಲೇ. ಎಂ. ದೇವಣ್ಣ	ಹೆಚ್. ಡಿ. ಗಂಗರಾಜು ಬಿನ್ ಲೇ. ಎಂ. ದೇವಣ್ಣ	251	2–09	0–09	2–00	0–09	ಖುಷ್ಕಿ	ಸ ನಂ. 182	ಸ ನಂ. 181/1	ಸ ನಂ. 250	ಸ ನಂ. 184	

(ವಿ.ಸೂ: ಅಧಿಸೂಚನೆಯಲ್ಲಿ ತಿಳಿಸಿರುವಂತೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪಣಾ ಅರ್ಜಿಯಲ್ಲಿ ಅಂಚೆ ವಿಳಾಸ ಮತ್ತು ಮೊಬೈಲ್ ನಂಬರನ್ನುತಪ್ಪದೇ ಸ್ಪಷ್ಟವಾಗಿ ನಮೂದಿಸಿ ಸಲ್ಲಿಸುವುದು)

ಘೋಷ್ವಾರೆ
ಗ್ರಾಮ: ಬಿ.ಎಂ. ಕಾವಲ್

ತರಹೆ	ಒಟ್ಟು ವಿಸ್ತೀರ್ಣ (ಎ–ಗು)
ಖುಷ್ಕಿ	94–14
ತರಿ	–
ಬಾಗಾಯ್ತು	–
ಖರಾಬು	13–00
ಒಟ್ಟು	107–14

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು.

ನಮೂನೆ–V

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.

[ಕರ್ನಾಟಕ ತಿದ್ದುಪಡಿ ನಿಯಮ–5, 20(1) (ಬಿ)]

ಸಂಖ್ಯೆ:ಕಗೃಮಂ/ಭೂಸ್ವಾವಿ/ಬೆಂಗಳೂರು/ಬಿ.ಎಂ.ಕಾವಲ್/37/2025–26   ದಿನಾಂಕ: 23–06–2025

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013ರ ಕಲಂ –11(1)ರ ಮೇರೆಗೆ ಅಧಿಸೂಚನೆ

ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ವಸತಿ ಯೋಜನೆಗಾಗಿ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ. ಕಾವಲ್ ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ: 23–07–2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ – 2019** (2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 16)ರ ಕಲಂ–10(ಎ)ರಡಿ ಮೂಲ ಕಾಯ್ದೆಯ ಅಧ್ಯಾಯ–II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸರ್ಕಾರದ ಸಂಖ್ಯೆ: ಆರ್‌ಡಿ/62/ಎಕ್ಯೂಬಿ/2025 ದಿನಾಂಕ: 21–04–2025ರ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಈ ಅಧಿಸೂಚನೆ ರಾಜ್ಯ ಪತ್ರದಲ್ಲಿ ದಿನಾಂಕ: 05–05–2025ರಂದು ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013** (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ–12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013** (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ–11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ –15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿ–1, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ : ಬೆಂಗಳೂರು ನಗರ   ತಾಲ್ಲೂಕು: ಬೆಂಗಳೂರು ದಕ್ಷಿಣ   ಹೋಬಳಿ: ಕೆಂಗೇರಿ   ಗ್ರಾಮ ಬಿ.ಎಂ. ಕಾವಲ್(ಬ್ಲಾಕ್–III)

ಕ್ರ. ಸಂ.	ಖಾತೆದಾರರ ಹೆಸರು (ಪಹಣಿಯಂತೆ)		ಸರ್ವೆ / ಖಾತಾ ನಂಬರ್	ಸರ್ವೆ/ಖಾತಾ ನಂಬರಿನಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತಾರ ಅನ್ವಯ)		ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚಕ್ಕುಬಂದಿ /ಸರಹದ್ದು				ಷರಾ
	ಭೂಮಾಲೀಕರ / ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)	ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1	2	3	4	5	6	7	8	9	10	11	12	13	14
1.	ಅರಸಮ್ಮ ಕೋಂ. ಲೇ॥ ಗಾಳಪ್ಪ ಎ. ಪಿ. ರಂಗನಾಥ ಬಿನ್ ಆರ್ ಪದ್ಮನಾಭ ಎ. ಪಿ. ಮಮತ ಕೋಂ ಮಹೇಶ್ ವಿಷ್ಣು ಬಿನ್ ಎಮ್. ಆರ್. ಪ್ರಸಾದ್ ಸುಜಾತ ಕೋಂ. ಚಿಕ್ಕಣ್ಣ ಮಂಜುಳ ಬಿನ್ ಮೂರ್ತಿ ನಾಗರಾಜ ಬಿನ್ ಗಂಗಪ್ಪ ಪುಟ್ಟಲಕ್ಷ್ಮಮ್ಮ ಕೋಂ. ವರದೇಗೌಡ ಶ್ರೀನಿವಾಸ ಬಿನ್ ಮುದ್ದಪ್ಪ ಮೂಡಲಗಿರಿಗೌಡ ಬಿನ್ ದಾಸೇಗೌಡ ಕಾಂತರಾಜು ಬಿನ್ ಗಂಗಪ್ಪ ಪದ್ಮ ಕೋಂ. ಈರಪ್ಪ ನಜೀರ್ ಪಾಷ ಬಿನ್ ಅಬ್ದುಲ್ ಖಾದರ್ ಚಂದ್ರಮುಖಿ ಬಿನ್ ರಂಗಪ್ಪ	ಅರಸಮ್ಮ ಕೋಂ. ಲೇ॥ ಗಾಳಪ್ಪ ಎ. ಪಿ. ರಂಗನಾಥ ಬಿನ್ ಆರ್ ಪದ್ಮನಾಭ ಎ. ಪಿ. ಮಮತ ಕೋಂ ಮಹೇಶ್ ವಿಷ್ಣು ಬಿನ್ ಎಮ್. ಆರ್. ಪ್ರಸಾದ್ ಸುಜಾತ ಕೋಂ. ಚಿಕ್ಕಣ್ಣ ಮಂಜುಳ ಬಿನ್ ಮೂರ್ತಿ ನಾಗರಾಜ ಬಿನ್ ಗಂಗಪ್ಪ ಪುಟ್ಟಲಕ್ಷ್ಮಮ್ಮ ಕೋಂ. ವರದೇಗೌಡ ಶ್ರೀನಿವಾಸ ಬಿನ್ ಮುದ್ದಪ್ಪ ಮೂಡಲಗಿರಿಗೌಡ ಬಿನ್ ದಾಸೇಗೌಡ ಕಾಂತರಾಜು ಬಿನ್ ಗಂಗಪ್ಪ ಪದ್ಮ ಕೋಂ. ಈರಪ್ಪ ನಜೀರ್ ಪಾಷ ಬಿನ್ ಅಬ್ದುಲ್ ಖಾದರ್ ಚಂದ್ರಮುಖಿ ಬಿನ್ ರಂಗಪ್ಪ	35/ಪಿರ ಪೈಕಿ	93–24	–	78–24	–	ಖುಷ್ಕಿ	ಅಗರ ಗ್ರಾಮದ ಗಡಿ	ಸ ನಂ. 175/1, 2,3,4 183/1,2, 184, 186, ಚಿನ್ನಕುರ್ಚಿ ಗ್ರಾಮದ ಗಡಿ	ಸ ನಂ. 36	ಉತ್ತರಿ ಗ್ರಾಮದ ಗಡಿ	

ಮುಂದುವರಿಯುವುದು.....

ಜೋಶಿ ಭೇಟಿ ಡಿಕೆಶಿ 'ಎಕ್ಸ್' ಹೇಳಿಕೆ ಮರ್ಮವೇನು?

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯದ ನೀರಾವರಿ ಯೋಜನೆಗಳ ಕುರಿತು ಕೇಂದ್ರ ಸಚಿವರಾದ ಭೂಪೇಂದರ್ ಯಾದವ್ ಹಾಗೂ ಸಿ.ಆರ್. ಪಾಟೀಲ ಅವರನ್ನು ಭೇಟಿ ಮಾಡಿದ ಬೆನ್ನಲ್ಲೇ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರನ್ನೂ ಭೇಟಿ ಮಾಡಿ ಚರ್ಚಿಸಿದರು.

ಈ ಭೇಟಿಯ ಬಗ್ಗೆ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಬರೆದುಕೊಂಡಿರುವ ಶಿವಕುಮಾರ್, 'ಜೋಶಿ ಅವರನ್ನು ಭೇಟಿ ಮಾಡಿ, ಬಾಕಿ ಉಳಿದಿರುವ ಕರ್ನಾಟಕದ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುಮತಿ ದೊರಕಿಸಿಕೊಡಲು ಸಹಕಾರ ನೀಡುವಂತೆ ಮನವಿ ಮಾಡಿದೆ. ಭವಿಷ್ಯದ ಕರ್ನಾಟಕಕ್ಕೆ ರಾಜಕೀಯವನ್ನು ಮೀರಿದ ಏಕತೆಯ ಅಗತ್ಯವಿದೆ' ಎಂದು ಹೇಳಿದ್ದಾರೆ. ಈ ಹೇಳಿಕೆಯು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

'ಮಹದಾಯಿ ವಿಷಯದ ಬಗ್ಗೆ ನೀವು, ಜೋಶಿ ಹಾಗೂ ಗೋವಾದ ಮುಖ್ಯಮಂತ್ರಿ ಚರ್ಚೆ ನಡೆಸಿ ಒಮ್ಮತಕ್ಕೆ ಬನ್ನಿ ಎಂದು ಭೂಪೇಂದರ್ ಯಾದವ್ ಸಲಹೆ ನೀಡಿದ್ದರು. ಮಹದಾಯಿ ವಿಷಯದಲ್ಲಿ ಗೋವಾ ಅನಗತ್ಯವಾಗಿ ತಕರಾರು ಎತ್ತುತ್ತಿದ್ದು, ಹೀಗಾಗಿ ಅವರೊಂದಿಗೆ ಚರ್ಚೆ ನಡೆಸುವುದಿಲ್ಲ ಎಂದು ಶಿವಕುಮಾರ್ ಸ್ಪಷ್ಟಪಡಿಸಿದ್ದರು. ಜೋಶಿ ಅವರೊಂದಿಗೆ ಚರ್ಚೆ ನಡೆಸುವಂತೆ ಸಚಿವರು ಸಲಹೆ ನೀಡಿದ್ದರು. ಅವರ ಸಲಹೆಯ ಮೇರೆಗೆ ಜೋಶಿ ಅವರನ್ನು ಶಿವಕುಮಾರ್ ಭೇಟಿ ಮಾಡಿದರು' ಎಂದು ಮೂಲಗಳು ತಿಳಿಸಿವೆ.

ಮೇಘಾಲಯದ 25 ಬಾಲಕಿಯರ ರಕ್ಷಣೆ

ಪ್ರಜಾವಾಣಿ ವಾರ್ತೆ

ಬಾಗೇಪಲ್ಲಿ (ಚಿಕ್ಕಬಳ್ಳಾಪುರ): ತಾಲ್ಲೂಕಿನ ಪೆನುಮಲೆ ಗ್ರಾಮದ ಏಮ್ ಫಾರ್ ಸೇವಾ ಸೌಮ್ಯ ಕೇಸಾನುಪಲ್ಲಿ ವಿದ್ಯಾರ್ಥಿ ನಿಲಯದಲ್ಲಿದ್ದ ಮೇಘಾಲಯದ 25 ಬಾಲಕಿಯರನ್ನು ರಕ್ಷಿಸಲಾಗಿದೆ.

ಬಾಲಕಿಯರು ಮೇಘಾಲಯದ ಬುಡಕಟ್ಟು ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಕೆಲವು ಮಕ್ಕಳು ಏಕ ಪೋಷಕರನ್ನು ಹೊಂದಿದ್ದಾರೆ. ಶಿಕ್ಷಣ ನೀಡುವುದಾಗಿ ಹೇಳಿ ಮಕ್ಕಳನ್ನು ಸಂಸ್ಥೆಯವರು ಕರೆ ತಂದಿದ್ದಾರೆ.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ರಕ್ಷಣಾ ಘಟಕ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ತಂಡ ಮಂಗಳವಾರ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲಿಸಿತು. ಬಾಲಕಿಯರನ್ನು ಸುಪರ್ದಿಗೆ ಪಡೆದ ಅಧಿಕಾರಿಗಳು ಚಿಕ್ಕಬಳ್ಳಾಪುರದ ಬಾಲಮಂದಿರಕ್ಕೆ ಕಳುಹಿಸಿಕೊಟ್ಟರು.

ಸರ್ಕಾರ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಯಾವುದೇ ಅನುಮತಿ ಪಡೆಯದೇ ವಿದ್ಯಾರ್ಥಿಗಳನ್ನು ಇಲ್ಲಿ ಇರಿಸಿಕೊಳ್ಳಲಾಗಿತ್ತು.

ಹೊರ ರಾಜ್ಯದ ಬಾಲಕಿಯರನ್ನು ಖಾಸಗಿ ಸಂಸ್ಥೆಯಲ್ಲಿ ಇಟ್ಟುಕೊಳ್ಳಲು ಸರ್ಕಾರದ ಅನುಮತಿ ಕಡ್ಡಾಯ. ಬಾಲಕಿಯರನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಎದುರು ಹಾಜರು ಪಡಿಸಬೇಕು. ಆದರೆ ಈ ಯಾವುದೇ ನಿಯಮಗಳನ್ನು ಸಂಸ್ಥೆ ಪಾಲಿಸಿಲ್ಲ.

ಜನಧನ್ ಖಾತೆ: 3 ತಿಂಗಳ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಹಣಕಾಸು ಒಳಗೊಳ್ಳುವಿಕೆಯ ಪ್ರಮುಖ ಯೋಜನೆಗಳಾದ ಜನಧನ್ ಯೋಜನೆ, ಜೀವನ್ ಜ್ಯೋತಿ ಬಿಮಾ ಯೋಜನೆ, ಸುರಕ್ಷಾ ಬಿಮಾ ಯೋಜನೆ, ಅಟಲ್ ಪೆನ್ಷನ್ ಯೋಜನೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಜನರಿಗೆ ತಲುಪಿಸಲು ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರದ ಅಭಿವೃದ್ಧಿ ಆಯುಕ್ತೆ ಹಾಗೂ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್ ತಿಳಿಸಿದರು.

ವಿಧಾನಸೌಧದಲ್ಲಿ ಮಂಗಳವಾರ ನಡೆದ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಯ 170ನೇ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿ, 'ಮೂರು ತಿಂಗಳ ಅಭಿಯಾನ ಜುಲೈ 1ರಂದು ಆರಂಭಿಸಲಾಗಿದ್ದು, ಸೆಪ್ಟಂಬರ್ 30ರೊಳಗೆ ಎಲ್ಲ ಗ್ರಾಮ ಪಂಚಾಯತಿಗಳನ್ನು ತಲುಪಲಾಗುವುದು' ಎಂದರು.

ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ನಿರ್ದೇಶಕಿ ಸೋನಾಲಿ ಸೇನ್ ಗುಪ್ತಾ ಮಾತನಾಡಿ, 'ಎಲ್ಲ ಸದಸ್ಯ ಬ್ಯಾಂಕ್‌ಗಳು ಗ್ರಾಮಾಂತರ ಪ್ರದೇಶದ ಅರ್ಹ ಜನರನ್ನು ಬ್ಯಾಂಕ್ ವ್ಯವಸ್ಥೆಯೊಳಗೆ ತರಬೇಕು. ಕೆವೈಸಿಯನ್ನು ಪುನಃ ಸಕ್ರಿಯಗೊಳಿಸಬೇಕು' ಎಂದು ಸೂಚಿಸಿದರು.

ನಬಾರ್ಡ್‌ನ ಮುಖ್ಯ ಮಹಾಪ್ರಬಂಧಕ ಡಾ.ಸುರೇಂದ್ರ ಬಾಬು ಮಾತನಾಡಿದರು.

ಸಭೆಯಲ್ಲಿ ಕೆನರಾ ಬ್ಯಾಂಕ್ ಕಾರ್ಯ ನಿರ್ವಾಹಕ ನಿರ್ದೇಶಕ ಭವೇಂದ್ರ ಕುಮಾರ್, ರಾಜ್ಯ ಹಣಕಾಸು ಇಲಾಖೆ ಕಾರ್ಯದರ್ಶಿ ವಿಶಾಲ್.ಆರ್ ಇದ್ದರು.

ಸರ್ಕಾರಿ ನೌಕರ ಆತ್ಮಹತ್ಯೆಗೆ ಯತ್ನ

ಕೊಪ್ಪಳ: ಇಲ್ಲಿನ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ಎಫ್‌ಡಿಎ ಆಗಿರುವ ಸುಂಕಪ್ಪ ಭಜಂತ್ರಿ ಮಂಗಳವಾರ ಕಚೇರಿ ಆವರಣದಲ್ಲಿ ಮೈ ಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದು, ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರಿಗೆ ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

2024ರಲ್ಲಿ ಜುಲೈ 7ರಂದು ಗೈರಾಗಿದ್ದರ ಕುರಿತು ರಜೆ ಚೀಟಿ ಬರೆದುಕೊಡುವಂತೆ ಮೇಲಧಿಕಾರಿಗಳು ಹೇಳಿದ್ದರೂ ಕೇಳಿರಲಿಲ್ಲ. ನಂತರವೂ ನಿರಂತರವಾಗಿ ಅನಧಿಕೃತವಾಗಿ ಗೈರಾಗಿದ್ದರು. ಈಗ ನೇರವಾಗಿ ಕೆಲಸಕ್ಕೆ ವಾಪಸ್ ಸೇರಿಸಿಕೊಳ್ಳುವಂತೆ ದುಂಬಾಲು ಬಿದ್ದಿದ್ದರು. ವಿಭಾಗೀಯ ಕಚೇರಿಯಿಂದ ಅನುಮತಿ ಪಡೆದೇ ಕೆಲಸಕ್ಕೆ ಗೈರಾಗಬೇಕು ಎಂದು ಅಧಿಕಾರಿಗಳು ಹೇಳಿದ್ದರೂ ಕೇಳಿರಲಿಲ್ಲ ಎಂದು ಮೂಲಗಳು ತಿಳಿಸಿವೆ ತಿಳಿದುಬಂದಿದೆ.

ಚಟಕೆ ಸುದ್ದಿ

ಕರಿಯಮ್ಮ, ಕಬ್ಬಾಳಮ್ಮ, ಮಾರಮ್ಮ ದೇವರ ಉತ್ಸವ

ನಾಗದೇವನಹಳ್ಳಿ ಗೊಲ್ಲರಹಟ್ಟಿಯಲ್ಲಿ ಮುತ್ತಿನ ಪಲ್ಲಕ್ಕಿ ಉತ್ಸವ ನಡೆಯಿತು

ರಾಜರಾಜೇಶ್ವರಿನಗರ: ಸೊರೆಕುಂಟೆ ಕರಿಯಮ್ಮ ದೇವಿಯ ಉತ್ಸವ, ಜಾತ್ರಾ ಮಹೋತ್ಸವ ಮತ್ತು ಕಬ್ಬಾಳಮ್ಮ, ಮಾರಮ್ಮ ದೇವರ ಉತ್ಸವ, ಪೂಜಾಕುಣಿತ ವಿವಿಧ ಜಾನಪದ ಕಲಾ ಪ್ರದರ್ಶನದೊಂದಿಗೆ ದೊಡ್ಡಗೊಲ್ಲರ ಹಟ್ಟಿ, ನಾಗದೇವನಹಳ್ಳಿ ಗ್ರಾಮದಲ್ಲಿ ಸಡಗರ ಸಂಭ್ರಮದಿಂದ ನಡೆಯಿತು.

ನಾಗದೇವನಹಳ್ಳಿಯ ಭೂತಪ್ಪಸ್ವಾಮಿ ದೇವಾಲಯ ಆವರಣದಿಂದ ಉತ್ಸವ ಆರಂಭಗೊಂಡಿತು. ತಪ್ಪಸ್ವಾಮಿ ದೇವಸ್ಥಾನದ ಸೇವಾ ಟ್ರಸ್ಟ್ ಅಧ್ಯಕ್ಷ ಡಿಪೋ ಕೃಷ್ಣಪ್ಪ, ಬಿಜೆಪಿ ಮುಖಂಡ ಎನ್.ಸಿ.ಕುಮಾರ್, ಪೂಜಾರಿ ತಿಮ್ಮಯ್ಯ, ದಾಸಪ್ಪ, ಮಾರಣ್ಣ, ಮುಖಂಡರಾದ ರಾಮಣ್ಣ, ಜೆ.ದೊಡ್ಡಯ್ಯ, ಮೀಸೆ ಕಾಟಪ್ಪ, ಯೆರಪ್ಪ, ಬೆಣ್ಣೆ ಚಿಕ್ಕಣ್ಣ, ಪ್ರಕಾಶ್ ಉತ್ಸವದಲ್ಲಿ ಭಾಗವಹಿಸಿದ್ದರು.

‘ಮುಖ್ಯ ಆಯುಕ್ತರ ನಡೆ- ವಲಯದ ಕಡೆ’

ಬೆಂಗಳೂರು: ಬಿಬಿಎಂಪಿ ಮುಖ್ಯ ಆಯುಕ್ತರು ವಾರದಲ್ಲಿ ಎರಡು ದಿನ ‘ಮುಖ್ಯ ಆಯುಕ್ತರ ನಡೆ-ವಲಯದ ಕಡೆ’ ಕಾರ್ಯಕ್ರಮದಲ್ಲಿ ಭಾಗಿಯಾಗಿ, ನಾಗರಿಕರ ಕುಂದುಕೊರತೆಗಳನ್ನು ಆಲಿಸಲಿದ್ದಾರೆ.

ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಆಯಾ ವಲಯಗಳ ವ್ಯಾಪ್ತಿಯಲ್ಲಿ ಬೆಳಿಗ್ಗೆ 7ರಿಂದ 10ರವರೆಗೆ ವಿವಿಧ ಸ್ಥಳಗಳಿಗೆ ಭೇಟಿ ನೀಡಲಿದ್ದಾರೆ. ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಸಾರ್ವಜನಿಕರ ಕುಂದುಕೊರತೆ ಪರಿಶೀಲಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಯಲಹಂಕ: ವಿದ್ಯಾಪೋಷಕರ ಸಂಘದ ವತಿಯಿಂದ 2025ನೇ ಸಾಲಿನಲ್ಲಿ ಎಸ್ಎಸ್ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 90ಕ್ಕಿಂತ ಹೆಚ್ಚಿನ ಅಂಕ ಪಡೆದ, ಆರ್ಥಿಕವಾಗಿ ದುರ್ಬಲರಾದ ಒಕ್ಕಲಿಗ ಸಮುದಾಯದ ಪ್ರತಿಭಾನ್ವಿತರಿಂದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಜುಲೈ 31ರೊಳಗೆ ಅರ್ಜಿ ಸಲ್ಲಿಸಬಹುದು. ವಿಳಾಸ: ಅಧ್ಯಕ್ಷರು, ವಿ.ಜೆ.ಇಂಟರ್‌ನ್ಯಾಷನಲ್ ಸ್ಕೂಲ್, ಬಾಗಲೂರು ಗ್ರಾಮ, ಯಲಹಂಕ, ಬೆಂಗಳೂರು-562149. ವಿವರಗಳಿಗೆ 9008891539, 9845048696.

ಬಿಬಿಎಂಪಿ ಕೇಂದ್ರ, ವಲಯ ಕಚೇರಿ ಸ್ತಬ್ಧ

ನೌಕರರ ಸಾಮೂಹಿಕ ರಜೆ ಪ್ರತಿಭಟನೆಗೆ ಬೆಂಬಲ, ನಾಗರಿಕರಿಗೆ ಸಂಕಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಚೇರಿ ಸೇರಿದಂತೆ ಎಂಟೂ ವಲಯಗಳ ಕಚೇರಿಗಳು, ವಾರ್ಡ್ ಕಚೇರಿಗಳು, ಉಪ ವಿಭಾಗಗಳ ಕಚೇರಿಗಳು, ನಾಗರಿಕ ಸೇವಾ ಕೇಂದ್ರಗಳಲ್ಲಿ ಬಹುತೇಕ ಕಾರ್ಯಚಟುವಟಿಕೆಗಳು ಮಂಗಳವಾರ ಸ್ತಬ್ಧವಾಗಿದ್ದವು.

ಸದಾ ನಾಗರಿಕರಿಂದ ತುಂಬಿರುತ್ತಿದ್ದ ಪಾಲಿಕೆ ಕಚೇರಿಗಳು ಹಾಗೂ ಆವರಣದಲ್ಲಿ ಜನ ಸಂಖ್ಯೆ ವಿರಳವಾಗಿತ್ತು. ವಾಹನಗಳ ಸಂಖ್ಯೆಯೂ ಕಡಿಮೆ ಇತ್ತು. ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬಿಬಿಎಂಪಿ ನೌಕರರು ಸಾಮೂಹಿಕ ರಜೆ ಹಾಕಿ ಮಂಗಳವಾರ ಪ್ರತಿಭಟನೆ ನಡೆಸಿದ್ದರಿಂದ, ಬಿಬಿಎಂಪಿಯ ಕೆಲಸಗಳು ಬಹುತೇಕ ಸ್ಥಗಿತಗೊಂಡಿದ್ದವು. ತೆರಿಗೆ ಪಾವತಿ, ಜನನ ಪ್ರಮಾಣ ಪತ್ರ ಸೇರಿದಂತೆ ಹಲವು ಕೆಲಸಗಳಿಗಾಗಿ ಪಾಲಿಕೆ ಕಚೇರಿಗೆ ಬಂದ ನಾಗರಿಕರು ಕೆಲಸವಾಗದೆ ಹಿಂದಿರುಗಿದರು.

ಮುಖ್ಯ ಆಯುಕ್ತರು ಸೇರಿದಂತೆ ಕೆಲವೇ ಹಿರಿಯ ಅಧಿಕಾರಿಗಳ ಕಾರಿನ ಚಾಲಕರು ಮಾತ್ರ ಕರ್ತವ್ಯಕ್ಕೆ ಹಾಜರಾಗಿದ್ದರಿಂದ ಪಾಲಿಕೆ ಕಚೇರಿಗಳ ಆವರಣಗಳಲ್ಲಿ ವಾಹನಗಳು ವಿರಳವಾಗಿದ್ದವು. ರುದ್ರಭೂಮಿ ನೌಕರರು, ಮಾಹಿತಿ ತಂತ್ರಜ್ಞಾನ ಮತ್ತು ಹೊರಗುತ್ತಿಗೆ ನೌಕರರು, ಆಡಳಿತ ಕಚೇರಿ ಅಧಿಕಾರಿ, ಸಿಬ್ಬಂದಿಯೂ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಪೌರ ಕಾರ್ಮಿಕರ ಸಂಘದವರೂ ಬೆಂಬಲ ನೀಡಿದ್ದರು. ನಗರದ ಕೆಲವೆಡೆ ಮನೆಗಳಿಂದ ಕಸವನ್ನೂ ಸಂಗ್ರಹಿಸಲಿಲ್ಲ.

ಬೇಡಿಕೆ ಈಡೇರಿಸುವ ಭರವಸೆ: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಮತ್ತು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್ತಿನ ವತಿಯಿಂದ ನೌಕರರು ಪ್ರತಿಭಟಿಸುತ್ತಿದ್ದ ಸ್ವಾತಂತ್ರ್ಯ ಉದ್ಯಾನಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರರಾವ್ ಅವರು ಭೇಟಿ ನೀಡಿ, ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದರು.

‘ಮುಂದಿನ ದಿನಗಳಲ್ಲಿ ಹೋರಾಟ ಮಾಡುವ ಅಗತ್ಯ ಇಲ್ಲ. ಕುಳಿತು ಚರ್ಚೆ ಮಾಡಿ ಸಮಸ್ಯೆ ಬಗೆಹರಿಸೋಣ. ಅಮಾನತುಗೊಂಡಿರುವ ನೌಕರರ ಪ್ರಕರಣಗಳನ್ನು ಪರಿಶೀಲಿಸಿ, ಕ್ರಮ ಕೈಗೊಳ್ಳುತ್ತೇನೆ. ಸಂಘದವರ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದು’ ಎಂದು ಮಹೇಶ್ವರರಾವ್ ಹೇಳಿದರು.

ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಮಾತನಾಡಿ, ‘ವಿವಿಧ ಬೇಡಿಕೆಗಳು, ಬಿಬಿಎಂಪಿ ನೌಕರರ ಕುಂದುಕೊರತೆಗಳನ್ನು ಸಚಿವರು, ಮುಖ್ಯ ಆಯುಕ್ತರ ಗಮನಕ್ಕೆ ತರಲಾಗಿದೆ. ನೌಕರರಿಗೆ ಸಹಾಯ ಮಾಡಬೇಕು ಎಂಬುದು ನಮ್ಮ ನಿಲುವು. ನಿಮಗೆಲ್ಲ ನ್ಯಾಯ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತದೆ’ ಎಂದರು.

ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್ ಗೌರವಾಧ್ಯಕ್ಷ ಎಸ್.ಎಚ್.ಗುರುಮೂರ್ತಿ, ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ರಮೇಶ್ ಸಂಗಾ, ಪರಿಷತ್ ರಾಜ್ಯ ಉಪಾಧ್ಯಕ್ಷರಾದ ಜಿ.ವೆಂಕಟ್ ರಾಮ್, ವೇಣುಗೋಪಾಲ್ ಮತ್ತು ಪ್ರಧಾನ ಕಾರ್ಯದರ್ಶಿ ಟಿ.ಸಿ.ಬಸವರಾಜಯ್ಯ, ಖಜಾಂಚಿ ರುದ್ರೇಶ್ ಹಾಗೂ ರಾಜ್ಯ ಕಾರ್ಯದರ್ಶಿ ಪ್ರಹ್ಲಾದ್ ಕುಲಕರ್ಣಿ, ರಾಜ್ಯ ನಿರ್ದೇಶಕರಾದ ಸಾಯಿಶಂಕರ್, ಜಗದೀಶ್ ಎಸ್, ಎ.ಜಿ.ಬಾಬು, ಶ್ರೀನಿವಾಸ್ ಕಟ್ಟಿ, ಬಾಬು, ನರಸಿಂಹ, ಶಾಂತಪ್ಪ ಮುಖೇಶಪ್ಪ ಪತ್ತಾರ, ರವೀಂದ್ರ ಶಿರಶ್ಯಾದ ಮತ್ತು ಮಹಾನಗರ ಪಾಲಿಕೆಗಳ ನೌಕರರ ಸಂಘದ ಪದಾಧಿಕಾರಿಗಳು, ಸದಸ್ಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪ್ರಮುಖ ಬೇಡಿಕೆಗಳು

- ಕಾನೂನುಬಾಹಿರವಾಗಿರುವ ಮಾರ್ಷಲ್ ನೇಮಕ ರದ್ದು ಮಾಡಿ
- ಎರವಲು ಸೇವೆ ಅಧಿಕಾರಿಗಳ-ಮಾತೃ ಇಲಾಖೆಗೆ ಕಳುಹಿಸಿ
- ವಾಣಿಜ್ಯ ಪರವಾನಗಿ ನೀಡುವ ಅಧಿಕಾರ ಆರೋಗ್ಯ ಸೂಪರ್‌ವೈಸರ್‌ಗಳಿಗೆ ಕೊಡಿ

ಪಾಲಿಕೆ ಅಧಿಕಾರಿ, ನೌಕರರ ಮೇಲೆ ಸಹನಾಭೂತಿ ಇದೆ. ಅವರ ಕಷ್ಟಗಳ ಕುರಿತು ನನಗೆ ಅರಿವಿದೆ

ಮಹೇಶ್ವರ್ ರಾವ್, ಮುಖ್ಯ ಆಯುಕ್ತ, ಬಿಬಿಎಂಪಿ

ಸಿಬ್ಬಂದಿ, ಜನರಿಲ್ಲದೆ ಬಿಕೊ ಎನ್ನುತ್ತಿದ್ದ ಬಿಬಿಎಂಪಿ ಕೇಂದ್ರ ಕಚೇರಿ ಆವರಣ

‘ನ್ಯಾಯಯುತ ಬೇಡಿಕೆಗಾಗಿ ಹೋರಾಟ’

‘ಬಿಬಿಎಂಪಿಯಲ್ಲಿ ಸಿಬ್ಬಂದಿ ಕೊರತೆ ಸೇರಿದಂತೆ ಹಲವು ರೀತಿಯ ಸಮಸ್ಯೆಗಳನ್ನು ಸಿಬ್ಬಂದಿ ನಿತ್ಯವೂ ಅನುಭವಿಸುತ್ತಿದ್ದಾರೆ. ನಮ್ಮ ಎಲ್ಲ ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟ ನಡೆಸಲಾಗುತ್ತಿದೆ’ ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್ ಹೇಳಿದರು.

‘ಬಿಬಿಎಂಪಿಯಲ್ಲಿ ಖಾಲಿ ಇರುವ 6000ಕ್ಕೂ ಹೆಚ್ಚು ವಿವಿಧ ವೃಂದದ ಅಧಿಕಾರಿ/ನೌಕರರ ಹುದ್ದೆಗಳನ್ನು ಭರ್ತಿ ಮಾಡಿ, ನೌಕರರ ಮೇಲಿನ ಒತ್ತಡ ಕಡಿಮೆ ಮಾಡಬೇಕು. ಪಾಲಿಕೆ ಸಿಬ್ಬಂದಿಯ ಕೆಲಸ ‘ನಾನ್ ಎಕ್ಸಿಕ್ಯೂಟಿವ್’ ಆಗಿದ್ದು, ‘ಲಾಗ್‌ಸೇಫ್’ ಪದ್ಧತಿಯ ಹಾಜರಾತಿಯನ್ನು ಕೈಬಿಡಬೇಕು. ಶಿಕ್ಷಣ ವಿಭಾಗದಲ್ಲಿ ಪ್ರಾಂಶುಪಾಲರು, ಮುಖ್ಯ ಶಿಕ್ಷಕರ ಮೇಲಿನ ಇಲಾಖಾ ವಿಚಾರಣೆ ಕೈಬಿಡಬೇಕು. ಸಹಾಯಕ ಕಾರ್ಯಪಾಲಕ, ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಮುಂಬಡ್ತಿ ನೀಡಬೇಕು’ ಎಂದು ಆಗ್ರಹಿಸಿದರು. ‘ಪಾಲಿಕೆ ನಮ್ಮ ಮಾತೃ ಸಂಸ್ಥೆ, ನಮ್ಮ ಹೋರಾಟ ಅಧಿಕಾರಿಗಳ ವಿರುದ್ಧ ಅಲ್ಲ. ನಮ್ಮ ಸಂಘದ 12 ಬೇಡಿಕೆಗಳಿಗೆ ಮುಖ್ಯ ಆಯುಕ್ತರು ಉತ್ತಮವಾಗಿ ಸ್ಪಂದಿಸಿದ್ದಾರೆ. ನೌಕರರ ಅಮಾನತು ಆದೇಶವನ್ನು ವಾಪಸ್ ಪಡೆದಿದ್ದಾರೆ’ ಎಂದರು.

ಬಿ–ಸ್ಮೈಲ್ ಕಚೇರಿ ನವೀಕರಣಕ್ಕೆ ₹1.27 ಕೋಟಿ: ಟೆಂಡರ್ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬೃಹತ್ ಮೂಲಸೌಕರ್ಯಗಳ ಅಭಿವೃದ್ಧಿಗೆ ರಚಿಸಲಾಗಿರುವ ವಿಶೇಷ ಉದ್ದೇಶದ ಸಂಸ್ಥೆ (ಎಸ್‌ಪಿವಿ)– ‘ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆ’ (ಬಿ–ಸ್ಮೈಲ್) ತನ್ನ ಕಚೇರಿ ನವೀಕರಣಕ್ಕಾಗಿ ₹1.27 ಕೋಟಿ ವೆಚ್ಚ ಮಾಡಲಿದೆ.

ರಾಜ್ಯ ಸರ್ಕಾರ ಮೂಲಸೌಕರ್ಯ ಅಭಿವೃದ್ಧಿಗೆ ಒದಗಿಸಲಿರುವ ₹7 ಸಾವಿರ ಕೋಟಿ ಅನುದಾನದಲ್ಲಿ ಬೃಹತ್ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ‘ಬಿ–ಸ್ಮೈಲ್’ ಅನ್ನು ಸ್ಥಾಪಿಸಲಾಗಿದೆ. ತಿಮ್ಮಯ್ಯ ರಸ್ತೆಯಲ್ಲಿರುವ ಯುಎನ್ಐ ಬಿಲ್ಡಿಂಗ್‌ನಲ್ಲಿರುವ ಬಿ–ಸ್ಮೈಲ್ ಕಚೇರಿಯ ನವೀಕರಣ ಹಾಗೂ ಒಳಾಂಗಣ ವಿನ್ಯಾಸವನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಲು ಟೆಂಡರ್ ಕರೆಯಲಾಗಿದೆ.

ಹೊರ ವರ್ತುಲ ರಸ್ತೆಗೆ ಟೆಂಡರ್: ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದವರೆಗೆ ಹೊರ ವರ್ತುಲ ರಸ್ತೆಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ರಸ್ತೆ ಹಾಗೂ ಸರ್ವೀಸ್ ರಸ್ತೆಯನ್ನು ನಿರ್ಮಿಸಲು ಸಮಗ್ರ ವಿಸ್ತೃತಾ ಯೋಜನಾ ವರದಿ (ಡಿಪಿಆರ್) ತಯಾರಿಸಲು ‘ಬಿ–ಸ್ಮೈಲ್’ ಟೆಂಡರ್ ಆಹ್ವಾನಿಸಿದೆ.

ಜುಲೈ 23ರಂದು ತಾಂತ್ರಿಕ ಬಿಡ್ ತೆರೆಯಲಿದ್ದು, ಕಾರ್ಯಾದೇಶದ ನೀಡಿದ ಎರಡು ತಿಂಗಳಲ್ಲಿ ಡಿಪಿಆರ್ ಸಿದ್ಧಪಡಿಸಲು ತಿಳಿಸಲಾಗಿದೆ.

ಶ್ರೀಶೈಲ ಮಲ್ಲಿಕಾರ್ಜುನ ಸಮಾಜೋತ್ಥಾನ ಫೌಂಡೇಷನ್ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಸಮಾರಂಭದಲ್ಲಿ ಶ್ರೀಶೈಲ ಪೀಠಾಧ್ಯಕ್ಷ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಗದಗದ ಸಂಗೀತ ವಿದ್ವಾಂಸ ಗುರುಸ್ವಾಮಿ ಕಲಕೇರಿ ಅವರಿಗೆ ‘ನಾದಭಾಸ್ಕರ ಪ್ರಶಸ್ತಿ’ ನೀಡಿ ಗೌರವಿಸಿದರು. ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ, ಅಖಿಲ ಭಾರತ ವೀರಶೈವ ಮಹಾಸಭಾ ಬೆಂಗಳೂರು ನಗರ ಘಟಕದ ಅಧ್ಯಕ್ಷ ಎಸ್. ಗುರುಸ್ವಾಮಿ, ಶಿವಗಂಗೆ ಕ್ಷೇತ್ರದ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಇದ್ದರು

245 ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಬೆಂಗಳೂರು ಉತ್ತರ ವಲಯ-4ರ ವ್ಯಾಪ್ತಿಗೆ ಬರುವ ಎಲ್ಲಾ 245 ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಆರಂಭಿಸಲಾಗಿದೆ ಎಂದು ಕ್ಷೇತ್ರ ಸಮನ್ವಯಾಧಿಕಾರಿ ಬಿ.ಕೆ.ಪ್ರಕಾಶ್ ತಿಳಿಸಿದರು.

ಚಲ್ಲಹಳ್ಳಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿಯ ದಾಖಲಾತಿ ಪ್ರಕ್ರಿಯೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಇಟಗಲ್‌ಪುರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಂ.ಮೋಹನ್‌ಕುಮಾರ್ ಮಾತನಾಡಿ, ‘ಗ್ರಾಮೀಣ ಭಾಗದ ಪೋಷಕರು ತಮ್ಮ ಮಕ್ಕಳನ್ನು ದುಪ್ಪಟ್ಟು ಶುಲ್ಕ ಕೊಟ್ಟು ಖಾಸಗಿ ಶಾಲೆಗಳಿಗೆ ಕಳಿಸುವುದನ್ನು ನಿಲ್ಲಿಸಿ, ಸರ್ಕಾರಿ ಶಾಲೆಗಳಿಗೆ ಕಳಿಸಿ’ ಎಂದು ಮನವಿ ಮಾಡಿದರು.

ಮೆರವಣಿಗೆ: ಇದೇ ವೇಳೆ ‘ಮಕ್ಕಳನ್ನು ಸರ್ಕಾರಿ ಶಾಲೆಯ ಇಂಗ್ಲಿಷ್ ಮಾಧ್ಯಮ ತರಗತಿಗೆ ದಾಖಲಿಸಿ; ಶಿಕ್ಷಣ ಸೇರಿ ಎಲ್ಲ ಸೌಕರ್ಯಗಳನ್ನು ಉಚಿತವಾಗಿ ನೀಡಲಾಗುವುದು’ ಎಂಬ ಬ್ಯಾನರ್ ಹಿಡಿದ ಮಕ್ಕಳು ಹಾಗೂ ಪೋಷಕರು ಗ್ರಾಮದಲ್ಲಿ ಮೆರವಣಿಗೆ ನಡೆಸಿದರು. ಪೋಷಕರು ಶಾಲೆಯ ಆವರಣವನ್ನು ಬಾಳೆ ಕಂದು, ಮಾವಿನ ತೋರಣ ಕಟ್ಟಿ, ಹೂವಿನ ಅಲಂಕಾರ ಮಾಡಿ ಸಿಂಗರಿಸಿದ್ದರು.

ಕಾರ್ಯಕ್ರಮದಲ್ಲಿ ಸೊಣ್ಣೇನಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ರಮ್ಯಾ ರಾಧಾಕೃಷ್ಣ, ಪಿಡಿಒ ಭಾಸ್ಕರ್, ಸಿಆರ್‌ಪಿ ಶೇಷಾದ್ರಿ, ಮುಖ್ಯ ಶಿಕ್ಷಕ ವೆಂಕಟಾಚಲಯ್ಯ, ಗ್ರಾಮದ ಮುಖಂಡರಾದ ರಾಜಣ್ಣ, ವಿಶ್ವನಾಥ್, ರಾಮಯ್ಯ, ರವಿಕುಮಾರ್, ಚೇತನ್ ಮತ್ತಿತರರು ಉಪಸ್ಥಿತರಿದ್ದರು.

ಚಲ್ಲಹಳ್ಳಿ ಸರ್ಕಾರಿ ಶಾಲೆಯಲ್ಲಿ ಆಂಗ್ಲಮಾಧ್ಯಮ ತರಗತಿಗೆ ದಾಖಲಾತಿ ಆಂದೋಲನಕ್ಕೆ ಚಾಲನೆ ನೀಡಲಾಯಿತು.

ಅಣಕು ಸಂಸತ್: ವಿದ್ಯಾರ್ಥಿಗಳ ಸಂಭ್ರಮ

ವಿಧಾನಸೌಧ: ಎರಡು ದಿನಗಳ ಯುವ ಭಾರತೀಯ ಸಂಸತ್ ಅಧಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವ ಸಮುದಾಯದಲ್ಲಿ ನಾಯಕತ್ವ ಗುಣ ಬೆಳೆಸುವ ಉದ್ದೇಶದಿಂದ ವಿಧಾನಸೌಧದಲ್ಲಿ ಹಮ್ಮಿಕೊಳ್ಳಲಾದ ಎರಡು ದಿನಗಳ ಯುವ ಭಾರತೀಯ ಸಂಸತ್ (ವೈಐಪಿ) ಅಧಿವೇಶನಕ್ಕೆ ಮಂಗಳವಾರ ಚಾಲನೆ ದೊರೆಯಿತು..

ಈ ಅಧಿವೇಶನದಲ್ಲಿ ನಗರದ 15 ಶಾಲೆಗಳಿಂದ 200 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸಂಸತ್ ಅಧಿವೇಶನದಲ್ಲಿ ನಡೆಯುವ ಚರ್ಚೆ, ಪ್ರಶ್ನೋತ್ತರ, ಶೂನ್ಯ ವೇಳೆ ಮತ್ತಿತರ ಕಲಾಪಗಳು ನಡೆದವು. ಶಾಸನ ರಚನೆಯಲ್ಲಿ ಚರ್ಚೆ ನಡೆಸಿದ ಬಳಿಕ ಸಭಾಧ್ಯಕ್ಷರು ವಿಧೇಯಕವನ್ನು ಮತಕ್ಕೆ ಹಾಕಿ, ಅನುಮೋದನೆ ಪಡೆದುಕೊಳ್ಳುವ ಬಗ್ಗೆಯೂ ಅಣಕು ಪ್ರದರ್ಶನ ನಡೆಯಿತು.

‘ವಿಧಾನಸೌಧಕ್ಕೆ ಇದೇ ಮೊದಲ ಬಾರಿ ಭೇಟಿ ನೀಡಿದ್ದು, ಸಂಸತ್ ಅಧಿವೇಶನ ಹೇಗೆ ನಡೆಯುತ್ತದೆ ಎಂದು ತಿಳಿದುಕೊಂಡಿದ್ದೇನೆ. ದೇಶದ ವಿವಿಧ ಸಮಸ್ಯೆಗಳಿಗೆ ಪರಿಹಾರೋಪಾಯದ ಬಗ್ಗೆಯೂ ಚರ್ಚಿಸಿದೆವು’ ಎಂದು ಮಾಲ್ಗುಡಿ ವಿದ್ಯಾನಿಕೇತನದ 9ನೇ ತರಗತಿಯ ವಿದ್ಯಾರ್ಥಿ ತರುಣ್ ಯು.ಎಂ. ಹೇಳಿದರು. ಶಿಶು ಗೃಹಶಾಲೆಯ 11ನೇ ತರಗತಿಯ ವಿದ್ಯಾರ್ಥಿ ಪ್ರೀತಂ ಗೌಡ ಅವರು ಉಪ ಪ್ರಧಾನಿ ಜವಾಬ್ದಾರಿ ನಿರ್ವಹಿಸಿದರು.

ಸಿಐಐ ವೈಐ ಬೆಂಗಳೂರು ವಿಭಾಗದ ಅಧ್ಯಕ್ಷೆ ಪೂಜಿತಾ ಪ್ರಸಾದ್, ‘ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಸಲು ಇದು ಉತ್ತಮ ವೇದಿಕೆಯಾಗಿದೆ. ಸಾರ್ವಜನಿಕ ಸೇವೆಯ ಮಹತ್ವವನ್ನು ಮನವರಿಕೆ ಮಾಡಿಸಿ, ಮುಂದಿನ ತಲೆಮಾರನ್ನು ನಿರ್ಮಾಣ ಮಾಡುವುದು ಈ ಅಧಿವೇಶನದ ಉದ್ದೇಶ’ ಎಂದು ಹೇಳಿದರು.

ಇಂದು ಸಮಾರೋಪ

ಅಧಿವೇಶನದ ಸಮಾರೋಪ ಬುಧವಾರ ನಡೆಯಲಿದ್ದು, ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್ ಭಾಗವಹಿಸುತ್ತಾರೆ.

ಅಣಕು ಸಂಸತ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು

ಇಂದು ‘ಭಾರತ್ ಬಂದ್’

ನವದೆಹಲಿ (ಪಿಟಿಐ): ವಿವಿಧ ಕಾರ್ಮಿಕ ಸಂಘಟನೆಗಳ ಜೊತೆ ಗುರುತಿಸಿಕೊಂಡಿರುವ 25 ಕೋಟಿಗೂ ಹೆಚ್ಚು ಕಾರ್ಮಿಕರು ಭಾರತ್ ಬಂದ್‌ಗೆ ಕರೆ ನೀಡಿರುವ ಪರಿಣಾಮವಾಗಿ ಬ್ಯಾಂಕಿಂಗ್, ಅಂಚೆ ಹಾಗೂ ಇತರ ಕೆಲವು ಸೇವೆಗಳಿಗೆ ಬುಧವಾರ ಅಡಚಣೆ ಉಂಟಾಗುವ ಸಾಧ್ಯತೆ ಇದೆ.

ಕೇಂದ್ರ ಸರ್ಕಾರದ ಹಲವು ನೀತಿಗಳನ್ನು ವಿರೋಧಿಸಿ ಬಂದ್‌ಗೆ ಕರೆ ನೀಡಲಾಗಿದೆ.

ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಕೈಬಿಡಬೇಕು, ಗುತ್ತಿಗೆ ಪದ್ಧತಿ ಕೊನೆಗೊಳಿಸಬೇಕು, ಸರ್ಕಾರಿ ಸ್ವಾಮ್ಯದ ಕಂಪನಿಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವುದನ್ನು ನಿಲ್ಲಿಸಬೇಕು ಹಾಗೂ ಕನಿಷ್ಠ ವೇತನವನ್ನು ₹26 ಸಾವಿರಕ್ಕೆ ಹೆಚ್ಚಿಸಬೇಕು ಎಂಬ ಬೇಡಿಕೆಯನ್ನು ಸಿಐಟಿಯು, ಐಎನ್‌ಟಿಯುಸಿ ಮತ್ತು ಎಐಟಿಯುಸಿ ಸಂಘಟನೆಗಳು ಸರ್ಕಾರದ ಮುಂದಿರಿಸಿವೆ. ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಕೂಡ ಬಂದ್‌ಗೆ ಬೆಂಬಲ ಸೂಚಿಸಿದೆ.

ಆದರೆ, ಆರ್‌ಎಸ್‌ಎಸ್‌ನ ಭಾರತೀಯ ಮಜ್ದೂರ್ ಸಂಘವು (ಬಿಎಂಎಸ್) ಬಂದ್‌ಗೆ ಬೆಂಬಲ ನೀಡಿಲ್ಲ. ಈ ಬಂದ್ ರಾಜಕೀಯ ಪ್ರೇರಿತ ಎಂದು ಅದು ಹೇಳಿದೆ.

ಕೈಗಾರಿಕಾ ಪ್ರದೇಶಗಳಲ್ಲಿ ಪ್ರತಿಭಟನೆಗಳು ನಡೆಯಲಿವೆ. ಬ್ಯಾಂಕಿಂಗ್, ಅಂಚೆ ಮತ್ತು ಸರ್ಕಾರಿ ಸ್ವಾಮ್ಯದ ಕಂಪನಿಗಳು ಬಂದ್ ಆಗುವ ಸಾಧ್ಯತೆ ಇದೆ ಎಂದು ಕಾರ್ಮಿಕ ಮುಖಂಡರು ತಿಳಿಸಿದ್ದಾರೆ.

ಕೊಡತಿ ಗ್ರಾ.ಪಂ ಅಧ್ಯಕ್ಷರ ಆಯ್ಕೆ

ಆನೇಕಲ್: ತಾಲ್ಲೂಕಿನ ದೊಮ್ಮಸಂದ್ರ ಸಮೀಪದ ಕೊಡತಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ವೀಣಾ ರವಿ ಅಧಿಕಾರ ಸ್ವೀಕರಿಸಿದರು.

ವೀಣಾ ರವಿ ಅವರನ್ನು ಮಾಜಿ ಸಚಿವ ಎಚ್.ನಾಗೇಶ್, ಬೆಂಗಳೂರು ಪೂರ್ವ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ನಂದಕುಮಾರ್, ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಮಂಜುನಾಥ್, ಮಾಜಿ ಅಧ್ಯಕ್ಷರಾದ ಕೃಷ್ಣವೇಣಿ, ರಮೇಶ್ ರೆಡ್ಡಿ, ಆಶಾ ಚಿಟಿಬಾಬು, ನಾರಾಯಣಸ್ವಾಮಿ (ಬಾಬು), ಮಮತಾ ಲಕ್ಷ್ಮಣ್, ನಳಿನಾಕ್ಷಿ, ನಂಜುಂಡರೆಡ್ಡಿ, ಶಿವಕುಮಾರ್, ಸತೀಶ್, ರಾಮಸ್ವಾಮಿ, ಮುನಿರಾಜು, ಅಂತೋಣಿ ಮೇರಿ, ಯಲ್ಲಮ್ಮ ಶ್ರೀನಿವಾಸ್ ಅಭಿನಂದಿಸಿದರು.

ಅನುಸೂಚಿ

ಜಿಲ್ಲೆ : ಬೆಂಗಳೂರು ನಗರ | ತಾಲ್ಲೂಕು: ಬೆಂಗಳೂರು ದಕ್ಷಿಣ | ಹೋಬಳಿ: ಕೆಂಗೇರಿ | ಗ್ರಾಮ ಬಿ.ಎಂ. ಕಾವಲ್(ಬ್ಲಾಕ್–III)

ಕ್ರ. ಸಂ.	ಖಾತೆದಾರರ ಹೆಸರು (ಪಹಣಿಯಂತೆ): ಭೂಮಾಲೀಕರ / ಹಿಡುವಳಿದಾರರ ಹೆಸರು	ಖಾತೆದಾರರ ಹೆಸರು (ಪಹಣಿಯಂತೆ): ಅನುಭವದಾರರ ಹೆಸರು	ಸರ್ವೆ / ಖಾತಾ ನಂಬರ್	ಸರ್ವೆ/ಖಾತಾ ನಂಬರಿನಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತಾರ ಅನ್ವಯ): ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)	ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ: ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)	ತರಹೆ	ಚಕ್ಕುಬಂದಿ /ಸರಹದ್ದು: ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ಷರಾ
1	2	3	4	5	6	7	8	9	10	11	12	13	14
	ಪದ್ಮಮ್ಮ ಕೋಂ. ಮುನಿಯಪ್ಪ ಬೋಜಪ್ಪ ಬಿನ್ ಹನುಮಂತಪ್ಪ ಮಾರಪ್ಪ ಬಿನ್ ತಿರುಮಲಯ್ಯ ತೋಪಯ್ಯ ಬಿನ್ ತಿಮ್ಮಯ್ಯ ವೆಂಕಟಲಕ್ಷ್ಮಮ್ಮ ಕೋಂ. ಶ್ರೀನಿವಾಸಯ್ಯ ದಯಾನಂದ ಬಿನ್ ಮೂಡಲಗಿರಿಗೌಡ ಮುನಿರಂಗಮ್ಮ ಲಕ್ಷ್ಮೀದೇವಮ್ಮ ಬಿನ್ ಅಂಜಿನಪ್ಪ ಶ್ರೀಕಂಠಪ್ಪ ಬಿನ್ ವೆಂಕಟರಮಣಪ್ಪ ಎ. ಪಿ. ರಂಗನಾಥ ಬಿನ್ ಪದ್ಮನಾಭ ಚಿಕ್ಕಹನುಮಕ್ಕ ಕೋಂ. ಉಮೇಶ್ ಮಂಜಮ್ಮ ಕೋಂ. ಪರಮಶಿವ ವರಲಕ್ಷ್ಮೀ ಕೋಂ. ಸ್ವಾಮಿ ಸುರೇಶ್ ಬಿನ್ ಹನುಮಯ್ಯ ನಾಗೇಶ್ ಬಿನ್ ಹನುಮಯ್ಯ ಹರ್ಷ ಎ. ಬಿನ್ ಅಂಜನಪ್ಪ ವೆಂಕಟೇಶ ಬಿನ್ ರಾಮಯ್ಯ ವರಲಕ್ಷ್ಮೀ ಬಿನ್ ರಾಮಯ್ಯ ಮುನಿರತ್ನಮ್ಮ ಬಿನ್ ರಾಮಯ್ಯ ಮುನಿಯಪ್ಪ ಬಿನ್ ರಾಮಯ್ಯ ಸರ್ಕಾರ ಖರಾಬು	ಪದ್ಮಮ್ಮ ಕೋಂ. ಮುನಿಯಪ್ಪ ಬೋಜಪ್ಪ ಬಿನ್ ಹನುಮಂತಪ್ಪ ಮಾರಪ್ಪ ಬಿನ್ ತಿರುಮಲಯ್ಯ ತೋಪಯ್ಯ ಬಿನ್ ತಿಮ್ಮಯ್ಯ ವೆಂಕಟಲಕ್ಷ್ಮಮ್ಮ ಕೋಂ. ಶ್ರೀನಿವಾಸಯ್ಯ ದಯಾನಂದ ಬಿನ್ ಮೂಡಲಗಿರಿಗೌಡ ಮುನಿರಂಗಮ್ಮ ಲಕ್ಷ್ಮೀದೇವಮ್ಮ ಬಿನ್ ಅಂಜಿನಪ್ಪ ಶ್ರೀಕಂಠಪ್ಪ ಬಿನ್ ವೆಂಕಟರಮಣಪ್ಪ ಎ. ಪಿ. ರಂಗನಾಥ ಬಿನ್ ಪದ್ಮನಾಭ ಚಿಕ್ಕಹನುಮಕ್ಕ ಕೋಂ. ಉಮೇಶ್ ಮಂಜಮ್ಮ ಕೋಂ. ಪರಮಶಿವ ವರಲಕ್ಷ್ಮೀ ಕೋಂ. ಸ್ವಾಮಿ ಸುರೇಶ್ ಬಿನ್ ಹನುಮಯ್ಯ ನಾಗೇಶ್ ಬಿನ್ ಹನುಮಯ್ಯ ಹರ್ಷ ಎ. ಬಿನ್ ಅಂಜನಪ್ಪ ವೆಂಕಟೇಶ ಬಿನ್ ರಾಮಯ್ಯ ವರಲಕ್ಷ್ಮೀ ಬಿನ್ ರಾಮಯ್ಯ ಮುನಿರತ್ನಮ್ಮ ಬಿನ್ ರಾಮಯ್ಯ ಮುನಿಯಪ್ಪ ಬಿನ್ ರಾಮಯ್ಯ ಸರ್ಕಾರ ಖರಾಬು											
2.	ಬೀಳು	ಬೀಳು	182/1	4–00	–	4–00	–	ಖುಷ್ಕಿ	ಸ ನಂ. 183/1 183/2	ಸ ನಂ. 248, 249 250, 251	ಸ ನಂ. 248	ಸ ನಂ. 184	
3.	ಬೀಳು – ಕಾಳಮ್ಮ ಬಿನ್ ಮುನಿಚೌಡಮ್ಮ ಗಂಗಪ್ಪ ಬಿನ್ ಹನುಮಯ್ಯ	ಬೀಳು – ಕಾಳಮ್ಮ ಬಿನ್ ಮುನಿಚೌಡಮ್ಮ ಗಂಗಪ್ಪ ಬಿನ್ ಹನುಮಯ್ಯ	183/1	08–00	03–23	04–17	03–23	ಖುಷ್ಕಿ	ಸ.ನಂ 35	ಸ.ನಂ 182/1	ಸ.ನಂ 183/2	ಸ.ನಂ 184	
4.	ಸಕ್ಕೂಬಾಯಿ ಬಿನ್ ಕೃಷ್ಣೋಜಿರಾವ್ ಮಹದೇವರಾವ್ ಸಿಂಧ್ ಬಿನ್ ಕೃಷ್ಣೋಜಿರಾವ್ ಶ್ರೀನಿವಾಸ್‌ರಾವ್ ಸಿಂಧ್ ಬಿನ್ ಕೃಷ್ಣೋಜಿರಾವ್ ಸತ್ಯನಾರಾಯಣರಾವ್ ಸಿಂಧ್ ಬಿನ್ ಕೃಷ್ಣೋಜಿರಾವ್ ನಾಗಮಾಲಬಾಯಿ ಬಿನ್ ಕೃಷ್ಣೋಜಿರಾವ್ ಪರಮೇಶರಾವ್ ಬಿನ್ ಕೃಷ್ಣೋಜಿರಾವ್ ಮುರಳೀಧರ ರಾವ್ ಬಿನ್ ಕೃಷ್ಣೋಜಿರಾವ್ ಪುಷ್ಪ ಜೆ. ಮಾಸ್ಕೆ ಬಿನ್ ಕೃಷ್ಣೋಜಿರಾವ್	ಸಕ್ಕೂಬಾಯಿ ಬಿನ್ ಕೃಷ್ಣೋಜಿರಾವ್ ಮಹದೇವರಾವ್ ಸಿಂಧ್ ಬಿನ್ ಕೃಷ್ಣೋಜಿರಾವ್ ಶ್ರೀನಿವಾಸ್‌ರಾವ್ ಸಿಂಧ್ ಬಿನ್ ಕೃಷ್ಣೋಜಿರಾವ್ ಸತ್ಯನಾರಾಯಣರಾವ್ ಸಿಂಧ್ ಬಿನ್ ಕೃಷ್ಣೋಜಿರಾವ್ ನಾಗಮಾಲಬಾಯಿ ಬಿನ್ ಕೃಷ್ಣೋಜಿರಾವ್ ಪರಮೇಶರಾವ್ ಬಿನ್ ಕೃಷ್ಣೋಜಿರಾವ್ ಮುರಳೀಧರ ರಾವ್ ಬಿನ್ ಕೃಷ್ಣೋಜಿರಾವ್ ಪುಷ್ಪ ಜೆ. ಮಾಸ್ಕೆ ಬಿನ್ ಕೃಷ್ಣೋಜಿರಾವ್	183/2	07–02	01–02	06–00	01–02	ಖುಷ್ಕಿ	ಸ.ನಂ 35	ಸ.ನಂ 247, 248 182	ಸ.ನಂ 175/4	ಸ.ನಂ 183/1	
5.	ಬೀಳು– ಕರೀಮಖಾನ್	ಬೀಳು– ಕರೀಮಖಾನ್	186/1	12–06	6–31	5–15	6–31	ಖುಷ್ಕಿ	ಸ.ನಂ 35	ಸ.ನಂ 187	ಸ.ನಂ 184	ಸ.ನಂ 35	
6.	ಸರ್ಕಾರ	ಸರ್ಕಾರ	186/3										
7.	ಸರ್ಕಾರ	ಸರ್ಕಾರ	186/4										
8.	ಸರ್ಕಾರ	ಸರ್ಕಾರ	186/5										
9.	ಮುನಿಯಮ್ಮ	ಮುನಿಯಮ್ಮ	186/ಪಿ5										

(ವಿ.ಸೂ: ಅಧಿಸೂಚನೆಯಲ್ಲಿ ತಿಳಿಸಿರುವಂತೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪಣಾ ಅರ್ಜಿಯಲ್ಲಿ ಅಂಚೆ ವಿಳಾಸ ಮತ್ತು ಮೊಬೈಲ್ ನಂಬರನ್ನು ತಪ್ಪದೇ ಸ್ಪಷ್ಟವಾಗಿ ನಮೂದಿಸಿ ಸಲ್ಲಿಸುವುದು)

ಘೋಷ್ವಾರೆ

ಗ್ರಾಮ: ಬಿ.ಎಂ. ಕಾವಲ್

ತರಹೆ	ಒಟ್ಟು ವಿಸ್ತೀರ್ಣ (ಎ–ಗು)
ಖುಷ್ಕಿ	98–16
ತರಿ	–
ಬಾಗಾಯ್ತು	–
ಖರಾಬು	11–16
ಒಟ್ಟು	109–32

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು.

DIPR/CP/RO1671/AAPL/2025-26

ರಾಜ್ಯ ಸರ್ಕಾರಕ್ಕೆ ಮುಖಭಂಗ: ಬಿಜೆಪಿ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನೌಷಧಿ ಕೇಂದ್ರಗಳನ್ನು ಸ್ಥಗಿತಗೊಳಿಸುವ ರಾಜ್ಯ ಸರ್ಕಾರದ ಲೂಟಿಕೋರ ನೀತಿಗೆ ಹೈಕೋರ್ಟ್ ತಡೆ ನೀಡಿದ್ದು, ಇದರಿಂದ ಸರ್ಕಾರಕ್ಕೆ ಮುಖಭಂಗವಾಗಿದೆ' ಎಂದು ಬಿಜೆಪಿ ಹೇಳಿದೆ.

'ಬಿಜೆಪಿ ಹೋರಾಟಕ್ಕೆ ಜಯ ಸಿಕ್ಕಿದ್ದು, ಮೆಡಿಕಲ್ ಮಾಫಿಯಾಗೆ ಹೈಕೋರ್ಟ್ ಆದೇಶದಿಂದ ಕಡಿವಾಣ ಬಿದ್ದಿದೆ' ಎಂದು ಬಿಜೆಪಿ 'ಎಕ್ಸ್'ನಲ್ಲಿ ತಿಳಿಸಿದೆ.

'ಬಡವರ್ಗದ ಜನರಿಗೆ ಕೈಗೆಟುಕುವ ದರದಲ್ಲಿ ಜೆನರಿಕ್ ಔಷಧಗಳನ್ನು ಲಭ್ಯವಾಗಿಸುವಂತೆ ಮಾಡುವ ಉದ್ದೇಶದಿಂದ ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳನ್ನು ಮೋದಿ ಸರ್ಕಾರ ಜಾರಿಗೆ ತಂದಿತ್ತು. ಕಾಂಗ್ರೆಸ್ ಸರ್ಕಾರ ಜನೌಷಧಿ ಕೇಂದ್ರಗಳನ್ನು ಮುಚ್ಚಲು ವಿನಾಕಾರಣ ಆದೇಶ ಹೊರಡಿಸಿತ್ತು. ರಾಜಕಾರಣಕ್ಕೆ ಜನಪರ ಯೋಜನೆಗಳನ್ನು ನಿಲ್ಲಿಸುವ ದುರ್ಬುದ್ಧಿಯನ್ನು ಕಾಂಗ್ರೆಸ್ ಇನ್ನಾದರೂ ಬಿಡಬೇಕು' ಎಂದು ಹೇಳಿದೆ.

'ಶ್ರೀನಾಥ್‌ಗೆ ಹೊಸದಾಗಿ ನೋಟಿಸ್ ನೀಡಿ'

ಲೋಕಾಯುಕ್ತ ಪೊಲೀಸರಿಗೆ ಆದೇಶಿಸಿದ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ

ಪ್ರಜಾವಾಣಿ ವಾರ್ತೆ

ಶ್ರೀನಾಥ್ ಎಂ.ಜೋಶಿ

ಹೈಕೋರ್ಟ್ ಸುದ್ದಿಗಳು

ಬೆಂಗಳೂರು: 'ಲೋಕಾಯುಕ್ತ ಪೊಲೀಸರಿಂದ ದಾಳಿ ನಡೆಸುವ ಬೆದರಿಕೆಯೊಡ್ಡಿ ಅಧಿಕಾರಿಗಳಿಂದ ಹಣ ವಸೂಲಿ ಮಾಡುತ್ತಿದ್ದ ಆರೋಪ ಪ್ರಕರಣದಲ್ಲಿ ಐಪಿಎಸ್ ಅಧಿಕಾರಿ ಶ್ರೀನಾಥ್ ಜೋಶಿ ಅವರಿಗೆ ಹೊಸದಾಗಿ ನೋಟಿಸ್ ನೀಡಿ ವಿಚಾರಣೆಗೆ ಕರೆಯಿಸಿಕೊಳ್ಳಿ' ಎಂದು ಹೈಕೋರ್ಟ್, ಲೋಕಾಯುಕ್ತ ಪೊಲೀಸರಿಗೆ ಆದೇಶಿಸಿದೆ.

'ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಲೋಕಾಯುಕ್ತ ಪೊಲೀಸರು ನನಗೆ ನೀಡಿರುವ ನೋಟಿಸ್ ರದ್ದುಪಡಿಸಬೇಕು' ಎಂದು ಕೋರಿ ಶ್ರೀನಾಥ್ ಜೋಶಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಲೋಕಾಯುಕ್ತ ಪೊಲೀಸರ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಅಶೋಕ ಹಾರನಹಳ್ಳಿ, 'ಅರ್ಜಿದಾರರಿಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ 2025ರ ಜೂನ್ 15ರಂದು ನೋಟಿಸ್ ಜಾರಿ ಮಾಡಲಾಗಿತ್ತು. ಆದರೆ, ಅವರು ವಿಚಾರಣೆಗೆ ಹಾಜರಾಗದೇ ನಾಪತ್ತೆಯಾಗಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಅವರ ಹೇಳಿಕೆ ಪಡೆದುಕೊಳ್ಳುವ ಅವಶ್ಯವಿದೆ. ಆದ್ದರಿಂದ, ನೋಟಿಸ್‌ಗೆ ನೀಡಿರುವ ತಡೆ ಆದೇಶ ತೆರವುಗೊಳಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಈ ಮನವಿಯನ್ನು ಪರಿಗಣಿಸಿದ ನ್ಯಾಯಪೀಠ, 'ತನಿಖೆಗೆ ಹಾಜರಾಗುವಂತೆ ಸೂಚಿಸಿ ಲೋಕಾಯುಕ್ತ ಪೊಲೀಸರು ಅರ್ಜಿದಾರರಿಗೆ ಜೂನ್ 15ರಂದು ನೋಟಿಸ್ ಜಾರಿ ಮಾಡಿ, ಒಂದು ದಿನದಲ್ಲಿ ವಿಚಾರಣೆಗೆ (ಜೂನ್ 16) ಹಾಜರಾಗುವಂತೆ ಸೂಚಿಸಿರುವುದನ್ನು ಗಮನಿಸಲಾಗಿದೆ. ವಿಚಾರಣೆಗೆ ಹಾಜರಾಗಲು ನಿಗದಿಪಡಿಸಿದ್ದ ಸಮಯ ಈಗಾಗಲೇ ಮುಗಿದಿದೆ. ಆದ್ದರಿಂದ, ಜೋಶಿ ಅವರಿಗೆ ಹೊಸದಾಗಿ ನೋಟಿಸ್ ಜಾರಿ ಮಾಡಬೇಕು. ನೋಟಿಸ್ ನೀಡಿದ ನಂತರ 10 ದಿನಗಳಲ್ಲಿ ಜೋಶಿ ತನಿಖಾಧಿಕಾರಿ ಮುಂದೆ ಹಾಜರಾಗಬೇಕು' ಎಂದು ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿದೆ.

ಅಂತೆಯೇ, 'ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಒಂದು ವೇಳೆ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದರೆ ಅದನ್ನು ಕಾನೂನು ಪ್ರಕಾರ ಪರಿಗಣಿಸಬೇಕು' ಎಂದೂ ಲೋಕಾಯುಕ್ತ ವಿಶೇಷ ನ್ಯಾಯಾಲಯಕ್ಕೆ ಸೂಚಿಸಿದೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ, 'ನನ್ನ ವಿರುದ್ಧ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಪ್ರಕರಣದ ಮತ್ತೊಬ್ಬ ಆರೋಪಿ ಮಾಜಿ ಕಾನ್‌ಸ್ಟೆಬಲ್ ನಿಂಗಪ್ಪ ಸಾವಂತ್ ಸಲ್ಲಿಸಿರುವ ಅರ್ಜಿ ಮೇಲಿನ ಆದೇಶವನ್ನು ನ್ಯಾಯಪೀಠ ಇದೇ ವೇಳೆ ಕಾಯ್ದಿರಿಸಿದೆ.

ಜಲಜಾಕ್ಷಿ ಅಮಾನತಿಗೆ ಮಧ್ಯಂತರ ತಡೆ

'ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮದ ವೇಳೆ ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ ಅವರ ಫೋಟೋ ಹಾಕಿಲ್ಲ' ಎಂಬ ಆರೋಪದಡಿ ವಿಧಾನಪರಿಷತ್ತಿನ ಉಪ ಕಾರ್ಯದರ್ಶಿ ಕೆ.ಜೆ.ಜಲಜಾಕ್ಷಿ ಅವರನ್ನು ಅಮಾನತುಗೊಳಿಸಿ ವಿಧಾನಪರಿಷತ್ ಕಾರ್ಯದರ್ಶಿ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಜಲಜಾಕ್ಷಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಟಿ.ನರೇಂದ್ರ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಪೀಠ, ಅರ್ಜಿದಾರರನ್ನು ಅಮಾನತುಗೊಳಿಸಿ ಇದೇ 4ರಂದು ವಿಧಾನಪರಿಷತ್ ಕಾರ್ಯದರ್ಶಿ ಹೊರಡಿಸಿದ್ದ ಆದೇಶಕ್ಕೆ ಮುಂದಿನ ವಿಚಾರಣೆ ದಿನದವರೆಗೆ ತಡೆ ನೀಡಿತು. ವಿಧಾನಪರಿಷತ್ ಸಭಾಪತಿ ಹಾಗೂ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ನಿರ್ದೇಶಿಸಿ ವಿಚಾರಣೆ ಮುಂದೂಡಿತು.

'ಸಂವಿಧಾನದ ದಿನದ ಅಂಗವಾಗಿ ವಿಧಾನಪರಿಷತ್ತಿನ ಸಚಿವಾಲಯದಲ್ಲಿ ಆಯೋಜಿಸಲಾಗಿದ್ದ ಸಂವಿಧಾನ ಪೀಠಿಕೆ ಓದು ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಫೋಟೊ ಹಾಕಿರಲಿಲ್ಲ. ಇದು ಶಿಷ್ಟಾಚಾರದ ಉಲ್ಲಂಘನೆ' ಎಂದು ಆರೋಪದಡಿ ಜಲಜಾಕ್ಷಿ ಅವರನ್ನು ಅಮಾನತುಗೊಳಿಸಲಾಗಿದೆ.

ನಿಮಿಷಾಗೆ 16ರಂದು ಗಲ್ಲು ಜಾರಿ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ನರ್ಸ್ ನಿಮಿಷಾ ಪ್ರಿಯಾ ಅವರನ್ನು ಜುಲೈ 16ರಂದು ಮರಣದಂಡನೆಗೆ ಗುರಿಪಡಿಸಲು ಯೆಮೆನ್ ಜೈಲು ಅಧಿಕಾರಿಗಳು ನಿರ್ಧರಿಸಿದ್ದಾರೆ ಎಂದು ತಿಳಿದುಬಂದಿದೆ.

'ಗಲ್ಲು ಶಿಕ್ಷೆ ಜಾರಿಗೊಳಿಸುವ ದಿನಾಂಕದ ಮಾಹಿತಿಯನ್ನು ಜೈಲು ಅಧಿಕಾರಿಗಳು ನೀಡಿದ್ದಾರೆ' ಎಂದು ನಿಮಿಷಾ ಪ್ರಿಯಾ ಅವರ ಬಿಡುಗಡೆಗೆ ಶ್ರಮಿಸುತ್ತಿರುವ ಕಾರ್ಯ ತಂಡದ ಸದಸ್ಯರೊಬ್ಬರು ತಿಳಿಸಿದ್ದಾರೆ.

ಕೇರಳದ ಪಾಲಕ್ಕಾಡ್ ಜಿಲ್ಲೆಯ 37 ವರ್ಷದ ನಿಮಿಷಾ ಅವರು ತಮ್ಮ ವ್ಯವಹಾರ ಪಾಲುದಾರರಾಗಿದ್ದ ಯೆಮೆನ್ ದೇಶದ ಪ್ರಜೆ ತಲಾಲ್ ಅಬ್ದು ಮಹ್ದಿ ಎಂಬವರನ್ನು ಹತ್ಯೆ ಮಾಡಿದ ಪ್ರಕರಣದಲ್ಲಿ ಗಲ್ಲು ಶಿಕ್ಷೆಗೆ ಗುರಿಯಾಗಿದ್ದಾರೆ. 2017ರಲ್ಲಿ ಕೊಲೆ ಪ್ರಕರಣ ನಡೆದಿತ್ತು.

ಯೆಮೆನ್‌ನ ವಿಚಾರಣಾ ನ್ಯಾಯಾಲಯ 2020ರಲ್ಲಿ ನಿಮಿಷಾ ಅವರಿಗೆ ಗಲ್ಲು ಶಿಕ್ಷೆ ವಿಧಿಸಿ ಆದೇಶಿಸಿತ್ತು. ಯೆಮೆನ್‌ನ 'ಸುಪ್ರೀಂ ಜುಡಿಷಿಯಲ್ ಕೌನ್ಸಿಲ್' 2023ರ ನವೆಂಬರ್‌ನಲ್ಲಿ ಈ ಶಿಕ್ಷೆ ಎತ್ತಿ ಹಿಡಿದಿತ್ತು. 'ಬ್ಲಡ್ ಮನಿ' ನೀಡಿ (ಸಂತ್ರಸ್ತ ವ್ಯಕ್ತಿಯ ಕುಟುಂಬಕ್ಕೆ ಪರಿಹಾರವಾಗಿ ನೀಡುವ ಹಣ) ನಿಮಿಷಾ ಅವರನ್ನು ಗಲ್ಲು ಶಿಕ್ಷೆಯಿಂದ ಪಾರು ಮಾಡುವ ಪ್ರಯತ್ನ ನಡೆದಿದ್ದರೂ, ಅದಕ್ಕೆ ಸಂತ್ರಸ್ತನ ಕುಟುಂಬದ ಕಡೆಯಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಂದಿಲ್ಲ.

ವಿದ್ಯುತ್ ಪರಿವೀಕ್ಷಣಾಲಯ
ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕಕರ ಕಛೇರಿ, ಬೆಂಗಳೂರು ಉತ್ತರ
ನಂ: 2/3 & 2/4, ಅರಗಿಣಿ ಭವನ, ಮೊದಲನೆ ಮಹಡಿ
ಡಾ|| ರಾಜ್ ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು-560010.

ಸಂ.: ಅಮುವಿಪ/ಬೆಂ.ಉ/ವಾಹನ ಟೆಂಡರ್/2299/2025-26 ದಿನಾಂಕ: 07.07.2025

ಇ-ಟೆಂಡರ್ ಪ್ರಕಟಣೆ (2ನೇ ಕರೆ)

ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ ಕಚೇರಿಯ ಗ್ರೂಪ್ 'ಎ' ಅಧಿಕಾರಿಗಳಾದ 1) ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ, 2) ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ, 3) ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ ರವರ ಅಧಿಕೃತ ಕೆಲಸಗಳಿಗಾಗಿ ಪ್ರತ್ಯೇಕವಾಗಿ ಒಂದೊಂದು ಸಂಖ್ಯೆಯ **ಎಸಿ ಸಹಿತ (AC)** ವಾಹನವನ್ನು ಹಾಗೂ 4) ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ ರವರ ಅಧಿಕೃತ ಕೆಲಸಗಳಿಗಾಗಿ ಪ್ರತ್ಯೇಕವಾಗಿ ಒಂದು ಸಂಖ್ಯೆಯ **ನಾನ್ ಎಸಿ (NON-AC)** ವಾಹನವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https:/kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು. ಆಸಕ್ತ ಬಿಡ್‌ದಾರರು ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 15.07.2025 ರಂದು ಸಾಯಂಕಾಲ 05.10 ಘಂಟೆಯವರೆಗೆ** ನಿಗದಿಪಡಿಸಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಚೇರಿಯ ದೂರವಾಣಿ ಸಂಖ್ಯೆ: 080-23420022 ಮೂಲಕ ಪಡೆಯಬಹುದು.

ಸಹಿ/-
ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು
ಬೆಂಗಳೂರು ಉತ್ತರ, ಬೆಂಗಳೂರು

DIPR/CP/1705/SA/2025-26

13ಕ್ಕೆ 'ಮಹಾನಾಯಕ ಸಾಮ್ರಾಟ್ ಅಶೋಕ' ನಾಟಕ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯು ಇದೇ 13ರಂದು ಮಧ್ಯಾಹ್ನ 3ಗಂಟೆಗೆ ವಸಂತನಗರದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ 'ಮಹಾನಾಯಕ ಸಾಮ್ರಾಟ್ ಅಶೋಕ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಘಟಕದ ಸಂಚಾಲಕ ಡಿ.ಜಿ.ಸಾಗರ್, 'ನಾಗಪುರದ ಸೂರ್ಯ ಅಂಕುರ ತಂಡವು ಈ ನಾಟಕವನ್ನು ಪ್ರಸ್ತುತಪಡಿಸುತ್ತಿದೆ. ಇದು ಅಶೋಕ ಚಕ್ರವರ್ತಿಯ ಜೀವನ ಆಧರಿಸಿದ ನಾಟಕವಾಗಿದೆ. ಬೌದ್ಧ ಜೀವನ ವಿಧಾನವು ಹೇಗಿತ್ತು ಎಂಬುದನ್ನು ನಾಟಕ ಕಟ್ಟಿಕೊಡಲಿದೆ' ಎಂದರು.

'ನಾಟಕ ಪ್ರದರ್ಶನಕ್ಕೆ 2,800 ಚದರ ಅಡಿ ವಿಸ್ತೀರ್ಣದಲ್ಲಿ ರಂಗ ವೇದಿಕೆ ಸಿದ್ಧಪಡಿಸಲಾಗುವುದು. 150ಕ್ಕೂ ಅಧಿಕ ಕಲಾವಿದರು ರಂಗದ ಮೇಲೆ ಅಭಿನಯಸಲಿದ್ದಾರೆ. ಇದಕ್ಕೂ ಮೊದಲು, ಮಧ್ಯಾಹ್ನ 12 ಗಂಟೆಗೆ ಈ ನಾಟಕದ ಉದ್ಘಾಟನಾ ಸಮಾರಂಭ ನಡೆಯಲಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಿವಿಧ ಸಚಿವರು ಭಾಗವಹಿಸುತ್ತಾರೆ' ಎಂದರು.

ಯುವಜನ ಆಯೋಗ ರಚನೆ

ಪಟ್ನಾ (ಪಿಟಿಐ): ಯುವಕರಿಗೆ ಹೆಚ್ಚು ಉದ್ಯೋಗಾವಕಾಶಗಳನ್ನು ಒದಗಿಸುವ ಸಲುವಾಗಿ ಯುವಜನ ಆಯೋಗವನ್ನು ರಚಿಸಲು ಬಿಹಾರ ಸರ್ಕಾರ ಮಂಗಳವಾರ ನಿರ್ಧರಿಸಿದೆ.

ಮುಖ್ಯಮಂತ್ರಿ ನಿತೀಶ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಪ್ರಸ್ತಾವಕ್ಕೆ ಅನುಮೋದನೆ ನೀಡಲಾಗಿದೆ.

ರಾಜ್ಯದಲ್ಲಿ ಉದ್ಯೋಗಾವಕಾಶಗಳ ಕೊರತೆಯ ಬಗ್ಗೆ ವಿರೋಧ ಪಕ್ಷಗಳು ಟೀಕೆ ಮಾಡುತ್ತಿರುವ ಕಾರಣ ನಿತೀಶ್ ಕುಮಾರ್ ಸರ್ಕಾರವು ಚುನಾವಣೆಗೆ ಕೆಲವೇ ತಿಂಗಳುಗಳಿರುವಾಗ ಈ ನಿರ್ಧಾರವನ್ನು ಕೈಗೊಂಡಿದೆ.

ಎಚ್‌.ಕೆ. ಪಾಟೀಲ ನೇತೃತ್ವದ ಸಚಿವ ಸಂಪುಟ ಉಪ ಸಮಿತಿಯ ಮೊದಲ ಸಭೆ

ಗಣಿ: ತನಿಖೆ ವಿಳಂಬಕ್ಕೆ ಅಸಮಾಧಾನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 16 ವರ್ಷಗಳಾದರೂ ಚುರುಕಾಗದ ತನಿಖೆ
- ಲೋಕಾಯುಕ್ತ ವಿಶೇಷ ತನಿಖಾ ದಳಕ್ಕೆ ಸಮಿತಿ ಪ್ರಶ್ನೆ
- ಮುಂದಿನ ಸಭೆಯಲ್ಲಿ ವರದಿ ಮಂಡಿಸುವುದಾಗಿ ಅಧಿಕಾರಿಗಳ ಹೇಳಿಕೆ

ಬೆಂಗಳೂರು: ಗಣಿಗಾರಿಕೆಯಲ್ಲಿ ನಡೆದ ಅಕ್ರಮಗಳ ಕುರಿತ ತನಿಖೆ ವಿಳಂಬವಾಗಿರುವುದಕ್ಕೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಗಣಿ ಅಕ್ರಮಗಳ ಕುರಿತಂತೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಶಿಫಾರಸು ಮಾಡಲು ರಚಿಸಲಾಗಿರುವ ಸಚಿವ ಸಂಪುಟದ ಉಪ ಸಮಿತಿಯ ಮೊದಲ ಸಭೆ ಮಂಗಳವಾರ ನಡೆಯಿತು. ಸಭೆಯಲ್ಲಿ ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಅರಣ್ಯ ಸಚಿವ ಈಶ್ವರ ಖಂಡ್ರೆ, ಹಿರಿಯ ಪೊಲೀಸ್ ಅಧಿಕಾರಿಗಳು ಭಾಗವಹಿಸಿದರು.

'ಗಣಿಗಾರಿಕೆಯಲ್ಲಿ ನಡೆದ ಅಕ್ರಮಗಳ ತನಿಖೆಯ ವೇಳೆ ಹಲವು ಅಚ್ಚರಿಯ ವಿಷಯಗಳು ಬಹಿರಂಗವಾಗಿವೆ. ಆದರೆ, ತನಿಖೆಯ ವಿಚಾರಕ್ಕೆ ಸಂಬಂಧಿಸಿದಂತೆ ಒಟ್ಟು ವ್ಯವಸ್ಥೆಯಲ್ಲಿ ಆಗಿರುವ ವಿಳಂಬವನ್ನು ಒಪ್ಪಲು ಸಾಧ್ಯ ಇಲ್ಲ. ಈ ವಿಚಾರದಲ್ಲಿ ಕೆಲವು ಮಹತ್ವದ ತೀರ್ಮಾನಗಳನ್ನು ಕೈಗೊಳ್ಳಬೇಕಾಗಿದೆ' ಎಂಬ ತೀರ್ಮಾನಕ್ಕೆ ಬಂದಿರುವ ಸಮಿತಿ, ಇದೇ 11ಕ್ಕೆ ಮತ್ತೆ ಸಭೆ ಸೇರಲು ನಿರ್ಧರಿಸಿದೆ.

ಅಕ್ರಮ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾಗಿರುವ ನಷ್ಟವನ್ನು ವಸೂಲಿ ಮಾಡಲು ವಸೂಲಾತಿ ಆಯುಕ್ತರ ನೇಮಕ ಮತ್ತು ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ತ್ವರಿತ ನ್ಯಾಯಾಲಯ ಸ್ಥಾಪಿಸುವ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಕ್ಕೆ ಬರಲು ಕೂಡಾ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ವಾಣಿಜ್ಯ ತೆರಿಗೆ ವಂಚನೆ, ಅಬಕಾರಿ ಸುಂಕದ ವಂಚನೆ, ಅರಣ್ಯ ಅಭಿವೃದ್ಧಿ ಸುಂಕ ವಂಚಿಸಿದ ಅನೇಕ ಪ್ರಕರಣಗಳ ತನಿಖೆಯು ಸುದೀರ್ಘ 16 ವರ್ಷಗಳ ನಂತರವೂ ಶೈಶವಾವಸ್ಥೆಯಲ್ಲಿವೆ. 2013ರಿಂದ 2018ರ ಅವಧಿಯ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವ ಸಂಪುಟ ಉಪ ಸಮಿತಿ ಕೈಗೊಂಡ ಕ್ರಮಗಳಿಂದಾಗಿ 43ಕ್ಕೂ ಹೆಚ್ಚು ಪ್ರಕರಣಗಳ ಎಫ್‌ಐಆರ್ ಆಗಿ ತನಿಖೆ ನಡೆದು ಇನ್ನೂ ನ್ಯಾಯಾಲಯಗಳಲ್ಲಿ ವಿವಿಧ ಹಂತಗಳಲ್ಲಿ ವಿಚಾರಣೆ ನಡೆಯುತ್ತಿದೆ. 2013ರ ನ. 18ರಂದು ಒಂಬತ್ತು ಪ್ರಕರಣಗಳನ್ನು ಸರ್ಕಾರ ಸಿಬಿಐಗೆ ವಹಿಸಿತ್ತು. ಆ ಪೈಕಿ, ಆರು ಪ್ರಕರಣಗಳನ್ನು ತನಿಖೆ ಮಾಡಲು ಸಿಬಿಐ ನಿರಾಕರಿಸಿತ್ತು. ಮೂರು ಪ್ರಕರಣಗಳಲ್ಲಿ ಮಾತ್ರ ಸಿಬಿಐ ತನಿಖೆ ನಡೆದು ನ್ಯಾಯಾಲಯಗಳಿಗೆ ದೋಷಾರೋಪಪಟ್ಟಿ ಸಲ್ಲಿಸಲಾಗಿದೆ. ಸಿಬಿಐ ತನಿಖೆಗೆ ನಿರಾಕರಿಸಿದ್ದ ಆರು ಪ್ರಕರಣಗಳನ್ನು ಅಕ್ರಮ ಗಣಿಗಾರಿಕೆ ತನಿಖೆಗೆ ಲೋಕಾಯುಕ್ತದಡಿ ನೇಮಿಸಿದ್ದ ವಿಶೇಷ ತನಿಖಾ ದಳಕ್ಕೆ ರಾಜ್ಯ ಸರ್ಕಾರವು ವಹಿಸಿದೆ. ಆದರೆ, ತನಿಖೆ ನಿರೀಕ್ಷಿತ ಪ್ರಗತಿ ಕಂಡಿಲ್ಲ ಎಂದು ಸಭೆಯಲ್ಲಿ ಚರ್ಚೆ ನಡೆಯಿತು.

14 ಮಂದಿಗೆ ನೇಮಕಾತಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಅರ್ಜಿ ಸಲ್ಲಿಸಿದ್ದ 14 ಮಂದಿಗೆ ಕಚೇರಿ ಸಹಾಯಕ (ಸ್ವಚ್ಛತೆ) ಹುದ್ದೆಯ ನೇಮಕಾತಿ ಆದೇಶದ ಪ್ರತಿಯನ್ನು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಮಂಗಳವಾರ ವಿತರಿಸಿದರು.

ಒಂದು ವರ್ಷದಲ್ಲಿ ಒಟ್ಟಾರೆ 212 ಮೃತರ ಅವಲಂಬಿತರಿಗೆ ಅನುಕಂಪದ ಆಧಾರದ ನೇಮಕಾತಿ ಮಾಡಲಾಗಿದೆ. ಭದ್ರತಾ ಸಿಬ್ಬಂದಿ- 107, ಕಚೇರಿ ಸಹಾಯಕ (ಸ್ವಚ್ಛತೆ)-46, ತಾಂತ್ರಿಕ ಸಹಾಯಕ-37, ಚಾಲಕ / ನಿರ್ವಾಹಕ / ಚಾಲಕ ಕಂ ನಿರ್ವಾಹಕ-22 ಸೇರಿ ಒಟ್ಟಾರೆ 226 ಅನುಕಂಪದ ನೌಕರಿ ನೀಡಲಾಗಿದೆ. ಭದ್ರತಾ ಸಿಬ್ಬಂದಿ ಹುದ್ದೆಗಳಿಗೆ ವಾರದಲ್ಲಿ ದೈಹಿಕ ಸಾಮರ್ಥ್ಯ ಪರೀಕ್ಷೆ ನಡೆಸಲಾಗುತ್ತದೆ.

14 ಮಂದಿಗೆ ನೇಮಕಾತಿ ಆದೇಶ ಪ್ರತಿಯನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೀಡಿದರು

'ಅಪರಾಧ ಪ್ರಮಾಣ ಇಳಿಕೆ'

ಪ್ರಜಾವಾಣಿ ವಾರ್ತೆ

ಜಿ.ಪರಮೇಶ್ವರ

ಸುಬ್ರಹ್ಮಣ್ಯ: 'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿದೆ. ಕಾನೂನಿನ ಕಟ್ಟುನಿಟ್ಟು ಪಾಲನೆಯಿಂದಾಗಿ ರಾಜ್ಯದಲ್ಲಿ ಅಪರಾಧ ಪ್ರಮಾಣ ಇಳಿಕೆಯಾಗಿದೆ. ಕಠಿಣ ಕ್ರಮಕೈಗೊಂಡಿದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕಾನೂನು ಸುವ್ಯವಸ್ಥೆ ಸುಧಾರಣೆಯಾಗಿದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ಇಲ್ಲಿ ಮಂಗಳವಾರ ಮಾತನಾಡಿ, 'ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ರಾಜ್ಯದ ಅಪರಾಧಗಳ ಚಟುವಟಿಕೆ ಕುರಿತ ಮಾಹಿತಿ ಪಡೆಯಲಾಗಿತ್ತು. ಅದರ ಪ್ರಕಾರ ರಾಜ್ಯದಲ್ಲಿ ಅಪರಾಧ ಪ್ರಮಾಣ ಕಡಿಮೆಯಾಗಿರುವುದು ಕಂಡುಬಂದಿದೆ' ಎಂದರು.

'ಕೋಮು ಹಿಂಸಾಚಾರ ನಿಗ್ರಹಕ್ಕೆ ವಿಶೇಷ ಕಾರ್ಯಪಡೆ ರಚಿಸಿರುವುದು ಇಲ್ಲಿನ ಶಾಂತಿ ಕಾಪಾಡುವುದಕ್ಕೆ ಪೂರಕವಾಗಿದೆ. ಈ ಬಗ್ಗೆ ಶ್ಲಾಘನೆ ವ್ಯಕ್ತವಾಗಿದೆ. ಬೆಂಗಳೂರು ಬಳಿಕ ಅತಿ ವೇಗವಾಗಿ ಬೆಳೆಯುವ ಅವಕಾಶಗಳಿರುವುದು ಕರಾವಳಿಗೆ. ಇಲ್ಲಿ ಶಾಂತಿ ಕಾಪಾಡುವುದು ಅತೀ ಮುಖ್ಯ' ಎಂದರು.

'545 ಎಸ್‌ಐಗಳ ನೇಮಕಾತಿ ಆದೇಶ ನೀಡಲಾಗಿದ್ದು, ಅವರು ತರಬೇತಿ ಪಡೆಯುತ್ತಿದ್ದಾರೆ. ಇನ್ನೂ 402 ಹುದ್ದೆಗಳಿಗೆ ನೇಮಕಾತಿ ಆದೇಶವಾಗಲಿದೆ' ಎಂದರು.

ಮೈಸೂರು ರೇಸ್

ಫೋರ್ಟಿಸ್ ಗೆಲ್ಲುವ ನಿರೀಕ್ಷೆ

ಶ್ರೀ ಕನ್ವರ್ ಸಿಂಗ್ ಸೈನಿ-ನಾಮ್ಬರ್‌ದಾರ್ ಮೆಮೋರಿಯಲ್ ಕೋಲ್ಟ್ಸ್ ಟ್ರಯಲ್ ಸ್ಟೇಕ್ಸ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫೋರ್ಟಿಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕಾಸ್ಮಿಕ್ ಟಚ್ 1, ಫಿನಿಕ್ಸ್ ಗೋಲ್ಡ್ 3, ಸೆಲ್ಮಾ 2
2ನೇ ರೇಸ್: ದಿ ಏಂಜೆಲ್ ಪವರ್ 2, ಮಿರಾಕಲ್ ಹನಿ 6, ವಾರಿಯರ್ ವುಮನ್ 7
3ನೇ ರೇಸ್: ಕ್ರಿಯೇಟಿವ್ ಗರ್ಲ್ 2, ಬ್ಯೂಟಿಫುಲ್ ಬೂಮ್ 7, ಸ್ಯಾಂಡಲ್ ಕಿಂಗ್ 6
4ನೇ ರೇಸ್: ಟಾಸ್ಕಾನ 8, ಚಾಯ್ಸ್ 6, ಆಬ್ಸಲ್ಯೂಟ್ ಕಾಂಕ್ವರರ್ 10
5ನೇ ರೇಸ್: ಫೋರ್ಟಿಸ್ 1, ಮ್ಯಾಗ್ನೆಟಾರ್ 2, ಎಲ್ ರೇ 5
6ನೇ ರೇಸ್: ಮ್ಯಾಗ್ನೆಟಿಕ್ 8, ಸೀ ದಿ ಸನ್ 1, ಚಾಟ್ 7
7ನೇ ರೇಸ್: ಸ್ವಾಗತಮ್ 6, ನ್ಯಾಚುರಲ್ ಟೊರ್ನಾಡೊ 7, ತಲೈವ 8

ಉತ್ತಮ ಬೆಟ್: ಕ್ರಿಯೇಟಿವ್ ಗರ್ಲ್

ಜಾಕ್‌ಪಾಟ್‌ಗೆ	1ನೇ ಟ್ರೆಬಲ್	2ನೇ ಟ್ರೆಬಲ್
3,4,5,6,7	2,3,4	5,6,7

ಒಳಾಡಳಿತ ಇಲಾಖೆ ಆದೇಶ ● ರಾಜ್ಯದ ಹಲವೆಡೆ ಮಕ್ಕಳು ಕಾಣೆಯಾದ ಪ್ರಕರಣ

ಕಾಣೆಯಾದ ಮಕ್ಕಳ ಪತ್ತೆಗೆ ಕಾರ್ಯಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಾಣೆಯಾದ ಮಕ್ಕಳನ್ನು ಪತ್ತೆ ಹಚ್ಚಲು ವಿಶೇಷ ಕಾರ್ಯಪಡೆ ರಚಿಸಿ ಒಳಾಡಳಿತ ಇಲಾಖೆ ಆದೇಶ ಹೊರಡಿಸಿದೆ.

ಬೆಂಗಳೂರು ಸೇರಿದಂತೆ ನಗರಗಳ ವ್ಯಾಪ್ತಿಯಲ್ಲಿ ನಗರ ಪೊಲೀಸ್ ಆಯುಕ್ತರು, ಆಯಾ ಜಿಲ್ಲೆಗಳಲ್ಲಿ ಎಸ್‌ಪಿಗಳು ಕಾರ್ಯಪಡೆಯ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಹೆಚ್ಚುವರಿ ಜಿಲ್ಲಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು, ಬಾಲನ್ಯಾಯ ಮಂಡಳಿ ಸದಸ್ಯರು, ಮಕ್ಕಳ ವಿಶೇಷ ಪೊಲೀಸ್ ಘಟಕದ ಮುಖ್ಯಸ್ಥರು, ಮಾನವ ಕಳ್ಳ ಸಾಗಣೆ ವಿರೋಧಿ ಘಟಕದ ಸದಸ್ಯರು, ಇಬ್ಬರು ಅರೆ ನ್ಯಾಯಿಕ ಸ್ವಯಂ ಸೇವಕರು, ಸ್ವಯಂ ಸೇವಾ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಇಬ್ಬರು ಕಾರ್ಯಕರ್ತರು ಸದಸ್ಯರಾಗಿರುತ್ತಾರೆ. ಆಯಾ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿ ಕೆಲಸ ಮಾಡುವರು.

ರಾಜ್ಯದ ಹಲವೆಡೆ ಮಕ್ಕಳು ಕಾಣೆಯಾದ ಪ್ರಕರಣಗಳು ದಾಖಲಾಗಿದ್ದು, ಹಲವು ಪ್ರಕರಣಗಳಲ್ಲಿ ಪತ್ತೆ ಮಾಡಲು ಸಾಧ್ಯವಾಗಿಲ್ಲ. ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಸಭೆಯಲ್ಲೂ ಚರ್ಚಿಸಲಾಗಿದೆ. ವಿಶೇಷ ಕಾರ್ಯಪಡೆ ಪ್ರತಿ ತಿಂಗಳು ಸಭೆ ನಡೆಸಬೇಕು. ಕಾಣೆಯಾದ, ಪತ್ತೆಯಾಗದ ಮಕ್ಕಳ ಪಟ್ಟಿ ಸಿದ್ಧಪಡಿಸಿಕೊಂಡು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಸರ್ಕಾರಕ್ಕೆ ವರದಿ ನೀಡಬೇಕು ಎಂದು ಸೂಚಿಸಲಾಗಿದೆ.

ಶಾಲಾ ಗೋಡೆ, ಪುಸ್ತಕದಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ

ಶಾಲಾ ಗೋಡೆ, ಪುಸ್ತಕ, ನೋಟ್‌ಬುಕ್‌ಗಳ ಮೇಲೆ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಬರೆಸುವುದನ್ನು ಕಡ್ಡಾಯಗೊಳಿಸಿ ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲಾ-ಕಾಲೇಜುಗಳ ಕಟ್ಟಡಗಳ ಗೋಡೆ ಮೇಲೆ ಮಕ್ಕಳ ಸಹಾಯವಾಣಿ ಸಂಖ್ಯೆ ಬರೆಸಬೇಕು. ಬೆಳಗಿನ ಪ್ರಾರ್ಥನೆಯ ಸಮಯದಲ್ಲಿ ಮಕ್ಕಳಿಗೆ ಈ ಕುರಿತು ಮಾಹಿತಿ ನೀಡಬೇಕು. ಮಕ್ಕಳಿಗೆ ವಿತರಿಸುವ ಪಠ್ಯಪುಸ್ತಕಗಳ ಮೇಲೆ, ನೋಟ್‌ಬುಕ್‌ಗಳ ಎಲ್ಲ ಪುಟಗಳ ಕೆಳ ಭಾಗದಲ್ಲಿ ಸಹಾಯವಾಣಿ ಸಂಖ್ಯೆ ನಮೂದಿಸಬೇಕು ಎಂದು ಸೂಚಿಸಲಾಗಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಅಧಿಸೂಚನೆ (ಕೇವಲ KPP ಪೋರ್ಟಲ್ ಮುಖಾಂತರ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ಕಾಮಗಾರಿಗಳಿಗೆ ವಿದ್ಯುನ್ಮಾನ ವಿಧಾನದಲ್ಲಿ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

(1) ಸಂಖ್ಯೆ: ಅಇಂವಿ/ಪ್ರ(ಕಾ)/ದಕ್ಷಿಣ/ಕಾನಿಇಂ(ಕ)/ಸಕಾನಿಇಂ-4/ಕ-122(20)/25-26/1416-18 ದಿನಾಂಕ: :07.07.2025
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-4/24-25/ಇಪಿಆರ್-64/ಕರೆ-3 ದಿನಾಂಕ:09.12.2024ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ **66/11 ಕೆವಿ, BTM 4th phase ಉಪ ಕೇಂದ್ರದ** ಕೆಟ್ಟುಹೋದ 31.5 ಎಂ.ವಿ.ಎ, 66/11 ಕೆವಿ ಶ್ರೇಣಿಯ, ECE Industries Ltd ತಯಾರಿಕೆಯ ಕ್ರಮ ಸಂಖ್ಯೆ: S-86051, 2008ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

(2) ಸಂಖ್ಯೆ: ಅಇಂವಿ/ಪ್ರ(ಕಾ)/ದಕ್ಷಿಣ/ಕಾನಿಇಂ(ಕ)/ಸಕಾನಿಇಂ-2/ಕ-122(32)/25-26/1419-21 ದಿನಾಂಕ: 07.07.2025
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-4/23-24/ಇಪಿಆರ್-11/ಕರೆ-13 ದಿನಾಂಕ:18.10.2023ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ **66/11ಕೆವಿ, Electronic City Phase-2 Sec-2 (Malgudi) ಉಪ ಕೇಂದ್ರದ** ಕೆಟ್ಟುಹೋದ 20ಎಂ.ವಿ.ಎ, 66/11 ಕೆವಿ ಶ್ರೇಣಿಯ, EMCO ತಯಾರಿಕೆಯ ಕ್ರಮ ಸಂಖ್ಯೆ: HT1711-127097, 2007ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

(3) ಸಂಖ್ಯೆ: ಅಇಂವಿ/ಪ್ರ(ಕಾ)/ದ-ವೃತ್ತ/ಕಾನಿಇಂ(ಕ)/ಸಕಾನಿಇಂ-2/ಕ-122(17)/25-26/1422-24 ದಿನಾಂಕ: 07.07.2025
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ಕಾ)/ದ-ವೃತ್ತ/ಕಾನಿಇಂ(ಕ)/ಸಕಾನಿಇಂ-4/24-25/ಇಪಿಆರ್-88/ಕರೆ-3 ದಿನಾಂಕ:24.02.2025ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ **66/11ಕೆವಿ, Brigade Metropolis ಉಪ ಕೇಂದ್ರದ** ಕೆಟ್ಟುಹೋದ 20 ಎಂ.ವಿ.ಎ, 66/11 ಕೆವಿ ಶ್ರೇಣಿಯ, SPEC ತಯಾರಿಕೆಯ ಕ್ರಮ ಸಂಖ್ಯೆ: ST-37787, 2008 ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

(4) ಸಂಖ್ಯೆ: ಅಇಂವಿ/ಪ್ರ(ಕಾ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-2/ಕ-122(25)/25-26/1425-27 ದಿನಾಂಕ: 07.07.2025
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-4/24-25/ಇಪಿಆರ್-12/ಕರೆ-4 ದಿನಾಂಕ: 05.09.2024ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ **66/11ಕೆವಿ, Cessna Business Park ಉಪ ಕೇಂದ್ರದ** ಕೆಟ್ಟುಹೋದ 31.5 ಎಂ.ವಿ.ಎ, 66/11 ಕೆವಿ ಶ್ರೇಣಿಯ, M/s Kirloskar Electric Make ತಯಾರಿಕೆಯ ಕ್ರಮ ಸಂಖ್ಯೆ: 102XJ007/01, 2011ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

(5) ಸಂಖ್ಯೆ: ಅಇಂವಿ/ಪ್ರ(ಕಾ)/ದ-ವೃತ್ತ/ಕಾನಿಇಂ(ಕ)/ಸಕಾನಿಇಂ-4/ಕ-122(30)/24-25/1428-30 ದಿನಾಂಕ: 07.07.2025
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-4/23-24/ಇಪಿಆರ್-04/ಕರೆ-8 ದಿನಾಂಕ:03.10.2023 ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ **66/11ಕೆವಿ, Leela Venture ಉಪ ಕೇಂದ್ರದ** ಕೆಟ್ಟುಹೋದ 20ಎಂ.ವಿ.ಎ, 66/11 ಕೆವಿ ಶ್ರೇಣಿಯ, NGEF ತಯಾರಿಕೆಯ ಕ್ರಮ ಸಂಖ್ಯೆ:2800060083, 2001ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

(6) ಸಂಖ್ಯೆ: ಅಇಂವಿ/ಪ್ರ(ಕಾ)/ದ-ವೃತ್ತ/ಕಾನಿಇಂ(ಕ)/ಸಕಾನಿಇಂ-2/ಕ-122(33)/25-26/1431-33 ದಿನಾಂಕ: 07.07.2025
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-4/23-24/ಇಪಿಆರ್-09/ಕರೆ-7 ದಿನಾಂಕ:28.08.2024ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ **66/11ಕೆವಿ, B ಉಪ ಕೇಂದ್ರದ** ಕೆಟ್ಟು ಹೋದ 20ಎಂ.ವಿ.ಎ, 66/11 ಕೆವಿ ಶ್ರೇಣಿಯ, Andrew Yule ತಯಾರಿಕೆಯ ಕ್ರಮ ಸಂಖ್ಯೆ:13018, 2001ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

(7) ಸಂಖ್ಯೆ: ಅಇಂವಿ/ಪ್ರ(ಕಾ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-2/ಕ-122(19)/25-26/1434-36 ದಿನಾಂಕ: 07.07.2025
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-4/24-25/ಇಪಿಆರ್-13/ಕರೆ-5 ದಿನಾಂಕ: 09.09.2024ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ **66/11ಕೆವಿ, Leelaventure ಉಪ ಕೇಂದ್ರದ** ಕೆಟ್ಟು ಹೋದ 20ಎಂ.ವಿ.ಎ, 66/11 ಕೆವಿ ಶ್ರೇಣಿಯ, Andrew Yule Make ತಯಾರಿಕೆಯ ಕ್ರಮ ಸಂಖ್ಯೆ:13017, 2000ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

(8) ಸಂಖ್ಯೆ: ಅಇಂವಿ/ಪ್ರ(ಕಾ)/ದ/ಕಾನಿಇಂ(ಕ)/ಸಕಾನಿ-2/ಕ-122(26)/25-26/1437-39 ದಿನಾಂಕ: 07.07.2025
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-4/22-23/ಇಪಿಆರ್-23/ಕರೆ-3 ದಿನಾಂಕ:19.05.2022ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ **66/11ಕೆವಿ, Khodays Glass Factory ಉಪ ಕೇಂದ್ರದ** ಕೆಟ್ಟು ಹೋದ 20ಎಂ.ವಿ.ಎ, 66/11ಕೆವಿ ಶ್ರೇಣಿಯ, VOLTAMP ತಯಾರಿಕೆಯ ಕ್ರಮ ಸಂಖ್ಯೆ: JN8012/7, 2001 ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

(9) ಸಂಖ್ಯೆ: ಅಇಂವಿ/ಪ್ರ(ಕಾ)/ದ/ಕಾನಿಇಂ(ಕ)/ಸಕಾನಿಇಂ-2/ಕ-122(28)/25-26/1440-42 ದಿನಾಂಕ: 07.07.2025
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-4/23-24/ಇಪಿಆರ್-02/ಕರೆ-12 ದಿನಾಂಕ:03.10.2023ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ **66/11ಕೆವಿ, Jayadeva ಉಪ ಕೇಂದ್ರದ** ಕೆಟ್ಟು ಹೋದ 31.5ಎಂ.ವಿ.ಎ, 66/11 ಕೆವಿ ಶ್ರೇಣಿಯ, BBL ತಯಾರಿಕೆಯ ಕ್ರಮ ಸಂಖ್ಯೆ:4934/1, 2006ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

(10) ಸಂಖ್ಯೆ: ಅಇಂವಿ/ಪ್ರ(ಕಾ)/ದ/ಕಾನಿಇಂ(ಕ)/ಸಕಾನಿಇಂ-2/ಕ-122(29)/25-26/1443-45 ದಿನಾಂಕ: 07.07.2025
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-4/23-24/ಇಪಿಆರ್-03/ಕರೆ-12 ದಿನಾಂಕ: 03.10.2023ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ **66/11ಕೆವಿ, Sarakki ಉಪಕೇಂದ್ರದ** ಕೆಟ್ಟು ಹೋದ 31.5 ಎಂ.ವಿ.ಎ, 66/11 ಕೆವಿ ಶ್ರೇಣಿಯ, BBL ತಯಾರಿಕೆಯ ಕ್ರಮ ಸಂಖ್ಯೆ: 4934/7, 2006ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

(11) ಸಂಖ್ಯೆ: ಅಇಂವಿ/ಪ್ರ(ಕಾ)/ದಕ್ಷಿಣ/ಕಾನಿಇಂ(ಕ)/ಸಕಾನಿಇಂ-2/ಕ-122(27)/25-26/1446-48 ದಿನಾಂಕ: 07.07.2025
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ-4/22-23/ಇಪಿಆರ್-44/ಕರೆ-14 ದಿನಾಂಕ:21.10.2022ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ **66/11ಕೆವಿ, Prestige Shanthiniketan ಉಪ ಕೇಂದ್ರದ** ಕೆಟ್ಟು ಹೋದ 31.5 ಎಂ.ವಿ.ಎ, 66/11 ಕೆವಿ ಶ್ರೇಣಿಯ, **Victory** ತಯಾರಿಕೆಯ ಕ್ರಮ ಸಂಖ್ಯೆ:4-0012/5, 2009ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

(12) ಸಂಖ್ಯೆ: ಅಇಂವಿ/ಪ್ರ(ಕಾ)/ದ-ವೃತ್ತ/ಕಾನಿಇಂ(ಕ)/ಸಕಾನಿಇಂ-2/ಕ-122(16)/25-26/1449-51 ದಿನಾಂಕ: 07.07.2025
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ಕಾ)/ದ-ವೃತ್ತ/ಕಾನಿಇಂ(ಕ)/ಸಕಾನಿಇಂ-4/24-25/ಇಪಿಆರ್-87/ಕರೆ-4 ದಿನಾಂಕ:24.02.2025ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ **66/11ಕೆವಿ, Hoody ಉಪ ಕೇಂದ್ರದ** ಕೆಟ್ಟು ಹೋದ 20ಎಂ.ವಿ.ಎ, 66/11ಕೆವಿ ಶ್ರೇಣಿಯ, T & R ತಯಾರಿಕೆಯ ಕ್ರಮ ಸಂಖ್ಯೆ: PC0300199, 2013ನೇ ವರ್ಷದಲ್ಲಿ ತಯಾರಿಸಿದ ವಿದ್ಯುತ್ ಪರಿವರ್ತಕವನ್ನು ಕಳಚುವುದು, ಸಾಗಾಣಿಕೆ (ಗೆ ಮತ್ತು ಇಂದ), ದೋಷಯುಕ್ತ ವಿದ್ಯುತ್ ಪರಿವರ್ತಕದ ರಿಪೇರಿ, ಪರೀಕ್ಷಿಸುವುದು, ಬಿಡಿಭಾಗಗಳ ಜೋಡಣೆ, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವ ಕಾಮಗಾರಿ ಬಗ್ಗೆ.

(13) ಸಂಖ್ಯೆ: ಅಇಂವಿ/ಪ್ರ(ಕಾ)/ವೃತ್ತ-ದಕ್ಷಿಣ/ಕಾನಿಇಂ(ವಿ)/ಕಿಇಂ(ವಿ)-1/2024-25/1461-65 ದಿನಾಂಕ: 07.07.2025
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಪ್ರ(ನಿ)/ಬೆಂ.ಮ.ಕ್ಷೇ.ವ.(ದ)/ಕಾ.ನಿ.ಇಂ(ವಿ)/ಸ.ಕಾ.ಇಂ(1)/ಕಿ.ಇಂ-1/24-25/ಇ.ಪಿ.ಆರ್-60/ಕರೆ-5 ದಿನಾಂಕ: 20.11.2024ರ ಅನ್ವಯ "ಬೆಂ.ಮ.ಕ್ಷೇ.ವ.(ದ) ಅಡಿಯಲ್ಲಿ ಬರುವ ವಿವಿಧ ಉಪಕೇಂದ್ರಗಳಿಗೆ **1Cx1000 sqmm 11ಕೆ.ವಿ.ಭೂಗತ ಕೇಬಲ್** ಸರಬರಾಜು ಮಾಡುವ ಬಗ್ಗೆ"

ಬಿಡ್‌ಗಳಿಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ಗೆ ಹೈಪರ್‌ಲಿಂಕ್ **`E Procurement KPTCL'** ನಲ್ಲಿ ಅಥವಾ ವೆಬ್‌ಸೈಟ್:**https://kppp.karnataka.gov.in** ನಲ್ಲಿ **ದಿನಾಂಕ:09.07.2025 ರಂದು ಅಥವಾ ತದನಂತರ** ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾರ್ಯಾಚರಣೆ) ವೃತ್ತ-ದಕ್ಷಿಣ, ಕ.ವಿ.ಪ್ರ.ನಿ.ನಿ., ಆನಂದರಾವ್ ವೃತ್ತ, ಬೆಂಗಳೂರು-09

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಬುದ್ಧಿ ಇಲ್ಲದ ಐಶ್ವರ್ಯ ಕಡಿವಾಣ ಇಲ್ಲದ ಕುದುರೆಯಂತೆ.
–ಸಾಕ್ರಟಿಸ್

ಸಂಪಾದಕೀಯ

ಆನ್‌ಲೈನ್ ಜೂಜಿಗೆ ಕಾನೂನು ನಿರ್ಬಂಧ ಜನ ಜಾಗೃತಿ ಮೂಡಿಸುವುದೂ ಅಗತ್ಯ

ಆನ್‌ಲೈನ್ ಬೆಟ್ಟಿಂಗ್ ನಿಷೇಧಕ್ಕೆ ಕಾನೂನು ರೂಪಿಸಲು ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮ ಜನಸಾಮಾನ್ಯರನ್ನು ಆರ್ಥಿಕ ಅಪಾಯಗಳಿಂದ ಪಾರು ಮಾಡುವಂತಹದ್ದು. ಗೇಮಿಂಗ್ ಹಾಗೂ ಬೆಟ್ಟಿಂಗ್ ಹೆಸರಿನಲ್ಲಿ ಆನ್‌ಲೈನ್‌ನಲ್ಲಿ ನಡೆಯುವ ಜೂಜನ್ನು ನಿರ್ಬಂಧಿಸಬೇಕೆನ್ನುವ ಸಾರ್ವಜನಿಕರ ಒತ್ತಾಯಕ್ಕೆ ಸರ್ಕಾರ ವಿಳಂಬವಾಗಿಯಾದರೂ ಸ್ಪಂದಿಸಿದೆ. ವಿದ್ಯಾರ್ಥಿಗಳು ಹಾಗೂ ಯುವಜನರನ್ನೂ ಒಳಗೊಂಡಂತೆ ಬಹು ದೊಡ್ಡ ಜನಸಮೂಹ ಆನ್‌ಲೈನ್ ಬೆಟ್ಟಿಂಗ್ ವ್ಯಸನಕ್ಕೆ ಒಳಗಾಗಿದೆ. ಆನ್‌ಲೈನ್ ಗೇಮಿಂಗ್‌ನ ವಿಶ್ವದ ಪ್ರಮುಖ ಮಾರುಕಟ್ಟೆಗಳಲ್ಲೊಂದಾಗಿರುವ ಭಾರತದಲ್ಲಿ, ಸುಮಾರು 50 ಕೋಟಿಗೂ ಹೆಚ್ಚು ಜನ ಆನ್‌ಲೈನ್ ಗೇಮಿಂಗ್‌ನಲ್ಲಿ ತೊಡಗಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಆನ್‌ಲೈನ್ ಜೂಜಿನಲ್ಲಿ ಹಣ ಕಳೆದುಕೊಂಡವರು ಮಾನಸಿಕ ಅಸ್ವಸ್ಥತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆಗಳು ದೇಶದ ವಿವಿಧ ಭಾಗಗಳಲ್ಲಿ ಸಾಕಷ್ಟಿವೆ. ಯುವಕನೊಬ್ಬ ಆನ್‌ಲೈನ್ ಬೆಟ್ಟಿಂಗ್‌ನಲ್ಲಿ ₹18 ಲಕ್ಷ ಕಳೆದುಕೊಂಡು ಕಂಗಾಲಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ದಾವಣಗೆರೆಯಿಂದ ಕಳೆದ ವಾರವಷ್ಟೇ ವರದಿಯಾಗಿದೆ. ಆನ್‌ಲೈನ್ ಜೂಜಿಗೆ ಅವಕಾಶ ಕಲ್ಪಿಸುವ ಅಂತರ್ಜಾಲ ತಾಣಗಳು ಹಾಗೂ ಆ್ಯಪ್‌ಗಳನ್ನು ನಿರ್ಬಂಧಿಸಬೇಕು ಎನ್ನುವ ಚರ್ಚೆ ಇತ್ತೀಚೆಗೆ ಸಂಸತ್ತಿನಲ್ಲಿ ನಡೆದಿತ್ತು. ಆ ಚರ್ಚೆಯ ಸಂದರ್ಭದಲ್ಲಿ, ಆನ್‌ಲೈನ್ ಬೆಟ್ಟಿಂಗ್ ನಿರ್ಬಂಧ ರಾಜ್ಯಪಟ್ಟಿಯಲ್ಲಿ ಬರುವ ವಿಚಾರವಾಗಿದ್ದು, ರಾಜ್ಯಗಳ ಮಟ್ಟದಲ್ಲೇ ಕಾನೂನು ತರಬೇಕು ಎಂದು ಕೇಂದ್ರ ಮಾಹಿತಿ ಮತ್ತು ತಂತ್ರಜ್ಞಾನ ಸಚಿವರು ಹೇಳಿದ್ದರು. ರಾಜ್ಯಗಳ ಹಂತದಲ್ಲೂ ಆನ್‌ಲೈನ್ ಗೇಮಿಂಗ್ ಹಾಗೂ ಬೆಟ್ಟಿಂಗ್ ನಿರ್ಬಂಧಿಸುವ ಪ್ರಯತ್ನಗಳು ನಡೆದಿವೆ. ತೆಲಂಗಾಣದಲ್ಲಿ ಆನ್‌ಲೈನ್ ಗೇಮಿಂಗ್ ನಿಷೇಧಿಸಲಾಗಿದೆ. ತಮಿಳುನಾಡಿನಲ್ಲಿ ಆನ್‌ಲೈನ್ ಗೇಮಿಂಗ್ ನಿರ್ಬಂಧದ ಪ್ರಯತ್ನಗಳು ನಡೆದಿವೆ. ಪ್ರಸ್ತುತ, ಆನ್‌ಲೈನ್ ಬೆಟ್ಟಿಂಗ್‌ಗಳ ನಿಷೇಧ ಹೇರುವ ಉದ್ದೇಶದ 'ಕರ್ನಾಟಕ ಪೊಲೀಸ್ (ತಿದ್ದುಪಡಿ) ಮಸೂದೆ– 2025'ರ ಕರಡು ಸಿದ್ಧಗೊಂಡಿದ್ದು, ಈ ಮಸೂದೆಯನ್ನು ವಿಧಾನಮಂಡಲದ ಮುಂದಿನ ಅಧಿವೇಶನದಲ್ಲಿ ಮಂಡಿಸಲು ಸರ್ಕಾರ ಮುಂದಾಗಿದೆ. 'ಕರ್ನಾಟಕ ಆನ್‌ಲೈನ್ ಗೇಮಿಂಗ್ ಮತ್ತು ಬೆಟ್ಟಿಂಗ್ ನಿಯಂತ್ರಣ ಪ್ರಾಧಿಕಾರ' ರಚಿಸಲು ಮಸೂದೆ ಅವಕಾಶ ಕಲ್ಪಿಸಲಿದೆ ಹಾಗೂ ಆನ್‌ಲೈನ್ ಬೆಟ್ಟಿಂಗ್‌ನಲ್ಲಿ ತೊಡಗುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ ಮೂರು ವರ್ಷಗಳವರೆಗಿನ ಜೈಲು ಶಿಕ್ಷೆ ಮತ್ತು ₹1 ಲಕ್ಷದವರೆಗಿನ ದಂಡ ವಿಧಿಸುವ ಅವಕಾಶ ದೊರೆಯಲಿದೆ.

ಆಟ ಮತ್ತು ಮನರಂಜನೆ ಹೆಸರಿನಲ್ಲಿ ನಡೆಯುವ ಆನ್‌ಲೈನ್ ಜೂಜಿನ ನಿಷೇಧಕ್ಕೆ ಕಾನೂನು ರೂಪಿಸಿದರಷ್ಟೇ ಸಾಲದು, ವ್ಯಾಪಕ ಜನ ಜಾಗೃತಿಯೂ ಅಗತ್ಯ

ಆನ್‌ಲೈನ್ ಬೆಟ್ಟಿಂಗ್ ನಿಷೇಧಕ್ಕೆ ಸರ್ಕಾರ ನಿರ್ಧರಿಸಿದ್ದರೂ, ಕೌಶಲ ಆಧಾರಿತ ಆಟಗಳಿಗೆ ಪರವಾನಗಿ ನೀಡಲು ಮುಂದಾಗಿದೆ. ಅದೃಷ್ಟವನ್ನು ಆಧರಿಸಿದ ಆಟಗಳು ಹಾಗೂ ಕೌಶಲಾಧಾರಿತ ಆಟಗಳ ನಡುವಿನ ಗೆರೆ ತೀರಾ ತೆಳುವಾದುದು. ಪೋಕರ್ ಹಾಗೂ ರಮ್ಮಿ ಆಟಗಳನ್ನೂ ಕೌಶಲ ಆಧಾರಿತ ಆಟಗಳು ಎಂದು ಸುಪ್ರೀಂ ಕೋರ್ಟ್ ಪ್ರಕರಣವೊಂದರಲ್ಲಿ ಗುರುತಿಸಿತ್ತು. ಹಾಗಾಗಿ, ಕೌಶಲಾಧಾರಿತ ಆಟದ ಹೆಸರಿನಲ್ಲಿ ಆನ್‌ಲೈನ್ ಬೆಟ್ಟಿಂಗ್ ದಂಧೆ ನುಸುಳದಂತೆ ಸರ್ಕಾರ ಸಾಕಷ್ಟು ಎಚ್ಚರಿಕೆ ವಹಿಸಬೇಕು. ಎಲ್ಲರ ಕೈಗೆ ಮೊಬೈಲ್ ದೊರೆತು, ಸಾಲ ಪಡೆಯಲು ಅವಕಾಶಗಳನ್ನೂ ಆನ್‌ಲೈನ್‌ನಲ್ಲೇ ಕಲ್ಪಿಸಿ, ಆ ಹಣವನ್ನು ಕಳೆದುಕೊಳ್ಳಲು ಜೂಜಿನ ಅಡ್ಡೆಗಳನ್ನೂ ಅಂಗೈಯಲ್ಲಿರಿಸಿರುವ ವಿಷಮ ಕಾಲವಿದು. ಸುಲಭವಾಗಿ ಹಣ ಗಳಿಸುವ ತರಾತುರಿಯಲ್ಲಿ ವಿವೇಚನೆಯನ್ನು ಮರೆತ ಜನರು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಸಾವಿರಾರು ಕೋಟಿ ರೂಪಾಯಿ ವಹಿವಾಟು ನಡೆಸುವ ಆನ್‌ಲೈನ್ ಗೇಮಿಂಗ್‌ನಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೂ ಗಣನೀಯ ಆದಾಯವಿದೆ. ಆಟ ಮತ್ತು ಮನರಂಜನೆಯ ಹೆಸರಿನ ಈ ದಂಧೆಯ ಪ್ರಚಾರದಲ್ಲಿ ಕ್ರೀಡಾಪಟುಗಳು, ಸಿನಿಮಾ ನಟ, ನಟಿಯರು ತೊಡಗಿಕೊಂಡಿದ್ದಾರೆ. ಮನೆಯಲ್ಲಿಯೇ ಕುಳಿತು ಸುಲಭವಾಗಿ ಹಾಗೂ ಶೀಘ್ರವಾಗಿ ಹಣ ಮಾಡಬಹುದೆನ್ನುವ ಆಮಿಷ ಯುವಜನರನ್ನು ಸೆಳೆಯುತ್ತದೆ. ಒಮ್ಮೆ ಜೂಜಿನ ರುಚಿ ಹತ್ತಿದವರು, ನಿಧಾನವಾಗಿ ಮನಸ್ಸಿನ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳುತ್ತಾರೆ. ಕಾನೂನು ನಿರ್ಬಂಧಕ್ಕೊಳಗಾದ ವೆಬ್‌ಸೈಟ್ ಹಾಗೂ ಆ್ಯಪ್‌ಗಳು ಮುಖ ಹಾಗೂ ಹೆಸರು ಬದಲಿಸಿಕೊಂಡು ಆನ್‌ಲೈನ್ ಜಗತ್ತಿನಲ್ಲಿ ಚಾಲ್ತಿಯಲ್ಲಿರುತ್ತವೆ. ಹಾಗಾಗಿ, ಕಾನೂನು ನಿರ್ಬಂಧದ ಜೊತೆಗೆ, ಆನ್‌ಲೈನ್ ಬೆಟ್ಟಿಂಗ್ ಕೇಡುಗಳ ಕುರಿತು ಜನ ಜಾಗೃತಿ ಮೂಡಿಸುವ ಪ್ರಯತ್ನಗಳೂ ವ್ಯಾಪಕವಾಗಿ ನಡೆಯಬೇಕಾಗಿದೆ.

ಉದ್ದೇಶವಷ್ಟೇ ಸಾಲದು

ಒಳ್ಳೆಯ ಉದ್ದೇಶಗಳಷ್ಟೇ ಸಾಕಾಗುವುದಿಲ್ಲ. ಸರಿಯಾದ ಕ್ರಮವನ್ನು ಸೂಕ್ತ ಪ್ರಜ್ಞೆಯೊಂದಿಗೆ ನಿರ್ವಹಿಸಿದರಷ್ಟೇ ನಿರೀಕ್ಷಿತ ಫಲಿತಾಂಶ ಪಡೆಯಲು ಸಾಧ್ಯ.

ಜಗ್ಗಿ ವಾಸುದೇವ್, ಇಶಾ ಫೌಂಡೇಶನ್ ಸಂಸ್ಥಾಪಕ, ಫೇಸ್‌ಬುಕ್‌ನಿಂದ

ಕಿಡಿನುಡಿ

ರಾಜ್ಯ ಸರ್ಕಾರವು 1,431 ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿ ಆರಂಭಿಸಿದೆ. ಈಗ ಕನ್ನಡದ ಪರವಾಗಿ ಮಾತನಾಡುವವರಿಗಿಂತ ಇಂಗ್ಲಿಷ್ ಪರವಾಗಿ ಮಾತನಾಡುವವರ ಸಂಖ್ಯೆಯೇ ಹೆಚ್ಚಾಗಿದೆ.

ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ

25 ವರ್ಷಗಳ ಹಿಂದೆ

ಭಾನುವಾರ, 9-7-2000

• ಹುಬ್ಬಳ್ಳಿ: ಚರ್ಚ್‌ನಲ್ಲಿ ಬಾಂಬ್ ಸ್ಫೋಟ

ಹುಬ್ಬಳ್ಳಿ, ಜುಲೈ 8– ಶಹರದ ಡೌನ್‌ಚಾಳ ಪ್ರದೇಶದ ಸೇಂಟ್ ಜಾನ್ಸ್ ಲೂಥರಾನ್ ಚರ್ಚ್‌ನಲ್ಲಿ ಇಂದು ನಸುಕಿನ ಜಾವ ಬಾಂಬ್ ಸ್ಫೋಟ ಸಂಭವಿಸಿದ್ದರಿಂದ ಹಿಂಸಾಚಾರ ಭುಗಿಲೆದ್ದು, ಬಸ್ಸುಗಳಿಗೆ ಬೆಂಕಿ ಮತ್ತು ಕಲ್ಲು ತೂರಾಟ ಘಟನೆಗಳು ನಡೆದಿವೆ.

ಹಿಂಸಾಚಾರದಲ್ಲಿ ಸಾರಿಗೆ ಸಂಸ್ಥೆಯ 5 ಬಸ್ಸು, 4 ಕಾರು, 6 ಲಾರಿ ಸೇರಿದಂತೆ ಒಟ್ಟು 15 ವಾಹನಗಳು ಹಾನಿಗೀಡಾಗಿದ್ದು, ಬಸ್ಸಿನ ಚಾಲಕ, ನಿರ್ವಾಹಕ ಸೇರಿ ಕನಿಷ್ಠ 10 ಮಂದಿ ಗಾಯಗೊಂಡಿದ್ದಾರೆ.

ಸಾರಿಗೆ ಸಂಸ್ಥೆಯ ಎರಡು ಬಸ್ಸುಗಳಿಗೆ ಬೆಂಕಿ ಹಚ್ಚಲಾಗಿದ್ದು, ಇತರ ಬಸ್ಸುಗಳು, ಭೂಸೇನಾ ನಿಗಮದ ಟ್ರಕ್, ಕಾರುಗಳು ಸೇರಿದಂತೆ ಇತರ 13 ವಾಹನಗಳಿಗೆ ಕಲ್ಲೆಸೆದು ಗಾಜುಗಳನ್ನು ಪುಡಿ ಪುಡಿ ಮಾಡಲಾಗಿದೆ.

• ಕಳ್ಳಂಬೆಳ್ಳ ಬಳಿ ಅಪಘಾತ: ನಾಲ್ಕು ಸಾವು

ತುಮಕೂರು, ಜುಲೈ 8– ಕಳ್ಳಂಬೆಳ್ಳ ಬಳಿಯ ಜುಂಜುರಾಯನಹಳ್ಳಿ ಗೇಟ್ ಬಳಿ ಇಂದು ಮುಂಜಾನೆ ಸಂಭವಿಸಿದ ರಸ್ತೆ ಅಪಘಾತದಲ್ಲಿ 4 ಮಂದಿ ಮೃತಪಟ್ಟು, ಇತರ ನಾಲ್ವರು ತೀವ್ರವಾಗಿ ಗಾಯಗೊಂಡಿದ್ದಾರೆ.

ಅಪಘಾತದಲ್ಲಿ ಹುಳಿಯಾರ್‌ನ ಗೋವಿಂದಪ್ಪ (24), ಶಂಕರಪ್ಪ (26), ಎಲೆಯೂರಿನ ತಿಪ್ಪೇಸ್ವಾಮಿ (24) ಮತ್ತು ಮಾದನಹಳ್ಳಿಯ ಏಕಾಂತಪ್ಪ (22) ಎಂಬುವರು ಸ್ಥಳದಲ್ಲೇ ಮೃತಪಟ್ಟರು.

75 ವರ್ಷಗಳ ಹಿಂದೆ

ಭಾನುವಾರ, 9-7-1950

• ವಿದ್ಯುಚ್ಛಕ್ತಿ ಬಳಕೆ ಮೇಲೆ ತೆರಿಗೆ

ಬೆಂಗಳೂರು, ಜುಲೈ 8– ವಿದ್ಯುಚ್ಛಕ್ತಿ ಉಪಯೋಗದ ಮೇಲೆ ಯೂನಿಟ್ ಒಂದಕ್ಕೆ 2 ಕಾಸು ತೆರಿಗೆ ವಿಧಿಸಬೇಕೆಂದು ಸರ್ಕಾರ ನಿರ್ಧರಿಸಿ ಕೆಲದಿನಗಳ ಹಿಂದೆ ಜರೂರು ಶಾಸನ ಹೊರಡಿಸಿದೆಯಷ್ಟೆ. ಸದ್ಯಕ್ಕೆ ಸರ್ಕಾರ ಮನೆ ಮತ್ತು ವ್ಯವಸಾಯಕ್ಕೆ ಉಪಯೋಗಿಸುವ ವಿದ್ಯುಚ್ಛಕ್ತಿ ಮೇಲೆ ತೆರಿಗೆ ವಿಧಿಸುವುದಿಲ್ಲವೆಂದೂ ಕೈಗಾರಿಕೆಗಳು ಉಪಯೋಗಿಸುವ ವಿದ್ಯುಚ್ಛಕ್ತಿ ಮೇಲೆ ಮಾತ್ರ ತೆರಿಗೆ ಹಾಕಲಾಗುವುದೆಂದೂ ತಿಳಿದು ಬಂದಿದೆ. ಇದರಿಂದ ಸರ್ಕಾರ 10 ಲಕ್ಷ ರೂ ಆದಾಯ ನಿರೀಕ್ಷಿಸಿದೆ.

• ಹಿಂದಿ ಕಲಿಯಬೇಕು

ಜಮ್‌ಷೆದ್‌ಪುರ, ಜುಲೈ 8– ತಾತಾ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ 400 ರೂ ಮತ್ತು ಹೆಚ್ಚಿಗೆ ಮೂಲ ಸಂಬಳ ಪಡೆಯುವ ನೌಕರರು 1952ರ ಜುಲೈ 1ರ ಒಳಗಾಗಿ ಹಿಂದಿ ಭಾಷೆಯನ್ನು ಕಲಿಯಬೇಕೆಂದು ಕಾರ್ಖಾನೆ ಆಡಳಿತ ಸೂಚನೆ ಕೊಟ್ಟಿದೆ.

ತಾಯ್ನುಡಿ ಮಾಧ್ಯಮವೇ ಗತಿ–ಮತಿ

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಇಂಗ್ಲಿಷ್ ಮೌಲ್ಯಯುತವಾದ ಭಾಷೆ ಎಂದು ವಿಶ್ವದಾದ್ಯಂತ ಪೋಷಕರು ಗುರ್ತಿಸಿರುವುದಾಗಿ 'ಯುನೆಸ್ಕೊ' ಹೇಳಿದೆ. 'ಬಹುಭಾಷಾ ಶಿಕ್ಷಣ ಕುರಿತಾದ ಜಾಗತಿಕ ಮಾರ್ಗದರ್ಶನ' ಎನ್ನುವ ಪ್ರಬಂಧದಲ್ಲಿ, ಸಮಕಾಲೀನ ಜಗತ್ತಿನಲ್ಲಿ ಇಂಗ್ಲಿಷ್ ಭಾಷೆಗೆ ಇರುವ ಸಾಮಾಜಿಕ ಹಾಗೂ ಆರ್ಥಿಕ ಮಹತ್ವವನ್ನು 'ಯುನೆಸ್ಕೊ' ಗುರ್ತಿಸಿದೆ. ಇಂಗ್ಲಿಷ್, ವಿಶ್ವದಾದ್ಯಂತ ವ್ಯಾಪಕವಾಗಿ ಕಲಿಸಲಾಗುತ್ತಿರುವ ವಿದೇಶಿ ಭಾಷೆಯಾಗಿದೆ. ವ್ಯಾಪಕ ಕಲಿಕೆಯ ಭಾಷೆಯಾಗಿದ್ದರೂ, ಇಂಗ್ಲಿಷ್ ಭಾಷೆಯಲ್ಲಿ ನೈಪುಣ್ಯ ಗಳಿಸಲು ಆಂಗ್ಲ ಮಾಧ್ಯಮ ಶಿಕ್ಷಣ ಅವಶ್ಯಕವೆಂಬ ತಪ್ಪು ಕಲ್ಪನೆ ಅಭಿವೃದ್ಧಿಶೀಲ ದೇಶಗಳಲ್ಲಿದೆ. ಈ ತಪ್ಪು ತಿಳಿವಳಿಕೆಗೆ ಭಾರತವೂ ಹೊರತಲ್ಲ.

ಇಂಗ್ಲಿಷ್ ಭಾಷಾ ಕಲಿಕೆಗೆ ಭದ್ರವಾದ ತಳಹದಿಯ ರೂಪದಲ್ಲಿ ತಾಯ್ನುಡಿಯಲ್ಲಿನ ಕೌಶಲ ಮಹತ್ವದ ಪಾತ್ರ ವಹಿಸುವುದನ್ನು, ಜಗತ್ತಿನಾದ್ಯಂತ ನಡೆದಿರುವ ಸಂಶೋಧನೆಗಳು ಪುರಾವೆಗಳ ಮೂಲಕ ಸಾಬೀತುಪಡಿಸಿವೆ. ತಾಯ್ನುಡಿಯಲ್ಲಿನ ಪ್ರಾಥಮಿಕ ಶಿಕ್ಷಣ ಮಗುವಿನ ಕಲಿಕೆಗೆ ಸುಭದ್ರ ಅಡಿಪಾಯವನ್ನು ಕಲ್ಪಿಸಿಕೊಡುತ್ತದೆ. ನಂತರದ ಹಂತದಲ್ಲಿ, ಇಂಗ್ಲಿಷ್ ಸೇರಿದಂತೆ ಯಾವುದೇ ಎರಡನೇ ಭಾಷೆಯ ಕಲಿಕೆ ಸುಲಭವಾಗುತ್ತದೆ ಎನ್ನುವುದನ್ನು ಅಧ್ಯಯನಗಳು ನಿರೂಪಿಸಿವೆ. ಅದರಲ್ಲೂ ವಿಶೇಷವಾಗಿ, ಯುನೆಸ್ಕೊ ಹಾಗೂ ಬ್ರಿಟಿಷ್ ಕೌನ್ಸಿಲ್ ಅಧ್ಯಯನಗಳು, ತಾಯ್ನುಡಿ ಆಧಾರಿತ ಶಿಕ್ಷಣ ಮಾಧ್ಯಮವು ಆಂಗ್ಲ ಭಾಷಾ ಕಲಿಕೆಗೆ ಹೆಚ್ಚು ಪರಿಣಾಮಕಾರಿ ಆಗಿರುವುದನ್ನು ಹಲವು ಯಶೋಗಾಥೆ ಹಾಗೂ ಪ್ರಕರಣಗಳ ಅಧ್ಯಯನದ ಮೂಲಕ ಸಾಬೀತುಪಡಿಸಿವೆ.

ಪ್ರಸ್ತುತ ಜಗತ್ತಿನ ಹಲವು ದೇಶಗಳು ಆಂಗ್ಲ ಭಾಷೆಯನ್ನು ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯ ದ್ಯೋತಕವೆಂದು ಪರಿಗಣಿಸಿವೆ. ಈ ಕಾರಣದಿಂದಲೇ, ಪೋಷಕರು ಆಂಗ್ಲ ಮಾಧ್ಯಮ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಲು ಹೆಚ್ಚು ಆಸಕ್ತರಾಗಿದ್ದಾರೆ. ಆದರೆ, ಶಿಕ್ಷಣದಲ್ಲಿ ಸಂಶೋಧನೆಯ ಸಾಕ್ಷ್ಯಾಧಾರಗಳಿಗೆ ಹೆಚ್ಚಿನ ಮಹತ್ವವಿದೆ. ಕಿವಿಮಾತು ಹಾಗೂ ಅನುಕರಣೆಯನ್ನು ಆಧರಿಸಿದ ಬೆಳವಣಿಗೆಗಳ ಬಗ್ಗೆ ಗಂಭೀರ ಪ್ರಶ್ನೆಗಳು ಹಾಗೂ ಗೊಂದಲಗಳಿವೆ. ತಾಯ್ನುಡಿ ಅಲ್ಲದ ಆಂಗ್ಲ ಭಾಷೆಯಲ್ಲಿ ಕನಿಷ್ಠ ಪ್ರಾವೀಣ್ಯವೂ ಇಲ್ಲದ ವಿದ್ಯಾರ್ಥಿಗಳಿಗೆ, ಆಂಗ್ಲ ಮಾಧ್ಯಮದಲ್ಲಿ ಇಂಗ್ಲಿಷ್ ಭಾಷಾ ಕಲಿಕೆ ಸಹಾಯಕಾರಿಯೇ ಎನ್ನುವ ಪ್ರಶ್ನೆಗೆ ತಾತ್ವಿಕ ಹಾಗೂ ಸಂಶೋಧನಾಧಾರಿತ ಅಂಶಗಳನ್ನು ಪರಿಶೀಲಿಸುವುದು ನೀತಿ ನಿರೂಪಣೆಯ ದೃಷ್ಟಿಯಿಂದ ಮುಖ್ಯವಾದುದು.

ಇಂಗ್ಲಿಷ್ ಕಲಿಕೆ ಕುರಿತಂತೆ ಮಕ್ಕಳ ಪಾಲಕರಿಗೆ ಸಾಮಾನ್ಯವಾಗಿ ಮೂರು ಪ್ರಮುಖ ನಂಬಿಕೆಗಳಿವೆ. ಒಂದು, ಆಂಗ್ಲ ಮಾಧ್ಯಮದ ಮೂಲಕ ಮಾತ್ರ ಇಂಗ್ಲಿಷ್ ಭಾಷಾ ಕಲಿಕೆ ಸಾಧ್ಯ ಎನ್ನುವುದು. ಎರಡು, ಆದಷ್ಟೂ ಬೇಗ ನರ್ಸರಿ ತರಗತಿಯಿಂದಲೇ– ಇಂಗ್ಲಿಷ್ ಕಲಿಕೆ ಪ್ರಾರಂಭಿಸಿದರೆ ಮಕ್ಕಳು ಉತ್ತಮವಾಗಿ ಇಂಗ್ಲಿಷ್ ಭಾಷೆ ಕಲಿಯುತ್ತಾರೆಂಬುದು. ಮೂರು, ಇಂಗ್ಲಿಷ್ ಕಲಿಕೆಗೆ ತಾಯ್ನುಡಿ ಭಾಷಾ ಮಾಧ್ಯಮ ಆಗಿರುವುದರಿಂದ ತೊಂದರೆಯಾಗುತ್ತದೆ ಎನ್ನುವ ತೀವ್ರ ಆತಂಕ.

ಪಾಲಕರ ಈ ನಂಬಿಕೆಗಳಿಗೆ ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ. ತಾಯ್ನುಡಿಯಲ್ಲಿನ ಕಲಿಕೆಯ ಮೂಲಕ ಮಕ್ಕಳಿಗೆ ಸುಭದ್ರ ಶೈಕ್ಷಣಿಕ ಬುನಾದಿ ದೊರೆಯುತ್ತದೆ ಹಾಗೂ ಇಂಗ್ಲಿಷ್ ಭಾಷೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಕಲಿಯುವುದು ಸಾಧ್ಯವಾಗುತ್ತದೆ; ತಾಯ್ನುಡಿಯಲ್ಲಿನ ನೈಪುಣ್ಯವು 'ಶೈಕ್ಷಣಿಕ ಭಾಷಾ ಕೌಶಲ'ವನ್ನು ಬೆಳೆಸಲೂ ಸಹಾಯಕವಾಗುತ್ತದೆ ಎನ್ನುವುದನ್ನು ಅಧ್ಯಯನಗಳು ದೃಢಪಡಿಸಿವೆ (ಬೆನ್ಸನ್ ಅವರ 2002, 2005 ಹಾಗೂ 2008ರ ಅಧ್ಯಯನಗಳು).

'ಬ್ರಿಟಿಷ್ ಕೌನ್ಸಿಲ್‌ನ 2019ರ ಅಧ್ಯಯನದ ಪ್ರಕಾರ, ಪ್ರಾಥಮಿಕ ಹಂತದಲ್ಲಿ ಆಂಗ್ಲ ಮಾಧ್ಯಮ ನೀತಿಯನ್ನು ಅಕಾಲಿಕವಾಗಿ ಮತ್ತು ಅವೈಜ್ಞಾನಿಕವಾಗಿ ಜಾರಿಗೊಳಿಸುವುದರಿಂದ ಮಕ್ಕಳ ಕಲಿಕೆಯ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ. ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಇಂಗ್ಲಿಷ್ ಭಾಷೆಯ ಸಾಕಷ್ಟು ಜ್ಞಾನ ಮತ್ತು ಪರಿಣತಿಯಿಲ್ಲದೆ ಇದ್ದಾಗ, ಆಂಗ್ಲ ಮಾಧ್ಯಮ ನೀತಿ ಹೇರಿಕೆಯು ಕಲಿಕೆಯಲ್ಲಿ ಅವಘಡಕ್ಕೆ ಕಾರಣವಾಗುತ್ತದೆ ಎನ್ನುವುದನ್ನೂ ಅಧ್ಯಯನಗಳು ಸ್ಪಷ್ಟಪಡಿಸಿವೆ.

ಈ ಅಧ್ಯಯನಗಳು ನಮ್ಮ ಮುಂದಿಡುವ ಮುಖ್ಯ ಸಂಗತಿಗಳು: ಪರಿಣತಿ ಇಲ್ಲದ ಆಂಗ್ಲ ಮಾಧ್ಯಮ ಶಿಕ್ಷಣ ಪರೋಕ್ಷವಾಗಿ ಕಲಿಕೆಯ ಮೌಲ್ಯವನ್ನೇ ಹಾಳು ಮಾಡುತ್ತದೆ ಹಾಗೂ ಕಲಿಕೆಯನ್ನು ಕಬ್ಬಿಣದ ಕಡಲೆಯನ್ನಾಗಿಸುತ್ತದೆ. ಮಕ್ಕಳಲ್ಲಿ ಕಲಿಕೆಯ ಆತ್ಮವಿಶ್ವಾಸವನ್ನು ಕುಗ್ಗಿಸುವುದರೊಂದಿಗೆ, ಕಂಠಪಾಠವನ್ನು ಉತ್ತೇಜಿಸುವ ಶಿಕ್ಷಣ ಕ್ರಮ ಪಾಲಕರು ಮಕ್ಕಳ ಕಲಿಕೆಯಲ್ಲಿ ಸಹಭಾಗಿಯಾಗುವ ಅವಕಾಶವನ್ನೂ ಕಸಿದುಕೊಳ್ಳುತ್ತದೆ. ಕಲಿಕೆಯು ಸೃಜನಶೀಲ ಹಾಗೂ ರಚನಾತ್ಮಕವಾಗಿದ್ದು, ಜ್ಞಾನ ಕಟ್ಟಿಕೊಳ್ಳುವ ಪ್ರಕ್ರಿಯೆಯಾಗುವ ಬದಲು ನಿಷ್ಕ್ರಿಯ ಮಾಹಿತಿ ಸಂಗ್ರಹದ ಜಡ ಪ್ರಕ್ರಿಯೆಯಾಗುತ್ತದೆ.

ತಾಯ್ನುಡಿ ಆಧಾರಿತ ಶಿಕ್ಷಣವು ಮಕ್ಕಳ ಕಲಿಕೆಯ ಗುಣಮಟ್ಟವನ್ನು ಸುಧಾರಿಸುತ್ತದೆ ಎನ್ನುವ ಸಂಗತಿಯನ್ನು ನಿರ್ದಿಷ್ಟ ಪ್ರಕರಣಗಳನ್ನು ಆಧರಿಸಿ 'ಯುನೆಸ್ಕೊ' ನಡೆಸಿರುವ (2008) ಅಧ್ಯಯನಗಳು ಅನುಮಾನಕ್ಕೆ ಆಸ್ಪದವಿಲ್ಲದಂತೆ ನಿರೂಪಿಸಿವೆ. ಆ ಅಧ್ಯಯನಗಳು ಕಂಡುಕೊಂಡ ಪ್ರಮುಖ ಅಂಶಗಳು: ತಾಯ್ನುಡಿ ಮಾಧ್ಯಮದಲ್ಲಿ ಕಲಿಕೆಯು ಮಕ್ಕಳಿಗೆ ಸಂತಸದಾಯಕ ಹಾಗೂ ಸುಲಭವಾಗಿರುತ್ತದೆ. ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವೆ ತಾಯ್ನುಡಿ ಮಾಧ್ಯಮ ಉತ್ತಮ ಸಂವಹನ ಮತ್ತು ಸಂಬಂಧವನ್ನು ಉಂಟು ಮಾಡುತ್ತದೆ; ಮಕ್ಕಳಲ್ಲಿ ಆತ್ಮಗೌರವ ಮತ್ತು ಚಿಂತನಶೀಲತೆಯ ಶಕ್ತಿಯನ್ನೂ ಹೆಚ್ಚಿಸುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, ಪ್ರಾಥಮಿಕ ಕಲಿಕೆಯ ನಂತರದ ಹಂತದಲ್ಲಿ ಇಂಗ್ಲಿಷ್ ಸೇರಿದಂತೆ ಯಾವುದೇ ಎರಡನೇ ಭಾಷೆಯನ್ನು ಪರಿಣಾಮಕಾರಿಯಾಗಿ ಕಲಿಯಲು ತಾಯ್ನುಡಿ ಮಾಧ್ಯಮ ಸಹಾಯ ಮಾಡುತ್ತದೆ.

> ಇಂಗ್ಲಿಷ್ ಕಲಿಕೆಗೆ ಆಂಗ್ಲ ಮಾಧ್ಯಮವೇ ಉತ್ತಮ ಎನ್ನುವುದು ತಪ್ಪು ತಿಳಿವಳಿಕೆ. ಇಂಗ್ಲಿಷ್ ಸೇರಿದಂತೆ ಯಾವುದೇ ಎರಡನೇ ಭಾಷೆಯ ಕಲಿಕೆಗೆ 'ತಾಯ್ನುಡಿ ಮಾಧ್ಯಮ'ವೇ ಅತ್ಯುತ್ತಮ. 'ಇಂಗ್ಲಿಷ್ ಮಾಧ್ಯಮ' ಮಕ್ಕಳ ಗಂಟಲಲ್ಲಿ ಇಳಿಯದ ಕಡುಬು.

ದಕ್ಷಿಣ ಆಫ್ರಿಕಾದಲ್ಲಿನ 'ಶಿಕ್ಷಣದಲ್ಲಿ ಭಾಷಾ ನೀತಿ'ಯು, ಬಹುಭಾಷಾ ಸಮಾಜದಲ್ಲಿ ಮಕ್ಕಳಿಗೆ ಹೆಚ್ಚುವರಿ ಎರಡನೇ ಭಾಷೆಯನ್ನು ಕಲಿಸಲು ಪ್ರಾರಂಭಿಸುವ ಮೊದಲು, ತಾಯ್ನುಡಿ ಕಲಿಕೆಯ ಬಳಕೆಯನ್ನು ವಿಸ್ತರಿಸುವ ವಿಧಾನವನ್ನು ಪ್ರೋತ್ಸಾಹಿಸುತ್ತದೆ. ಈ ವಿಧಾನವು ವಿದ್ಯಾರ್ಥಿಗೆ ಹೆಚ್ಚುವರಿ ಭಾಷೆಯನ್ನು ಕಲಿಸುವ ಮೊದಲು, ವಿದ್ಯಾರ್ಥಿಗಳು ತಾಯ್ನುಡಿಯಲ್ಲಿ ಅಥವಾ ಮೊದಲ ಭಾಷೆಯಲ್ಲಿ ಸಾಕ್ಷರತೆ ಮತ್ತು ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳುವುದನ್ನು ಒಳಗೊಂಡಿದೆ. ವಿದ್ಯಾರ್ಥಿಗಳು ತಮ್ಮ ತಾಯ್ನುಡಿಯಲ್ಲಿ ಸಾಕ್ಷರತೆ ಮತ್ತು ಭಾಷಾ ಸಾಮರ್ಥ್ಯವನ್ನು ಬೆಳೆಸಿಕೊಂಡರೆ, ಅವರು ಹೆಚ್ಚುವರಿ ಭಾಷೆ ಕಲಿಯಲು ಸುಲಭವಾಗುತ್ತದೆ. ತಾಯ್ನುಡಿ ಮಾಧ್ಯಮದ ಕಲಿಕೆಯಲ್ಲಿ ವಿದ್ಯಾರ್ಥಿಗಳು, ಸಾಕ್ಷರತೆ ಮತ್ತು ಭಾಷಾ ಕೌಶಲಗಳನ್ನು ಮೊದಲ ಭಾಷೆಯಿಂದ ಎರಡನೇ ಭಾಷೆಗೆ ಸುಲಭವಾಗಿ ವರ್ಗಾವಣೆ ಮಾಡಿಕೊಳ್ಳಬಲ್ಲರು ಎನ್ನುವುದನ್ನು ಸಂಶೋಧನೆ ನಿರೂಪಿಸಿದೆ (ಬೆನ್ಸನ್ ಹಾಗೂ ಕಮ್ಮಿನ್ಸ್, 2005ರ ಅಧ್ಯಯನ).

ತಾಯ್ನುಡಿಗೆ ಸಂಬಂಧಿಸಿದ ಎಲ್ಲಾ ಸಂಶೋಧನೆಗಳು ಭಾಷಾ ಕಲಿಕೆಯಲ್ಲಿ ಎರಡು ಪ್ರಮುಖ ತತ್ತ್ವಗಳನ್ನು ಗುರುತಿಸಿವೆ. ಒಂದು, ತಾಯ್ನುಡಿಯಲ್ಲಿ ಕಲಿತ ಕೌಶಲಗಳು ಇಂಗ್ಲಿಷ್ ಸೇರಿದಂತೆ ಯಾವುದೇ ಎರಡನೇ ಭಾಷೆಯ ಕಲಿಕೆಗೆ ವರ್ಗಾಯಿಸಬಹುದು. ಇದು, ಓದುವ ಕೌಶಲ, ಆಲೋಚನಾ ಶಕ್ತಿ ಮತ್ತು ಭಾಷಾ ಜ್ಞಾನವನ್ನು ಒಳಗೊಂಡಿರುತ್ತದೆ. ಎರಡು, ತಾಯ್ನುಡಿಯಿಂದ ಇಂಗ್ಲಿಷ್ ಸೇರಿದಂತೆ ಯಾವುದೇ ಎರಡನೇ ಭಾಷೆಗೆ ತಾತ್ವಿಕವಾಗಿ ಮತ್ತು ಕ್ರಮವಾಗಿ ಸ್ಥಿತ್ಯಂತರಗೊಳ್ಳುವ ಪ್ರಕ್ರಿಯೆ. ತಾಯ್ನುಡಿಯ ಹೊರತಾಗಿ ಯಾವುದೇ ಎರಡನೇ ಭಾಷೆಯಲ್ಲಿ ಮಾಧ್ಯಮ ಅಥವಾ ಕಲಿಕೆಯನ್ನು ಜಾರಿಗೊಳಿಸಿದರೆ ಮಕ್ಕಳಿಗೆ ಕಲಿಕೆ ಕಷ್ಟವಾಗುತ್ತದೆ. ಹೀಗಾಗಿ, ಇಂಗ್ಲಿಷ್ ಅನ್ನು ಮಾಧ್ಯಮವಾಗಿ ಹೇರಿಕೆ ಮಾಡುವ ಬದಲು, ಒಂದು ಭಾಷೆಯನ್ನಾಗಿ ಸೂಕ್ತ ಸಮಯದಲ್ಲಿ ಕಲಿಸುವುದು ಹೆಚ್ಚು ಪರಿಣಾಮಕಾರಿ.

ಯಾವ ದೇಶಗಳಲ್ಲಿ ಎಳೆಯ ಮಕ್ಕಳಿಗೆ ಅವರ ತಾಯ್ನುಡಿ ಅಥವಾ ಪರಿಚಿತ ಭಾಷೆಯಲ್ಲಿ ಕಲಿಸಲಾಗುತ್ತದೆಯೋ ಅಲ್ಲಿ, ಮಕ್ಕಳು ತಾವು ಕಲಿಯುತ್ತಿರುವುದನ್ನು ಅರ್ಥ ಮಾಡಿಕೊಂಡು ಕಲಿಕೆಯಲ್ಲಿ ಪೂರ್ಣ ಯಶಸ್ವಿಯಾಗಿದ್ದಾರೆ ಎಂದು ಪ್ರಮುಖ ಸಂಶೋಧನೆಗಳು ತೋರಿಸಿವೆ. ಶಿಕ್ಷಣದ ಮೊದಲ ಹಂತದಲ್ಲಿ ತಾಯ್ನುಡಿ ಅಥವಾ ಪರಿಚಿತ ಭಾಷೆಯಲ್ಲಿ ಕಲಿಯುವ ಮಕ್ಕಳು, ಗುಣಮಟ್ಟದ ಇಂಗ್ಲಿಷ್ ಭಾಷೆಯ ಕಲಿಕಾ ಅನುಭವಗಳನ್ನು ಹೊಂದಿರುವುದೂ ದೃಢಪಟ್ಟಿದೆ. ಇಂಗ್ಲಿಷ್ ಅನ್ನು ಒಂದು ಭಾಷಾ ವಿಷಯವನ್ನಾಗಿ ಕಲಿಸುವ ಮೂಲಕ ಇಂಗ್ಲಿಷ್‌ನ ಕಲಿಕೆಯ ಗುಣಮಟ್ಟ, ಕೌಶಲ ಮತ್ತು ನಿರರ್ಗಳತೆಯನ್ನು ಉತ್ತಮಪಡಿಸಬಹುದು, ಅಷ್ಟೇ. ಪ್ರಾಥಮಿಕ ಶಾಲಾ ಹಂತದಲ್ಲಿ ಇಂಗ್ಲಿಷ್ ಅನ್ನು ಕಲಿಕಾ ಮಾಧ್ಯಮವನ್ನಾಗಿ ಜಾರಿಗೊಳಿಸುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಉಪಯುಕ್ತವಲ್ಲ.

ವಿಶ್ವದ ಮತ್ತು ಭಾರತದ ಬಹಳಷ್ಟು ಸಂಶೋಧನೆಗಳು ನಮ್ಮ ನೀತಿ ನಿರೂಪಕರಿಗೆ ಕೆಲವು ಸಾಮಾನ್ಯ ಸಂಗತಿಗಳನ್ನು ಸ್ಪಷ್ಟಪಡಿಸುತ್ತವೆ. ಅವುಗಳೆಂದರೆ: ಒಂದು ಉತ್ತಮ ಶಿಕ್ಷಣ ವ್ಯವಸ್ಥೆ ಅಲ್ಲಿನ ತಾಯ್ನುಡಿ ಮಾಧ್ಯಮದ ಆಧಾರದ ಮೇಲೆ ರೂಪುಗೊಳ್ಳಬೇಕು. ಇಂಗ್ಲಿಷ್ ಒಳಗೊಂಡಂತೆ ಯಾವುದೇ ಎರಡನೇ ಭಾಷೆಯನ್ನು ಒಂದು ಭಾಷೆಯನ್ನಾಗಿ ಕಲಿಸುವುದು ಶಿಕ್ಷಣ ಶಾಸ್ತ್ರದ ದೃಷ್ಟಿಯಿಂದ ವೈಜ್ಞಾನಿಕ ಕ್ರಮವಾಗಿರುತ್ತದೆ. ಇಂಗ್ಲಿಷ್ ಅನ್ನು ಒಂದು ಭಾಷೆಯನ್ನಾಗಿ ಪ್ರಭುತ್ವದ ಮಟ್ಟಕ್ಕೆ ಉತ್ತಮವಾಗಿ ಕಲಿಸಲು ಅಗತ್ಯ ಸಂಪನ್ಮೂಲ ಒದಗಿಸುವುದು ಹಾಗೂ ಶಿಕ್ಷಕರಿಗೆ ಆ ಭಾಷಾ ಕೌಶಲದ ಬಗ್ಗೆ ತರಬೇತಿ ನೀಡುವುದು ಎರಡನೇ ಭಾಷೆಯ ಕಲಿಕೆಗೆ ಬುನಾದಿಯಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್ ಭಾಷೆಯ ಗುಣಮಟ್ಟದ ಕಲಿಕೆಗೆ ಶಿಕ್ಷಕರ ಶಿಕ್ಷಣದಲ್ಲಿ ಇಂಗ್ಲಿಷ್ ಅನ್ನು ಒಂದು ಕಲಿಕಾ ವಿಷಯವಾಗಿ ಉತ್ತೇಜಿಸಬಹುದು.

ವೈಜ್ಞಾನಿಕ ಅಧ್ಯಯನಗಳ ಸಾರವನ್ನು ಪರಿಗಣಿಸಿ, ತಾಯ್ನುಡಿ ಆಧಾರಿತ ಶಿಕ್ಷಣವು ಇಂಗ್ಲಿಷ್ ಕಲಿಕೆಗೆ ಹೆಚ್ಚು ಉತ್ತಮ ಮಾರ್ಗ ಎನ್ನುವ ನಿರ್ಣಯಕ್ಕೆ ಬರಬಹುದಾಗಿದೆ. ಆಂಗ್ಲ ಭಾಷಾ ಕಲಿಕೆಗೆ ಇಂಗ್ಲಿಷ್ ಮಾಧ್ಯಮ ಮುಖ್ಯವಲ್ಲ ಹಾಗೂ ತಾಯ್ನುಡಿ ಮಾಧ್ಯಮದ ಮೂಲಕ ಇಂಗ್ಲಿಷ್ ಕಲಿಯುವುದು ಮಕ್ಕಳ ಶಿಕ್ಷಣಕ್ಕೆ ಉತ್ತಮ ಅಡಿಪಾಯವಾಗಿ ರೂಪುಗೊಳ್ಳುತ್ತದೆ. ಹಾಗಾಗಿ, ಇಂಗ್ಲಿಷ್ ಮಾಧ್ಯಮದ ಬದಲಿಗೆ ತಾಯ್ನುಡಿ ಆಧಾರಿತ ಕಲಿಕಾ ಮಾದರಿಯು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಉತ್ತಮವಾದುದು.

ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಇಂಗ್ಲಿಷ್ ಅನ್ನು ಮಾಧ್ಯಮವಾಗಿ ಬಳಸುವ ಬದಲು, ವಿಷಯವಾಗಿ ಕಲಿಸುವುದು ಹೆಚ್ಚು ಪರಿಣಾಮಕಾರಿ. ಪ್ರಾಥಮಿಕ ಹಂತದಲ್ಲಿಯೇ ಆಂಗ್ಲ ಭಾಷಾ ಮಾಧ್ಯಮ ಜಾರಿಗೊಳಿಸುವ ತೀರ್ಮಾನ, ತಾಯ್ನುಡಿಯನ್ನೇ ಸಮರ್ಥವಾಗಿ ಕಲಿಯದ ಮಕ್ಕಳ ಗಂಟಲಲ್ಲಿ ಕಡುಬು ತುರುಕಿದಂತಾಗುತ್ತದೆ. ಯಾವುದೇ ಹಂತದಲ್ಲಿ ಆಂಗ್ಲ ಮಾಧ್ಯಮ ಜಾರಿಗೊಳಿಸುವ ನೀತಿ– ನಿರ್ಧಾರ, ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ (1989) ಮೂಲ ತತ್ವವಾದ 'ಮಕ್ಕಳ ಹಿತಾಸಕ್ತಿ'ಗೆ ಯಾವುದೇ ಬಗೆಯಲ್ಲಿ ಹಾನಿ ಮಾಡದಿರುವ ತತ್ತ್ವದ ಭಾಗವಾಗಿರಬೇಕು. ಈ ಕನಿಷ್ಠ ಕಾಳಜಿ ರಾಜಕಾರಣಿಗಳದು ಮತ್ತು ನೀತಿ ನಿರೂಪಕರದು ಆಗಬೇಕಾಗಿದೆ.

ವಾಚಕರ ವಾಣಿ

ಪ್ರಥಮ ಭಾಷೆ: ಅಂಕ ಕಡಿತ ಸಲ್ಲದು

ಎಸ್‌ಎಸ್‌ಎಲ್‌ಸಿ ಪ್ರಥಮ ಭಾಷೆಯ ಅಂಕಗಳನ್ನು 125ರಿಂದ 100ಕ್ಕೆ ಇಳಿಸುವ 'ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ'ಯ ಚಿಂತನೆ ಖಂಡನೀಯ. ಗೋಕಾಕ್ ಚಳವಳಿಯ ಫಲವಾಗಿ ಪ್ರಥಮ ಭಾಷೆಯು ಮಾತೃಭಾಷೆ ಆಗಿರುವುದರಿಂದ, ಇದರ ಅಂಕಗಳು ದ್ವಿತೀಯ ಇಲ್ಲವೇ ತೃತೀಯ ಭಾಷೆಗಿಂತ 25 ಅಂಕಗಳು ಹೆಚ್ಚು ಇರುವುದು ಸೂಕ್ತ ಎಂದು ಅಂದಿನ ಭಾಷಾ ತಜ್ಞರು ಅಭಿಪ್ರಾಯಪಟ್ಟಿದ್ದರು. ಅದರನ್ವಯ ಪ್ರಥಮ ಭಾಷೆಗೆ 125 ಅಂಕಗಳನ್ನು ನಿಗದಿಪಡಿಸಲಾಗಿತ್ತು. ಈಗ, ಏಕಾಏಕಿ 25 ಅಂಕ ಕಡಿತ ಮಾಡಲು ಮುಂದಾಗಿರುವುದು ಗೋಕಾಕ್ ಚಳವಳಿಯಲ್ಲಿ ಭಾಗವಹಿಸಿದ ವಿದ್ವಾಂಸರು, ಸಾಹಿತಿಗಳು ಹಾಗೂ ಕನ್ನಡಿಗರಿಗೆ ಮಾಡುವ ಅವಮಾನ.

ರವೀಶ್ ಕುಮಾರ್ ಬಿ., ಮೈಸೂರು

ಸಿಬಿಎಸ್‌ಇ: ಸ್ವಾಯತ್ತತೆ ಅಡಮಾನ

ಶಾಲಾ ಶಿಕ್ಷಣದಲ್ಲಿ ಸಿಬಿಎಸ್‌ಇ/ ಸಿಐಎಸ್‌ಇ ಮಾದರಿ ಅನುಸರಿಸುವ ರಾಜ್ಯ ಸರ್ಕಾರದ ಉದ್ದೇಶ ಒಂದು ದೃಷ್ಟಿಯಲ್ಲಿ ಸ್ವಾಗತಾರ್ಹ ಎಂದು ಸಮಾಧಾನಕ್ಕಾಗಿ ಹೇಳಿಕೊಳ್ಳಬಹುದು (ಪ್ರ.ವಾ., ಜುಲೈ 8). ದೇಶದಾದ್ಯಂತ ಮಕ್ಕಳ ಶಿಕ್ಷಣದ ಏಕರೂಪತೆಗೆ ಇಡುತ್ತಿರುವ ಮೊದಲ ಹೆಜ್ಜೆ ಎಂದು ಭಾವಿಸುವುದಕ್ಕೂ ಸಾಧ್ಯವಿದೆ. ಸೂಕ್ಷ್ಮವಾಗಿ ನೋಡಿದರೆ, ಇದು ಅಳ್ಳೆದೆಯ ತೋರಿಕೆ ಹಾಗೂ ರಾಜ್ಯದ ಸ್ವಾಯತ್ತತೆಯ ಅಡಮಾನ.

ರಾಜ್ಯ ಪಠ್ಯಕ್ರಮ ಅನುಸರಿಸುವ ಸರ್ಕಾರಿ ಮತ್ತು ಅನುದಾನಿತ ಖಾಸಗಿ ಶಾಲೆಗಳಿಗೆ ಈ ಸುಧಾರಣೆ ಅನ್ವಯವಾಗಲಿದೆ ಎಂದು ಹೇಳುವ ಮೂಲಕ, ಕೇಂದ್ರ ಪ್ರಣೀತ ಸಿಬಿಎಸ್‌ಇ, ಸಿಐಎಸ್‌ಇ ಮತ್ತು ಅಂತರರಾಷ್ಟ್ರೀಯ ಪಠ್ಯಕ್ರಮ ಎಂದು ಕೊಚ್ಚಿಕೊಳ್ಳುವ 'ಖಾಸಗಿ ಶಿಕ್ಷಣೋದ್ಯಮ'ದ ಎದುರು, ರಾಜ್ಯ ಶಿಕ್ಷಣ ವ್ಯವಸ್ಥೆಯು ತನ್ನ ನಿಸ್ಸಹಾಯಕತೆಯನ್ನು ತೋರಿಸಿಕೊಂಡಿದೆ.

ಆರ್.ಕೆ. ದಿವಾಕರ, ಬೆಂಗಳೂರು

ಶಾಲೆಗೆ ಹೈಟೆಕ್ ಕಟ್ಟಡ: ಮಾದರಿ ನಡೆ

ತಾವು ಓದಿದ ಚನ್ನಪಟ್ಟಣ ತಾಲ್ಲೂಕು ಹೊಂಗನೂರಿನ ಸರ್ಕಾರಿ ಶಾಲೆಗೆ ₹14 ಕೋಟಿ ವೆಚ್ಚದಲ್ಲಿ ಹೈಟೆಕ್ ಕಟ್ಟಡ ನಿರ್ಮಿಸಿಕೊಟ್ಟಿರುವ ಡಾ. ಎಚ್.ಎಂ. ವೆಂಕಟಪ್ಪ ಅವರ ಸೇವಾಕಾರ್ಯ ಅಭಿನಂದನೀಯ ಹಾಗೂ ಅನುಕರಣೀಯ (ಪ್ರ.ವಾ., ಜುಲೈ 8). ಸರ್ಕಾರಿ ಶಾಲೆ– ಕಾಲೇಜಿನಲ್ಲಿ ಓದಿ ಉತ್ತಮ ಸ್ಥಿತಿಯಲ್ಲಿರುವವರಿಗೆ ವೆಂಕಟಪ್ಪ ಅವರ ಈ ನಡೆ ಮಾದರಿಯಾಗಿದೆ. ಸರ್ಕಾರವು ಎಲ್ಲ ಸರ್ಕಾರಿ ಶಾಲೆಗಳನ್ನು ಪೋಷಕರು ಮತ್ತು ದಾನಿಗಳ ನೆರವಿನೊಂದಿಗೆ ವ್ಯವಸ್ಥಿತವಾಗಿ ಉನ್ನತೀಕರಿಸಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕುವಂತೆ ಮಾಡುವುದು ಇಂದಿನ ತುರ್ತು.

ಸಿ.ಪಿ. ಸಿದ್ಧಾಶ್ರಮ, ಮೈಸೂರು

ಕನ್ನಡ ಕಾಪಾಡುವ ಹೊಣೆ ಯಾರದು?

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ತರಗತಿ ಪ್ರಾರಂಭಿಸುವುದಕ್ಕೆ ವಿರೋಧಿಸಿದ್ದಾರೆ. ಹಾಗಿದ್ದರೆ ಕನ್ನಡ ಕಾಪಾಡುವ ಹೊಣೆ ಯಾರದ್ದು?

ಈಗಾಗಲೇ, ಹೆಚ್ಚಿನ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಇಳಿಮುಖವಾಗಿದ್ದು, ಮುಚ್ಚುವ ಹಂತಕ್ಕೆ ತಲುಪಿವೆ. ಇದಕ್ಕೆ ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳ ಹಾವಳಿಯೇ ಕಾರಣ. ಸರ್ಕಾರಿ ಶಾಲೆಗಳಲ್ಲಿ ಹೆಚ್ಚಾಗಿ ಬಡ, ಹಿಂದುಳಿದ, ತಳ ಸಮುದಾಯದ ಮಕ್ಕಳು ಓದುತ್ತಾರೆ. ಈ ವರ್ಗದ ಮಕ್ಕಳು ಇಂಗ್ಲಿಷ್ ಶಿಕ್ಷಣ ಕಲಿಯುವುದು ಬೇಡವೆ? ಕನ್ನಡವನ್ನು ಕೇವಲ ಈ ವರ್ಗದ ಜನರಷ್ಟೇ ಕಾಪಾಡಬೇಕೆ? ಶ್ರೀಮಂತರು, ಜನಪ್ರತಿನಿಧಿಗಳು, ಸರ್ಕಾರಿ ನೌಕರರು, ಉದ್ಯಮಿಗಳು, ಚಿತ್ರನಟರ ಮಕ್ಕಳಿಗೆ ಕನ್ನಡ ಉಳಿಸುವ ಜವಾಬ್ದಾರಿ ಬೇಡವೆ? ಅನುಕೂಲಸ್ಥ ವರ್ಗದ ಜನರೇ ತಮ್ಮ ಮಕ್ಕಳ ಉನ್ನತಿಯನ್ನು ಬೇರೆ ಭಾಷೆಯಲ್ಲಿ ಬಯಸುವಾಗ ಇದರ ಭಾರವನ್ನು ಕೇವಲ ಈ ಬಡ ಸಮುದಾಯಗಳ ಮೇಲೆ ಏಕೆ ಹೊರಿಸಬೇಕು?

ವೀರಪ್ಪ ಹ. ತಾಳದವರ, ಗದಗ

ವಿವಿಗಳಿಗೆ ಸ್ವಾಯತ್ತತೆ: ಒಮ್ಮತ ಅವಶ್ಯ

'ವಿವಿಗಳಿಗೆ ಸ್ವಾಯತ್ತತೆ ಮರೀಚಿಕೆಯೇ?' ಲೇಖನವು (ಪ್ರೊ. ಬಿ.ಕೆ. ಚಂದ್ರಶೇಖರ್, ಪ್ರ.ವಾ., ಜುಲೈ 7) ವಾಸ್ತವಕ್ಕೆ ಕನ್ನಡಿ ಹಿಡಿದಿದೆ. ಪ್ರಸ್ತುತ ದೇಶದಲ್ಲಿ ಸ್ವಾಯತ್ತತೆಯ ಕಲ್ಪನೆಯು ಊಹೆಗೂ ನಿಲುಕದ್ದಾಗಿದೆ. ಅದು ವಿಶ್ವವಿದ್ಯಾಲಯಗಳಿಗೆ ಸಾಧ್ಯವೂ ಇಲ್ಲ; ಸಾಧುವೂ ಅಲ್ಲದಾಗಿದೆ. ಮೊದಲು ಸಾಧ್ಯವಿಲ್ಲ ಎನ್ನುವುದನ್ನು ಗಮನಿಸುವುದಾದರೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಈಗಾಗಲೇ ವಿಶ್ವವಿದ್ಯಾಲಯಗಳಲ್ಲಿ ಪಠ್ಯ ರಚನೆ ಮಾತ್ರವಲ್ಲದೇ ತಾತ್ಕಾಲಿಕ ನೌಕರರಿಂದ ಕುಲಪತಿ ನೇಮಕಾತಿವರೆಗೂ ತಮ್ಮದೇ ಪ್ರಭಾವ ಇರಬೇಕೆಂಬ ನಿರೀಕ್ಷೆ ಹೊಂದಿವೆ. ಇದರಿಂದ ವಿಶ್ವವಿದ್ಯಾಲಯಗಳಲ್ಲಿ ನೈಜ ಸಂಶೋಧನೆ ವಿಷಯಗಳ ಆಯ್ಕೆಗೆ ಮುಕ್ತ ಸ್ವಾತಂತ್ರ್ಯ ಇಲ್ಲವಾಗಿದೆ. ಸರ್ಕಾರ ಮತ್ತು ಪ್ರಾಧ್ಯಾಪಕ ವರ್ಗದ ಸಹಯೋಗದಲ್ಲಿ ಸಮಾಜ ಕೇಂದ್ರಿತ ಶಿಕ್ಷಣದ ಬಗ್ಗೆ ಪೂರಕ ವಾತಾವರಣ ಕಲ್ಪಿಸಿದರೆ ಸ್ವಾಯತ್ತತೆಯ ಕಲ್ಪನೆಯೇ ಮೂಡದು.

ತಿಮ್ಮೇಶ ಮುಸ್ಟೂರು, ಜಗಳೂರು

ಭಾಷಾಭಿಮಾನ ಬೆಳೆಯಲಿ

ಇತ್ತೀಚೆಗೆ ನಾನು ಚೆನ್ನೈ ಹಾಗೂ ಪುದುಚೇರಿಗೆ ಭೇಟಿ ನೀಡಿದ್ದೆ. ಅಲ್ಲಿ ಅಂಗಡಿಗಳ ನಾಮಫಲಕ ಬಹುತೇಕ ತಮಿಳು ಹಾಗೂ ಸ್ವಲ್ಪ ಭಾಗ ಇಂಗ್ಲಿಷ್ ಭಾಷೆಯಲ್ಲಿ ಇರುವುದನ್ನು ಕಂಡೆ. ಹಳ್ಳಿಗಳಲ್ಲಿ ನಾಮಫಲಕಗಳು ತಮಿಳಿನಲ್ಲಷ್ಟೇ ಇದ್ದವು. ಅಲ್ಲಿಯ ಜನರು ತಮಿಳಿನಲ್ಲೇ ಮಾತನಾಡುತ್ತಾರೆಯೇ ಹೊರತು ಹಿಂದಿ, ಇಂಗ್ಲಿಷ್ ಗೊತ್ತಿದ್ದರೂ ಮಾತನಾಡುವುದಿಲ್ಲ. ಅಂತಹ ಭಾಷಾಭಿಮಾನ ಕನ್ನಡಿಗರಿಗೆ ಏಕಿಲ್ಲ?

ಚಾವಲ್ಮನೆ ಸುರೇಶ್ ನಾಯಕ್, ಕೊಪ್ಪ

ಚುರುಮುರಿ



ಹೃದಯದ ಮಾತು

• ಮಣ್ಣೆ ರಾಜು

ಮೈಮರೆತು ಮಲಗಿದ್ದ ಶಂಕ್ರಿಯನ್ನು ತಟ್ಟಿ ಎಬ್ಬಿಸಿದ ಹೃದಯ, 'ಎದ್ದೇಳು, ವಾಕಿಂಗ್ ಮಾಡು ಹೋಗು' ಎಂದಿತು.

'ಮೂಡ್ ಇಲ್ಲ' ಮಗ್ಗುಲಾದ.

'ನಾನು ನಿನ್ನ ಹೃದಯ, ನಿನ್ನ ಜೀವದ ಗೆಳೆಯ. ನನ್ನ ಬಗ್ಗೆ ನಿನಗೆ ಕಾಳಜಿಯಿಲ್ಲ. ಪೇಪರ್ ಓದಿದ್ದೀಯಾ, ಹೃದಯಾಘಾತ ಹೆಚ್ಚಾಗುತ್ತಿವೆಯಂತೆ' ಕಳವಳಗೊಂಡಿತು.

'ಆಗೋದನ್ನು ತಪ್ಪಿಸಲಾಗೊಲ್ಲ'.

'ಡ್ರೆಸ್ ಕೊಡಿಸು, ಬೈಕ್ ಕೊಡಿಸು ಎಂದು ಮಕ್ಕಳು ಹಟ ಮಾಡುವಂತೆ ನಾನು ನಿನ್ನನ್ನು ಯಾವತ್ತಾದ್ರೂ ಏನನ್ನಾದರೂ ಕೇಳಿದ್ದೀನಾ?'

'ಸರಿ, ನಿನಗೇನು ಬೇಕು?'

'ನೀನು ನಾಯಿ ಸಾಕಬೇಕು'.

'ರೇಷನ್ ಕಾರ್ಡಿನಲ್ಲಿ ಹೆಸರಿರುವ ಹೆಂಡ್ತಿ, ಮಕ್ಕಳನ್ನೇ ಸಾಕಲು ಒದ್ದಾಡ್ತಿದ್ದೀನಿ. ಅನ್ನಭಾಗ್ಯವಿಲ್ಲದ ನಾಯಿ ಸಾಕಾಣಿಕೆ ಲಾಭದಾಯಕ ಅಲ್ಲ. ಕುರಿ, ಕೋಳಿ, ಹಸು ಸಾಕು ಅಂತ ಬೇಕಾದ್ರೆ ಹೇಳು'.

'ನಾಯಿ ನಿನಗೆ ಆರೋಗ್ಯದ ದಾರಿ ತೋರಿಸುತ್ತದೆ. ಅದನ್ನು ನಿತ್ಯ ಹೊರಗೆ ಕರೆದುಕೊಂಡು ಹೋಗಬೇಕು. ನಾಯಿ ನೆಪದಲ್ಲಿ ನೀನೂ ವಾಕಿಂಗ್ ಮಾಡಿದಂತಾಗುತ್ತದೆ. ಹಾಗೇ ಯೋಗ, ವ್ಯಾಯಾಮ ಮಾಡು'.

'ತಲೆ ತಿನ್ನಬೇಡ, ನಿದ್ರೆ ಬರ್ತಿದೆ ಸುಮ್ನಿರು'.

'ಸುಮ್ಮನಿರಕ್ಕಾಗಲ್ಲ, ನಿನ್ನ ರಕ್ತದ ಒತ್ತಡ ಏರುಪೇರಾಗಿದೆ. ಕೊಲೆಸ್ಟ್ರಾಲ್ ಹೆಚ್ಚಾಗಿದೆ. ಬೊಜ್ಜು ಬೆಳೆದು ಹೊಟ್ಟೆಯ ಗಾತ್ರ ಜಾಸ್ತಿಯಾಗಿದೆ'.

'ನನ್ನ ಒಡಹುಟ್ಟಿದ ಹೊಟ್ಟೆ ಮೇಲೆ ಕೆಟ್ಟ ಕಣ್ಣು ಹಾಕಬೇಡ'.

'ನೀನು ನಕ್ಕು ಎಷ್ಟು ದಿನ ಆಯ್ತು?'

'ನೆನಪಿಲ್ಲ. ಕಚೇರಿಯ ಒತ್ತಡ, ಸಂಸಾರದ ಜಂಜಾಟದಲ್ಲಿ ನಗಲು ಸಾಧ್ಯವಿಲ್ಲ'.

'ನಗೆ ಕ್ಲಬ್‌ಗಳಿಗೆ ಸೇರಿಕೊಂಡಾದರೂ ನೀನು ನಗಬೇಕು'.

'ಹುಚ್ಚುಚ್ಚಾಗಿ ನಕ್ಕರೆ ನೋಡಿದ ಜನ ನಗ್ತಾರೆ... ಕಾಡಬೇಡ, ಮಲಗಲು ಬಿಡು, ನೀನೂ ಮಲಗಿ ನಿದ್ರೆ ಮಾಡು...'

'ನಾನು ಮಲಗಿಬಿಟ್ಟರೆ ನೀನು ಮತ್ತೆ ಎದ್ದೇಳಲು ಸಾಧ್ಯವಿಲ್ಲ!' ಎಚ್ಚರಿಸಿತು ಹೃದಯ.

ಗಾಬರಿಯಾದ ಶಂಕ್ರಿ ನಿದ್ರೆಯಿಂದ ಎಚ್ಚರಗೊಂಡ.

ಸಂಗತ

ಲೈಂಗಿಕ ಅಸ್ಮಿತೆ; ಬೇಕು ಪ್ರಾಮಾಣಿಕತೆ

ಗೋಪ್ಯ ಲೈಂಗಿಕ ಅಸ್ಮಿತೆಗಳು ಮತ್ತು ಮೋಸದ ವಿವಾಹಗಳು ಅಹಿತಕರವಾಗಿ ಕೊನೆಗೊಳ್ಳುತ್ತವೆ. ಲೈಂಗಿಕ ಅಸ್ಮಿತೆಯ ಮರೆಮಾಚುವಿಕೆ ಅಪಾಯಕರ.

• ಶಿವಲಿಂಗಸ್ವಾಮಿ ಎಚ್.ಕೆ.

ಹುಡುಗ ಅಥವಾ ಹುಡುಗಿ ಮದುವೆಗೆ ಮುನ್ನ ತಮ್ಮ ಲೈಂಗಿಕ ಅಸ್ಮಿತೆಯನ್ನು ಮರೆಮಾಚುವ ಕಾರಣದಿಂದ ವಿವಾಹ ವಿಚ್ಛೇದನದ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿವೆ. ಈ ಪ್ರಕರಣಗಳು ದುಃಖಕರವಷ್ಟೇ ಅಲ್ಲದೆ, ಸಂಬಂಧಪಟ್ಟ ವ್ಯಕ್ತಿಗಳು ಮತ್ತು ಕುಟುಂಬಗಳ ಜೀವನವನ್ನೇ ದುಸ್ತರಗೊಳಿಸುತ್ತವೆ. ಲೈಂಗಿಕ ಅಲ್ಪಸಂಖ್ಯಾತರ ಬಗ್ಗೆ ಸಮಾಜದ ಆಂತರಿಕ ಮೌನ ಮತ್ತು ಅಪಹಾಸ್ಯದ ಮನೋಭಾವವನ್ನೂ ಬಹಿರಂಗಪಡಿಸುತ್ತವೆ.

ಯಾವುದೇ ವ್ಯಕ್ತಿ ತನ್ನ ನಿಜವಾದ ಲೈಂಗಿಕ ಅಸ್ಮಿತೆಯನ್ನು ಮರೆಮಾಚಿಕೊಂಡು ಸಾಂಪ್ರದಾಯಿಕ ವಿವಾಹಕ್ಕೆ ಮುಂದಾಗುವುದು, ಸಂಗಾತಿಯ ನಂಬಿಕೆಗೆ ಮಾಡುವ ಬಹುದೊಡ್ಡ ದ್ರೋಹ ಮತ್ತು ಅದನ್ನು ಸರಿಪಡಿಸುವ ಸಾಧ್ಯತೆಗಳು ತೀರಾ ಕಡಿಮೆ.

ಲೈಂಗಿಕ ಅಸ್ಮಿತೆಯ ವಾಸ್ತವಗಳನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳಲು ನಿರಾಕರಿಸುವ ಸಾಂಪ್ರದಾಯಿಕ ಮನೋಭಾವದವರು, ಇಂತಹ ಪರಿಸ್ಥಿತಿಯನ್ನು ಸಾಂಪ್ರದಾಯಿಕ ಮದುವೆಯ ಮೂಲಕ ಸರಿಪಡಿಸಬಹುದು ಎಂದು ಭಾವಿಸಿರುವುದು ವಿಪರ್ಯಾಸ. ಈ ರೀತಿಯ ಒತ್ತಾಯಪೂರ್ವಕ ವಿವಾಹಗಳು ಶಾಶ್ವತವಾದ ನೋವುಂಟು ಮಾಡಿ, ನ್ಯಾಯಾಲಯಗಳಲ್ಲಿ ಕೊನೆಗೊಳ್ಳುತ್ತವೆ. ಎಲ್ಲ ರೀತಿಯ ಲೈಂಗಿಕ ಅಸ್ಮಿತೆಗಳ ಕುರಿತು ಮುಕ್ತ ಮನಃಸ್ಥಿತಿಯಲ್ಲಿ ಚರ್ಚೆ ಮಾಡುವ ಮತ್ತು ಅವುಗಳನ್ನು ಒಪ್ಪಿಕೊಳ್ಳುವ ಮನೋಧರ್ಮವನ್ನು ನಮ್ಮ ಸಮಾಜ ಹೊಂದಿಲ್ಲ. ಅಮೆರಿಕದ ಸ್ತ್ರೀವಾದಿ ಲೇಖಕಿ ಈವ್ ಸೆಡ್ಜ್ವಿಕ್ ತಮ್ಮ 'ಎಪಿಸ್ಟಮಾಲಜಿ ಆಫ್ ದಿ ಕ್ಲಾಸೆಟ್' ಕೃತಿಯಲ್ಲಿ ಹೇಳುವಂತೆ, 'ಅಸಾಂಪ್ರದಾಯಿಕ ಎನಿಸುವ ಲೈಂಗಿಕ ಅಸ್ಮಿತೆಗಳು ಗೋಪ್ಯತೆ ಮತ್ತು ಮೌನವನ್ನು ಅವಲಂಬಿಸುತ್ತವೆ'.

ಲೈಂಗಿಕತೆ ಕುರಿತ ಸಮಾಜದ ಅರಿವು ಹಿಂದಿನಿಂದಲೂ ಕಠಿಣ ದ್ವಂದ್ವಗಳಾದ 'ಹೆಟೆರೋಸೆಕ್ಷುಯಾಲಿಟಿ' ಮತ್ತು 'ಹೋಮೋಸೆಕ್ಷುಯಾಲಿಟಿ' ಎಂಬ ಸೀಮಿತ ವಿಭಜನೆಯೊಂದಿಗೆ ರೂಪುಗೊಂಡಿದೆ. ಹೆಟೆರೋಸೆಕ್ಷುಯಾಲಿಟಿ ಅಂದರೆ, ಒಪ್ಪಿತವಾದ ಅಸ್ಮಿತೆ. ಹೋಮೋಸೆಕ್ಷುಯಾಲಿಟಿ, ಒಪ್ಪಿತವಲ್ಲದ ಅಸ್ಮಿತೆ. ಈ ದ್ವಂದ್ವಗಳು ಮನುಷ್ಯರ ಲೈಂಗಿಕ ಆಯ್ಕೆ ಮತ್ತು ಅಸ್ಮಿತೆಗಳ ವ್ಯಾಪ್ತಿಯನ್ನು ಬಹಳವಾಗಿ ಸರಳೀಕರಿಸುತ್ತವೆ ಎಂದು ಈವ್ ಸೆಡ್ಜ್ವಿಕ್ ಹೇಳುತ್ತಾರೆ. ಲೈಂಗಿಕ ಅಸ್ಮಿತೆಯು ಸ್ಥಿರವಾದುದೂ ಅಲ್ಲ ಅಥವಾ ಏಕ ಪಕ್ಷೀಯವಾದುದೂ ಅಲ್ಲ; ಅದು ವಿಕಸನಗೊಳ್ಳುವಂತಹದ್ದು, ಬಹುಮುಖವುಳ್ಳದ್ದು ಎಂದವರು ವಿವರಿಸುತ್ತಾರೆ. ಆದರೆ, ನಮ್ಮ ಸಾಮಾಜಿಕ ವ್ಯವಸ್ಥೆಗಳಾದ ವಿವಾಹ, ಕುಟುಂಬ, ಶಿಕ್ಷಣ ಇತ್ಯಾದಿಗಳು 'ಹೆಟೆರೋ ನಾರ್ಮೇಟಿವಿಟಿ' ಎಂಬ ಕಠಿಣ ದೃಷ್ಟಿಕೋನದ ಮೇಲೆ ನಿರ್ಮಿತವಾಗಿವೆ. ಇದು, ವೈವಿಧ್ಯಮಯ ಲೈಂಗಿಕ ಅಭಿವ್ಯಕ್ತಿಗಳಿಗೆ ಮುಕ್ತವಾದ ಅವಕಾಶ ಕಡಿಮೆ ಇರುವ ದೃಷ್ಟಿಕೋನ. ಈ ಸೀಮಿತ ಚೌಕಟ್ಟು ರಹಸ್ಯ, ನಾಚಿಕೆ ಮತ್ತು ಬಲವಂತದ ಅನುಕೂಲತೆಯ ಒಂದು ಸಂಸ್ಕೃತಿಯನ್ನೂ ನಿರ್ಮಿಸುತ್ತದೆ.

ವ್ಯವಸ್ಥೆಯಲ್ಲಿನ ಸಮಸ್ಯೆಗಳು ಲೈಂಗಿಕತೆಗೆ ಮಾತ್ರ ಸೀಮಿತವಾಗಿಲ್ಲ. ಪೋಷಕರ ಪ್ರತಿಷ್ಠೆ ಮತ್ತು ಅಭಿಲಾಷೆಗೆ ತಕ್ಕಂತೆ ವಿವಾಹಗಳು ಜರುಗಲೇಬೇಕು ಎಂಬ ಹಟದಿಂದ, ಪ್ರೇಮಿಗಳೂ ತಮ್ಮ ಪ್ರೀತಿಯನ್ನು ತ್ಯಾಗ ಮಾಡುತ್ತಾರೆ; ಪೋಷಕರನ್ನು ತೃಪ್ತಿಪಡಿಸಲಿಕ್ಕಾಗಿ ಒಲ್ಲದ ಮನಸ್ಸುಗಳಿಂದ ತಮ್ಮದೇ ಜಾತಿಯವರೊಡನೆ ಪಾರಂಪರಿಕ ವಿವಾಹಗಳಿಗೆ ಒಪ್ಪುತ್ತಾರೆ. ಕೆಲವು ಪ್ರೇಮ ವಿವಾಹಗಳು ಮರ್ಯಾದೆಗೇಡು ಹತ್ಯೆಗಳಲ್ಲಿ ಕೊನೆಗೊಳ್ಳುತ್ತವೆ. ಬಹುಸಂಖ್ಯಾತರ ಸ್ಥಿತಿಯೇ ಹೀಗಿರುವಾಗ, ಲೈಂಗಿಕ ಅಲ್ಪಸಂಖ್ಯಾತರು ತಮ್ಮ ಆಯ್ಕೆಗಳನ್ನು ಮುಕ್ತವಾಗಿ ಹೇಳಲು ಸಮಾಜ ಬಿಡುತ್ತದೆಯೇ?

ನೈಜ ಲೈಂಗಿಕ ಅಸ್ಮಿತೆಯನ್ನು ಮದುವೆಗೆ ಮುಂಚೆಯೇ ಬಹಿರಂಗಪಡಿಸಲು ನಾಚಿ ಅಥವಾ ಹೆದರಿ ಮದುವೆಗೆ ಒಪ್ಪಿ, ನಂತರ ತಮ್ಮ ಲೈಂಗಿಕತೆ ಕುರಿತು ಸಹಾನುಭೂತಿ ಅಪೇಕ್ಷಿಸಿದರೆ ಅದು ಸಾಧುವಾಗಲಾರದು. ಇಂತಹ ವಿವಾಹಗಳನ್ನು ದ್ರೋಹ, ಪಿತೂರಿ ಮತ್ತು ಮೋಸ ಎಂದು ಅರ್ಥೈಸಲಾಗುತ್ತದೆ.

ವಿಭಿನ್ನ ಲೈಂಗಿಕ ನೆಲೆಗಳ ಸಂಗಾತಿಗಳು ತಮ್ಮ ಸ್ಥಿತಿಯನ್ನು ಇನ್ನೊಬ್ಬರಿಗೆ ತಿಳಿಸದೆ ಅಥವಾ ಅವರ ಒಪ್ಪಿಗೆ ಇಲ್ಲದೇ ದಾಂಪತ್ಯ ಜೀವನಕ್ಕೆ ಬರುವಾಗ, ಅದು ಭಾವನಾತ್ಮಕ, ಶಾರೀರಿಕ ಹಾಗೂ ಮಾನಸಿಕ ಅಸಾಧ್ಯತೆಗಳಿಂದ ತುಂಬಿದ ಸ್ಥಿತಿಯನ್ನು ಹುಟ್ಟುಹಾಕುತ್ತದೆ. ಈ ಸಂದರ್ಭದಲ್ಲಿ ಮೋಸ ಹೋಗಿರುವ ಸಂಗಾತಿ, ನಿಜವಾದ ಆತ್ಮೀಯತೆ ಮತ್ತು ಪ್ರೀತಿಯ ಕೊರತೆಯಿಂದ ತತ್ತರಿಸುತ್ತಾರೆ. ಇನ್ನೊಂದೆಡೆ, ತನ್ನ ಲೈಂಗಿಕ ಸ್ವಭಾವವನ್ನು ಗುಪ್ತವಾಗಿಟ್ಟುಕೊಂಡಿರುವ ವ್ಯಕ್ತಿ ತನ್ನ ಭಾವನೆಗಳನ್ನು ತಾನಾಗಿಯೇ ಅಡಗಿಸಿಕೊಂಡು, ಸದಾ ಆಂತರಿಕ ಸಂಘರ್ಷ, ಅಪರಾಧಿ ಪ್ರಜ್ಞೆ ಅಥವಾ ಆಕ್ರೋಶದಿಂದ ಬದುಕುತ್ತಿರುತ್ತಾರೆ.

ವಿವಾಹದ ಮೂಲಭೂತ ಅಂಶಗಳಾದ ಪರಸ್ಪರ ಪ್ರೀತಿ ಮತ್ತು ನಂಬಿಕೆ ಇಲ್ಲಿ ಸಾಧ್ಯವಾಗದೇ ಹೋಗುತ್ತದೆ. ಭಾವನಾತ್ಮಕ ಮತ್ತು ಶಾರೀರಿಕ ಅಂತರದ ಕಾರಣದಿಂದ ದಾಂಪತ್ಯದೊಳಗೆ ಒಂಟಿತನ ಶುರುವಾಗಿ, ಕ್ರಮೇಣ ದೈಹಿಕ ಮತ್ತು ಮಾನಸಿಕ ಅನಾರೋಗ್ಯಕ್ಕೆ ಕಾರಣವಾಗಬಹುದು. ಕೆಲವೊಮ್ಮೆ, ಆತ್ಮಹತ್ಯೆ ಅಥವಾ ಹೆಣ್ಣಿನ ಮೇಲೆ ದೌರ್ಜನ್ಯದೊಂದಿಗೂ ಅಂತ್ಯವಾಗಬಹುದು.

ಭಿನ್ನ ಲೈಂಗಿಕತೆ ಉಂಟು ಮಾಡಬಹುದಾದ ಸಮಸ್ಯೆಗಳಿಗೆ ಎರಡು ರೀತಿಯಲ್ಲಿ ಪರಿಹಾರ ಯೋಚಿಸಬಹುದು. ಒಂದು, ತಮ್ಮ ಲೈಂಗಿಕತೆಯನ್ನು ಮರೆಮಾಚುವವರಿಗೆ ಕಾನೂನುಬದ್ಧವಾಗಿ ಹೊಣೆಗಾರಿಕೆಯನ್ನು ನಿಗದಿಪಡಿಸುವುದು. ಇನ್ನೊಂದು, ಎಲ್ಲ ರೀತಿಯ ಲೈಂಗಿಕ ಅಸ್ತಿತ್ವಗಳು ಯಾವುದೇ ಹಿಂಜರಿಕೆಯಿಲ್ಲದೆ ವ್ಯಕ್ತವಾಗಬಹುದಾದ ಪ್ರಗತಿಶೀಲ ಸಮಾಜವನ್ನು ನಿರ್ಮಿಸುವುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತೀಯರ ಆಹಾರ ಕ್ರಮ ಕೊಬ್ಬಿನಂಶ ಸೇವನೆ ಹೆಚ್ಚಳ

ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು (ಎಂಒಎಸ್‌ಪಿಐ) 'ಭಾರತದಲ್ಲಿ ಪೋಷಕಾಂಶಗಳ ಸೇವನೆ' ಎನ್ನುವ ವರದಿ ಬಿಡುಗಡೆ ಮಾಡಿದೆ. ಅದರಲ್ಲಿ ದೇಶದ ಜನರ ಬದಲಾದ ಆಹಾರ ಕ್ರಮದ ಬಗ್ಗೆ ಬೆಳಕು ಚೆಲ್ಲಲಾಗಿದೆ. ದಶಕದ ಹಿಂದಿನ ಅವಧಿಗೆ ಹೋಲಿಸಿದರೆ, ಭಾರತೀಯರು ಇಂದು ಹೆಚ್ಚು ಪ್ರೊಟೀನ್ ಬಳಸುತ್ತಿದ್ದಾರೆ. ಆದರೆ, ಅದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಕೊಬ್ಬಿನ ಅಂಶವುಳ್ಳ ಆಹಾರ ಪದಾರ್ಥಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ವರದಿ ಉಲ್ಲೇಖಿಸಿದೆ. ಒಟ್ಟಾರೆಯಾಗಿ ಆಹಾರ ಬಳಕೆಯ ಪ್ರಮಾಣದಲ್ಲಿ ಅಲ್ಪ ಪ್ರಗತಿಯಾಗಿದ್ದರೂ ವಿವಿಧ ಪ್ರದೇಶ ಮತ್ತು ಆದಾಯದ ಗುಂಪುಗಳ ನಡುವೆ ವ್ಯತ್ಯಾಸ ಇರುವುದೂ ಕಂಡುಬಂದಿದೆ. ಇದು ಆಹಾರ ಭದ್ರತೆಯ ಕಾರ್ಯಕ್ರಮಗಳ ಮುಂದುವರಿಕೆಯ ಅಗತ್ಯವನ್ನು ಒತ್ತಿಹೇಳುತ್ತಿದೆ

ಪ್ರಜಾವಾಣಿ ವಾರ್ತೆ

'ಭಾರತದಲ್ಲಿ ಪೋಷಕಾಂಶಗಳ ಸೇವನೆ' ಎನ್ನುವ ವರದಿಯು ದೇಶದ ವಿವಿಧ ರಾಜ್ಯ, ವಲಯ ಮತ್ತು ವರ್ಗಗಳ ಜನರ ಪ್ರತಿದಿನದ ತಲಾವಾರು ಮತ್ತು ಘಟಕವಾರು ಆಹಾರ ಪದಾರ್ಥಗಳ ಬಳಕೆಯನ್ನು ಆಧರಿಸಿ ಅವರು ತಿನ್ನುವ ಕ್ಯಾಲೊರಿ, ಕೊಬ್ಬಿನ ಅಂಶ ಮತ್ತು ಪ್ರೊಟೀನ್ ಪ್ರಮಾಣವನ್ನು ಲೆಕ್ಕ ಹಾಕಲಾಗಿದೆ. ವರದಿಯಲ್ಲಿ 2022ರ ಆಗಸ್ಟ್‌ನಿಂದ 2023ರ ಜುಲೈವರೆಗೆ ಮತ್ತು 2023ರ ಆಗಸ್ಟ್‌ನಿಂದ 2024ರ ಜುಲೈವರೆಗೆ ನಡೆಸಿದ ಕುಟುಂಬ ಬಳಕೆ ವೆಚ್ಚ ಸಮೀಕ್ಷೆಗಳ ದತ್ತಾಂಶವನ್ನು (ಎಚ್‌ಸಿಇಎಸ್) ಬಳಸಿಕೊಳ್ಳಲಾಗಿದೆ. ಈ ಎರಡು ಅವಧಿಗಳ ನಡುವೆ ಕ್ಯಾಲೊರಿ, ಕೊಬ್ಬಿನ ಅಂಶ, ಪ್ರೊಟೀನ್ ಸೇವನೆಯಲ್ಲಿ ಹೆಚ್ಚಿನ ಬದಲಾವಣೆಗಳೇನೂ ಇಲ್ಲ. ಆದರೆ, ದಶಕಕ್ಕೂ ಹಿಂದಿನ ಅವಧಿಗೆ (2009–10 ಮತ್ತು 2011–12) ಹೋಲಿಸಿದರೆ, ಪ್ರೊಟೀನ್‌ಗಳ ಸೇವನೆಯಲ್ಲಿ ಅಲ್ಪ ಹೆಚ್ಚಳ ಆಗಿದ್ದರೆ, ಕೊಬ್ಬಿನ ಅಂಶವುಳ್ಳ ಪದಾರ್ಥಗಳ ಸೇವನೆಯಲ್ಲಿ ಭಾರಿ ಹೆಚ್ಚಳ ಕಂಡುಬಂದಿದೆ.

ಗ್ರಾಮೀಣ ಪ್ರದೇಶದಲ್ಲಿ 2022–23ರಲ್ಲಿ ಪ್ರತಿದಿನದ ಸರಾಸರಿ ತಲಾವಾರು ಕ್ಯಾಲೊರಿ ಬಳಕೆಯು 2,233 ಕ್ಯಾಲೊರಿ ಇದ್ದರೆ, 2023–24ರಲ್ಲಿ ಅದರಲ್ಲಿ ಅಲ್ಪ ಮಟ್ಟದ (2,212 ಕ್ಯಾಲೊರಿ) ಇಳಿಕೆ ಕಂಡುಬಂದಿದೆ. ಈ ಪ್ರಮಾಣವು ಇದೇ ಅವಧಿಯಲ್ಲಿ ನಗರ ಭಾಗದಲ್ಲಿ 2,250 ಕ್ಯಾಲೊರಿಯಿಂದ 2,240 ಕ್ಯಾಲೊರಿಗೆ ಇಳಿದಿದೆ. ಅಂದರೆ, ಗ್ರಾಮೀಣ ಪ್ರದೇಶದಲ್ಲಿ ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಿದ್ದರೆ, ನಗರ ಪ್ರದೇಶದಲ್ಲಿ ಹೆಚ್ಚಳವಾಗಿದೆ. ಕುಟುಂಬದ ವೆಚ್ಚ ಮತ್ತು ಕ್ಯಾಲೊರಿ ಸೇವನೆ ಪ್ರಮಾಣದ ನಡುವೆ ನೇರ ಸಂಬಂಧವಿದೆ. ಕುಟುಂಬದ ತಿಂಗಳ ತಲಾವಾರು ಬಳಕೆ ವೆಚ್ಚ ಹೆಚ್ಚಾಗಿದ್ದರೆ, ಆ ಕುಟುಂಬದ ಕ್ಯಾಲೊರಿ ಸೇವನೆ ಪ್ರಮಾಣವೂ ಅಧಿಕವಾಗಿರುತ್ತದೆ.

2009–10ಕ್ಕೆ ಹೋಲಿಸಿದರೆ, ಅನೇಕ ರಾಜ್ಯಗಳ ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಪ್ರೊಟೀನ್ ಸೇವನೆ ಹೆಚ್ಚಳವಾಗಿದೆ. 2009–10ರಿಂದ 2022–23ರ ನಡುವೆ ದೇಶದ ಗ್ರಾಮೀಣ ಭಾಗದಲ್ಲಿ ವ್ಯಕ್ತಿಯೊಬ್ಬರು ದಿನವೊಂದರಲ್ಲಿ ಸೇವಿಸುವ ಸರಾಸರಿ ಪ್ರೊಟೀನ್ ಪ್ರಮಾಣ 2.5 ಗ್ರಾಂ ಜಾಸ್ತಿಯಾಗಿದೆ. ನಗರ ಪ್ರದೇಶದಲ್ಲಿ 4.6 ಗ್ರಾಂ ಜಾಸ್ತಿಯಾಗಿದೆ.

ಹಾಗೆಯೇ, ಮೊಟ್ಟೆ, ಮಾಂಸ, ಮೀನು ಸೇವನೆಯ ಪ್ರಮಾಣದಲ್ಲಿಯೂ ಹೆಚ್ಚಳವಾಗಿದೆ. ನಗರ ಪ್ರದೇಶಗಳ ಜನರು ಪ್ರೊಟೀನ್‌ಗಳ ಮುಖ್ಯ ಮೂಲಗಳಾದ ಹಾಲು ಮತ್ತು ಹಾಲಿನ ಉತ್ಪನ್ನಗಳ ಬಳಕೆಯಲ್ಲಿಯೂ ಗ್ರಾಮೀಣ ಪ್ರದೇಶದವರಿಗಿಂತ ಮುಂದಿದ್ದಾರೆ. ಧಾನ್ಯಗಳ ಬಳಕೆ ಗ್ರಾಮೀಣ ಭಾಗದಲ್ಲಿ ಏರಿಕೆ ಕಂಡಿದ್ದರೆ, ನಗರ ಪ್ರದೇಶದಲ್ಲಿ ಕಡಿಮೆಯಾಗಿದೆ.

ಆರೋಗ್ಯದ ಮೇಲೆ ಪರಿಣಾಮ?

ಪ್ರೊಟೀನ್‌ಗೆ ಹೋಲಿಸಿದರೆ ದೇಶದ ಜನರ ಕೊಬ್ಬಿನ ಅಂಶದ ಸೇವನೆ ಪ್ರಮಾಣದಲ್ಲಿ ಗಣನೀಯ ಏರಿಕೆ ಕಂಡು ಬಂದಿದೆ. 14 ವರ್ಷಗಳಲ್ಲಿ ಗ್ರಾಮೀಣ ಭಾಗಗಳಲ್ಲಿ ವ್ಯಕ್ತಿಯೊಬ್ಬ ಪ್ರತಿ ದಿನ ಸೇವಿಸುವ ಸರಾಸರಿ ಕೊಬ್ಬಿನ ಅಂಶದ ಪ್ರಮಾಣ 17.3 ಗ್ರಾಂ ಜಾಸ್ತಿಯಾಗಿದ್ದರೆ, ನಗರ ಪ್ರದೇಶಗಳಲ್ಲಿ ಈ ಪ್ರಮಾಣ 16.8ರಷ್ಟು ಏರಿಕೆ ಕಂಡಿದೆ.

ಕೆಲವು ಕೊಬ್ಬಿನ ಅಂಶಗಳು ಆರೋಗ್ಯಕ್ಕೆ ಪೂರಕವಾಗಿದ್ದರೂ ಇನ್ನೂ ಕೆಲವು ಆರೋಗ್ಯವನ್ನು ಹಾಳು ಮಾಡಬಲ್ಲದು ಎಂಬುದು ವೈದ್ಯರ ಹೇಳಿಕೆ. ಕೊಬ್ಬಿನ ಪ್ರಮಾಣ ದೇಹದಲ್ಲಿ ಹೆಚ್ಚಾಗುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಅದು ಸ್ಥೂಲಕಾಯ, ರಕ್ತದೊತ್ತಡ, ಮಧುಮೇಹ ಮುಂತಾದ ಅನಾರೋಗ್ಯಕ್ಕೆ ಕಾರಣವಾಗಬಹುದು. ಹಾಗಾಗಿ, ಕೊಬ್ಬಿನ ಅಂಶದ ಸೇವನೆಯನ್ನು ಕಡಿಮೆ ಮಾಡಬೇಕು ಎಂಬುದು ಅವರ ಸಲಹೆ.

ಪ್ರತಿ ವ್ಯಕ್ತಿ ದಿನದಲ್ಲಿ ಸೇವಿಸುವ ಸರಾಸರಿ ಪ್ರೊಟೀನ್ (ಗ್ರಾಂಗಳಲ್ಲಿ)



ಪ್ರತಿ ದಿನ ವ್ಯಕ್ತಿಯೊಬ್ಬರು ಸೇವಿಸುವ ಸರಾಸರಿ ಕೊಬ್ಬಿನ ಅಂಶ (ಗ್ರಾಂಗಳಲ್ಲಿ)



ಪ್ರತಿ ದಿನ ಪ್ರೊಟೀನ್ ಸೇವನೆ ಯಾವುದರಿಂದ ಎಷ್ಟು?



ಪ್ರೊಟೀನ್ ಮೂಲಗಳಲ್ಲಿ ಬದಲಾವಣೆ

ಜನರ ಆಹಾರಕ್ರಮದಲ್ಲಿ ಬದಲಾವಣೆಗಳಾಗಿರುವುದನ್ನು ವರದಿ ಉಲ್ಲೇಖಿಸಿದೆ. ಧಾನ್ಯಗಳು ಪ್ರೊಟೀನ್‌ನ ಪ್ರಾಥಮಿಕ ಮೂಲವಾಗಿಯೇ ಮುಂದುವರಿದಿದ್ದು, ಗ್ರಾಮೀಣ ಪ್ರದೇಶದಲ್ಲಿ ಅದರ ಪಾಲು ಶೇ 46 ಆಗಿದ್ದರೆ, ನಗರ ಪ್ರದೇಶದಲ್ಲಿ ಶೇ 39ರಷ್ಟು ಆಗಿದೆ. ಆದರೂ, ಒಟ್ಟಾರೆಯಾಗಿ ಜನ ಧಾನ್ಯಗಳ ಬಳಕೆಯನ್ನು ಕಡಿಮೆ ಮಾಡಿದ್ದು, ಗ್ರಾಮೀಣ ಭಾಗದಲ್ಲಿ ಶೇ 14ರಷ್ಟು ಇಳಿಕೆಯಾಗಿದ್ದರೆ, ನಗರ ಪ್ರದೇಶದಲ್ಲಿ ಶೇ 12ರಷ್ಟು ಇಳಿಕೆಯಾಗಿದೆ; ಮೊಟ್ಟೆ, ಮಾಂಸ, ಮೀನು, ಹಾಲು ಮತ್ತಿತರ ಆಹಾರ ಪದಾರ್ಥಗಳು ಧಾನ್ಯಗಳ ಕೊರತೆಯನ್ನು ತುಂಬಿವೆ.

ರಾಜ್ಯದಲ್ಲೂ ಅದೇ ಸ್ಥಿತಿ

ಕರ್ನಾಟಕ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲೂ ಒಟ್ಟಾರೆ ದೇಶದಲ್ಲಿ ಕಂಡು ಬರುವ ಚಿತ್ರಣವೇ ಇದೆ. ಕರ್ನಾಟಕದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪ್ರೊಟೀನ್ ಮತ್ತು ಕೊಬ್ಬಿನ ಅಂಶದ ಸೇವನೆ ಹೆಚ್ಚಾಗಿದೆ. 2009–10ರಿಂದ 2023–24ರ ನಡುವೆ ಗ್ರಾಮೀಣ ಭಾಗದಲ್ಲಿ ಪ್ರತಿ ವ್ಯಕ್ತಿ ದಿನದಲ್ಲಿ ಸೇವಿಸುವ ಸರಾಸರಿ ಪ್ರೊಟೀನ್ ಪ್ರಮಾಣ 8 ಗ್ರಾಂ ಹೆಚ್ಚಾಗಿದೆ. ನಗರ ಪ್ರದೇಶದಲ್ಲಿ 8.3 ಗ್ರಾಂ ಜಾಸ್ತಿಯಾಗಿದೆ.

ರಾಷ್ಟ್ರೀಯ ಮಟ್ಟದಲ್ಲಿ ಕಂಡು ಬಂದಂತೆ ರಾಜ್ಯದಲ್ಲೂ ಕೊಬ್ಬಿನ ಅಂಶ ಸೇವನೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. 14 ವರ್ಷಗಳಲ್ಲಿ ಗ್ರಾಮೀಣ ಭಾಗದಲ್ಲಿ ವ್ಯಕ್ತಿಯೊಬ್ಬರು ಒಂದು ದಿನದಲ್ಲಿ ಸೇವಿಸುವ ಸರಾಸರಿ ಕೊಬ್ಬಿನ ಅಂಶ 19.2 ಗ್ರಾಂ ಹೆಚ್ಚಾಗಿದೆ. ನಗರ ಪ್ರದೇಶದಲ್ಲಿ 19.9 ಗ್ರಾಂ ಏರಿಕೆ ಕಂಡಿದೆ.

ಪ್ರೊಟೀನ್ ಮೂಲದಲ್ಲಿ ಕೊಂಚ ವ್ಯತ್ಯಾಸವಾಗಿದೆ. ಧಾನ್ಯಗಳ ಜೊತೆ, ಇತರ ಆಹಾರ ವಸ್ತುಗಳು, ಮೊಟ್ಟೆ, ಮೀನು, ಮಾಂಸ, ಹಾಲು ಮತ್ತು ಅದರ ಉತ್ಪನ್ನಗಳನ್ನು ಜನರು ಸೇವಿಸುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಈಗಲೂ ಧಾನ್ಯವೇ ಪ್ರೊಟೀನ್‌ನ ಪ್ರಧಾನ ಮೂಲ. ಪ್ರತಿ ದಿನ ವ್ಯಕ್ತಿಯೊಬ್ಬರು ಸೇವಿಸುವ ಸರಾಸರಿ ಪ್ರೊಟೀನ್‌ನಲ್ಲಿ ಶೇ 38ರಷ್ಟು ಪ್ರೊಟೀನ್ ಮೂಲ ಧಾನ್ಯಗಳೇ ಆಗಿವೆ. ನಗರದಲ್ಲಿ ಈ ಪ್ರಮಾಣ ಶೇ 33ರಷ್ಟಿದೆ.

ಆಹಾರ ಸೇವನೆಯಲ್ಲಿ ಅಸಮಾನತೆ

ನಗರ ಮತ್ತು ಗ್ರಾಮೀಣ ಪ್ರದೇಶಗಳು ಮತ್ತು ವಿವಿಧ ಆದಾಯ ಗುಂಪುಗಳ ನಡುವಿನ ಪೋಷಕಾಂಶಗಳ ಬಳಕೆಯಲ್ಲಿನ ನಿರಂತರ ಅಸಮಾನತೆಗೆ ವರದಿಯು ಕನ್ನಡಿ ಹಿಡಿದಿದೆ. ನಗರ ಮತ್ತು ಗ್ರಾಮೀಣ ಪ್ರದೇಶದ ಕನಿಷ್ಠ ಆದಾಯ ಹೊಂದಿರುವ ಶೇ 5ರಷ್ಟು ಮಂದಿ ಪ್ರತಿದಿನ ಕ್ರಮವಾಗಿ 1,696 ಕ್ಯಾಲೊರಿ ಮತ್ತು 1,688 ಕ್ಯಾಲೊರಿ ಸೇವನೆ ಮಾಡುತ್ತಿದ್ದಾರೆ. ಇದು ಆಹಾರ ತಜ್ಞರು ನಿಗದಿಪಡಿಸಿರುವ ಪ್ರತಿದಿನದ ಅಗತ್ಯ ಕ್ಯಾಲೊರಿ ಪ್ರಮಾಣಕ್ಕಿಂತ (2,000–3,000 ಕ್ಯಾಲೊರಿ) ಕಡಿಮೆ. ನಗರ ಪ್ರದೇಶದ, ಆದಾಯದಲ್ಲಿ ಅಗ್ರಸ್ಥಾನದಲ್ಲಿರುವ ಶೇ 1ರಷ್ಟು ಮಂದಿ ಪ್ರತಿದಿನ ಸರಾಸರಿ 3,092 ಕ್ಯಾಲೊರಿ ಸೇವನೆ ಮಾಡುತ್ತಿದ್ದಾರೆ.

ರಾಷ್ಟ್ರೀಯ

'ಅವಧಿ ಮುಗಿದ ಔಷಧಗಳನ್ನು ಶೌಚಾಲಯಕ್ಕೆ ಹಾಕಿ ಫ್ಲಷ್ ಮಾಡಿ'

ನವದೆಹಲಿ (ಪಿಟಿಐ): 'ಸಾಕುಪ್ರಾಣಿಗಳು ಹಾಗೂ ಜನರಿಗೆ ಹಾನಿ ಉಂಟುಮಾಡುವುದನ್ನು ತಪ್ಪಿಸಲು ಅವಧಿ ಮುಗಿದ ಅಥವಾ ಬಳಸದ 17 ಬಗೆಯ ಔಷಧಗಳನ್ನು ಕಸದ ಬುಟ್ಟಿಗೆ ಎಸೆಯುವ ಬದಲಾಗಿ ಅವುಗಳನ್ನು ಶೌಚಾಲಯಕ್ಕೆ ಹಾಕಿ ಫ್ಲಷ್ ಮಾಡಬೇಕು' ಎಂದು ಕೇಂದ್ರ ಔಷಧ ನಿಯಂತ್ರಣ ಗುಣಮಟ್ಟ ಸಂಸ್ಥೆ (ಸಿಡಿಎಸ್‌ಸಿಒ) ಸೂಚನೆ ನೀಡಿದೆ.

'ಇದರಲ್ಲಿ ಟ್ರಾಮಡಾಲ್, ಟಪೆಂಟಡಾಲ್, ಡಯಾಝೆಪಮ್, ಆಕ್ಸಿಕೊಡೊನ್ ಹಾಗೂ ಫೆಂಟಾನೈಲ್ ಔಷಧಗಳು ಹಾನಿಕರವಾಗಿದ್ದು, ವೈದ್ಯರ ಸಲಹೆ ಪಡೆಯದೆ ಅವನ್ನು ಸೇವಿಸಿದರೆ, ಪ್ರಾಣಹಾನಿ ಸಂಭವಿಸುವ ಸಾಧ್ಯತೆಯೂ ಇದೆ' ಎಂದು ತಿಳಿಸಿದೆ.

ಈ ಎಲ್ಲಾ ಔಷಧಗಳನ್ನು ಹೆಚ್ಚಾಗಿ ನೋವು ನಿವಾರಣೆಗೆ, ಒತ್ತಡ ನಿವಾರಣೆಗೆ ಅಥವಾ ಇನ್ನಿತರ ಪರಿಸ್ಥಿತಿಗಳಲ್ಲಿ ಬಳಸಲಾಗುತ್ತದೆ.

ಅವಧಿ ಮುಗಿದ ಹಾಗೂ ಬಳಸದ ಔಷಧಗಳನ್ನು ಸುರಕ್ಷಿತ ರೀತಿಯಲ್ಲಿ ಹಾಗೂ ಸರಿಯಾಗಿ ವಿಲೇವಾರಿ ಮಾಡುವುದು ಪರಿಸರ ಸಂರಕ್ಷಣೆ ಹಾಗೂ ಸಾರ್ವಜನಿಕರ ಆರೋಗ್ಯದ ನಿಟ್ಟಿನಲ್ಲಿ ಮಹತ್ವದ್ದಾಗಿದ್ದು, ಈ ಕುರಿತು ಮಾರ್ಗದರ್ಶಿಗಳನ್ನು ಬಿಡುಗಡೆಗೊಳಿಸಿದೆ.

'ಈ ಉತ್ಪನ್ನಗಳ ಗುಣಮಟ್ಟ, ಸುರಕ್ಷತೆ ಹಾಗೂ ಪರಿಣಾಮಕಾರಿ ತತ್ವವನ್ನು ಖಾತರಿಪಡಿಸಿ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಸಿಡಿಎಸ್‌ಸಿಒ ತಿಳಿಸಿದೆ.

ಖರ್ಗೆಯಿಂದ ರಾಷ್ಟ್ರಪತಿಗೆ ಅವಹೇಳನ: ಬಿಜೆಪಿ ಆರೋಪ

ಖರ್ಗೆ

ನವದೆಹಲಿ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವಹೇಳನ ಮಾಡಿದ್ದಾರೆ ಎಂದು ಬಿಜೆಪಿ ಮಂಗಳವಾರ ಆರೋಪಿಸಿದೆ. ಇಬ್ಬರ ವಿರುದ್ಧ ಅವರು ಆಕ್ಷೇಪಾರ್ಹ ಪದ ಬಳಸಿದ್ದು, ಅವರು ಮತ್ತು ಅವರ ಪಕ್ಷ ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು ಎಂದು ಅದು ಆಗ್ರಹಿಸಿದೆ.

ಸೋಮವಾರ ಛತ್ತೀಸಗಢದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಖರ್ಗೆ ಅವರು, ಮುರ್ಮು ಮತ್ತು ಕೋವಿಂದ್ ಅವರ ಹೆಸರುಗಳನ್ನು ತಪ್ಪಾಗಿ ಉಚ್ಚರಿಸಿದ್ದರು. ಆದಾಗ್ಯೂ, ಅವರು ತಕ್ಷಣವೆ ಅದನ್ನು ಸರಿಪಡಿಸಿಕೊಂಡಿದ್ದರು. 'ಮುರ್ಮು ಮತ್ತು ಕೋವಿಂದ್ ಅವರನ್ನು ರಾಷ್ಟ್ರಪತಿಗಳನ್ನಾಗಿ ಮಾಡಿದ್ದೇವೆ ಎಂದು ಬಿಜೆಪಿ ಯಾವಾಗಲೂ ಹೇಳುತ್ತಲೇ ಇರುತ್ತದೆ. ಆದರೆ, ನಮ್ಮ ಆಸ್ತಿಗಳು, ಕಾಡುಗಳು, ನೀರು ಮತ್ತು ನೆಲವನ್ನು ಕಸಿದುಕೊಳ್ಳಲು ಅವರನ್ನು ರಾಷ್ಟ್ರಪತಿ ಮಾಡಿದ್ದೀರಾ' ಎಂದು ಕೇಳಿದ್ದರು.

ಖರ್ಗೆ ಅವರ ಹೇಳಿಕೆ 'ಅವಹೇಳನಕಾರಿ ಮತ್ತು ಅಸಹ್ಯಕರ' ಎಂದು ಬಣ್ಣಿಸಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯ, 'ಇದು ಕಾಂಗ್ರೆಸ್‌ನ ಡಿಎನ್‌ಎಯಲ್ಲಿರುವ ದಲಿತ, ಆದಿವಾಸಿ ಮತ್ತು ಸಂವಿಧಾನ ವಿರೋಧಿ ಮನಃಸ್ಥಿತಿಯನ್ನು ತೋರಿಸುತ್ತದೆ' ಎಂದು ವಾಗ್ದಾಳಿ ನಡೆಸಿದ್ದಾರೆ.

'ನೀವು ದೊಡ್ಡದಾಗಿ ಮಾತನಾಡುತ್ತೀರಿ, ಕೋವಿಂದ್ ಅವರನ್ನು 'ಕೋವಿಡ್' ಎಂದು ಮತ್ತು ಮುರ್ಮು ಅವರನ್ನು 'ಮುರ್ಮಾ ಜಿ' ಎಂದು ಕರೆದಿರುವಿರಿ. ಭೂ ಮಾಫಿಯಾದ ಬಗ್ಗೆ ಮಾತನಾಡುತ್ತಾ ರಾಷ್ಟ್ರಪತಿ ಅವರ ಹೆಸರನ್ನು ಉಲ್ಲೇಖಿಸಿದ್ದೀರಿ' ಎಂದು ಅವರು ದೂರಿದ್ದಾರೆ.

ಹೇಮಂತ್‌ಗೆ ಜಾಮೀನು ನಿರಾಕರಣೆ

ಇಂದೋರ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಹಾಗೂ ಆರ್‌ಎಸ್‌ಎಸ್ ಮುಖಂಡರ ಕಾರ್ಟೂನ್‌ಗಳನ್ನು ರಚಿಸಿದ್ದನ್ನು ಆಕ್ಷೇಪಿಸಿರುವ ಪ್ರಕರಣದಲ್ಲಿ ಕಾರ್ಟೂನಿಸ್ಟ್ ಹೇಮಂತ್ ಮಾಳವೀಯ ಅವರಿಗೆ ಮಧ್ಯಪ್ರದೇಶ ಹೈಕೋರ್ಟ್ ಜಾಮೀನು ನಿರಾಕರಿಸಿದೆ.

ನಗರದ ಹವ್ಯಾಸಿ ಕಾರ್ಟೂನಿಸ್ಟ್ ಹೇಮಂತ್ ವಿರುದ್ಧ ಸ್ಥಳೀಯ ವಕೀಲ ಹಾಗೂ ಆರ್‌ಎಸ್‌ಎಸ್‌ನ ಕಾರ್ಯಕರ್ತ ವಿನಯ್ ಜೋಷಿ ನೀಡಿದ ದೂರು ಆಧರಿಸಿ ಲಸುಡಿಯಾ ಠಾಣೆಯಲ್ಲಿ ಮೇ ತಿಂಗಳಲ್ಲಿ ಪ್ರಕರಣ ದಾಖಲಾಗಿತ್ತು.

ಹೇಮಂತ್ ಮಾಳವೀಯ ಅವರು ತಮ್ಮ ಕಾರ್ಟೂನ್‌ನಲ್ಲಿ ಭಗವಾನ್ ಶಿವ, ಆರ್‌ಎಸ್‌ಎಸ್, ಮೋದಿ ವಿರುದ್ಧ ಆಕ್ಷೇಪಾರ್ಹ ಪದಗಳನ್ನು ಬರೆಯುವ ಮೂಲಕ ಹಿಂದೂಗಳ ಧಾರ್ಮಿಕ ನಂಬಿಕೆಗಳಿಗೆ ಗಾಸಿಯಾಗಿದ್ದು, ಕೋಮು ಸಾಮರಸ್ಯಕ್ಕೆ ಧಕ್ಕೆಯಾಗಿದೆ ಎಂದು ದೂರಿನಲ್ಲಿ ವಿನಯ್ ತಿಳಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಮಧ್ಯಪ್ರದೇಶ ಹೈಕೋರ್ಟ್‌ನ ಇಂದೋರ್ ಪೀಠದ ನ್ಯಾಯಮೂರ್ತಿ ಸುಬೋಧ್ ಅಭ್ಯಂಕರ್, 'ಇದು ಉದ್ದೇಶಪೂರ್ವಕವಾಗಿ ಜನರ ಧಾರ್ಮಿಕ ನಂಬಿಕೆಗಳನ್ನು ಗಾಸಿಗೊಳಿಸುವ ಪ್ರಯತ್ನವಾಗಿದ್ದು, ವಾಕ್ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ದುರುಪಯೋಗಪಡಿಸಿಕೊಂಡಿದ್ದಾರೆ' ಎಂದು ತಿಳಿಸಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರು ಕಟ್ಟಡವೊಂದರ ಮುಂದೆ ಅಧಿಕಾರಿಗಳು, ಭದ್ರತಾ ಸಿಬ್ಬಂದಿ ನಡುವೆ ನಿಂತಿರುವಾಗ, ಕೋತಿಯೊಂದು ಅವರ ಮೇಲೆ ಧುಮುಕುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಭಾರಿ ಭದ್ರತೆಯ ನಡುವೆಯೂ ಅಮಿತ್ ಶಾ ಅವರಿಗೆ ಕೋತಿ ಏನು ಮಾಡಿತು ನೋಡಿ ಎಂದು ಕೆಲವರು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಅದು ಸುಳ್ಳು ಸುದ್ದಿ.

ಇನ್‌ವಿಡ್ ಟೂಲ್ ಮೂಲಕ ವಿಡಿಯೊದ ಕೀಫ್ರೇಮ್‌ಗಳನ್ನು ಪ್ರತ್ಯೇಕಿಸಿ, ಒಂದು ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲನೆ ನಡೆಸಿದಾಗ, ಇದೇ ವಿಡಿಯೊ ಅನ್ನು ಹಲವರು ಇಂಥದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡಿತು. ಚಿತ್ರವನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, 'ದಿ ಫೈನಾನ್ಶಿಯಲ್ ಎಕ್ಸ್‌ಪ್ರೆಸ್'ನಲ್ಲಿ 2019ರ ಜೂನ್ 1ರಂದು ಪ್ರಕಟವಾಗಿದ್ದ ವರದಿಗೆ ಸಂಪರ್ಕ ಕಲ್ಪಿಸಿತು. ಅಮಿತ್ ಶಾ ಗೃಹಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರದ ವಿಡಿಯೊ ಅದು. ಆ ವರದಿಯಲ್ಲಿ ಇದೇ ವಿಡಿಯೊ ಇದ್ದರೂ, ಅದರಲ್ಲಿ ಕೋತಿ ಇಲ್ಲ. ವರದಿಯಲ್ಲಿ ಕೋತಿಯ ಪ್ರಸ್ತಾಪವೂ ಇಲ್ಲ. ವಿಡಿಯೊ ಅನ್ನು ಕೆಲವು ಎಐ ಪತ್ತೆ ಸಾಧನಗಳಿಂದ ವಿಶ್ಲೇಷಣೆಗೊಳಪಡಿಸಿದಾಗ, ಅದು ಎಐ ವಿಡಿಯೊ ಎನ್ನುವುದು ಖಚಿತವಾಯಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಹೇಗೋ ಏನೋ ಹೊಂದಿಕೊಂಡು

ನುಡಿ ಬೆಳಗು

ವಾಸುದೇವ ನಾಡಿಗ್

ಕೇರಂ ಕಾಯಿನ್‌ಗಳಿಗೂ ಲಗೋರಿ ಬಿಲ್ಲೆಗಳಿಗೂ ವ್ಯತ್ಯಾಸವಿದೆ. ಅವುಗಳದ್ದೇ ಆದ ನಡೆ, ಗುರಿ ಇವೆ. ಹಾಗಂತ ಲಗೋರಿ ಬಿಲ್ಲೆಗಳನ್ನು ಕೇರಂ ಬೋರ್ಡ್‌ಗೆ ಸುರಿಯಲಾಗದು.

ಇದು ಹೀಗೇ. ಇಲ್ಲಿ ಎರಡು ಬಣಗಳ ನಡುವೆ ಜಗಳ. 'ಲಗೋರಿ ಬಿಲ್ಲೆಗಳನ್ನು ನಾವೇ ತರ್ತೀವಿ' ಅಂತ ಅವರು. 'ಇಲ್ಲ ನಾವು' ಅಂತ ಇವರು. ಎರಡು ಬಣದವರಿಗೂ ಚೊಕ್ಕವಾದ ಬಿಲ್ಲೆಗಳನ್ನು ತಂದು ಜೋಡಿಸುವ ಹಂಬಲ. ಅಸಮವಾದ ಬಿಲ್ಲೆಗಳನ್ನು ಜೋಡಿಸಲು ಯಾರಿಗೂ ತಾಕತ್ತಿಲ್ಲ ಎಂಬ ಸವಾಲು ಬೇರೆ. ಒಬ್ಬ ಹೇಳಿದ: 'ಅದು ಹಾಗಲ್ಲ. ಆಡುವ ಮುನ್ನ ಬಿಲ್ಲೆಗಳನ್ನು ಅಲ್ಲೇ ಹುಡುಕಬೇಕು. ಸಿಕ್ಕಿದ್ದನ್ನು ಪೇರಿಸಿಡಬೇಕು'. ಅವನ ಮಾತು ಯಾರ ಗಮನಕ್ಕೆ ಬಾರದಷ್ಟು ಕ್ಯಾತೆಯಲ್ಲಿ ಎಲ್ಲರೂ ಮುಳುಗಿದ್ದರು.

ಕೊನೆಗೂ ಅಸಮ ಆಕಾರದ ಬಿಲ್ಲೆಗಳ ಜೊತೆಗೆ ಆಡಲು ನಿಂತರು. ಬಿಲ್ಲೆ ಜೋಡಿಸುವವನ ಬೆನ್ನಿಗೆ ಎದುರಾಳಿಯ ಯಾರಾದರೂ ಚೆಂಡಿನಿಂದ ಹೊಡೆದರೆ ಮತ್ತೆ ಸೋಲು. ಆಟ ಶುರು. ಅಸಮ ಆಕಾರದ ಬಿಲ್ಲೆಗಳು ಎಷ್ಟು ಜೋಡಿಸಿದರೂ ವಾಲಿ ವಾಲಿ ಮತ್ತೆ ಬೀಳುತ್ತಿದ್ದವು. ಇನ್ನೇನು ಕೊನೇ ಬಿಲ್ಲೆಯನ್ನು ಜೋಡಿಸಬೇಕು, ಅಷ್ಟರಲ್ಲಿ ಚೆಂಡು ಬಂದು ಬೆನ್ನಿಗೆ ತಾಕಿದರೆ ಮುಗೀತು, ಮತ್ತೆ ಸೋಲು ಮತ್ತೆ ಜೋಡಿಸು. ಇದೇ ಬಾಳು, ಇದೇ ಆಟ. ಸೋಲನ್ನು ಒಪ್ಪಿಕೊಳ್ಳದ ಹಟ ಮತ್ತು ಸೋಲಿಸಲೇಬೇಕು ಎನ್ನುವ ಸವಾಲುಗಳು ಎದುರಾಳಿ. ಎಲ್ಲ ಸುಸೂತ್ರ ಎನ್ನುವಷ್ಟರಲ್ಲಿ ಮತ್ತೊಂದು ಧುತ್ತನೆ ತಲೆ ಎತ್ತುತ್ತದೆ.

ಹಾಗೆ ನೋಡಿದರೆ ಕೇರಂ ಹಾಸು ಮತ್ತು ಕಾಯಿನ್ ಸಲೀಸು ಅಂತ ಅನಿಸಬಹುದು. ಇನ್ನು ಬಿಲ್ಲೆ ಗುಣಿಯಲಿ ಬೀಳಬೇಕು ಅನ್ನುವಷ್ಟರಲ್ಲಿ ಅಂಚನ್ನು ಮುಟ್ಟಿ ಹಿಂದಕ್ಕೋ ಅಥವಾ ಬೋರ್ಡ್ ಆಚೆಗೋ ಬೀಳುತ್ತದೆ. ಅಲ್ಲೂ ಅಸಮವಾದ ವ್ಯವಸ್ಥೆಯೇ. ಗೆಲ್ಲಬೇಕು ಅನ್ನುವ ಛಲ ಇದ್ದಾಗ ಕೇರಂನ ಗುಣಿ ಮತ್ತು ಕಾಯಿನ್‌ಗಳ ಅಳತೆಗಳು ಲೆಕ್ಕಕ್ಕೇ ಬಾರದು. ಆಟಕ್ಕೆ ಕೂತರೆ ಮುಗಿಯಿತು. ಬಾಳಿಗೆ ಬಂದಿದ್ದೇವೆ, ದಾಟಬೇಕು. ಅಸಮಗಳದ್ದೇ ಗೊಣಗಾಟವಾದರೆ ಗುರಿ ದೂರವಾಗುತ್ತಲೇ ಹೋಗುತ್ತದೆ.

ಕ್ರಮಿಸುವ ದಾರಿ ನಯವಾಗೇ ಇರಲಿ, ಒರಟೇ ಇರಲಿ ಸವಾಲುಗಳಂತೂ ತಪ್ಪಿದ್ದಲ್ಲ. ಲಗೋರಿಯ ಒರಟು ಬಿಲ್ಲೆ ಕೇರಂ ಆಗದು. ಕೇರಂನ ನಯವಾದ ಕಾಯಿನ್ ಲಗೋರಿಗೆ ಒಗ್ಗದು. ಒಗ್ಗದವುಗಳನ್ನು ಮಣಿಸಿ ದಕ್ಕಿಸಿಕೊಂಡಾಗಲೇ ಬಾಳು ಸೊಗಸು. ❖

ಗುಂಡಣ್ಣ

ಪದಬಂಧ 6098

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ತುಂಬಾ ಹದಗೆಟ್ಟ ಸ್ಥಿತಿ (3)
3.ಅಪೂರ್ವ ದಾಖಲೆ (3)
4.ಗಮನವಿಟ್ಟು ವೀಕ್ಷಿಸಿರುವ ಅಂಬರ (3)
6.ಕಾರನ್ನೇರಿದವನ ಕೆಲಸವೆಲ್ಲಾ ಬೇಕಾಬಿಟ್ಟಿ! (4)
8. ಉಚಿತವಾದರೂ ಯತಿಗೆ ಅನುಗುಣವಾಗಿ! (4)
10.ಸ್ವರಚನೆಯಲ್ಲಿರುವ ನಾದ (2)
11.ಸಂಕಟದಿಂದ ಕಟ್ಟುವ ತೆರಿಗೆ (2)
12.ತರಂಗದಂತಿರುವ ಒಳಮನಸ್ಸು (4)
14.ಹರಿಯನ್ನು ನೆನೆದು ನಡೆಸಿದ ದೋಣಿ (4)
15.ದಾವಣಿ ಧರಿಸಿ ಹೇಳಿದ ಜನಪದ ಹಾಡು (3)
16.ಗೊರಟೆಯಲ್ಲ! ಹಣ್ಣಿನ ಮೇಲುಹೊದಿಕೆ (3)
17.ಇರುವೆ ಜಾತಿಯ ಹುಳು (3)

ಮೇಲಿಂದ ಕೆಳಕ್ಕೆ

2.ನರನು ಪ್ರವೇಶಿಸಿರುವ ಪಟ್ಟಣ (3)
3.ನಯವಾಗಿ ತೋರುವ ನಮ್ರತೆ (3)
5.ದೂರನ್ನು ತರುತ್ತಿರುವ ರಾಯಭಾರಿ (2)
7.ಚಾಕಚಕ್ಯತೆಯಿಂದ ಕೆಲಸ ಮಾಡುವ ಆಳು (3)
9.ಚೀಲ ಸಿಕ್ಕಿಸಿದ ಬಾಗಿಲಿನ ಕೊಂಡಿ (3)
10. ತನಗೆ ತಾನು ಮಾತಾಡಿಕೊಳ್ಳುವುದು (3)
11.ವಂದರಿ ಹಿಡಿದಿರುವ ಚಲುವೆ (3)
12.ಅಂಬುಧಿಗೆ ಬಿದ್ದಿರುವ ಬಾಣ (2)
13.ಲಾಗ ಹಾಕುವಾಗ ಈ ಗದ್ದಲವೇ? (3)
14.ಹೆಣ್ಣಿಗೆ ಬೇಕಾದ ಬಾಚಣಿಕೆ (3)

6097 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಟಕಾರ 3.ಉಪವಾಸ
5.ಕರ 6.ಅನುಮತಿ
8.ತಾತಾ 9.ಉಮೇದು
10.ವಧು 11.ವನವಾಸ
12.ಮಂಗ 14.ನದೀತೀರ
15.ಬರಖಾಸ್ತು

ಮೇಲಿಂದ ಕೆಳಕ್ಕೆ:
1.ಪತ್ನಿ 2.ಕಾತರ 4.ಸದ್ಗತಿ
5.ಕರತಾಡನ 6.ಆಮದು
7.ಮದುವಣಗಿ 9.ಉಲ್ಲಾಸ
11.ವದನ 12.ಮಂದಿರ
13.ಸುಸ್ತು

ಸುಡೊಕು 6482

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7				1			8	2
	3	6	8		9	5		7
4			7				9	
	7							8
		4	9	3	8		7	1
8		1						
	8						4	
1		2		8		7		3
	4		1		7		2	

6481 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

09 ಜುಲೈ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಚತುರ್ದಶಿ ಗಂ. 25-37 **ನಕ್ಷತ್ರ:** ಮೂಲ ಗಂ. 28-50 **ಯೋಗ:** ಬ್ರಹ್ಮ ಗಂ. 22-09 **ಕರಣ:** ಗರ ಗಂ. 13-12, ಮಿಥುನ ಮಾಸದ 25 ನೇ ದಿನ. **ಮಳೆ ನಕ್ಷತ್ರ:** ಪುನರ್ವಸು 1 ನೇ ಪಾದ. **ರಾಹುಕಾಲ:** ಮಧ್ಯಾಹ್ನ 12-00 – 01-30, **ಸೂರ್ಯೋದಯ:** 06-13 **ಸೂರ್ಯಾಸ್ತ:** 06-58, **ಮುಸ್ಲಿಂ ದಿನಾಂಕ:** 13 ಮೊಹರಮ್, **ಅದೃಷ್ಟ ಸಂಖ್ಯೆ:** 5, 8

ಮೇಷ: ಆಸ್ತಿಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳು ಬಹಿರಂಗಗೊಂಡು ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ರಾಜಕೀಯ ವ್ಯಕ್ತಿಗಳಿಗೆ ದುರಹಂಕಾರಿ ಎನ್ನುವ ಪಟ್ಟ ಸಿಗಲಿದೆ.

ವೃಷಭ: ಪ್ರಮುಖ ಕೆಲಸವು ಸಂಗಡಿಗರ ಸಹಾಯದಿಂದ ಅನಾಯಾಸವಾಗಿ ಪೂರ್ಣಗೊಳ್ಳುವುದು. ಕುಟುಂಬದವರೊಂದಿಗೆ ಸಂತೋಷದಿಂದ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡುವಿರಿ. ಕಾಗದಪತ್ರಗಳ ನಿರ್ವಹಣೆಯಲ್ಲಿ ಎಚ್ಚರವಹಿಸಿ.

ಮಿಥುನ: ಸೋಲು ನಿಮ್ಮನ್ನು ಬಾಧಿಸುತ್ತಿದ್ದರೂ, ಹೊಸತನದಲ್ಲಿ ಜಯ ಕಾಣುವಿರಿ. ವೈವಾಹಿಕ ಜೀವನದಲ್ಲಿ ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆಂದು ತೀರ್ಮಾನಿಸಿದ್ದರೂ, ಸುಲಭವಾಗಿ ನಡೆಯುವುದಿಲ್ಲ.

ಕರ್ಕಾಟಕ: ಕಚೇರಿಯಲ್ಲಿ ವಿಶೇಷ ಗೌರವ ದೊರೆಯಲಿದೆ. ಕಾನೂನು ಪಂಡಿತರಿಗೆ ಬೇಡಿಕೆ ಇದ್ದು ಆದಾಯ ಹೆಚ್ಚುತ್ತದೆ. ಔದ್ಯೋಗಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ದೊರೆಯಲಿದೆ.

ಸಿಂಹ: ಸಮಾಜಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವವರಿಗೆ ಅಪಪ್ರಚಾರದ ಜತೆಗೆ ಅಗೌರವಗಳು ಪ್ರಾಪ್ತಿಯಾಗಬಹುದು. ವಸ್ತ್ರ ವಿನ್ಯಾಸಕಾರರಿಗೆ ಅವಕಾಶಗಳು ದೊರೆಯಲಿವೆ.

ಕನ್ಯಾ: ಬದುಕಿನಲ್ಲಿ ನೆಲೆ ನಿಂತ ನೆಮ್ಮದಿ ಸಿಗಲಿದೆ. ಬಾಲ್ಯದಲ್ಲಿ ಕಲಿತ ಅಥವಾ ತಿಳಿದುಕೊಂಡಿದ್ದ ಕೆಲ ವಿಷಯಗಳು ಉಪಯೋಗಕ್ಕೆ ಬರಲಿವೆ. ಮನಸ್ಸಿನ ಉದ್ವೇಗ ಕಡಿಮೆ ಮಾಡಿಕೊಳ್ಳಲು ದೇವರ ಧ್ಯಾನ ಮಾಡಿರಿ.

ತುಲಾ: ದೈವಾನುಗ್ರಹದಿಂದ ಸಾಹಸ ಕಾರ್ಯಗಳು ಕೈಗೂಡಿ ಬಹುಮಟ್ಟಿಗೆ ನಿರೀಕ್ಷಿತ ಫಲ ಲಭಿಸಲಿದೆ. ಬರುವ ಅವಕಾಶಗಳನ್ನು ನಿಮ್ಮತ್ತ ತಿರುಗಿಸಿಕೊಂಡು ಸದುಪಯೋಗ ಪಡೆದುಕೊಳ್ಳುವುದು ನಿಮ್ಮ ಕೈಗೆ ಬಿಟ್ಟ ವಿಷಯಗಳಾಗಿರುತ್ತದೆ.

ವೃಶ್ಚಿಕ: ನಿರುದ್ಯೋಗಿಗಳಿಗೆ ಹಂಗಾಮಿ ನೌಕರಿ ದೊರೆಯುವುದು. ಸಮಾರಂಭಗಳಲ್ಲಿ ಮುಂದಾಳತ್ವ ವಹಿಸಿ ಕೀರ್ತಿ ಗೌರವ ಪಡೆದುಕೊಳ್ಳುವಿರಿ. ರಾಜಕೀಯದಲ್ಲಿ ಉತ್ತಮ ಭವಿಷ್ಯವಿದೆ.

ಧನು: ಮನುಷ್ಯ ಪ್ರಯತ್ನದ ಜತೆಯಲ್ಲಿ ದೇವರ ಕೃಪೆಗೆ ಪಾತ್ರರಾಗುವ ರೀತಿಯಲ್ಲಿ ನಡೆದುಕೊಂಡಾಗ ಸಂಘ ಸಂಸ್ಥೆಯಲ್ಲಿ ಸ್ಥಾನಮಾನ ಲಭ್ಯ. ತಂದೆ–ತಾಯಿ ಅಥವಾ ಹಿರಿಯರ ಆರೋಗ್ಯ ಉತ್ತಮವಾಗಿರುವುದು.

ಮಕರ: ಸ್ವಯಂಕೃತ ಅಪರಾಧದಿಂದ ಜೀವನದಲ್ಲಿ ಉಲ್ಲಾಸ ಕಳೆದುಕೊಳ್ಳುವ ಸಮಯ ಎದುರಾಗಲಿದೆ. ಕಲ್ಲಿನ ಅಥವಾ ಟೈಲ್ಸ್ ಕೆಲಸ ಮಾಡುವವರು ಜಾಗ್ರತೆ ವಹಿಸಿ. ರಾಜಕೀಯ ವ್ಯಕ್ತಿಗಳ ಹಿಂದೆ ತಿರುಗುವುದು ವ್ಯರ್ಥ.

ಕುಂಭ: ಕಾರ್ಯದೊತ್ತಡದ ನಡುವೆ ಕುಟುಂಬದ ಸಮಸ್ಯೆಯತ್ತ ಗಮನ ನೀಡಿ. ದಾಂಪತ್ಯದಲ್ಲಿ ಅನ್ಯೋನ್ಯತೆ ಕಾಪಾಡಿಕೊಳ್ಳುವುದು ಜವಾಬ್ದಾರಿಯಾಗಿರುತ್ತದೆ. ಗಣಿತಜ್ಞ, ಸಂಗೀತಗಾರರಿಗೆ ಪ್ರತಿಭಾ ಪ್ರದರ್ಶನಕ್ಕೆ ಅವಕಾಶಗಳು ಸಿಗಲಿವೆ.

ಮೀನ: ಸಂಚರಿಸುವಾಗ ಮಾರ್ಗಮಧ್ಯದಲ್ಲಿ ದಂಡ ಕಟ್ಟುವಂಥ ತಪ್ಪುಗಳು ನಡೆಯಬಹುದು. ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಮೇಲುಗೈ ಸಾಧಿಸುವಿರಿ. ಖರ್ಚುಗಳಿಗೆ ತಕ್ಕಂತೆ ಆದಾಯವಿರಲಿದೆ.

ವಿನಿಮಯ ದರ: ಡಾಲರ್ 85.73 | ಪೌಂಡ್ 116.48 | ಯುರೊ 100.62 | ಯೆನ್ (100ಕ್ಕೆ) 58

ಷೇರುಪೇಟೆ ವಹಿವಾಟು: ಹಿಂದಿನ ಅಂತ್ಯ 83,442 | ಇಂದಿನ ಅಂತ್ಯ 83,712 | 270

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,461
ಇಂದಿನ ಅಂತ್ಯ:	25,522
ದಿನದ ಗರಿಷ್ಠ:	25,548
	61

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹620
12 ಕ್ಕೆ	₹80
ಮೈಸೂರು: 100 ಕ್ಕೆ	₹625

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)	
ದೊಡ್ಡ	₹1500-2000
ಮಧ್ಯಮ	₹1000-1500
ಸಣ್ಣ	₹500-1000

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹228-562
ದ್ವಿತಳಿ (ಬಿ.ವಿ)	₹411-688

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್‌-4	₹200
ಆರ್‌ಎಸ್‌ಎಸ್‌-5	₹194
ಗುಡ್ ಲಾಟ್	₹183

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1405 (1405)
ಸೋಯಾ (ರಿಫೈನ್ಡ್)	₹1210 (1200)
ಸೂರ್ಯಕಾಂತಿ (ರಿಫೈನ್ಡ್)	₹1350 (1350)
ಪಾಮೋಲಿನ್	₹1170 (1170)

ಐಫೋನ್ ತಯಾರಿಕೆ ನಿರ್ವಿಘ್ನ

ಸ್ವದೇಶಕ್ಕೆ ವಾಪಸಾದ ಚೀನಾ ತಂತ್ರಜ್ಞರು, ನಿಗದಿಯಂತೆಯೇ ಐಫೋನ್ ಉತ್ಪಾದನೆ

ನವದೆಹಲಿ (ಪಿಟಿಐ): ಆ್ಯಪಲ್ ಕಂಪನಿಗೆ ಸ್ಮಾರ್ಟ್‌ಫೋನ್‌ಗಳನ್ನು ತಯಾರಿಸಿ ಕೊಡುವ ಘಟಕದಿಂದ ಚೀನಾದ ತಂತ್ರಜ್ಞರು ವಾಪಸಾಗುತ್ತಿರುವುದು, 'ಐಫೋನ್ 17' ಉತ್ಪಾದನೆಯ ಮೇಲೆ ಕೆಟ್ಟ ಪರಿಣಾಮ ಬೀರುವುದಿಲ್ಲ ಎಂದು ಮೂಲಗಳು ಹೇಳಿವೆ.

ಭಾರತದಲ್ಲಿ ತಯಾರಿಕೆ ಹೆಚ್ಚು ಮಾಡುವ ಆ್ಯಪಲ್ ಕಂಪನಿಯ ಯೋಜನೆಯು ಅಂದುಕೊಂಡ ರೀತಿಯಲ್ಲೇ ಮುನ್ನಡೆಯುತ್ತಿದೆ ಎಂದು ಮೂಲಗಳು ಖಚಿತಪಡಿಸಿವೆ.

ಐಫೋನ್‌ಗಳ ತಯಾರಿಕೆಯಲ್ಲಿ ಬಹಳ ಅಗತ್ಯವಾಗಿರುವ ಕೆಲವು ಬಂಡವಾಳ ಸರಕುಗಳನ್ನು ಚೀನಾದಿಂದ ತರಿಸಿಕೊಳ್ಳುವುದು ಸುಲಭವಾಗುತ್ತಿಲ್ಲ ಎಂದು ಆ್ಯಪಲ್ ಉತ್ಪನ್ನಗಳನ್ನು ಭಾರತದಲ್ಲಿ ತಯಾರು ಮಾಡುವ ಫಾಕ್ಸ್‌ಕಾನ್ ಮತ್ತು ಟಾಟಾ ಎಲೆಕ್ಟ್ರಾನಿಕ್ಸ್ ಹೇಳಿರುವುದಾಗಿ ಮೂಲಗಳು ವಿವರಿಸಿವೆ.

'ಚೀನಾದ ತಂತ್ರಜ್ಞರು ಸ್ವದೇಶಕ್ಕೆ ಮರಳಿರುವುದು ಐಫೋನ್ ಉತ್ಪಾದನೆಯ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಿಲ್ಲ. ಐಫೋನ್ 17 ಭಾರತದಲ್ಲಿ ಅಂದುಕೊಂಡ ವೇಳಾಪಟ್ಟಿಯ ಪ್ರಕಾರವೇ ತಯಾರಾಗಲಿದೆ' ಎಂದು ಬಲ್ಲ ಮೂಲಗಳು ಹೇಳಿವೆ.

ಈ ವಿಚಾರವಾಗಿ ಆ್ಯಪಲ್, ಫಾಕ್ಸ್‌ಕಾನ್ ಮತ್ತು ಟಾಟಾ ಎಲೆಕ್ಟ್ರಾನಿಕ್ಸ್ ಕಡೆಯಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಫಾಕ್ಸ್‌ಕಾನ್ ಇಂಡಿಯಾ ಘಟಕದಲ್ಲಿ ಕೆಲಸ ಮಾಡುತ್ತಿದ್ದ ಚೀನಾದ ತಂತ್ರಜ್ಞರಲ್ಲಿ ಹಲವರು ಕಳೆದ ಎರಡು ತಿಂಗಳಲ್ಲಿ ಸ್ವದೇಶಕ್ಕೆ ವಾಪಸಾಗಿದ್ದಾರೆ ಎಂದು ಮೂಲಗಳನ್ನು ಉಲ್ಲೇಖಿಸಿ ವರದಿಗಳು ಹೇಳಿವೆ. ಈ ತಂತ್ರಜ್ಞರು ಐಫೋನ್ ಉತ್ಪಾದನೆಯ ವಿವಿಧ ಪ್ರಕ್ರಿಯೆಗಳಲ್ಲಿ ಭಾಗಿಯಾಗುತ್ತಿದ್ದರು.

ಐಫೋನ್ ತಯಾರಿಕೆಗೆ ಚೀನಾದಿಂದ ಬಂಡವಾಳ ಸರಕುಗಳ ಪೂರೈಕೆ ಕೂಡ ಉತ್ತಮಗೊಂಡಿದೆ ಎಂದು ಮೂಲವೊಂದು ತಿಳಿಸಿದೆ. 'ಬಂಡವಾಳ ಸರಕು ಪೂರೈಕೆ ಉತ್ತಮಗೊಂಡಿರುವ ಕಾರಣದಿಂದಾಗಿ ಭಾರತದಲ್ಲಿ ಐಫೋನ್ ತಯಾರಿಕೆಗೆ ಯಾವುದೇ ಸಮಸ್ಯೆ ಇಲ್ಲ' ಎಂದು ಮೂಲವು ಹೇಳಿದೆ.

ಆ್ಯಪಲ್ ಕಂಪನಿಯು 2024–25ನೇ ಆರ್ಥಿಕ ವರ್ಷದಲ್ಲಿ ಭಾರತದಲ್ಲಿ ಗರಿಷ್ಠ 4 ಕೋಟಿ ಐಫೋನ್‌ಗಳನ್ನು ತಯಾರಿಸಿತ್ತು. ಈ ವರ್ಷ ತಯಾರಿಕೆಯನ್ನು 6 ಕೋಟಿಗೆ ಹೆಚ್ಚಿಸುವ ಉದ್ದೇಶವು ಕಂಪನಿಗೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆ್ಯಪಲ್‌ನ ವಿವಿಧ ಉತ್ಪನ್ನಗಳ ತಯಾರಿಕೆಯ ಪ್ರಕ್ರಿಯೆಯು ಭಾರತದಲ್ಲಿ 2 ಲಕ್ಷ ಮಂದಿಗೆ ಉದ್ಯೋಗ ನೀಡಿದೆ ಎಂಬ ಅಂದಾಜು ಇದೆ.

ಇಪಿಎಫ್‌ಒ: ವಾರದೊಳಗೆ ಬಡ್ಡಿ ಪಾವತಿ

ನವದೆಹಲಿ (ಪಿಟಿಐ): ನೌಕರರ ಭವಿಷ್ಯನಿಧಿ ಸಂಘಟನೆಯು (ಇಪಿಎಫ್‌ಒ) ತನ್ನ ಸದಸ್ಯರ ಖಾತೆಗಳಿಗೆ 2024–25ನೇ ಆರ್ಥಿಕ ವರ್ಷದ ಬಡ್ಡಿ ಪಾವತಿ ಮಾಡುವುದನ್ನು ಈ ವಾರದೊಳಗೆ ಪೂರ್ಣಗೊಳಿಸಲಿದೆ ಎಂದು ಕೇಂದ್ರ ಕಾರ್ಮಿಕ ಸಚಿವ ಮನಸುಖ್ ಮಾಂಡವೀಯ ಮಂಗಳವಾರ ಹೇಳಿದ್ದಾರೆ.

2024–25ನೇ ಸಾಲಿಗೆ ಪಿ.ಎಫ್ ಮೊತ್ತಕ್ಕೆ ಶೇ 8.25ರಷ್ಟು ಬಡ್ಡಿ ದರ ನಿಗದಿ ಮಾಡಲಾಗಿದೆ.

33.56 ಕೋಟಿ ಸದಸ್ಯರ ಪೈಕಿ, ಜುಲೈ 8ರ ವೇಳೆಗೆ 32.39 ಕೋಟಿ (ಶೇ 96.51ರಷ್ಟು) ಸದಸ್ಯರಿಗೆ ಬಡ್ಡಿ ಪಾವತಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ. 2023–24ರಲ್ಲೂ ಬಡ್ಡಿ ದರ ಶೇ 8.25 ಆಗಿತ್ತು. 2022–23ರಲ್ಲಿ ಶೇ 8.15ರಷ್ಟಿತ್ತು.

ನಿಶ್ಚಿತ ಆದಾಯದ ಕೆಲವು ಯೋಜನೆಗಳಿಗಿಂತ ಹೆಚ್ಚಿನ ಬಡ್ಡಿಯನ್ನು ಇಪಿಎಫ್‌ಒ ನೀಡುತ್ತಿದೆ.

ಅಡಿಕೆ ಧಾರಣೆ

ಕಾರ್ಕಳ	
ಹೊಸತು	25000-47500
ಹಳತು	30000-52500
ಶಿವಮೊಗ್ಗ	
ಬೆಟ್ಟೆ	46069-59509
ಗೊರಬಲು	20009-30511
ರಾಶಿ	40089-57599
ಸರಕು	49140-88796
ಸಿದ್ದಾಪುರ	
ಬಿಳಿಗೋಟು	24659-30699
ಚಾಲಿ	33269-40709
ಕೋಕ	16189-26599
ಕೆಂಪುಗೋಟು	21619-25900
ರಾಶಿ	41269-46899
ತಟ್ಟಿಬೆಟ್ಟೆ	28089-33099
ಶಿರಸಿ	
ಬೆಟ್ಟೆ	23599-35018
ಬಿಳಿಗೋಟು	16199-32523
ಚಾಲಿ	35899-42899
ಕೆಂಪುಗೋಟು	19299-22399
ರಾಶಿ	41099-46099
ಯಲ್ಲಾಪುರ	
ಅಪಿ	60899-60899
ಬಿಳಿಗೋಟು	16899-30699
ಚಾಲಿ	32023-41299
ಕೋಕ	7899-19809
ಕೆಂಪುಗೋಟು	17099-25799
ರಾಶಿ	4299-54869
ತಟ್ಟಿಬೆಟ್ಟೆ	28099-38099

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಶ್ರೀಮತಿ ಪದ್ಮಾವತಮ್ಮ
(ಲೇ ಶ್ರೀ ಗಂಗಾಧರಂ ರೆಡ್ಡಿರವರ ಧರ್ಮಪತ್ನಿ)
ಇವರು ದಿನಾಂಕ: 08.07.2025ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅಂತ್ಯ ಕ್ರಿಯೆಯನ್ನು ಇಂದು (09.07.2025) ಮಧ್ಯಾಹ್ನ 2.00 ಘಂಟೆಗೆ ನೆರವೇರಿಸಲಾಗುವುದು.
ಪ್ರಕಾಶನಗರ ಕ್ರೆಡಿಟ್ ಕೋ-ಆಫ್ ಸೊಸೈಟಿ ಲಿ.
ಪ್ರಕಾಶನಗರ, ಬೆಂಗಳೂರು
ನಿರ್ದೇಶಕರು/ಸಿಬ್ಬಂದಿ/ಸದಸ್ಯರು/ ಕುಟುಂಬ

ದ್ವಿತೀಯ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ವಿಜಯ
(ಬಾಲಕೃಷ್ಣ ಶೆಟ್ಟಿಯವರ ಧರ್ಮಪತ್ನಿ)
09-07-2023
ನಿನ್ನ ನೆನಪು ಸದಾ ಹಸಿರು, ನಿನ್ನ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಬೇಡುವ
ಬಾಲಕೃಷ್ಣ(ಪತಿ) ಕಿರಣ್(ಮಗ) ಕೀರ್ತಿ(ಮಗಳು)
ಬಾಣಸವಾಡಿ, ಬೆಂಗಳೂರು- 560043

27ನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನಗಲಿ ಇಂದಿಗೆ 27 ವರ್ಷಗಳಾದರೂ ನೀವು ನಮ್ಮ ಮನೆ ಮತ್ತು ಮನದಲ್ಲಿ ಹಚ್ಚಿದ ಹಣತೆಯಂತೆ ದಾರಿ ದೀಪವಾಗಿದ್ದೀರಿ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ...
ಪತಿ: ರಾಮಕೃಷ್ಣಪ್ಪ ಮತ್ತು ಮಕ್ಕಳು, ಆರ್. ಲಕ್ಷ್ಮಣಮೂರ್ತಿ, ವಕೀಲರು, ಸೊಸೆಯಂದಿರು, ಮೊಮ್ಮಕ್ಕಳು ಚರಣ್‌ಗ್ರೂಪ್ಸ್ ಮತ್ತು ಶ್ರೀಮತಿ ಜಯಮ್ಮ ಚಾರಿಟಬಲ್ ಟ್ರಸ್ಟ್ (ರಿ) ದಾಸನಪುರ, ಬೆಂಗಳೂರು
ಶ್ರೀಮತಿ ಜಯಮ್ಮ
ನಿಧನ: 09-07-1998

ಮುಂಬೈ ಧಾರಣೆ (ಶೇಂಗಾ) 08-07-2025	
ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	7900-8000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1415 (1415)
ಒಂದು ವಾರದ ಡೆಲಿವರಿ	1410 (1410)
ಪಾಮ್ ವಾರದ ಡೆಲಿವರಿ	1168 (1168)
ಸೂರ್ಯಕಾಂತಿ ಎಣ್ಣೆ ಕಚ್ಚಾ	1260 (1260)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	96,500 (96,400)
ಬೆಳ್ಳಿ ಕೆ.ಜಿಗೆ	1,07,400 (1,06,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ನೊಬೆಲ್ ಶಾಂತಿ ಪುರಸ್ಕಾರಕ್ಕೆ ಟ್ರಂಪ್ ನಾಮನಿರ್ದೇಶನ: ನೆತನ್ಯಾಹು

ವಾಷಿಂಗ್ಟನ್(ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇರಾನ್ ವಿರುದ್ಧ ನಡೆಸಿದ ಸೇನಾ ಕಾರ್ಯಾಚರಣೆಯ ಯಶಸ್ಸನ್ನು ಸಂಭ್ರಮಿಸಿದ್ದಾರೆ. ಅಲ್ಲದೇ, ನೊಬೆಲ್ ಶಾಂತಿ ಪುರಸ್ಕಾರಕ್ಕೆ ಟ್ರಂಪ್ ಅವರ ಹೆಸರನ್ನು ನಾಮನಿರ್ದೇಶನ ಮಾಡುವುದಾಗಿ ನೆತನ್ಯಾಹು ಸೋಮವಾರ ಹೇಳಿದ್ದಾರೆ.

ಇರಾನ್ ವಿರುದ್ಧದ ಕಾರ್ಯಾಚರಣೆಯ ಗೆಲುವನ್ನು ಸಂಭ್ರಮಿಸುವ ಉದ್ದೇಶದಿಂದ ಶ್ವೇತಭವನದಲ್ಲಿ ಹಮ್ಮಿಕೊಂಡಿದ್ದ ಭೋಜನಕೂಟದಲ್ಲಿ ನೆತನ್ಯಾಹು ಅವರು ಈ ವಿಚಾರವನ್ನು ಟ್ರಂಪ್ ಅವರಿಗೆ ತಿಳಿಸಿದರು.

'ಟ್ರಂಪ್ ಅವರು ವಿಶ್ವದಲ್ಲಿ ಶಾಂತಿ ಸ್ಥಾಪನೆಗಾಗಿ ಶ್ರಮಿಸುತ್ತಿದ್ದು, ಒಂದಾದ ನಂತರ ಒಂದು ದೇಶ, ಪ್ರದೇಶಗಳಲ್ಲಿ ಶಾಂತಿ ಸ್ಥಾಪನೆಗೆ ಪ್ರಯತ್ನಿಸುತ್ತಿದ್ದಾರೆ. ಈ ಕಾರಣಕ್ಕೆ, ನೊಬೆಲ್ ಶಾಂತಿ ಪುರಸ್ಕಾರಕ್ಕೆ ಅವರ ನಾಮನಿರ್ದೇಶನ ಮಾಡುತ್ತಿದ್ದೇನೆ' ಎಂದ ನೆತನ್ಯಾಹು, ಈ ಕುರಿತು ನೊಬೆಲ್ ಸಮಿತಿಗೆ ತಾವು ಕಳುಹಿಸುತ್ತಿರುವ ಪತ್ರದ ಪ್ರತಿಯನ್ನು ಟ್ರಂಪ್ ಅವರಿಗೆ ಇದೇ ವೇಳೆ ನೀಡಿದರು.

ಗಾಜಾ ವಿರುದ್ಧ ಕಳೆದ ಒಂದೂವರೆ ವರ್ಷಕ್ಕೂ ಹೆಚ್ಚು ಕಾಲದಿಂದ ಇಸ್ರೇಲ್ ನಡೆಸುತ್ತಿರುವ ದಾಳಿ ಕುರಿತು ಚರ್ಚಿಸಿದ ಟ್ರಂಪ್ ಹಾಗೂ ನೆತನ್ಯಾಹು, 60 ದಿನಗಳ ಕದನ ವಿರಾಮ ಘೋಷಣೆ ಬಗ್ಗೆಯೂ ಮಾತುಕತೆ ನಡೆಸಿದರು.

ಹಮಾಸ್ ತಾನು ಒತ್ತೆಯಾಳಾಗಿ ಇರಿಸಿಕೊಂಡಿರುವ ಇಸ್ರೇಲ್ ಪ್ರಜೆಗಳನ್ನು ಶೀಘ್ರವೇ ಬಿಡುಗಡೆ ಮಾಡುವ ವಿಶ್ವಾಸವನ್ನು ಟ್ರಂಪ್ ವ್ಯಕ್ತಪಡಿಸಿದರು.

'ಹೊಸ ಶಕೆ': ಶ್ವೇತಭವನದಲ್ಲಿ ಭೋಜನಕೂಟ ಆರಂಭಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ್ ಟ್ರಂಪ್ ಹಾಗೂ ನೆತನ್ಯಾಹು,'ಇರಾನ್ ವಿರುದ್ಧ ನಡೆಸಿದ ಕಾರ್ಯಾಚರಣೆಗೆ ಸಿಕ್ಕ ಯಶಸ್ಸು ಪಶ್ಚಿಮ ಏಷ್ಯಾದಲ್ಲಿ ಹೊಸ ಶಕೆ ಆರಂಭಕ್ಕೆ ನಾಂದಿ ಹಾಡಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವೆಂಕಟರಮಣ ಜೋಶಿ, ಶಿರಸಿ

● **ಪ್ರಶ್ನೆ: ನಾನು ಮ್ಯೂಚುವಲ್ ಫಂಡ್ ಒಂದರಲ್ಲಿ ಹೂಡಿಕೆ ಮಾಡಿದ್ದೇನೆ. ಈಗ ಆ ಫಂಡ್‌ನಲ್ಲಿ ಲಾಭದ ಪ್ರಮಾಣ ಅಷ್ಟೇನೂ ಚೆನ್ನಾಗಿ ಇಲ್ಲ. ಇನ್ನೊಂದು ಫಂಡ್‌ನಲ್ಲಿ ಉತ್ತಮ ಪ್ರಮಾಣದಲ್ಲಿ ಲಾಭ ಸಿಗುತ್ತಿದ್ದು, ಅದಕ್ಕೆ ನನ್ನ ಹಣವನ್ನು ವರ್ಗಾಯಿಸಬೇಕಿದೆ. ಹೀಗೆ ಮಾಡುವಾಗ ತೆರಿಗೆಯನ್ನು ಯಾವ ರೀತಿಯಲ್ಲಿ ಲೆಕ್ಕ ಹಾಕಲಾಗುತ್ತದೆ? ಮ್ಯೂಚುವಲ್ ಫಂಡ್ ಸ್ವಿಚ್ ಎಂದು ಕರೆಯುವ ಈ ವ್ಯವಸ್ಥೆಯು ತೆರಿಗೆ ವಿನಾಯಿತಿಯ ವ್ಯಾಪ್ತಿಗೆ ಬರುತ್ತದೆಯೇ? ಮ್ಯೂಚುವಲ್ ಫಂಡ್‌ಗಳ ನಡುವೆ ಸ್ವಿಚ್ ಮಾಡಿದರೆ ತೆರಿಗೆ ಹೇಗೆ ಲೆಕ್ಕ ಹಾಕಲಾಗುತ್ತದೆ?**

ಉತ್ತರ: ನೀವು ಈಗಿರುವ ಮ್ಯೂಚುವಲ್ ಫಂಡ್‌ನಿಂದ ಮತ್ತೊಂದು ಫಂಡ್‌ಗೆ ಹಣವನ್ನು ನಿಮ್ಮ ಹೂಡಿಕೆ ತಂತ್ರದ ಭಾಗವಾಗಿ ವರ್ಗಾಯಿಸಲು ಯೋಚಿಸುತ್ತಿದ್ದೀರಿ. ಆದರೆ, ಈ ಪ್ರಕ್ರಿಯೆಯು ತೆರಿಗೆ ಸಂಬಂಧಿತ ಪರಿಣಾಮಗಳನ್ನು ಉಂಟು ಮಾಡುತ್ತದೆ ಎಂಬುದನ್ನು ಗಮನಿಸಿ. ಮ್ಯೂಚುವಲ್ ಫಂಡ್ ಸ್ವಿಚ್ ಎಂದರೆ, ನೀವು ಒಂದು ಫಂಡ್‌ನಲ್ಲಿನ ಹೂಡಿಕೆ ಮೊತ್ತ ಅಥವಾ ಯೂನಿಟ್‌ಗಳನ್ನು, ಇನ್ನೊಂದು ಫಂಡ್‌ಗೆ ವರ್ಗಾಯಿಸುವುದು ಅಥವಾ ಖರೀದಿಸುವುದಾಗಿದೆ. ಹೂಡಿಕೆದಾರರು ಒಟ್ಟಾರೆ ಮೊತ್ತವನ್ನು ಮ್ಯೂಚುವಲ್ ಫಂಡ್‌ಗಳಿಂದ ನಗದು ರೂಪದಲ್ಲಿ ಹಿಂಪಡೆಯಲಿಲ್ಲ ಎಂಬ ಕಾರಣಕ್ಕೆ ತೆರಿಗೆ ಇಲ್ಲ ಎಂದರ್ಥವಲ್ಲ. ಹೀಗಾಗಿ ಸ್ವಿಚ್ ಮಾಡಿದಾಗಲೂ, ಅದನ್ನು ತೆರಿಗೆ ಉದ್ದೇಶದಿಂದ ನಿಜವಾದ ಮಾರಾಟ ಎಂದೇ ಪರಿಗಣಿಸಲಾಗುತ್ತದೆ. ನೀವು ಅನೇಕ ಬಾರಿ ಖರೀದಿಸಿದ ಒಂದು ಫಂಡ್‌ನಿಂದ ಒಂದೇ ಬಾರಿಗೆ ಸ್ವಿಚ್ ಮಾಡಿದಾಗ ಅದರ ಖರೀದಿಯ ದಿನಾಂಕದ ಅನುಕ್ರಮದಲ್ಲಿ (ಫಸ್ಟ್ ಇನ್ ಫಸ್ಟ್ ಔಟ್) ಮಾರಾಟವಾಗಿದೆ ಎಂದು ಊಹಿಸಿ, ಆ ಕಾಲಾವಧಿಗೆ ಹೊಂದಿಕೊಂಡು ದೀರ್ಘಾವಧಿ ಅಥವಾ ಅಲ್ಪಾವಧಿ ಹೂಡಿಕೆಗಳೆಂದು ನಿರ್ಣಯಿಸಲಾಗುತ್ತದೆ.

ಪ್ರಸ್ತುತ ನಿಯಮದಂತೆ, ಈಕ್ವಿಟಿ ವಿಭಾಗದ ಅಲ್ಪಾವಧಿ ಹೂಡಿಕೆಗಳಿಗೆ (ಒಂದು ವರ್ಷಕ್ಕಿಂತ ಕಡಿಮೆ ಅವಧಿಯ ಹೂಡಿಕೆ) ಬರುವ ಲಾಭವನ್ನು ಶೇಕಡ 20ರ ದರದಲ್ಲಿ ತೆರಿಗೆಗೆ ಒಳಪಡಿಸಲಾಗುತ್ತದೆ. ಅದು ದೀರ್ಘಾವಧಿ ಲಾಭವಾದರೆ (ಒಂದು ವರ್ಷಕ್ಕಿಂತ ಅಧಿಕ ಅವಧಿಯ ಹೂಡಿಕೆ) ಲಾಭಕ್ಕೆ ಶೇ 12.5ರ ದರದಲ್ಲಿ ತೆರಿಗೆ ಇರುತ್ತದೆ. ವಾರ್ಷಿಕವಾಗಿ ₹1.25 ಲಕ್ಷದವರೆಗೆ ದೀರ್ಘಾವಧಿ ಲಾಭ ಇದ್ದಲ್ಲಿ ತೆರಿಗೆಯಿಂದ ವಿನಾಯಿತಿಯಿದ್ದು, ಅದಕ್ಕಿಂತ ಹೆಚ್ಚಿನ ಲಾಭದ ಮೇಲೆ ಶೇಕಡ 12.5ರ ದರದಲ್ಲಿ ತೆರಿಗೆ ವಿಧಿಸಲಾಗುತ್ತದೆ. ನೀವು ಸ್ವಿಚ್ ಮಾಡಿದ ಹೂಡಿಕೆಗಳ ಲಾಭ ಇದೇ ಮಿತಿಯೊಳಗಿದ್ದರೆ ತೆರಿಗೆ ಅನ್ವಯಿಸುವುದಿಲ್ಲ. ಮಾತ್ರವಲ್ಲದೆ, ನಷ್ಟವಾಗಿದ್ದ ಸಂದರ್ಭದಲ್ಲಿ, ಅದನ್ನು ಮುಂದಿನ 8 ವರ್ಷ ಮುಂದೂಡುವ ಮತ್ತು ಮುಂದೆ ಸಿಗುವ ಅದೇ ವರ್ಗದ ಲಾಭಗಳಿಗೆ ವಜಾ ಮಾಡುವ ಅವಕಾಶ ಇದೆ.

ಇನ್ನು ಈಕ್ವಿಟಿ ವಿಭಾಗವಲ್ಲದ ಯಾವುದೇ ದೀರ್ಘಾವಧಿ ಫಂಡ್‌ಗಳಾಗಿದ್ದರೆ, (24 ತಿಂಗಳಿಗಿಂತ ಹೆಚ್ಚಿನ ಹೂಡಿಕೆ ಅವಧಿ) ಶೇಕಡ 12.5ರ ತೆರಿಗೆ ಹಾಗೂ ಇದೇ ವರ್ಗದ ಅಲ್ಪಾವಧಿ ಹೂಡಿಕೆ ಫಂಡ್‌ಗಳಾಗಿದ್ದರೆ (24 ತಿಂಗಳಿಗಿಂತ ಕಡಿಮೆ ಹೂಡಿಕೆ ಅವಧಿ) ವೈಯಕ್ತಿಕ ತೆರಿಗೆ ದರಗಳು ಅನ್ವಯಿಸುತ್ತವೆ. ಹೀಗಾಗಿ ಈ ಅಂಶಗಳನ್ನು ಪರಿಗಣಿಸಿ, ಯಾವುದೇ ಅವಧಿಯಲ್ಲಿ ಸ್ವಿಚ್ ಮಾಡಿದರೂ ಲಾಭವನ್ನು ನಿಮ್ಮ ಆದಾಯದ ಭಾಗವೆಂದು ಪರಿಗಣಿಸಲಾಗುತ್ತದೆ. ಇನ್ನೂ ಒಂದು ಅಂಶ ಏನೆಂದರೆ, ಸೆಕ್ಷನ್ 112ಎ(6) ರಂತೆ, ಇಂತಹ ಹೂಡಿಕೆಗಳು ವಿಶೇಷ ತೆರಿಗೆ ದರದಲ್ಲಿ ಒಳಪಡುವುದರಿಂದ ಅಂತಹ ಆದಾಯಕ್ಕೆ ಪ್ರತ್ಯೇಕವಾಗಿ ತೆರಿಗೆ ಪಾವತಿಸಬೇಕಾಗುತ್ತದೆ. ಇದರ ಪರಿಣಾಮವಾಗಿ ತೆರಿಗೆದಾರರಿಗೆ ಅಂತಹ ಆದಾಯಕ್ಕೆ ಸೆಕ್ಷನ್ 87ಎ ಅಡಿ ಲಭ್ಯವಿರುವ ರಿಬೇಟ್ ಪಡೆಯಲು ಅವಕಾಶ ಇಲ್ಲ. ಅಂದರೆ, ಉದಾಹರಣೆಗೆ ಒಟ್ಟಾರೆ ಆದಾಯ ₹12 ಲಕ್ಷದೊಳಗಿದ್ದರೂ, ಬದಲಾದ ನಿಯಮದಂತೆ, ಬಂಡವಾಳ ಲಾಭಕ್ಕೆ ರಿಬೇಟ್ ನೀಡಲು ಅವಕಾಶವಿಲ್ಲ. ನಿಮ್ಮ ಫಂಡ್‌ಗಳ ನಿರ್ದಿಷ್ಟ ವರ್ಗ, ಹೂಡಿಕೆಯ ಅವಧಿ ಇತ್ಯಾದಿಗಳ ಮೇಲೆ ತೆರಿಗೆ ನಿರ್ಣಯವಾಗುವ ಕಾರಣ ಇನ್ನೂ ಹೆಚ್ಚಿನ ಮಾಹಿತಿಯೊಂದಿಗೆ ತೆರಿಗೆ ಸಲಹೆಗಾರರೊಡನೆ ಸಮಾಲೋಚಿಸಿ.

ರಾಘವೇಂದ್ರ ಎಸ್., ಕಲ್ಯಾಣ ನಗರ, ಬೆಂಗಳೂರು

● **ಪ್ರಶ್ನೆ: ನಾನು ಕಳೆದ ಕೆಲವು ವರ್ಷಗಳಿಂದ ಹೂಡಿಕೆ ಮಾಡುತ್ತಿದ್ದೇನೆ. ನಾನು ನನ್ನ ಸ್ವಂತ ಅನುಭವ, ಓದು ಹಾಗೂ ಸ್ನೇಹಿತರ ಜೊತೆಗಿನ ವಿಚಾರ ವಿನಿಮಯದ ಆಧಾರದಲ್ಲಿ ಹೂಡಿಕೆ ಮಾಡುತ್ತಾ ಬಂದಿದ್ದೇನೆ. ಇತ್ತೀಚೆಗೆ ಸೆಬಿ, ಸ್ಪೆಷಲೈಸ್ಡ್ ಇನ್ವೆಸ್ಟ್‌ಮೆಂಟ್ ಫಂಡ್‌ಗಳಲ್ಲಿ (ಎಸ್‌ಐಎಫ್) ಹೂಡಿಕೆಗೆ ಅನುಮತಿ ನೀಡಿದೆ. ಇದು ಮ್ಯೂಚುವಲ್ ಫಂಡ್ ಅಥವಾ ಷೇರು ಇತ್ಯಾದಿಗಳಲ್ಲಿ ನೇರ ಹೂಡಿಕೆ ಮಾಡುವುದಕ್ಕಿಂತ ಉತ್ತಮ ವಿಧಾನವೇ?**

ಉತ್ತರ: ನೀವು ಕಳೆದ ಹಲವು ವರ್ಷಗಳಿಂದ ಸ್ವಂತ ಅಧ್ಯಯನ, ಅನುಭವ ಹಾಗೂ ಸ್ನೇಹಿತರ ಸಲಹೆಯ ಆಧಾರದ ಮೇಲೆ ಹೂಡಿಕೆಯಲ್ಲಿ ತೊಡಗಿರುವುದರ ಜೊತೆಗೆ ಹೊಸ ಹೂಡಿಕೆ ಮಾರ್ಗಗಳನ್ನು ಅನ್ವೇಷಣೆ ಮಾಡುತ್ತಿರುವುದು ಉತ್ತಮ ನಡೆ. ಒಂದು ವರ್ಷದ ಹಿಂದೆ, ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಎಸ್‌ಐಎಫ್‌ಗೆ ಅನುಮತಿ ನೀಡಿದೆ. ಇದು ಹೂಡಿಕೆದಾರರ ಇನ್ನೊಂದು ವರ್ಗವನ್ನು ಸೃಷ್ಟಿ ಮಾಡುವುದರಲ್ಲಿ ಮಹತ್ವದ ಪಾತ್ರವಹಿಸಿದೆ. ಇದರಲ್ಲಿ ₹10 ಲಕ್ಷಕ್ಕೆ ಕಡಿಮೆ ಇಲ್ಲದಂತೆ ಆರಂಭಿಕ ಮೊತ್ತವನ್ನು ಹೂಡಿಕೆಗೆ ಲಭ್ಯವಿರುವಂತೆ ನೋಡಿಕೊಳ್ಳಬೇಕಾಗಿರುತ್ತದೆ. ಇದು ₹50 ಲಕ್ಷಕ್ಕೂ ಹೆಚ್ಚಿನ ಮೊತ್ತ ಹೂಡಿಕೆ ಮಾಡುವ ಕೆಲವು ಶ್ರೀಮಂತರು ತಮ್ಮ ಹೂಡಿಕೆಗಳನ್ನು ನಿರ್ವಹಿಸಲು ಅನುಸರಿಸುವ ಪೋರ್ಟ್‌ಫೋಲಿಯೊ ಮ್ಯಾನೇಜ್‌ಮೆಂಟ್ ಸರ್ವಿಸಸ್‌ಗಿಂತ (ಪಿಎಂಎಸ್) ಒಂದು ಹಂತ ಕೆಳಗಿನದು. ಅಂದರೆ, ಮಧ್ಯಮ ವರ್ಗದ ಹೂಡಿಕೆದಾರರೂ ಇಂತಹ ವಿಶಿಷ್ಟ ಹೂಡಿಕೆ ವಿಧಾನದಲ್ಲಿ ತೊಡಗಿಸಿಕೊಳ್ಳಬಹುದು.

ಇದರಲ್ಲಿ ಫಂಡ್ ನಿರ್ವಾಹಕರಿಗೆ ಕೇವಲ ಷೇರುಗಳಲ್ಲದೆ, ಬಾಂಡ್, ರೀಟ್ಸ್, ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್, ಫ್ಯೂಚರ್ಸ್ ಮತ್ತು ಆಪ್ಶನ್‌ಗಳಲ್ಲೂ ನಿಗದಿತ ಶೇಕಡವಾರು ಮೊತ್ತದ ಹೂಡಿಕೆಗೆ ಅವಕಾಶ ಮಾಡಿಕೊಡಲಾಗುತ್ತದೆ. ಇದು ಹೂಡಿಕೆದಾರರಿಗೆ ಒಟ್ಟಾರೆ ವಿಭಿನ್ನ ಮಟ್ಟದ ಆರ್ಥಿಕ ಅಪಾಯ ಇರುವ ಹಾಗೂ ಉತ್ತಮ ಲಾಭ ಗಳಿಕೆಗೂ ಅವಕಾಶ ಇರುವ ಒಂದು ವೇದಿಕೆಯನ್ನು ತೆರೆದಿಟ್ಟಿದೆ. ಇಲ್ಲಿ ಮಾಡಿದ ಹೂಡಿಕೆಯನ್ನು ನಿಗದಿತ ಸಮಯಕ್ಕೆ ಮೊದಲು ಹಿಂದಕ್ಕೆ ಪಡೆಯಲು ಅವಕಾಶ ಇಲ್ಲ. ಪೂರ್ವ ಮಾಹಿತಿಯಂತೆ ಹೂಡಿಕೆಯಿಂದ ಹಿನ್ನಡೆಯಲು ಅವಕಾಶ ಇರುತ್ತದೆ. ಹೀಗಾಗಿ, ನಮ್ಮ ಹೂಡಿಕೆಯ ಉದ್ದೇಶ ಹಾಗೂ ಅದರ ಅಗತ್ಯ ಏನೆಂಬುದು ಮುಖ್ಯವೇ ಹೊರತು ಪರಸ್ಪರ ತುಲನೆ ಅನಿವಾರ್ಯವಲ್ಲ. ಕಾರಣ, ಪ್ರತಿ ವರ್ಗದ ಹೂಡಿಕೆಗೂ ಅದರದ್ದೇ ಆದ ಗ್ರಾಹಕ ವರ್ಗ, ಅದಕ್ಕೆ ಸಂಬಂಧಿತ ಆರ್ಥಿಕ ಸಾಮ್ಯತೆ ಇರುವ ಜನರು ಇರುತ್ತಾರೆ. ಪ್ರಸ್ತುತ ಈ ಸ್ಪೆಷಲೈಸ್ಡ್ ಇನ್ವೆಸ್ಟ್‌ಮೆಂಟ್ ಫಂಡ್‌ಗಳು, ಮಧ್ಯಮ ವರ್ಗದ ಮಂದಿಗೆ ಉತ್ತಮ ಅವಕಾಶ ನೀಡುವಂತಿವೆ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಹುಥಿ ಬಂಡುಕೋರರ ದಾಳಿ: ಮೂವರ ಸಾವು

ದುಬೈ(ಎಪಿ): ಕೆಂಪು ಸಮುದ್ರದಲ್ಲಿ ಸಾಗುತ್ತಿದ್ದ ಸರಕು ಸಾಗಣೆ ಹಡಗಿನ ಮೇಲೆ ಯೆಮೆನ್‌ನ ಹುಥಿ ಬಂಡುಕೋರರು ದಾಳಿ ನಡೆಸಿದ್ದಾರೆ. ಈ ದಾಳಿಯಿಂದಾಗಿ ಹಡಗಿನ ಮೂವರು ಸಿಬ್ಬಂದಿ ಮೃತಪಟ್ಟು, ಇತರ ಇಬ್ಬರು ಗಾಯಗೊಂಡಿದ್ದಾರೆ ಎಂದು ಐರೋಪ್ಯ ಒಕ್ಕೂಟದ ನೌಕಾಪಡೆ ಮಂಗಳವಾರ ಹೇಳಿದೆ.

ಗ್ರೀಸ್ ಒಡೆತನದ 'ಎಟರ್ನಿಟಿ ಸಿ' ಹಡಗು ದಾಳಿಗೆ ಒಳಗಾಗಿದ್ದು, ಲೈಬಿರಿಯಾದಲ್ಲಿ ನೋಂದಣಿಯಾಗಿದೆ.

ವೀಸಾ ಮುಕ್ತ ಪ್ರವೇಶ 74 ದೇಶಗಳಿಗೆ ವಿಸ್ತರಣೆ

ವಾಷಿಂಗ್ಟನ್ (ಎಪಿ): ವೀಸಾ ನೀತಿಯನ್ನು ಸಡಿಲಗೊಳಿಸಿದ ಬಳಿಕ ಚೀನಾಕ್ಕೆ ಭೇಟಿ ನೀಡುತ್ತಿರುವ ವಿದೇಶಿ ಪ್ರವಾಸಿಗರ ಸಂಖ್ಯೆಯಲ್ಲಿ ತೀವ್ರ ಏರುಗತಿ ದಾಖಲಿಸಿದೆ. ಹೀಗಾಗಿ, ಯಾವುದೇ ವೀಸಾ ಇಲ್ಲದೇ, 30 ದಿನಗಳ ತನಕ ಚೀನಾಕ್ಕೆ ಭೇಟಿ ನೀಡುವ ಅವಕಾಶವನ್ನು 74 ದೇಶಗಳ ನಾಗರಿಕರಿಗೆ ಕಲ್ಪಿಸಿ ಚೀನಾ ಕ್ರಮ ಕೈಗೊಂಡಿದೆ.

'ಪ್ರವಾಸೋದ್ಯಮವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಚೀನಾ ಸರ್ಕಾರವು ವೀಸಾ ಮುಕ್ತ ಪ್ರವೇಶಾತಿಯನ್ನು ನಿಧಾನವಾಗಿ ಹೆಚ್ಚಿಸುತ್ತಿದೆ. 2024ರಲ್ಲಿ ವೀಸಾ ಇಲ್ಲದೆಯೇ, 2 ಕೋಟಿ ವಿದೇಶಿ ಪ್ರವಾಸಿಗರು ಚೀನಾಕ್ಕೆ ಭೇಟಿ ನೀಡಿದ್ದರು. ಈ ಹಿಂದಿನ ವರ್ಷಕ್ಕೆ ಹೋಲಿಸಿದರೆ, ದ್ವಿಗುಣಗೊಂಡಿದೆ' ಎಂದು ರಾಷ್ಟ್ರೀಯ ವಲಸೆ ಆಡಳಿತ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಮನೆ ಊಟದ ವೆಚ್ಚ ಏರಿಕೆ

ಮುಂಬೈ (ಪಿಟಿಐ): ಟೊಮೆಟೊ ಬೆಲೆಯಲ್ಲಿ ಹೆಚ್ಚಳ ಆದ ಪರಿಣಾಮವಾಗಿ ಮನೆ ಊಟದ ವೆಚ್ಚವು ಮೇ ತಿಂಗಳಿಗೆ ಹೋಲಿಸಿದರೆ ಜೂನ್ ತಿಂಗಳಲ್ಲಿ ಹೆಚ್ಚಳ ಆಗಿದೆ.

ಮನೆಯಲ್ಲಿ ಸಿದ್ಧಪಡಿಸುವ ಶಾಕಾಹಾರಿ ಊಟಕ್ಕೆ ಮೇ ತಿಂಗಳಲ್ಲಿ ಸರಾಸರಿ ₹26.2 ವೆಚ್ಚ ಆಗುತ್ತಿತ್ತು. ಇದು ಜೂನ್‌ನಲ್ಲಿ ₹27.1ಕ್ಕೆ ಏರಿಕೆ ಆಗಿದೆ. ಅಂದರೆ ಶೇ 3ರಷ್ಟು ಬೆಲೆ ಏರಿಕೆ ಕಂಡುಬಂದಿದೆ. ಇದೇ ಅವಧಿಯಲ್ಲಿ ಮಾಂಸಾಹಾರಿ ಊಟ ಸಿದ್ಧಪಡಿಸುವ ವೆಚ್ಚದಲ್ಲಿ ಶೇ 4ರಷ್ಟು ಹೆಚ್ಚಳ ಆಗಿದೆ ಎಂದು ವರದಿಯೊಂದು ಹೇಳಿದೆ.

ಮೇ ತಿಂಗಳಲ್ಲಿ ಮಾಂಸಾಹಾರಿ ಊಟವನ್ನು ಮನೆಯಲ್ಲಿ ಸಿದ್ಧಪಡಿಸಲು ₹52.6 ಬೇಕಾಗುತ್ತಿತ್ತು. ಅದು ಜೂನ್‌ನಲ್ಲಿ ₹54.8ಕ್ಕೆ ಹೆಚ್ಚಳವಾಗಿದೆ ಎಂದು ದೇಶಿ ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್ ಸಿದ್ಧಪಡಿಸಿರುವ 'ರೊಟ್ಟಿ, ಅನ್ನ, ಬೆಲೆ' ಹೆಸರಿನ ವರದಿಯಲ್ಲಿ ಹೇಳಲಾಗಿದೆ.

ಟೊಮೆಟೊ ಆವಕದಲ್ಲಿ ಶೇ 8ರಷ್ಟು ಇಳಿಕೆ ಕಂಡುಬಂದ ಪರಿಣಾಮವಾಗಿ ಅದರ ಬೆಲೆಯು ಶೇ 36ರಷ್ಟು ಹೆಚ್ಚಳ ಕಂಡಿತು ಎಂದು ಕ್ರಿಸಿಲ್ ಹೇಳಿದೆ. ಅಲ್ಲದೆ, ಆಲೂಗಡ್ಡೆ ಬೆಲೆಯಲ್ಲಿ ಶೇ 4ರಷ್ಟು ಏರಿಕೆ ಆಗಿದೆ. ಬ್ರಾಯ್ಲರ್ ಕೋಳಿ ಮಾಂಸದ ಬೆಲೆಯಲ್ಲಿ ಶೇ 5ರಷ್ಟು ಏರಿಕೆ ಆಗಿದೆ. ಇದು ಮಾಂಸಾಹಾರಿ ಊಟದ ವೆಚ್ಚ ಹೆಚ್ಚಾಗಲು ಕಾರಣವಾಗಿದೆ.

Together We Can
ಕೆನರಾ ಬ್ಯಾಂಕ್
Canara Bank
A Government of India Undertaking

ಪ್ರತಿಸುಂಕ ಆಗಸ್ಟ್ 1ರವರೆಗೆ ಇಲ್ಲ

ಒಂದನೇ ಪುಟದಿಂದ...

ಅಮೆರಿಕದ ಜೊತೆ ವಾಣಿಜ್ಯ ವಹಿವಾಟು ಹೊಂದಿರುವ ದೇಶಗಳಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಅವರು ಈ ಮೂಲಕ ಜುಲೈ 9ರವರೆಗೆ ಅವಕಾಶ ಕಲ್ಪಿಸಿದರು.

ಪ್ರತಿಸುಂಕ ವಿಧಿಸುವ ನಿರ್ಧಾರವು ಜುಲೈ 9ರ ಬದಲು ಆಗಸ್ಟ್ 1ರಿಂದ ಜಾರಿಗೆ ಬರಲಿದೆ ಎಂದು ಅಮೆರಿಕ ಹೇಳಿರುವುದು, ಆ ದೇಶವು ಬೇರೆ ಬೇರೆ ದೇಶಗಳ ಜೊತೆ ವ್ಯಾಪಾರ ಒಪ್ಪಂದದ ವಿಚಾರವಾಗಿ ರಚನಾತ್ಮಕ ಮಾತುಕತೆಗೆ ಸಿದ್ಧವಿದೆ ಎಂಬುದನ್ನು ಸೂಚಿಸುತ್ತಿದೆ ಎಂದು ರಫ್ತು ವಹಿವಾಟುದಾರರು ಅಭಿಪ್ರಾಯಪಟ್ಟಿದ್ದಾರೆ.

'ಪ್ರತಿಸುಂಕ ಜಾರಿ ಮುಂದೂಡಿಕೆ ಆಗಿರುವುದು ಮಾತುಕತೆಗಳಿಗೆ ಇನ್ನಷ್ಟು ಸಮಯಾವಕಾಶ ನೀಡಿದೆ. ಮಾತುಕತೆಗಳಲ್ಲಿ ಭಾಗಿ ಆಗಿರುವವರು ಪರಿಹಾರ ಕಾಣದ ವಿಚಾರಗಳನ್ನು ಇತ್ಯರ್ಥಪಡಿಸಿಕೊಳ್ಳಲು ಇದರಿಂದಾಗಿ ಸಹಾಯ ಆಗುತ್ತದೆ' ಎಂದು ಭಾರತೀಯ ರಫ್ತು ಸಂಘಟನೆಗಳ ಒಕ್ಕೂಟದ (ಎಫ್‌ಐಇಒ) ಮಹಾನಿರ್ದೇಶಕ ಅಜಯ್ ಸಹಾಯ್ ಹೇಳಿದ್ದಾರೆ.

> **ಡೊನಾಲ್ಡ್ ಟ್ರಂಪ್ ಅವರು ಏನು ಮಾಡುತ್ತಾರೆ ಎಂಬುದನ್ನು ಊಹಿಸುವುದು ಕಷ್ಟ. ಭಾರತವು ಹೊಸ ಮಾರುಕಟ್ಟೆಗಳನ್ನು ಹುಡುಕಿ, ರಫ್ತು ವಹಿವಾಟು ಹೆಚ್ಚು ಮಾಡಬೇಕು**
> **ಶರದ್ ಕುಮಾರ್ ಸರಾಫ್,** ಮುಂಬೈಯ ರಫ್ತುದಾರ

'ಭಾರತದೊಂದಿಗೆ ಒಪ್ಪಂದ: ಅಂತಿಮ ಹಂತ'

ಬ್ರಿಟನ್ ಮತ್ತು ಚೀನಾದೊಂದಿಗೆ ಈಗಾಗಲೇ ಒಪ್ಪಂದ ಮಾಡಿಕೊಂಡಿದ್ದೇವೆ. ಈಗ ಭಾರತದೊಂದಿಗೆ ಮಾಡಿಕೊಳ್ಳುತ್ತಿರುವ ವ್ಯಾಪಾರ ಒಪ್ಪಂದದ ಚರ್ಚೆಯು ಅಂತಿಮ ಹಂತದಲ್ಲಿದೆ. ಇತರೆ ದೇಶಗಳೊಂದಿಗೂ ಮಾತುಕತೆ ನಡೆಸಿದೆವು. ಆದರೆ, ಅವರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಇದಕ್ಕಾಗಿಯೇ ಪತ್ರ ಕಳುಹಿಸಿದೆವು. ನೀವು ನಮ್ಮೊಂದಿಗೆ ಆಟವಾಡಲು ಬಯಸಿದರೆ, ಅದಕ್ಕೆ ತಕ್ಕ ಬೆಲೆಯನ್ನು ನೀವು ತೆರಲೇಬೇಕಾಗುತ್ತದೆ

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Accounts & Finance

OFFICE ASSISTANTS
Microtex Energy P. Ltd is a leading battery manufacturing company. We invite applications from Fresh Graduates for the post of Office Assistants. Training will be provided across areas like Sales, HR, Accounts and Commercial Operations will be If you are looking fo a bright career with plenty of learning opportunities, please email your resume to
Please email your resume to
hrd@microtex.com

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, TVS,ಹಿಮಾಲಯಾ, ಬ್ರಿಟಾನಿಯಾಗಳಿಗೆ SSLC, PUC, Degree, ITI, Diplomaದವರು.18,000/-ದಿಂದ 86,000/-. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ14,000-18,000. 8951315839, 7022770052

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

ರಿಯಾಯಿತಿ ದರದಲ್ಲಿ 8/13/21 ದಿನಗಳ ಕಾಶಿ,ಗಯಾ ಪ್ರಯಾಗ್ ರಾಜ್ ಅಯೋಧ್ಯ ಪುರಿಜಗನ್ನಾಥ್ ಭುವನೇಶ್ವರ್ ಆಗ್ರಾ,ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯಮುನೋತ್ರಿ, ದೆಹಲಿ ಸೆಪ್ಟೆಂಬರ್ ಅಕ್ಟೋಬರ್ ತಿಂಗಳ ಪ್ರವಾಸಕ್ಕಾಗಿ ಜುಲೈ ತಿಂಗಳ 31ರ ಒಳಗೆ ಪೂರ್ತಿ ದರ ಪಾವತಿಸಿದವರಿಗೆ ಟ್ರಾನ್ಸ್‌ಪೋರ್ಟೇಶನಲ್ಲಿ 10% ರಿಯಾಯಿತಿ ಕೊಡಲಾಗುವುದು ಸಂಪರ್ಕಿಸಿ: ಶ್ರೀಸುಧಾ ಟ್ರಾವೆಲ್ಸ್ 8088826815 9019301300

11ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 7 ದಿನಗಳ ಲೇಲಡಾಕ್. 6 ದಿನಗಳ ಶ್ರೀಲಂಕಾ ಪ್ರವಾಸ. 18ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ. 11 ದಿನಗಳ ಕಾಂಬೋಡಿಯ ವಿಯೆಟ್ನಾಂ. 8ದಿನಗಳ ಮುಕ್ತಿನಾಥ ಪ್ರವಾಸ (ನೇಪಾಳ) 7 ದಿನಗಳ ನಾರ್ತ್ ಈಸ್ಟ್ ಸ್ಪೆಷಲ್ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9900099252 9900080793

1.9.2025 ಜೈಪುರ್, ಪುಷ್ಕರ್, ಜೈಸಲ್‌ಮೇರ್, ಜೋಧ್‌ಪುರ್, ಉದಯ್‌ಪುರ್, ಮೌಂಟ್‌ಅಬು 6.9.2025 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್8.9.2025 ಗುಜರಾತ್, ಮದ್ಯಪ್ರದೇಶ್ ಕರ್ನಾಟಕ ಹೆರಿಟೇಜ್ ಟೂರ್ಸ್.(ಹನುಮಂತನಗರ) 9845035349, 9482435755

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424
+91 9731810277 | +91 9900428036
*Conditions apply

ಫಿಡೆ ಗ್ರ್ಯಾಂಡ್ ಸ್ವಿಸ್ ಟೂರ್ನಿ: ಕಣದಲ್ಲಿ 172 ಮಂದಿ

ಅರ್ಜುನ್‌ಗೆ ಮೊದಲ ಶ್ರೇಯಾಂಕ


ಅರ್ಜುನ್


ಗುಕೇಶ್

ನವದೆಹಲಿ (ಪಿಟಿಐ): ಭಾರತದ ಚೆಸ್ ತಾರೆಗಳಾದ ಅರ್ಜುನ್ ಇರಿಗೇಶಿ ಮತ್ತು ಡಿ.ಗುಕೇಶ್ ಅವರು ಉಜ್ಬೇಕಿಸ್ತಾನದ ಸಮರ್‌ಖಂಡ್‌ನಲ್ಲಿ ಸೆ. 3 ರಿಂದ 16 ರವರೆಗೆ ನಡೆಯಲಿರುವ ನಾಲ್ಕನೇ ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯಲ್ಲಿ ಕ್ರಮವಾಗಿ ಮೊದಲ ಎರಡು ಶ್ರೇಯಾಂಕ ಪಡೆದಿದ್ದಾರೆ.

ಈ ಪ್ರತಿಷ್ಠಿತ ಟೂರ್ನಿಯ ಓಪನ್ ಮತ್ತು ಮಹಿಳಾ ವಿಭಾಗದಲ್ಲಿ ಮೊದಲ ಎರಡು ಸ್ಥಾನ ಪಡೆಯುವವರು ಮುಂದಿನ ವರ್ಷದ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯಲಿದ್ದಾರೆ. 2026ರ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಎಂಟು ಮಂದಿ ಆಡಲಿದ್ದು, ವಿಜೇತ ಆಟಗಾರ ವಿಶ್ವ ಚಾಂಪಿಯನ್‌ಗೆ ಚಾಲೆಂಜರ್ ಆಗಲಿದ್ದಾರೆ.

ಗ್ರ್ಯಾಂಡ್ ಸ್ವಿಸ್ ಟೂರ್ನಿಯಲ್ಲಿ ಆಡುವ ಆಟಗಾರ ಜುಲೈ 2024 ರಿಂದ ಜೂನ್ 2025ರ ಮಧ್ಯೆ 30ಕ್ಕಿಂತ ಹೆಚ್ಚು ಕ್ಲಾಸಿಕಲ್ ರೇಟೆಡ್ ಪಂದ್ಯಗಳನ್ನು ಆಡಿರಬೇಕು. ಮಾಜಿ ವಿಶ್ವ ಚಾಂಪಿಯನ್ನರಾದ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ವಿಶ್ವನಾಥನ್ ಆನಂದ್ ಹೀಗಾಗಿ ಆಡುತ್ತಿಲ್ಲ. ಮಾಜಿ ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ ಕೂಡ ಈ ಬಾರಿ ಆಡುತ್ತಿಲ್ಲ. ಈ ಹಿಂದಿನ ಮೂರು ಗ್ರ್ಯಾಂಡ್ ಸ್ವಿಸ್ ಟೂರ್ನಿಗಳಲ್ಲಿ ಆಡಿದ್ದ ಅಮೆರಿಕದ ಫ್ಯಾಬಿಯಾನೊ ಕರುವಾನ ಸಹ ಆಡುತ್ತಿಲ್ಲ. ಕರುವಾನ 2024ರ ಫಿಡೆ ಸರ್ಕಿಟ್ ವಿಜೇತರಾಗಿರುವ ಕಾರಣ ಈಗಾಗಲೇ ಕ್ಯಾಂಡಿಡೇಟ್ಸ್‌ನಲ್ಲಿ ಆಡುವ ಅರ್ಹತೆ ಸಂಪಾದಿಸಿ ಆಗಿದೆ.

ಇರಿಗೇಶಿ ಮೊದಲನೇ, ಗುಕೇಶ್ ಎರಡನೇ ಶ್ರೇಯಾಂಕ ಪಡೆದಿದ್ದಾರೆ. ಭಾರತದ ಇನ್ನೊಬ್ಬ ಪ್ರತಿಭಾವಂತ ಆಟಗಾರ ಪ್ರಜ್ಞಾನಂದ ನಾಲ್ಕನೇ ಶ್ರೇಯಾಂಕ ಗಳಿಸಿದ್ದಾರೆ.

ಆತಿಥೇಯ ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಮೂರನೇ ಹಾಗೂ ವಿಶ್ವದ ಎಂಟನೇ ಕ್ರಮಾಂಕದ ಆಟಗಾರ ಅಲಿರೇಝಾ ಫಿರೋಝ್‌ಜಾ ಅವರು ಐದನೇ ಶ್ರೇಯಾಂಕ ಗಳಿಸಿದ್ದಾರೆ.

ವಿಶ್ವ ಚಾಂಪಿಯನ್ ಪಟ್ಟಕ್ಕೆ ಎರಡು ಬಾರಿ ಚಾಲೆಂಜರ್ ಆಗಿದ್ದ ಇಯಾನ್ ನಿಪೊಮ್‌ನಿಷಿ, ಅನಿಶ್ ಗಿರಿ, ಶಖ್ರಿಯಾರ್ ಮೆಮೆದ್ಯರೋವ್, ಲೆವೊನ್ ಅರೋನಿಯನ್ ಮತ್ತು ವ್ಲಾದಿಮಿರ್ ಫೆಡೊಸೀವ್ ಕ್ರಮವಾಗಿ ಆರರಿಂದ ಹತ್ತರವರೆಗಿನ ಶ್ರೇಯಾಂಕ ಗಳಿಸಿದ್ದಾರೆ.

2023ರ ಗ್ರ್ಯಾಂಡ್ ಸ್ವಿಸ್ ಟೂರ್ನಿಯನ್ನು ಭಾರತದ ವಿದಿತ್ ಗುಜರಾತಿ (ಓಪನ್ ವಿಭಾಗ) ಮತ್ತು ಆರ್.ವೈಶಾಲಿ (ಮಹಿಳೆಯರ ವಿಭಾಗ) ಗೆದ್ದುಕೊಂಡಿದ್ದರು.

11 ಸುತ್ತುಗಳ ಈ ಟೂರ್ನಿಯಲ್ಲಿ 172 ಮಂದಿ ಭಾಗವಹಿಸುತ್ತಿದ್ದಾರೆ. ಇವರಲ್ಲಿ 116 ಮಂದಿ ಓಪನ್ ಮತ್ತು 56 ಮಂದಿ ಮಹಿಳಾ ವಿಭಾಗದಲ್ಲಿ ಕಣಕ್ಕಿಳಿಯುತ್ತಿದ್ದಾರೆ.

ಈ ಟೂರ್ನಿಯ ಬಹುಮಾನ ನಿಧಿಯಲ್ಲೂ ಕಳೆದ ಬಾರಿಗಿಂತ ಸಾಕಷ್ಟು ಹೆಚ್ಚಳವಾಗಿದೆ. ಬಹುಮಾನ ಮೊತ್ತವನ್ನು ಓಪನ್ ವಿಭಾಗದಲ್ಲಿ ₹5.35 ಕೋಟಿಗೆ (2023ರಲ್ಲಿ ₹ಕೋಟಿ) ಹೆಚ್ಚಿಸಲಾಗಿದೆ. ಮಹಿಳಾ ವಿಭಾಗದಲ್ಲಿ ₹1.19 ಕೋಟಿಯಿಂದ (2023) ಈ ಬಾರಿ ₹2 ಕೋಟಿಗೆ ಏರಿಸಲಾಗಿದೆ. ಈ ಬಾರಿ ಯುವ ಪ್ರತಿಭೆಗಳಾದ ಹ್ಯಾನ್ಸ್ ನೀಮನ್ (22), ವಿನ್ಸೆಂಟ್ ಕೀಮರ್ (20), ಜಾವೊಖಿರ್ ಸಿಂಧರೋವ್ (19) ಸಹ ಆಡುತ್ತಿದ್ದಾರೆ.

ಮಹಿಳಾ ವಿಭಾಗ: ಮಹಿಳಾ ವಿಭಾಗದಲ್ಲಿ ಮಾಜಿ ವಿಶ್ವ ಚಾಂಪಿಯನ್ ತಾನ್ ಝೊಂಗ್ವಿ ಅಗ್ರ ಶ್ರೇಯಾಂಕ ಪಡೆದಿದ್ದಾರೆ. ಅನುಭವಿಗಳಾದ ಕೋನೇರು ಹಂಪಿ, ಅನ್ನಾ ಮುಝಿಚುಕ್ ಮತ್ತು ಕ್ಯಾತರಿಕಾ ಲಾಗ್ನೊ ಕೂಡ ಶ್ರೇಯಾಕಿತರಲ್ಲಿ ಸೇರಿದ್ದಾರೆ.

44 ಮಂದಿ ರೇಟಿಂಗ್ ಆಧಾರದಲ್ಲಿ ನೇರವಾಗಿ ಅರ್ಹತೆ ಪಡೆದಿದ್ದಾರೆ. ನಾಲ್ಕು ಮಂದಿ ಆಟಗಾರ್ತಿಯರು ಫಿಡೆ ವೈಲ್ಡ್ ಕಾರ್ಡ್ ಪಡೆದು ಆಡಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕುಸ್ತಿಪಟು ರೀತಿಕಾ ಅಮಾನತು



ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಪರೀಕ್ಷೆಯಲ್ಲಿ ಸಿಲುಕಿರುವ ಪ್ರತಿಭಾನ್ವಿತ ಕುಸ್ತಿಪಟು ರೀತಿಕಾ ಹೂಡ ಅವರನ್ನು ತಾತ್ಕಾಲಿಕವಾಗಿ ಅಮಾನತು ಮಾಡಲಾಗಿದೆ. 23 ವರ್ಷದೊಳಗಿನವರ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆದ ಭಾರತದ ಮೊದಲ ಕುಸ್ತಿ ಪಟು ಎಂಬ ಹಿರಿಮೆಯನ್ನು ರೀತಿಕಾ ಹೊಂದಿದ್ದಾರೆ.

22 ವರ್ಷದ ರೀತಿಕಾ ಈಗ ನಾಲ್ಕು ವರ್ಷಗಳ ಅಮಾನತಿಗೆ ಒಳಗಾಗುವ ಭೀತಿಯಲ್ಲಿದ್ದಾರೆ. ಈ ವರ್ಷದ ಮಾರ್ಚ್ 15ರಂದು ಏಷ್ಯನ್ ಚಾಂಪಿಯನ್‌ಷಿಪ್‌ನ ಆಯ್ಕೆ ಟ್ರಯಲ್ಸ್ ವೇಳೆ ಅವರಿಂದ ಮಾದರಿ ಸಂಗ್ರಹಿಸಲಾಗಿತ್ತು. ಇದರಲ್ಲಿ ಅನಾಬಾಲಿಕ್ ಆಂಡ್ರೊಜೆನಿಕ್ ಸ್ಟಿರಾಯಿಡ್ಸ್ ಅಂಶ ಕಂಡುಬಂದಿದೆ.

'ಫಲಿತಾಂಶ ಇನ್ನೂ ದೃಢಪಟ್ಟಿಲ್ಲ. ನಾನೇನೂ ತಪ್ಪು ಮಾಡಿಲ್ಲ. ಈ ವಿಷಯದಲ್ಲಿ ಅಧಿಕಾರಿಗಳ ಜೊತೆ ತನಿಖೆಗೆ ಸಹಕರಿಸುವೆ. ನಾಡಾ ಮತ್ತು ಕುಸ್ತಿ ಫೆಡರೇಷನ್ ಮೇಲೆ ಪೂರ್ಣ ನಂಬಿಕೆಯಿದೆ' ಎಂದು ರೀತಿಕಾ ಪಿಟಿಐಗೆ ತಿಳಿಸಿದ್ದಾರೆ.

ಸರಣಿ ವಶದ ಛಲದಲ್ಲಿ ಕೌರ್ ಪಡೆ


ಹರ್ಮನ್‌ಪ್ರೀತ್ ಕೌರ್

ಮ್ಯಾಂಚೆಸ್ಟರ್ (ಪಿಟಿಐ): ಭಾರತದ ವನಿತೆಯರು ಬುಧವಾರ ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟಿ20 ಕ್ರಿಕೆಟ್ ಪಂದ್ಯವನ್ನು ಗೆದ್ದು, ಸರಣಿ ವಶಪಡಿಸಿಕೊಳ್ಳುವ ಛಲದಲ್ಲಿದ್ದಾರೆ.

ಐದು ಪಂದ್ಯಗಳ ಸರಣಿಯಲ್ಲಿ ಭಾರತ 2–1ರಿಂದ ಮುನ್ನಡೆ ಸಾಧಿಸಿದೆ. ಮೊದಲ ಎರಡು ಪಂದ್ಯದಲ್ಲಿ ಭಾರತ ಗೆದ್ದಿದ್ದರೆ, ಮೂರನೇ ಪಂದ್ಯದಲ್ಲಿ ಆತಿಥೇಯ ತಂಡ ಜಯ ಸಾಧಿಸಿತು. ಸರಣಿಯನ್ನು ಜೀವಂತವಾಗಿ ಉಳಿಸಿಕೊಳ್ಳಲು ಇಂಗ್ಲೆಂಡ್ ತಂಡಕ್ಕೆ ಈ ಪಂದ್ಯ ಮಹತ್ವದ್ದಾಗಿದೆ.

ಉಪನಾಯಕಿ ಸ್ಮೃತಿ ಮಂದಾನ, ಜೆಮಿಮಾ ರಾಡ್ರಿಗ್ರಸ್ ಮತ್ತು ಅಮನ್‌ಜೋತ್ ಕೌರ್ ಸರಣಿಯಲ್ಲಿ ಉತ್ತಮ ರನ್ ಕೊಡುಗೆ ನೀಡುತ್ತಿದ್ದಾರೆ. ಆದರೆ, ಅನುಭವಿಗಳಾದ ಶೆಫಾಲಿ ವರ್ಮಾ ಮತ್ತು ಹರ್ಮನ್‌ಪ್ರೀತ್ ಅವರಿಂದ ನಿರೀಕ್ಷಿತ ಕಾಣಿಕೆ ಸಿಗುತ್ತಿಲ್ಲ. ಅವರಿಬ್ಬರ ಮೇಲೆ ಹೆಚ್ಚಿನ ಒತ್ತಡವಿದೆ.

ಸರಣಿಯಲ್ಲಿ ಸ್ಪಿನ್ನರ್‌ಗಳಾದ ಎನ್. ಶ್ರೀಚರಣಿ (8 ವಿಕೆಟ್), ದೀಪ್ತಿ ಶರ್ಮಾ (6) ಮತ್ತು ವೇಗಿ ಅರುಂಧತಿ ರೆಡ್ಡಿ (4) ಉತ್ತಮ ಪ್ರದರ್ಶನ ತೋರಿದ್ದಾರೆ. ಆದರೆ, ಎಡಗೈ ಸ್ಪಿನ್ನರ್ ರಾಧಾ ಯಾದವ್ ಮತ್ತು ವೇಗಿ ಅಮನ್‌ಜೋತ್ ಕೊಂಚ ದುಬಾರಿಯಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 11

ಯುವ ಕ್ರಿಕೆಟ್: ಇಂಗ್ಲೆಂಡ್ ಎದುರು ಭಾರತಕ್ಕೆ ಸೋಲು

ವೂರ್ಸ್ಟರ್ (ಇಂಗ್ಲೆಂಡ್) (ಪಿಟಿಐ): ಭಾರತ ಯುವ ತಂಡವು (19 ವರ್ಷದೊಳಗಿವರ), ಸೋಮವಾರ ನಡೆದ ಐದನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ವಿರುದ್ಧ ಏಳು ವಿಕೆಟ್‌ಗಳಿಂದ ಪರಾಭವಗೊಂಡಿತು.

ಈ ಸೋಲಿನ ಹೊರತಾಗಿಯೂ ಐದು ಪಂದ್ಯಗಳ ಸರಣಿಯನ್ನು ಭಾರತ 3–2ರಿಂದ ಗೆದ್ದಿತು.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ಯುವ ತಂಡವು 9 ವಿಕೆಟ್‌ಗೆ 210 ರನ್ ಗಳಿಸಿತು. ಇಂಗ್ಲೆಂಡ್ ತಂಡ 113 ಎಸೆತಗಳು ಬಾಕಿ ಇರುವಂತೆ 3 ವಿಕೆಟ್‌ಗೆ 211 ರನ್ ಗಳಿಸಿ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರ್: ಭಾರತ 19 ವರ್ಷದೊಳಗಿನವರ ತಂಡ: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 210 (ಆರ್.ಎಸ್. ಅಂಬರೀಶ್ 66; ರಾಲ್ಫಿ ಆಲ್ಬರ್ಟ್ 24ಕ್ಕೆ 2). ಇಂಗ್ಲೆಂಡ್ 19 ವರ್ಷದೊಳಗಿನವರ ತಂಡ: 31.1 ಓವರ್‌ಗಳಲ್ಲಿ 3 ವಿಕೆಟ್‌ಗೆ 211 (ಬೆನ್ ಮೇಯ್ಸ್ ಔಟಾಗದೇ 82, ಬಿ.ಜೆ. ಡಾಕಿನ್ಸ್ 66; ನಮನ್ ಪುಷ್ಪಕ್ 65ಕ್ಕೆ 2).

ಚಂದನವನದಲ್ಲಿ ಮುಂದೈತೆ ಸಿನಿಹಬ್ಬ

ಈ ವರ್ಷದ ಮೊದಲಾರ್ಧ ಮುಗಿದು, ದ್ವಿತೀಯಾರ್ಧಕ್ಕೆ ಹೆಜ್ಜೆ ಇಟ್ಟಿದ್ದೇವೆ. ಈ ಅವಧಿಯಲ್ಲಿ ಚಂದನವನದ ತೆರೆಗಳಲ್ಲಿ ಸಿನಿಮಾ ಹಬ್ಬಕ್ಕೆ ತಯಾರಿ ನಡೆದಿದೆ. ಚಿತ್ರಮಂದಿರಗಳತ್ತ ಪ್ರೇಕ್ಷಕರನ್ನು ಸೆಳೆಯುವ ಸಾಮರ್ಥ್ಯವುಳ್ಳ, ಕಾಂಟೆಂಟ್‌ನಿಂದಾಗಿ ಸದ್ದು ಮಾಡುತ್ತಿರುವ, ಪ್ರಮುಖ ನಿರ್ಮಾಣ ಸಂಸ್ಥೆ ತಯಾರಿಸಿದ ಚಿತ್ರಗಳ ತುಣುಕುಗಳು ಇಲ್ಲಿವೆ. ಈ ಪೈಕಿ ಹಲವು ಚಿತ್ರತಂಡಗಳು ಈಗಾಗಲೇ ರಿಲೀಸ್ ದಿನಾಂಕ ಘೋಷಿಸಿದ್ದು, ಇನ್ನೊಂದಿಷ್ಟು ಸಿನಿಮಾಗಳು ಇದೇ ವರ್ಷ ಬರುವ ತಯಾರಿಯಲ್ಲಿವೆ.

ಜುಲೈ 18ಕ್ಕೆ 'ಎಕ್ಕ', 'ಜೂನಿಯರ್'

ಸಂಜನಾ, ಯುವ

ಪಿ.ಆರ್.ಕೆ.ಪ್ರೊಡಕ್ಷನ್ಸ್, ಜಯಣ್ಣ ಕಂಬೈನ್ಸ್ ಹಾಗೂ ಕೆ.ಆರ್.ಜಿ.ಸ್ಟೂಡಿಯೊಸ್ ಹೀಗೆ ಮೂರು ನಿರ್ಮಾಣ ಸಂಸ್ಥೆಗಳು ಜಂಟಿಯಾಗಿ ತಯಾರಿಸಿರುವ ಸಿನಿಮಾ 'ಎಕ್ಕ'. 'ರತ್ನನ್ ಪ್ರಪಂಚ' ಖ್ಯಾತಿಯ ರೋಹಿತ್ ಪದಕಿ ನಿರ್ದೇಶನದ, ಯುವ ರಾಜ್‌ಕುಮಾರ್ ನಟನೆಯ ಈ ಸಿನಿಮಾ ಸದ್ಯ 'ಬ್ಯಾಂಗಲ್ ಬಂಗಾರಿ' ಹಾಡಿನ ಮೂಲಕ ಸದ್ದು ಮಾಡುತ್ತಿದೆ. ಈ ನಿರ್ಮಾಣ ಸಂಸ್ಥೆಗಳಿಗೆ ವಿತರಣೆಯ ಹಿಡಿತವಿದ್ದು, ಸಿನಿಮಾ ನೂರಾರು ಚಿತ್ರಮಂದಿ-ರಗಳಿಗೆ ಲಗ್ಗೆ ಇಡುವುದು ಪಕ್ಕಾ.

ಕಿರೀಟಿ, ಶ್ರೀಲೀಲಾ

ಕಿರೀಟಿ ಹಾಗೂ ಶ್ರೀಲೀಲಾ ನಟನೆಯ 'ಜೂನಿಯರ್' ಸಿನಿಮಾ ರಿಚ್‌ನೆಸ್‌ನಲ್ಲಿ ಉತ್ಕೃಷ್ಟವಾಗಿ ಕಾಣುತ್ತಿದೆ. ಕಿರೀಟಿಯ ಚೊಚ್ಚಲ ಸಿನಿಮಾ ಇದಾಗಿದ್ದು, ದೇವಿಶ್ರೀ ಪ್ರಸಾದ್ ಸಂಗೀತ ಚಿತ್ರದ ಪ್ಲಸ್ ಪಾಯಿಂಟ್

ಸೆಪ್ಟೆಂಬರಲ್ಲಿಯೂ ಒಂದೆರಡು ಸಿನಿಮಾ

'ಕಾಟೇರ' ಸಿನಿಮಾದ ಕಥೆಗಾರ ಜಡೇಶ ಕೆ. ಹಂಪಿ ನಿರ್ದೇಶನದ, 'ದುನಿಯಾ' ವಿಜಯ್ ನಟನೆಯ 29ನೇ ಸಿನಿಮಾ 'ಲ್ಯಾಂಡ್‌ಲಾರ್ಡ್' ಸೆಪ್ಟೆಂಬರ್ ಮಾಸಾಂತ್ಯದಲ್ಲಿ ತೆರೆಗೆ ಬರುವ ಸಾಧ್ಯತೆ ಇದೆ. ಗುರುದತ್ ಗಾಣಿಗ ನಿರ್ದೇಶನದ, ಪ್ರಜ್ವಲ್ ದೇವರಾಜ್ ನಟನೆಯ 'ಕರಾವಳಿ' ಸಿನಿಮಾವನ್ನು ಸೆಪ್ಟೆಂಬರ್ ಮಾಸಾಂತ್ಯದಲ್ಲಿ ಅಥವಾ ಅಕ್ಟೋಬರ್ ಮೊದಲ ವಾರದಲ್ಲಿ ಬಿಡುಗಡೆ ಮಾಡುವ ಯೋಜನೆಯಲ್ಲಿದೆ ಚಿತ್ರತಂಡ.

ದುನಿಯಾ ವಿಜಯ್

ಆಗಸ್ಟ್‌ನಲ್ಲಿ '45' ಹಾಗೂ 'ಕೊತ್ತಲವಾಡಿ'

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳುತ್ತಿರುವ, ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಯಾಗಿ ಕಾಣಿಸಿಕೊಳ್ಳಲಿ-ರುವ ಈ ಸಿನಿಮಾ ಆಗಸ್ಟ್‌ನಲ್ಲಿ ಬರಲಿದೆ. ಈ ಹಿಂದೆ ಆಗಸ್ಟ್ 15ಕ್ಕೆ ಸಿನಿಮಾ ರಿಲೀಸ್ ಎಂದು ಚಿತ್ರತಂಡ ಘೋಷಿಸಿತ್ತು. ಆದರೆ ಆಗಸ್ಟ್ 14ರಂದು ರಜನಿಕಾಂತ್ ನಟನೆಯ ಮಲ್ಟಿಸ್ಟಾರ್‌ಗಳನ್ನು ಹೊಂದಿರುವ 'ಕೂಲಿ' ಸಿನಿಮಾ ಹಾಗೂ ಹೃತಿಕ್ ರೋಷನ್–ಜೂನಿಯರ್ ಎನ್‌ಟಿಆರ್ ನಟನೆಯ 'ವಾರ್–2' ಸಿನಿಮಾಗಳು ರಿಲೀಸ್ ಆಗುತ್ತಿರುವ ಕಾರಣ ಚಿತ್ರತಂಡ ಸಿನಿಮಾ ಮುಂದೂಡಲು ಯೋಚಿಸಿದೆ. 'ಆಗಸ್ಟ್‌ನಲ್ಲಿ ಖಂಡಿತಾ ತೆರೆಗೆ ಬರುತ್ತೇವೆ. ಬೇರೆ ಕಡೆ ಕ್ಲ್ಯಾಶ್ ಮಾಡಿಕೊಳ್ಳಲು ಇಷ್ಟವಿಲ್ಲ. ಎರಡು ಪ್ರಮುಖ ಸಿನಿಮಾಗಳಿಂದ ಚಿತ್ರಮಂದಿರಗಳ ಸಮಸ್ಯೆ ಎದುರಾಗಲಿದೆ' ಎಂದು ಇತ್ತೀಚೆಗೆ ಅರ್ಜುನ್ ಜನ್ಯ ಹೇಳಿದ್ದರು.

ನಟ ಯಶ್ ತಾಯಿ ಪುಷ್ಪ ಅರುಣ್ ಕುಮಾರ್ ಅವರು ತಮ್ಮದೇ ಪಿಎ ಪ್ರೊಡಕ್ಷನ್ಸ್ ಮೂಲಕ ನಿರ್ಮಾಣ ಮಾಡಿರುವ 'ಕೊತ್ತಲವಾಡಿ' ಸಿನಿಮಾ ಆಗಸ್ಟ್ 1ರಂದು ರಿಲೀಸ್ ಆಗುತ್ತಿದೆ. ಶ್ರೀರಾಜ್ ನಿರ್ದೇಶನ ಚೊಚ್ಚಲ ಚಿತ್ರದಲ್ಲಿ ಪೃಥ್ವಿ ಅಂಬಾರ್ ನಾಯಕನಾಗಿ ನಟಿಸಿದ್ದು, ಈ ಸಿನಿಮಾ ಕಾಂಟೆಂಟ್‌ನಿಂದ ಗಮನಸೆಳೆಯುತ್ತಿದೆ.

ಡಿಸೆಂಬರ್‌ನಲ್ಲಿ 'ಡೆವಿಲ್', '#ಕಿಚ್ಚ 47'

ದರ್ಶನ್

ಪ್ರಕಾಶ್ ವೀರ್ ನಿರ್ದೇಶನದ, ಜೆ.ಜಯಮ್ಮ ನಿರ್ಮಾಣದ 'ಡೆವಿಲ್' ಚಿತ್ರದ ಮಾತಿನ ಭಾಗದ ಚಿತ್ರೀಕರಣ ಪೂರ್ಣಗೊಂಡಿದ್ದು, ಹಾಡುಗಳ ಚಿತ್ರೀಕರಣ ಪ್ರಗತಿಯಲ್ಲಿದೆ. ಡಿಸೆಂಬರ್‌ನಲ್ಲಿ ಈ ಸಿನಿಮಾ ಬಿಡುಗಡೆಯಾಗುವ ಸಾಧ್ಯತೆ ಇದೆ.

ನಟ ಕಿಚ್ಚ ಸುದೀಪ್ ನಟನೆಯ 47ನೇ ಸಿನಿಮಾದ ಶೂಟಿಂಗ್ ಜುಲೈ 7ಕ್ಕೆ ಆರಂಭವಾಗಿದ್ದು, 'ಮ್ಯಾಕ್ಸ್' ಚಿತ್ರದ ನಿರ್ದೇಶಕ ವಿಜಯ್ ಕಾರ್ತಿಕೇಯ ಅವರೇ ಇದಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. 'ಈ ಸಿನಿಮಾ ಡಿ.25ಕ್ಕೆ ಬರಬೇಕು ಎನ್ನುವುದು ನಮ್ಮ ಹಠ. ಇದು ಅಸಾಧ್ಯವಾದ ಮಾತು. ಆದರೆ ಈ ತಂಡಕ್ಕಿರುವ ಸಾಮರ್ಥ್ಯದಿಂದ ಇದು ಸಾಧ್ಯ' ಎಂದು ಸುದೀಪ್ ಹೇಳಿದ್ದಾರೆ.

ಜುಲೈ 10ಕ್ಕೆ 'ಕೆಡಿ' ಟೀಸರ್

ಪ್ರೇಮ್ ನಿರ್ದೇಶನದ, ಧ್ರುವ ಸರ್ಜಾ ನಟನೆಯ ಈ ಸಿನಿಮಾದ ಟೀಸರ್ ಜುಲೈ 10ಕ್ಕೆ ಮುಂಬೈನಲ್ಲಿ ರಿಲೀಸ್ ಆಗಲಿದೆ. ಜುಲೈ 12ರಂದು ಬೆಂಗಳೂರಿನಲ್ಲಿ ಚಿತ್ರತಂಡ ಕಾರ್ಯಕ್ರಮ ಆಯೋಜಿಸಿದ್ದು, ಇಲ್ಲಿ ರಿಲೀಸ್ ದಿನಾಂಕವನ್ನೂ ಘೋಷಿಸುವ ಸಾಧ್ಯತೆ ಇದೆ. ಪ್ರೇಮ್ ನಿರ್ದೇಶನದ ಪ್ಯಾನ್ ಇಂಡಿಯಾ ಚಿತ್ರ ಇದಾಗಿದ್ದು, ಚಿತ್ರವನ್ನು ಕೆ.ವಿ.ಎನ್. ಪ್ರೊಡಕ್ಷನ್ಸ್ ನಿರ್ಮಿಸುತ್ತಿದೆ. ಬಾಲಿವುಡ್‌ನ ಸಂಜಯ್ ದತ್, ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್ ತಾರಾಬಳಗದಲ್ಲಿದ್ದಾರೆ.

ಧ್ರುವ ಸರ್ಜಾ

ಅ.2ಕ್ಕೆ 'ಕಾಂತಾರ' ಪ್ರೀಕ್ವೆಲ್

ರಿಷಬ್ ಶೆಟ್ಟಿ

ನಟ ರಿಷಬ್ ಶೆಟ್ಟಿ ನಟಿಸಿ ನಿರ್ದೇ-ಶಿಸುತ್ತಿರುವ 'ಕಾಂತಾರ' ಸಿನಿಮಾ ಪ್ರೀಕ್ವೆಲ್‌ನ ಶೂಟಿಂಗ್ ಪೂರ್ಣಗೊಂಡಿದೆ. ಅ.2ಕ್ಕೆ ಈ ಸಿನಿಮಾ ವಿಶ್ವದಾದ್ಯಂತ ತೆರೆಕಾಣಲಿದೆ. ಕುಂದಾಪುರ ಬಳಿ 25 ಎಕರೆ ಪ್ರದೇಶದಲ್ಲಿ ಬೃಹತ್ ಸೆಟ್ ಹಾಕಿ ಈ ಸಿನಿಮಾದ ಕಾಲ್ಪನಿಕ ಊರನ್ನು ಸೃಷ್ಟಿಸಿ ಚಿತ್ರೀಕರಣ ನಡೆಸಲಾಗಿದೆ. ಭಾರತೀಯ ಹಾಗೂ ಅಂತರರಾಷ್ಟ್ರೀಯ ತಂತ್ರಜ್ಞರೂ ಈ ಸಿನಿಮಾದಲ್ಲಿದ್ದು, 45 ರಿಂದ 50 ದಿನಗಳ ಕಾಲ ಸುಮಾರು 500 ತರಬೇತಿದಾರರು, 3000ಕ್ಕೂ ಹೆಚ್ಚು ಜೂನಿಯರ್ ಕಲಾವಿದರು ಈ ಸಿನಿಮಾದ ಶೂಟಿಂಗ್‌ನಲ್ಲಿ ಭಾಗವಹಿಸಿದ್ದರು. ಆಸ್ಕರ್ ಪ್ರಶಸ್ತಿಯನ್ನು ಗಮನದಲ್ಲಿಟ್ಟುಕೊಂಡೇ ಈ ಸಿನಿಮಾ ತಯಾರಾಗಿದ್ದು, ಬಿಡುಗಡೆ ದಿನಾಂಕದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಪೋಸ್ಟರ್ ಮುಖಾಂತರವೇ ಹೊಂಬಾಳೆ ಫಿಲ್ಮ್ಸ್ ತಿಳಿಸಿದೆ.

ನಿದ್ರಾದೇವಿಯ 'ನೀ ನನ್ನ ಹೊಸತನ..' ಹಾಡು ಬಿಡುಗಡೆ

ಚಂದನವನದಲ್ಲೀಗ ಹೊಸಬರ ಭಿನ್ನ ಪ್ರಯತ್ನದ ಸಿನಿಮಾಗಳು ಸದ್ದು ಮಾಡುತ್ತಿವೆ. 'ನಿದ್ರಾದೇವಿ ನೆಕ್ಸ್ಟ್ ಡೋರ್' ಇದಕ್ಕೆ ಹೊಸ ಸೇರ್ಪಡೆ. ಈ ಸಿನಿಮಾದ ಹಾಡೊಂದು ಇತ್ತೀಚೆಗೆ ಬಿಡುಗಡೆಯಾಯಿತು.

ಸುರಾಗ್ ಸಾಗರ್ ನಿರ್ದೇಶನದ ಈ ಚಿತ್ರದ 'ನೀ ನನ್ನ ಹೊಸತನ' ಎಂಬ ಹಾಡನ್ನು ನಟ ಗಣೇಶ್ ಅವರು ರಿಲೀಸ್ ಮಾಡಿದರು. ಸುರಾಮ್ ಮೂವೀಸ್‌ನಡಿ ಜಯರಾಮ ದೇವಸಮುದ್ರ ನಿರ್ಮಿಸಿರುವ ಈ ಸಿನಿಮಾದಲ್ಲಿ, ಪ್ರವೀರ್ ಶೆಟ್ಟಿ, ರಿಷಿಕಾ ನಾಯಕ್ ಜೋಡಿಯಾಗಿ ನಟಿಸಿದ್ದಾರೆ. 'ಬಿಗ್‌ಬಾಸ್' ಖ್ಯಾತಿಯ ನಟ ಶೈನ್ ಶೆಟ್ಟಿ, ಶ್ರುತಿ ಹರಿಹರನ್, ಕೆ.ಎಸ್.ಶ್ರೀಧರ್, ಸುಧಾರಾಣಿ ತಾರಾಬಳಗ-ದಲ್ಲಿದ್ದಾರೆ.

'ಇದು ನನ್ನ ನಿರ್ಮಾಣದ ಮೂರನೇ ಸಿನಿಮಾ. ಚಿತ್ರಕ್ಕೆ ಹಾಡುಗಳು ಆಮಂತ್ರಣದಂತೆ. ಹಾಡುಗಳಿಗೆ ಪ್ರೇಕ್ಷಕರನ್ನು ಚಿತ್ರಮಂದಿರದತ್ತ ಸೆಳೆಯುವ ಶಕ್ತಿಯಿದೆ. ನಕುಲ್ ಅಭಯಂಕರ್ ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ 'ನೀ ನನ್ನ...' ಹಾಡನ್ನು ರಾಘವೇಂದ್ರ ಕಾಮತ್ ಅವರು ಬರೆದಿದ್ದಾರೆ. ಗಾಯಕ ಸೋನು ನಿಗಮ್ ಅವರು ಹಾಡಿದ್ದಾರೆ. ಆರು ತಿಂಗಳ ಹಿಂದೆಯೇ ಈ ಹಾಡು ಸಿದ್ಧವಾಗಿತ್ತು. ಆನಂತರ ಸೋನು ನಿಗಮ್ ಅವರ ವಿವಾದ ನಡೆದಿತ್ತು. ನಮಗೂ ಎಲ್ಲದಕ್ಕಿಂತ ಭಾಷೆ ಮುಖ್ಯ. ಆ ನಿಟ್ಟಿನಲ್ಲಿ ಸೋನು ನಿಗಮ್ ಅವರ ದನಿಯಲ್ಲಿ ಬಂದಿರುವ ಈ ಹಾಡನ್ನು ಚಿತ್ರದಲ್ಲಿ ಬಳಸಿಕೊ-ಳ್ಳುವುದಿಲ್ಲ. ಬೇರೆ ಗಾಯಕರಿಂದ ಈ ಹಾಡನ್ನು ಹಾಡಿಸುತ್ತೇವೆ' ಎಂದಿದ್ದಾರೆ ನಿರ್ಮಾಪಕ ಜಯರಾಮ ದೇವಸಮುದ್ರ.

'ನನ್ನ ಮಾತೃಭಾಷೆಯಲ್ಲೇ ಮೊದಲ ಸಿನಿಮಾ ನಿರ್ದೇಶಿಸಬೇಕೆಂಬ ಆಸೆಯಿತ್ತು. ಅದು ಈಡೇರಿದೆ. ಯಾವುದೇ ಕೊರತೆ ಬಾರದ ಹಾಗೆ ಸಿನಿಮಾ ನಿರ್ಮಾಣವಾಗಿದೆ. ಪ್ರವೀರ್ ಹಾಗೂ ರಿಷಿಕಾ ಜೋಡಿಯ ಬಗ್ಗೆ ಈಗಾಗಲೇ ಮೆಚ್ಚುಗೆಯ ಮಾತುಗಳು ಕೇಳಿಬರುತ್ತಿವೆ. ನಕುಲ್ ಅಭಯಂಕರ್ ಸಂಗೀತ ಹಾಗೂ ಅಜಯ್ ಕುಲಕರ್ಣಿ ಛಾಯಾಚಿತ್ರಗ್ರಹಣ ನಮ್ಮ ಚಿತ್ರದ ಹೈಲೈಟ್ ಎನ್ನಬಹುದು' ಎಂದರು ಸುರಾಗ್.

'ನಮ್ಮಿಂದಲ್ಲ ಭಾಷೆ, ಭಾಷೆಯಿಂದ ನಾವು'

'ಭಾಷೆ ಉಳಿದರಷ್ಟೇ ನಾವು ಉಳಿಯುತ್ತೇವೆ. ನಮ್ಮ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸಾವಿರಾರು ಜನರು ಬಂದು ಹೋಗುತ್ತಾರೆ, ಉಳಿಯುವುದು ಭಾಷೆ ಒಂದೇ. ಇರುವ ಭಾಷೆಯನ್ನು ಉಳಿಸಿಕೊಂಡರೆ ಅದೇ ಧನ್ಯ. ಗಾಯಕರನ್ನು ಬದಲಾಯಿಸುವ ನನ್ನ ಆಗ್ರಹವನ್ನು ಪರಿಗಣಿಸುವುದಾಗಿ ನಿರ್ಮಾಪಕರು ಹೇಳಿದ್ದಾರೆ. ಹಾಡು ಚೆನ್ನಾಗಿ ಮೂಡಿಬಂದಿದೆ' ಎಂದರು ನಟ ಗಣೇಶ್.

'ರೌಡಿ ರೈಮ್ಸ್' ಹಾಡಿದ ಯುವ

ಎ ಫಾರ್ ಅಡ್ಡ, ಬಿ ಫಾರ್ ಬ್ಲೇಡ್, ಸಿ ಫಾರ್ ಚಮಕ್ಕು, ಡಿ ಫಾರ್ ಡೀಲಿಂಗ್ಸ್ ಎನ್ನುತ್ತಾ ರೌಡಿ ರೈಮ್ಸ್ ಹಾಡಿದ್ದಾರೆ ನಟ ಯುವ ರಾಜ್‌ಕುಮಾರ್. 'ಎಕ್ಕ' ಸಿನಿಮಾದ ಮತ್ತೊಂದು ಹಾಡು ಬಿಡುಗಡೆಯಾಗಿದ್ದು, ರೌಡಿ ಏರಿಯಾದಲ್ಲಿ ಕುಳಿತು ಎಬಿಸಿಡಿಗೆ ಹೊಸ ಹಾಡು ಕಟ್ಟಿದ್ದಾರೆ ನಾಗಾರ್ಜುನ ಶರ್ಮಾ ಮತ್ತು ಚಿತ್ರದ ನಿರ್ದೇಶಕ ರೋಹಿತ್ ಪದಕಿ.

'ಎಕ್ಕ' ಸಿನಿಮಾ ಹಾಡುಗಳ ಮೂಲಕವೇ ಸದ್ಯ ಸದ್ದು ಮಾಡುತ್ತಿದೆ. ಚಿತ್ರದ ಟೈಟಲ್ ಟ್ರ್ಯಾಕ್ ಹಾಗೂ 'ಬ್ಯಾಂಗಲ್ ಬಂಗಾರಿ' ಎಲ್ಲೆಡೆ ಗುನುಗುವಂತಾಗಿದೆ. 'ರೌಡಿ ರೈಮ್ಸ್'ನಲ್ಲಿ ರೌಡಿಗಳ ಚಿತ್ರಣವೇ ಇದೆ. ಇದರಲ್ಲಿ ಎ ಟು ಝಡ್ ವಿಷಯವಿದೆ. ರೌಡಿಗಳ ಪದಕೋಶವನ್ನೇ ಇಲ್ಲಿ ಬಿಚ್ಚಿಟ್ಟಿದ್ದಾರೆ ನಾಗಾರ್ಜುನ ಶರ್ಮಾ ಹಾಗೂ ರೋಹಿತ್ ಪದಕಿ. ಆದರೆ ಝಡ್‌ಗೆ ಏನು ಎನ್ನುವ ಹೋಂವರ್ಕ್ ಅನ್ನು ಗ್ಯಾಂಗ್‌ಸ್ಟರ್ ಮಕ್ಕಳಿಗೆ ನೀಡಿದೆ ಚಿತ್ರತಂಡ. ಸಂಗೀತ ನಿರ್ದೇಶಕ ಚರಣ್ ರಾಜ್ ಇದಕ್ಕೆ ಪೂರಕವಾಗಿ ಸಂಗೀತ ನೀಡಿದ್ದಾರೆ. ಚರಣ್ ರಾಜ್ ಹಾಗೂ ರೋಹಿತ್ ಪದಕಿ 'ರೌಡಿ ರೈಮ್ಸ್'ಗೆ ದನಿಯಾಗಿದ್ದಾರೆ.

ಬೆಂಗಳೂರು ಭೂಗತ ಜಗತ್ತಿನ ಕಥೆಯನ್ನು ಹೊಂದಿರುವ ಈ ಸಿನಿಮಾದಲ್ಲಿ ಸಂಪದ ಹಾಗೂ 'ಸಲಗ' ಸಿನಿಮಾ ಖ್ಯಾತಿಯ ಸಂಜನಾ ಆನಂದ್ ನಾಯಕಿಯರಾಗಿ ನಟಿಸಿದ್ದಾರೆ. ಪಿಆರ್‌ಕೆ ಪ್ರೊಡಕ್ಷನ್ಸ್, ಕೆಆರ್‌ಜಿ ಸ್ಟುಡಿಯೊಸ್ ಹಾಗೂ ಜಯಣ್ಣ ಕಂಬೈನ್ಸ್ ಬ್ಯಾನರ್‌ಗಳ ಅಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದೆ. ಚಿತ್ರದಲ್ಲಿ ಡೆಡ್ಲಿ ಸೋಮ ಖ್ಯಾತಿಯ ನಟ ಆದಿತ್ಯ ನಟಿಸಿದ್ದಾರೆ. ಬಾಲಿವುಡ್‌ನ ಅತುಲ್ ಕುಲಕರ್ಣಿ ಕೂಡ ನಟಿಸಿದ್ದಾರೆ.

ಪ್ರಜಾವಾಣಿ
Supported By
CASAGRAND building aspirations
Presents
ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ
Powered By
TRENDS
Special Partner
SHREE SAI GOLD PALACE
ನಮ್ಮ ಹೆಮ್ಮೆ , ನಮ್ಮ ವೈಭವ
ವರ್ಣರಂಜಿತ ಅದ್ದೂರಿ ವೇದಿಕೆಯಲ್ಲಿ ತಾರೆಗಳ ಸಂಭ್ರಮ!
ಸಿನಿ ಸಮ್ಮಾನದ ಕಿರೀಟವನ್ನು ಮುಡಿಗೇರಿಸಿಕೊಂಡು ಪ್ರತಿಷ್ಠಿತ ಪ್ರಶಸ್ತಿಯ ಗೌರವಕ್ಕೆ ಪಾತ್ರರಾದವರ ಸಾಧನೆಗಳನ್ನು ಸಂಭ್ರಮಿಸಲು ಇದೊಂದು ಅಪೂರ್ವ ಅವಕಾಶ. ಅತ್ಯಂತ ಅದ್ದೂರಿಯಾದ ವರ್ಣರಂಜಿತ ಸಮಾರಂಭದಲ್ಲಿ ತಮ್ಮ ಛಾಪು ಮೂಡಿಸಿದ ಕರ್ನಾಟಕದ ಹೆಮ್ಮೆಯ ಕಲಾವಿದರು, ಪ್ರತಿಭಾನ್ವಿತ ತಂತ್ರಜ್ಞರು, ಮೇರು ಸಾಧಕರು ಹಾಗೂ ತಾರೆಗಳ ಕಲರವದ ಕ್ಷಣಗಳನ್ನು ಕಣ್ತುಂಬಿಕೊಳ್ಳಿ, ಸಂಭ್ರಮಿಸಿ.
ಜುಲೈ 20ರಂದು, ಭಾನುವಾರ ಸಂಜೆ 4 ಘಂಟೆಯಿಂದ
ತಪ್ಪದೆ ವೀಕ್ಷಿಸಿ Z ಕನ್ನಡ
ಮರುಪ್ರಸಾರ ಜುಲೈ 27ರಂದು, ಭಾನುವಾರ ಬೆಳಿಗ್ಗೆ 11 ಘಂಟೆಯಿಂದ

Follow us on:
Associate Sponsors
Prestige | Freedom Healthy Cooking Oils | HONDA | Vi 5G | ಸದ್ಗುರು ಆಯುರ್ವೇದ GRAMFLOUR | ESTD : 1907 THE BANGALORE CITY CO-OPERATIVE BANK LIMITED | The Janatha Co-operative Bank Ltd., Malleswaram, Bangalore | NBCC A Navratna CPSE
Mobility Partner: Akshaya Motors
Banking Partner: ಕೆನರಾ ಬ್ಯಾಂಕ್ Canara Bank Together We Can
Style Partner: BSC ಬಿ.ಎಸ್.ಚನ್ನಬಸಪ್ಪ & ಸನ್ಸ್ ದಾವಣಗೆರೆ & ಬೆಳಗಾವಿ
Travel Partner: travelmart
Wardrobe Partner: neumen FROM THE HOUSE OF P N RAO
Insurance Partner: National Insurance
Knowledge Partners: INSIGHTSIAS | GITAM BENGALURU
Audit Partner: EY

ಲಾರ್ಡ್ಸ್‌ನಲ್ಲಿ ಸವಾಲಿನ ಪಿಚ್ ನಿರೀಕ್ಷೆ

ಲಯದಲ್ಲಿರುವ ಭಾರತ ತಂಡದ ಆಟಗಾರರ ಮೇಲೆ ಬ್ಯಾಟಿಂಗ್ ಕೋಚ್ ಸಿತಾಂಶು ಕೊಟಕ್ ವಿಶ್ವಾಸ

ಪ್ರಜಾವಾಣಿ ವಾರ್ತೆ/ರಾಯಿಟರ್ಸ್

ಲಂಡನ್: ಲಾರ್ಡ್ಸ್‌ನಲ್ಲಿ ಗುರುವಾರ ಆರಂಭವಾಗುವ ಮೂರನೇ ಟೆಸ್ಟ್‌ಗೆ ಇಂಗ್ಲೆಂಡ್ ಸವಾಲಿನ ಪಿಚ್ ಸಿದ್ಧಪಡಿಸಬಹುದೆಂಬ ನಿರೀಕ್ಷೆಯಿದೆ. ಆದರೆ ಲಯದಲ್ಲಿರುವ ಬ್ಯಾಟರ್‌ಗಳಿಂದ ಆ ಸವಾಲನ್ನು ಯಶಸ್ವಿಯಾಗಿ ನಿಭಾಯಿಸಬಹುದೆಂಬ ವಿಶ್ವಾಸವನ್ನು ಭಾರತ ತಂಡದ ಬ್ಯಾಟಿಂಗ್ ಕೋಚ್ ಸಿತಾಂಶು ಕೊಟಕ್ ಮಂಗಳವಾರ ವ್ಯಕ್ತಪಡಿಸಿದ್ದಾರೆ.

ಪಿಚ್ ಸಾಕಷ್ಟು ಹಸಿರಿನಿಂದ ಕೂಡಿದೆ. ಆದರೆ ಮೂರನೇ ಟೆಸ್ಟ್‌ನ ಆರಂಭಕ್ಕೆ ಇನ್ನೂ ಎರಡು ದಿನಗಳು ಉಳಿದಿದ್ದು, ಹುಲ್ಲನ್ನು ಸವರಲು ಅವಕಾಶವಿದೆ. ಇಲ್ಲೂ ಸಪಾಟು ವಿಕೆಟ್‌ಗೆ ಇಂಗ್ಲೆಂಡ್ ಆಸಕ್ತಿ ತೋರಬಹುದೇ ಎಂಬ ಕುತೂಹಲ ಉಳಿದಿದೆ.

ಎಜ್‌ಬಾಸ್ಟನ್‌ನಲ್ಲಿ ಭಾರತ 336 ರನ್‌ಗಳಿಂದ ಜಯಗಳಿಸಿದ್ದು, ಐದು ಟೆಸ್ಟ್‌ಗಳ ಸರಣಿಯನ್ನು 1–1 ಸಮಬಲ ಮಾಡಿಕೊಂಡಿತ್ತು.

ದಣಿದಿರುವ ಬೌಲಿಂಗ್ ಪಡೆಯಲ್ಲಿ ಬದಲಾವಣೆ ಮಾಡಲು ಇಂಗ್ಲೆಂಡ್ ಯೋಚಿಸುತ್ತಿದೆ. ಹೀಗಾಗಿ ಅನುಭವಿ ವೇಗದ ಬೌಲರ್ ಜೋಫ್ರಾ ಆರ್ಚರ್ ನಾಲ್ಕು ವರ್ಷಗಳ ನಂತರ ಇಲ್ಲಿ ಮೊದಲ ಬಾರಿ ಟೆಸ್ಟ್ ಆಡಬಹುದು. 'ಜೋಫ್ರಾ ಆಡಿದರೆ ಪಂದ್ಯ ಸವಾಲಿನಿಂದ ಕೂಡಲಿದೆ' ಎಂದು ಕೊಟಕ್ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಪಿಚ್‌ನಲ್ಲಿ ಹುಲ್ಲು ಸಾಕಷ್ಟು ಇರುವ ಕಾರಣ, ಲೀಡ್ಸ್ ಮತ್ತು ಬರ್ಮಿಂಗಮ್‌ನ ಪಿಚ್‌ಗಳಿಗೆ ಹೋಲಿಸಿದರೆ, ಲಾರ್ಡ್ಸ್‌ನ ಪಿಚ್ ಸವಾಲಿನಿಂದ ಕೂಡಲಿದೆ ಎಂಬುದು ಕೊಟಕ್ ನಿರೀಕ್ಷೆ.

'ಸಾಮಾನ್ಯವಾಗಿ ಲಾರ್ಡ್ಸ್‌ನಲ್ಲಿ ಮೊದಲ ಮತ್ತು ಎರಡನೇ ಇನಿಂಗ್ಸ್ ಸ್ಕೋರು ಅಲ್ಪಮೊತ್ತದಿಂದ ಕೂಡಿರುತ್ತದೆ. ಹೀಗಾಗಿ ಬೌಲರ್‌ಗಳು ಇಲ್ಲಿ ಹೆಚ್ಚು ನೆರವು ನಿರೀಕ್ಷಿಸಬಹುದು' ಎಂದು ಅವರು ಹೇಳಿದರು.

ಲಾರ್ಡ್ಸ್‌ನಲ್ಲಿ ನಡೆದ ಕೊನೆಯ ಪಂದ್ಯ– ಅಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ನಡುವಣ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್. ಅಲ್ಲಿ ಬೌಲರ್‌ಗಳು ಮೇಲುಗೈ ಸಾಧಿಸಿದ್ದರು. ಮೊದಲ ಎರಡು ದಿನ ತಲಾ 14 ವಿಕೆಟ್‌ಗಳು ಉರುಳಿದ್ದವು. ಅಂತಿಮವಾಗಿ ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳು 282 ರನ್‌ಗಳ ಗುರಿ ತಲುಪಿದ್ದರು.

ಕ್ಯುರೇಟರ್‌ಗಳು ಹಸಿರು ಉಳಿಸಿದಲ್ಲಿ ಎರಡೂ ತಂಡಗಳ ಬ್ಯಾಟರ್‌ಗಳಿಗೆ ಸವಾಲು ಎದುರಾಗಲಿದೆ.

'ಬ್ಯಾಟರ್‌ಗಳು ಇಲ್ಲಿ ಕುದುರಿಕೊಳ್ಳಬೇಕಾದರೆ, ಸಾಕಷ್ಟು ಹೊತ್ತು ಪಿಚ್‌ನಲ್ಲಿ ಕಳೆಯಬೇಕಾಗುತ್ತದೆ' ಎಂದು ಕೊಟಕ್ ಹೇಳಿದ್ದಾರೆ.

ಆದರೆ ಭಾರತ ತಂಡದ ಬ್ಯಾಟರ್‌ಗಳು ಯಶಸ್ಸು ಕಾಣುತ್ತಿದ್ದಾರೆ. ನಾಯಕ ಗಿಲ್ ಅತ್ಯುತ್ತಮ ಲಯದಲ್ಲಿದ್ದಾರೆ. ನಾಲ್ಕು ಇನಿಂಗ್ಸ್‌ಗಳಿಂದ 585 ರನ್ ಕಲೆಹಾಕಿದ್ದಾರೆ. ನಾಯಕನಾಗಿ ತಮ್ಮ ಮೊದಲ ಪ್ರವಾಸದಲ್ಲೇ ಸೈ ಎನಿಸಿದ್ದಾರೆ. ರಿಷಭ್ ಪಂತ್, ಕೆ.ಎಲ್.ರಾಹುಲ್ ಮತ್ತು ಯಶಸ್ವಿ ಜೈಸ್ವಾಲ್ ಸಹ ಶತಕಗಳನ್ನು ಬಾರಿಸಿದ್ದರಿಂದ ತಂಡ ಆತ್ಮವಿಶ್ವಾಸದಲ್ಲಿದೆ.

ಮೂರನೇ ಕ್ರಿಕೆಟ್ ಟೆಸ್ಟ್ ಪಂದ್ಯಕ್ಕೆ ಪೂರ್ವಭಾವಿಯಾಗಿ ಭಾರತ ತಂಡದ ಆಟಗಾರರು ಮಂಗಳವಾರ ತಾಲೀಮು ನಡೆಸಿದರು. ಮುಖ್ಯ ಕೋಚ್ ಗಂಭೀರ್ ಜೊತೆಯಲ್ಲಿದ್ದರು ಪಿಟಿಐ ಚಿತ್ರ

ನೆಟ್ಸ್‌ನಲ್ಲಿ ದೀರ್ಘ ಅಭ್ಯಾಸ ನಡೆಸಿದ ಬೂಮ್ರಾ

ಲಂಡನ್ (ಪಿಟಿಐ): ಅಗ್ರ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಮೂರನೇ ಟೆಸ್ಟ್‌ನಲ್ಲಿ ಆಡುವ ಸಾಧ್ಯತೆ ಉಜ್ವಲವಾಗಿದೆ. ಮಂಗಳವಾರ ಭಾರತ ತಂಡದ ನೆಟ್ ಪ್ರಾಕ್ಟೀಸ್ ವೇಳೆ ಅವರು ಸುಮಾರು 45 ನಿಮಿಷಗಳ ಕಾಲ ಬೌಲಿಂಗ್ ಮಾಡಿದ್ದು ಇದಕ್ಕೆ ಪುಷ್ಟಿ ನೀಡಿತು.

ಎಜ್‌ಬಾಸ್ಟನ್‌ನಲ್ಲಿ ಎರಡನೇ ಟೆಸ್ಟ್ ಆರಂಭಕ್ಕೆ ಮೊದಲು, ತಂಡದ ನಾಯಕ ಶುಭಮನ್ ಗಿಲ್ ಅವರು 'ಬೂಮ್ರಾ ಅವರು ಎರಡನೇ ಟೆಸ್ಟ್‌ಗೆ ಅಲಭ್ಯರಾಗಿದ್ದು, ಮೂರನೇ ಟೆಸ್ಟ್‌ಗೆ ಮರಳಲಿದ್ದಾರೆ' ಎಂದು ಸ್ಪಷ್ಟಪಡಿಸಿದ್ದರು.

ಬೂಮ್ರಾ ಲವಲವಿಕೆಯಿಂದಿರುವಂತೆ ಕಂಡರು. ಸಹ ಆಟಗಾರರೊಡನೆ ಸಂಭಾಷಣೆ ನಡೆಸುತ್ತಿದ್ದುದು ಕಂಡುಬಂತು.

ಪ್ರಸಿದ್ಧಕೃಷ್ಣ ಅವರ ಬದಲು ಬೂಮ್ರಾ ಆಡುವ 11ರ ಬಳಗದಲ್ಲಿ ಸ್ಥಾನ ಪಡೆಯುವ ಸಾಧ್ಯತೆ ನಿಚ್ಚಳವಾಗಿದೆ. ಎಡಗೈ ವೇಗಿ ಅರ್ಷದೀಪ್ ಸಿಂಗ್ ಸಹ ಒಂದು ಗಂಟೆಗೂ ಹೆಚ್ಚು ಕಾಲ ಬೌಲಿಂಗ್‌ನಲ್ಲಿ ತೊಡಗಿದ್ದು ಗಮನಸೆಳೆಯಿತು.

ಕರುಣ್ ನಾಯರ್ ಜೊತೆಗೆ ಮತ್ತು ಸಾಯಿ ಸುದರ್ಶನ್ ಅವರು ಹೆಚ್ಚು ಹೊತ್ತು ಬ್ಯಾಟಿಂಗ್‌ನಲ್ಲಿ ತೊಡಗಿದ್ದರು.

ಕಿರಿಯರ ಹಾಕಿ ಕರ್ನಾಟಕಕ್ಕೆ ಆಘಾತ

ಬೆಂಗಳೂರು: ದಾದ್ರಾ ಮತ್ತು ನಗರಹವೇಲಿ–ದಾಮನ್ ಮತ್ತು ದೀವು ತಂಡವು, ರಾಂಚಿಯಲ್ಲಿ ನಡೆಯುತ್ತಿರುವ 15ನೇ ಸಬ್ ಜೂನಿಯರ್ ಮಹಿಳಾ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್ 'ಬಿ' ಡಿವಿಷನ್ ಪಂದ್ಯದಲ್ಲಿ ಮಂಗಳವಾರ ಕರ್ನಾಟಕ ತಂಡವನ್ನು 4–1 ಗೋಲುಗಳಿಂದ ಸೋಲಿಸಿ, ಆಘಾತ ನೀಡಿತು.



ಭಾರತವು ಕೆಲವು ಅತ್ಯುತ್ತಮ ವೈಯಕ್ತಿಕ ಪ್ರದರ್ಶನಗಳೊಂದಿಗೆ ಇಂಗ್ಲೆಂಡ್ ಸೋಲಿಸಿದೆ!

ಸೆಮಿಗೆ ಸಬಲೆಂಕಾ, ಫ್ರಿಟ್ಜ್

ಲಂಡನ್ (ಎಪಿ): ಅಮೆರಿಕ ಓಪನ್ ರನ್ನರ್ ಅಪ್ ಟೇಲರ್ ಫ್ರಿಟ್ಜ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಮೊದಲ ಬಾರಿ ಸೆಮಿಫೈನಲ್ ಪ್ರವೇಶಿಸಿದರು. ವಿಶ್ವದ ಅಗ್ರ ಆಟಗಾರ್ತಿ ಅರಿನಾ ಸಬಲೆಂಕಾ ಅವರು ಆರಂಭಿಕ ಸೆಟ್‌ನ ಹಿನ್ನಡೆಯಿಂದ ಚೇತರಿಸಿಕೊಂಡು ಐದು ವರ್ಷಗಳಲ್ಲಿ ಮೂರನೇ ಸಲ ಅಂತಿಮ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟರು.

ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ 27 ವರ್ಷ ವಯಸ್ಸಿನ ಫ್ರಿಟ್ಜ್ 6-3, 6-4, 1-6, 7-6 (4)ರಿಂದ 17ನೇ ಶ್ರೇಯಾಂಕದ ಕರೆನ್ ಕಚನೋವ್ (ರಷ್ಯಾ) ಅವರನ್ನು ಸೋಲಿಸಿ ಎರಡನೇ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಸೆಮಿಫೈನಲ್ ತಲುಪಿದರು. ಅವರಿಗೆ ಮುಂದಿನ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ (ಸ್ಪೇನ್) ಎದುರಾಳಿಯಾಗಿದ್ದಾರೆ.

ಮೊದಲೆರಡು ಸುತ್ತಿನ ಪಂದ್ಯದಲ್ಲಿ ಐದು ಸೆಟ್‌ಗಳ ಹೋರಾಟ ನಡೆಸಿ ಸೋಲಿನ ದವಡೆಯಿಂದ ಪಾರಾಗಿದ್ದ ಫ್ರಿಟ್ಜ್ ಈ ಪಂದ್ಯದಲ್ಲೂ ಪೈಪೋಟಿ ಎದುರಿಸಿದರು. ಎರಡು ಸೆಟ್ ಗೆದ್ದ ಬಳಿಕ ಪಾದದ ನೋವಿಗೆ ತುತ್ತಾದ ಅವರು ಪಂದ್ಯದ ಮಧ್ಯದಲ್ಲಿ ವೈದ್ಯಕೀಯ ನೆರವು ಪಡೆದು, ಆಟ ಮುಂದುವರಿಸಿದರು. ಮೂರನೇ ಸೆಟ್‌ನಲ್ಲಿ ಹಿನ್ನಡೆ ಕಂಡ ಅವರು ನಾಲ್ಕನೇ ಸೆಟ್ ಅನ್ನು ಟೈಬ್ರೇಕರ್‌ನಲ್ಲಿ ಪಡೆದರು.

ಹ್ಯಾಟ್ರಿಕ್ ಪ್ರಶಸ್ತಿ ಗೆಲುವಿನ ಛಲದಲ್ಲಿರುವ ಅಲ್ಕರಾಜ್, ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 6–2, 6–3, 6–3ರಿಂದ ಬ್ರಿಟನ್‌ನ ಶ್ರೇಯಾಂಕರಹಿತ ಕ್ಯಾಮರೂನ್ ನೋರಿ ಅವರನ್ನು ಮಣಿಸಿದರು.

ಸಬಲೆಂಕಾ ಮುನ್ನಡೆ: ಬೆಲರೂಸ್‌ನ ಆಟಗಾರ್ತಿ ಸಬಲೆಂಕಾ 4-6, 6-2, 6-4ರಿಂದ ಜರ್ಮನಿಯ ಲಾರಾ ಸೀಗ್ಮಂಡ್ ಅವರನ್ನು ಸೋಲಿಸಲು 2 ಗಂಟೆ 54 ನಿಮಿಷ ಹೋರಾಟ ನಡೆಸಬೇಕಾಯಿತು. 27 ವರ್ಷ ವಯಸ್ಸಿನ ಸಬಲೆಂಕಾ 2021 ಮತ್ತು 2023ರ ಬಳಿಕ ಮತ್ತೆ ನಾಲ್ಕರ ಘಟ್ಟ ಪ್ರವೇಶಿಸಿದರು.

ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಒಡತಿ, ವಿಂಬಲ್ಡನ್‌ನಲ್ಲಿ ಚೊಚ್ಚಲ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ. ಸಬಲೆಂಕಾ ಮುಂದಿನ ಸುತ್ತಿನಲ್ಲಿ 13ನೇ ಶ್ರೇಯಾಂಕದ ಅಮಂಡಾ ಅನಿಸಿಮೊವಾ (ಅಮೆರಿಕ) ಅವರನ್ನು ಎದುರಿಸಲಿದ್ದಾರೆ. ಅನಿಸಿಮೊವಾ 6-1, 7-6(9)ರಿಂದ ರಷ್ಯಾದ ಅನಸ್ತೇಸಿಯಾ ಪಾವ್ಲ್ಯುಚೆಂಕೋವಾ ಅವರನ್ನು ಮಣಿಸಿದರು. 23 ವರ್ಷ ವಯಸ್ಸಿನ ಅನಿಸಿಮೊವಾ 2019ರ ಫ್ರೆಂಚ್ ಓಪನ್ ಬಳಿಕ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಎರಡನೇ ಬಾರಿ ನಾಲ್ಕರ ಘಟ್ಟ ಪ್ರವೇಶಿಸಿದರು.

ಸಿನ್ನರ್‌ಗೆ ಅದೃಷ್ಟ: ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್, ಪ್ರಿ ಕ್ವಾರ್ಟರ್ ಫೈನಲ್‌ನಲ್ಲೇ ಹೊರಬೀಳುವ ಆತಂಕದಲ್ಲಿದ್ದರು. ಇಟಲಿಯ ಆಟಗಾರ 3-6, 5-7, 2-2ರಿಂದ ಹಿನ್ನಡೆಯಲ್ಲಿದ್ದಾಗ ಎದುರಾಳಿ ಗ್ರಿಗರ್ ಡಿಮಿಟ್ರೋವ್ ಅಸ್ವಸ್ಥಗೊಂಡು ಸ್ಪರ್ಧೆಯಿಂದ ಹಿಂದೆ ಸರಿದಿದ್ದರಿಂದ ಬಚಾವಾದರು.

ಮೊದಲೆರಡು ಸೆಟ್‌ಗಳಲ್ಲಿ ಮೇಲುಗೈ ಸಾಧಿಸಿ ಗೆಲುವಿನ ಹೊಸ್ತಿಲಲ್ಲಿದ್ದ ಬಲ್ಗೇರಿಯಾದ 19ನೇ ಶ್ರೇಯಾಂಕದ ಡಿಮಿಟ್ರೋವ್ ಮೂರನೇ ಸೆಟ್‌ನ ಆಟದ ವೇಳೆ ಎದೆಯ ಸ್ನಾಯು ನೋವಿನಿಂದ ಅಂಕಣದಲ್ಲೇ ಕುಸಿದರು. ತಕ್ಷಣ ಸಿನ್ನರ್ ಅವರ ಸಹಾಯಕ್ಕೆ ಧಾವಿಸಿದರು. ವೈದ್ಯಕೀಯ ನೆರವು ಪಡೆದರೂ 34 ವರ್ಷ ಡಿಮಿಟ್ರೋವ್‌ಗೆ ಪಂದ್ಯವನ್ನು ಮುಂದುವರಿಸಲಾಗಲಿಲ್ಲ.

ಮಿರಾ, ಶ್ವಾಂಟೆಕ್ ಮುನ್ನಡೆ: ಏಳನೇ ಶ್ರೇಯಾಂಕದ ಮಿರಾ ಆ್ಯಂಡ್ರೀವಾ 6-2, 6-3ರಿಂದ 10ನೇ ಶ್ರೇಯಾಂಕದ ಎಮ್ಮಾ ನವರೊ (ಅಮೆರಿಕ) ಅವರನ್ನು ಮಣಿಸಿದರು. ರಷ್ಯಾದ 18 ವರ್ಷ ವಯಸ್ಸಿನ ಮಿರಾ, ವಿಂಬಲ್ಡನ್‌ನಲ್ಲಿ 2005ರ ಬಳಿಕ ಮಹಿಳಾ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಎಂಟನೇ ಶ್ರೇಯಾಂಕದ ಇಗಾ ಶ್ವಾಂಟೆಕ್ 6-4, 6-1ರ ನೇರ ಸೆಟ್‌ಗಳಿಂದ 23ನೇ ಶ್ರೇಯಾಂಕದ ಕ್ಲಾರಾ ಟೌಸನ್ (ಡೆನ್ಮಾರ್ಕ್) ಅವರನ್ನು ಮಣಿಸಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು.



ಅರಿನಾ ಸಬಲೆಂಕಾ ಗೆಲುವಿನ ಸಂಭ್ರಮ ಎಎಫ್‌ಪಿ ಚಿತ್ರ

ಕೈಕೊಟ್ಟ ಎಲೆಕ್ಟ್ರಾನಿಕ್ ಲೈನ್ ಕಾಲಿಂಗ್

ಫ್ರಿಟ್ಜ್ ಮತ್ತು ಕಚನೋವ್ ನಡುವಿನ ಪಂದ್ಯದ ವೇಳೆ ವಿಂಬಲ್ಡನ್‌ನಲ್ಲಿ ಹೊಸದಾಗಿ ಅಳವಡಿಸಲಾದ ಎಲೆಕ್ಟ್ರಾನಿಕ್ ಲೈನ್ ಕಾಲಿಂಗ್ ವ್ಯವಸ್ಥೆಯಲ್ಲಿ ದೋಷ ಕಾಣಿಸಿತು. ಹೀಗಾಗಿ ಒಂದು ಪಾಯಿಂಟ್ ಮರು ಆಡಿಸಲಾಯಿತು.

ನಾಲ್ಕನೇ ಸೆಟ್‌ನ ಮೊದಲ ಗೇಮ್‌ನಲ್ಲಿ ಆಟಗಾರರು ಹೊಡೆತಗಳನ್ನು ವಿನಿಮಯ ಮಾಡಿಕೊಂಡ ನಂತರ ಈ ದೋಷ ಕಾಣಿಸಿತು. 'ಔಟ್' ಬದಲು 'ಫಾಲ್ಟ್' ಎಂದು ಶಬ್ದ ಮೊಳಗಿತು. ಚೇರ್ ಅಂಪೈರ್ ಲೂಯಿಸ್ ಅಜೆಮರ್ ಎಂಗ್ಜೆಲ್ ಆಟವನ್ನು ಸ್ಥಗಿತಗೊಳಿಸಿದರು. ಕೆಲ ಕ್ಷಣದ ಬಳಿಕ ಕೊನೆಯ ಪಾಯಿಂಟ್ ಅನ್ನು ಮರು ಆಡಲು ಆಟಗಾರರಿಗೆ ಸೂಚಿಸಿದರು.

ಸಂಕ್ಷಿಪ್ತ ಸುದ್ದಿ

ದಕ್ಷಿಣ ಆಫ್ರಿಕಾಕ್ಕೆ ಇನಿಂಗ್ಸ್ ಜಯ

ಬುಲಾವಯೊ (ಜಿಂಬಾಬ್ವೆ), (ಎಫ್‌ಪಿ): ದಕ್ಷಿಣ ಆಫ್ರಿಕಾ ತಂಡ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದ ಮೂರನೇ ದಿನವಾದ ಮಂಗಳವಾರ ಜಿಂಬಾಬ್ವೆ ತಂಡವನ್ನು ಇನಿಂಗ್ಸ್ ಮತ್ತು 236 ರನ್‌ಗಳಿಂದ ಸುಲಭವಾಗಿ ಮಣಿಸಿತು.

ಮಲ್ಡರ್

ಪ್ರಮುಖರ ಅನುಪಸ್ಥಿತಿಯಲ್ಲಿ ಎರಡನೇ ಹಂತದ ತಂಡವನ್ನು ಕಣಕ್ಕಿಳಿಸಿದರೂ ದಕ್ಷಿಣ ಆಫ್ರಿಕಾ ಗೆಲ್ಲಲು ಪ್ರಯಾಸಪಡಲಿಲ್ಲ.

ಕ್ವೀನ್ಸ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ದಕ್ಷಿಣ ಆಫ್ರಿಕಾದ 626 ರನ್ (5 ವಿಕೆಟ್‌ಗೆ ಡಿಕ್ಲೇರ್)ಗಳಿಗೆ ಉತ್ತರವಾಗಿ 170 ರನ್ನಿಗೆ ಉರುಳಿ ಫಾಲೋಆನ್‌ಗೆ ಒಳಗಾಗಿತ್ತು. ಎರಡನೇ ಇನಿಂಗ್ಸ್‌ನಲ್ಲಿ ಜಿಂಬಾಬ್ವೆ 220 ರನ್‌ಗಳಿಗೆ ಆಲೌಟ್ ಆಯಿತು.

ಸರಣಿಯನ್ನು ಪ್ರವಾಸಿಗರು 2–0 ಯಿಂದ ಗೆದ್ದುಕೊಂಡರು ಇದು ಹರಿಣಪಡೆಗೆ ಸತತ 10ನೇ ಟೆಸ್ಟ್ ಜಯ. ಈ ಹಿಂದೆ 2001ರಿಂದ 2003ರ ಅವಧಿಯಲ್ಲಿ ಸತತವಾಗಿ 9 ಪಂದ್ಯಗಳನ್ನು ಗೆದ್ದುಕೊಂಡಿದ್ದ ದಾಖಲೆಯನ್ನು ಸುಧಾರಿಸಿತು.

ಸ್ಕೋರುಗಳು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 5ಕ್ಕೆ626 ಡಿ; ಜಿಂಬಾಬ್ವೆ: 170 ಮತ್ತು ಎರಡನೇ ಇನಿಂಗ್ಸ್: (ಫಾಲೊಆನ್) 77.3 ಓವರುಗಳಲ್ಲಿ 220 (ತಾಕುದ್ಜವನಾಶೆ ಕೈತಾನೊ 40, ನಿಕ್ ವೆಲ್ಚ್ 55, ಕ್ರೇಗ್ ಇರ್ವಿನ್ 49; ಕಾರ್ಬಿನ್ ಬಾಷ್ 38ಕ್ಕೆ4, ಕೋಡಿ ಯೂಸುಫ್ 38ಕ್ಕೆ2, ಸೆನುರಾನ್ ಮುತ್ತುಸಾಮಿ 77ಕ್ಕೆ3).

ಪಂದ್ಯದ ಆಟಗಾರ: ವಿಯಾನ್ ಮಲ್ಡರ್ (367*)

ಆರ್‌ಸಿಬಿ ಅಗ್ರ ಮೌಲ್ಯದ ಫ್ರ್ಯಾಂಚೈಸಿ

ಮುಂಬೈ (ಪಿಟಿಐ): 17 ವರ್ಷಗಳ ಕಾಯುವಿಕೆಯ ನಂತರ ಮೊದಲ ಬಾರಿ ಐಪಿಎಲ್ ಚಾಂಪಿಯನ್ ಆಗಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರ್ಯಾಂಚೈಸಿಯು, ಚೆನ್ನೈ ಸೂಪರ್ ಕಿಂಗ್ಸ್ ಫ್ರ್ಯಾಂಚೈಸಿಯನ್ನು ಹಿಂದೆಹಾಕಿ ಅತಿ ಹೆಚ್ಚಿನ ಮೌಲ್ಯದ ಫ್ರ್ಯಾಂಚೈಸಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

ಇದರ ಮೌಲ್ಯ ಸುಮಾರು ₹2,304 ಕೋಟಿಗೆ ಏರಿದೆ ಎಂದು ವರದಿಯೊಂದು ಮಂಗಳವಾರ ತಿಳಿಸಿದೆ. ಬಿಸಿಸಿಐ ನಿರ್ವಹಣೆಯ ಐಪಿಎಲ್‌ನ ಮೌಲ್ಯ ಶೇ 13.8 ರಷ್ಟು ಹೆಚ್ಚಳ ಕಂಡಿದ್ದು ₹33,412 ಕೋಟಿಗೆ ತಲುಪಿದೆ ಎಂದು ಇನ್‌ವೆಸ್ಟ್‌ಮೆಂಟ್ ಬ್ಯಾಂಕ್ ಹೂಲಿಹಾನ್ ಲೋಕಿ ವರದಿ ತಿಳಿಸಿದೆ.

ಉದ್ಯಮವಾಗಿ ಐಪಿಎಲ್ ಮೌಲ್ಯ ₹1.58 ಲಕ್ಷ ಕೋಟಿಗೆ ಹೆಚ್ಚಿದೆ. ಇದು ಶೇ 12.9 ವೃದ್ಧಿ ಕಂಡಿದೆ ಎಂದೂ ವರದಿ ವಿವರಿಸಿದೆ.

ಅಂಬಾನಿ ಕುಟುಂಬ ಒಡೆತನದ ಮುಂಬೈ ಇಂಡಿಯನ್ಸ್ ಮೌಲ್ಯ ₹2,073 ಕೋಟಿಗೆ ಏರಿಕೆಯಾಗಿದ್ದು ಮೌಲ್ಯಯುತ ಫ್ರ್ಯಾಂಚೈಸಿಗಳಲ್ಲಿ ಎರಡನೇ ಸ್ಥಾನದಲ್ಲಿದೆ.

2025ರ ಐಪಿಎಲ್‌ನಲ್ಲಿ ನಿರಾಶಾದಾಯಕ ಆಟವಾಡಿದ ಇಂಡಿಯಾ ಸಿಮೆಂಟ್ಸ್ ಮಾಲೀಕತ್ವದ ಸಿಎಸ್‌ಕೆ ಮೂರನೇ ಸ್ಥಾನಕ್ಕೆ ಸರಿದಿದೆ. ಇದರ ಮೌಲ್ಯ ₹2,013 ಕೋಟಿಗೆ ಇಳಿದಿದೆ. ಶಾರೂಕ್ ಖಾನ್ ಒಡೆತನದ ಕೋಲ್ಕತ್ತ ನೈಟ್ ರೈಡರ್ಸ್ (₹1,945 ಕೋಟಿ) ನಾಲ್ಕನೇ ಸ್ಥಾನದಲ್ಲಿದೆ. ಸನ್‌ರೈಸರ್ಸ್ ಹೈದರಾಬಾದ್ (₹1,319 ಕೋಟಿ) , ಪಂಜಾಬ್ ಕಿಂಗ್ಸ್ (₹1,208 ಕೋಟಿ) ನಂತರದ ಸ್ಥಾನಗಳಲ್ಲಿವೆ. ಇವುಗಳಲ್ಲಿ ಪಂಜಾಬ್ ಆರ್ಥಿಕವಾಗಿ ಅತಿ ಹೆಚ್ಚಿನ ಬೆಳವಣಿಗೆ (ಶೇ 39.6) ಕಂಡಿದೆ.

'ಫ್ರಾಂಚೈಸಿಗಳ ಮೌಲ್ಯ ಸಾಕಷ್ಟು ಏರಿಕೆಯಾಗಿದೆ. ಮಾಧ್ಯಮ ಪ್ರಸಾರ ಹಕ್ಕು ಒಪ್ಪಂದ ದಾಖಲೆ ಮಟ್ಟಕ್ಕೆ ಏರಿದೆ. ಬ್ರಾಂಡ್ ಒಪ್ಪಂದಗಳೂ ಇದಕ್ಕೆ ಕಾಣಿಕೆ ನೀಡಿವೆ' ಎಂದು ಬ್ಯಾಂಕ್‌ನ ಆರ್ಥಿಕ ಮತ್ತು ವ್ಯಾಲ್ಯೂಯೇಷನ್ ಅಡ್ವೈಸರಿಯ ನಿರ್ದೇಶಕ ಹರ್ಷ ತಾಳಿಕೋಟೆ ತಿಳಿಸಿದರು.

ಕ್ರಿಕೆಟಿಗ ಯಶ್ ದಯಾಳ್ ವಿರುದ್ಧ ಎಫ್‌ಐಆರ್

ಗಾಜಿಯಾಬಾದ್ (ಉತ್ತರ ಪ್ರದೇಶ) (ಪಿಟಿಐ): ಲೈಂಗಿಕ ಶೋಷಣೆ ನಡೆಸಿದ ಆರೋಪದ ಮೇಲೆ ಆರ್‌ಸಿಬಿ ತಂಡದ ವೇಗದ ಬೌಲರ್ ಯಶ್ ದಯಾಳ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ದಯಾಳ್

ಇಂದಿರಾಪುರಂ ಠಾಣೆಯ ಪೊಲೀಸರು, 27 ವರ್ಷ ವಯಸ್ಸಿನ ಕ್ರಿಕೆಟರ್ ಮತ್ತು ದೂರುದಾರೆಯ ಹೇಳಿಕೆಯನ್ನು ದಾಖಲಿಸಿಕೊಳ್ಳಲಿದ್ದಾರೆ.

ದಯಾಳ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ವಿಧಿ 69ರ ಅನ್ವಯ (ಮೋಸದ ದಾರಿಯಲ್ಲಿ ಲೈಂಗಿಕ ಸಂಪರ್ಕ, ಮದುವೆಯಾಗುವುದಾಗಿ ಸುಳ್ಳು ಭರವಸೆ) ದೂರು ದಾಖಲಿಸಲಾಗಿದೆ. ಈ ಮಹಿಳೆ ದಯಾಳ್ ಜೊತೆ ಐದು ವರ್ಷಗಳಿಂದ ಸಂಬಂಧ ಹೊಂದಿದ್ದರು.

ಐಜಿಆರ್‌ಎಸ್ (ಇಂಟಿಗ್ರೇಟೆಡ್ ಗ್ರಿವೆನ್ಸ್ ರಿಡ್ರೆಸ್ಸಲ್ ಸಿಸ್ಟಂ) ಮೂಲಕ ಮಹಿಳೆಯು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ದೂರು ಸಲ್ಲಿಸಿದ ನಂತರ ಎಫ್‌ಐಆರ್ ದಾಖಲಾಗಿದೆ.

ಕ್ರಿಕೆಟರ್ ತಮ್ಮನ್ನು ದೈಹಿಕವಾಗಿ ಶೋಷಿಸಿದ್ದಾರೆ ಎಂದು ಮಹಿಳೆ ದೂರಿದ್ದರು.